ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## ಪಠ್ಯಪುಸ್ತಕ

## ಭಾಗ–1

# 9

@KTBS
NOT TO BE REPUBLISHED

## ಒಂಬತ್ತನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ರಿಂದ 10ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.),
ಬೆಂಗಳೂರು

© KTBS NOT TO BE REPUBLISHED

## ಅಧ್ಯಕ್ಷರ ನುಡಿ

ಪಠ್ಯಕ್ರಮ ಬದಲಾಗಬೇಕು ಎಂಬ ಮಾತು ಸಾರ್ವಜನಿಕರಿಂದ ಮೊದಲಿನಿಂದಲೂ ಕೇಳಿ ಬರುತ್ತಿತ್ತು. ಇದಕ್ಕೆ ಓಗೊಟ್ಟು ಪರಿಷ್ಕರಣೆಗೆ ಕರ್ನಾಟಕ ಸರಕಾರ ಮುಂದಾಗಿದೆ. ಇದರ ಪರಿಣಾಮವಾಗಿ ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ರಚಿಸಿರುವ ಪ್ರಸ್ತುತ ಈ ಪಠ್ಯಪುಸ್ತಕವು ಬದಲಾಗುತ್ತಿರುವ ವರ್ತಮಾನ ಸಮಾಜದ ಸನ್ನಿವೇಶಗಳಿಗೆ, ವಿದ್ಯಾರ್ಥಿಯು ತನ್ನನ್ನು ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ರಚಿಸಲಾಗಿದೆ. ಮೊದಲಬಾರಿಗೆ ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಅರ್ಥಶಾಸ್ತ್ರಗಳೊಂದಿಗೆ ವ್ಯವಹಾರ ಅಧ್ಯಯನ ಮತ್ತು ಸಮಾಜಶಾಸ್ತ್ರ ಅಧ್ಯಯನಗಳನ್ನು ಹೊಸದಾಗಿ ಸೇರ್ಪಡೆಗೊಳಿಸಿದೆ.

ಗ್ರಾಮ ಮತ್ತು ನಗರ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸೃಜನಶೀಲತೆಗೆ ನಿಲುಕುವ ಹಾಗೆ ಈ ಪಠ್ಯಪುಸ್ತಕವನ್ನು ಸರಳವಾಗಿ ಓದಿಕೊಂಡು ಹೋಗುವಂತೆ ರಚಿಸಲಾಗಿದೆ. ಈ ಪಠ್ಯಪುಸ್ತಕದಲ್ಲಿ ಮಕ್ಕಳನ್ನು ಹೆಚ್ಚು ಹೆಚ್ಚು ಕ್ರಿಯಾಶೀಲವಾಗಿಸುವ ಚಟುವಟಿಕೆಗಳನ್ನು ಹಾಗೂ ಯೋಜನಾಕಾರ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಹಾಗೂ ಮಾಹಿತಿ ಯುಗಕ್ಕೆ ಅನುಕೂಲವಾಗುವಂತೆ ಹೆಚ್ಚಿನ ವಿಷಯಗಳನ್ನು ನೀಡಲಾಗಿದೆ. ಕ್ಲಿಷ್ಟವಾದ ಪದಗಳನ್ನು ತೆಗೆದು ಸರಳ ಶಬ್ದಗಳ ಜೋಡಣೆ, ಕಠಿಣ ಪದಗಳಿಗೆ ಅರ್ಥ, ವಿಷಯಕ್ಕನುಗುಣವಾಗಿ ಮಾತ್ರ ಇಸವಿಗಳನ್ನು ನೀಡಿದ್ದು, ಈ ಎಲ್ಲ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಹೀಗಿದ್ದು ನಾವು ಎಲ್ಲ ದೃಷ್ಟಿಯಿಂದ ಯಶಸ್ವಿಯಾಗಿದ್ದೇವೆಯೇ ? ಹಾಗೇನಿಲ್ಲ. 2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ನೀತಿಯ ಚೌಕಟ್ಟಿನಲ್ಲಿಯೇ ಈ ಪಠ್ಯಪುಸ್ತಕ ರಚನೆಗೊಂಡಿದೆ.

ಈ ಪಠ್ಯವನ್ನು ಸದಸ್ಯರು ಯಶಸ್ವಿಯಾಗಿ ಪೂರೈಸಲು ನೆರವಾದವರು ಪಠ್ಯಪುಸ್ತಕ ರಚನಾಸಮಿತಿ ಸಂದರ್ಭಾನುಸಾರ ಸಲಹೆ ಸೂಚನೆಗಳನ್ನು ನೀಡಿದ ಪರಿಶೀಲನ ಸಮಿತಿ, ಸಂಪಾದಕ ಮಂಡಳಿ, ಅನುವಾದಕರು ಹಾಗೂ ಮುಖ್ಯ ಸಲಹೆಗಾರರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಪಠ್ಯಪುಸ್ತಕ ಯೋಜನೆಯನ್ನು ಸಮರ್ಥವಾಗಿ ಹೊರತರಲು ನಿರಂತರವಾಗಿ ಶ್ರಮಿಸಿರುವ ಈ ಯೋಜನೆಯ ಮುಖ್ಯ ಸಂಯೋಜಕರಾದ ಪ್ರೊ.ಜಿ.ಎಸ್. ಮುಡಂಬಡಿತ್ತಾಯರವರಿಗೆ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ, ಪ್ರೋತ್ಸಾಹ ನೀಡಿದ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ನಮ್ಮ ಕೃತಜ್ಞತೆಗಳು.

**ಡಾ. ಎಂ. ಕೊಟ್ರೇಶ್**

**ಎ.ಎಸ್. ದೀಕ್ಷಿತ್**

ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.

NOT TO BE REPUBLISHED ©KTBS

# ರಚನಾ ಸಮಿತಿ

**ಅಧ್ಯಕ್ಷರು**

**ಡಾ. ಎಂ. ಕೊಟ್ರೇಶ್,** ಸಹಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–572103.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು–79

**ಸದಸ್ಯರು :**

**ಡಾ. ಬಸವರಾಜ ಎನ್ ಅಕ್ಕಿ,** ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಆಳ್ನಾವರ, ಧಾರವಾಡ ತಾ॥

**ಶ್ರೀ ಎನ್. ಸತ್ಯಪ್ರಕಾಶ,** ಮುಖ್ಯಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ ಒಂದನೇ ಬ್ಲಾಕ್, ಬೆಂಗಳೂರು – 10.

**ಶ್ರೀ ಟಿ. ನಿಂಗಯ್ಯ,** ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ.

**ಶ್ರೀ ಬಿ.ಕೆ. ವಾಸುಕಿ,** ಸಹಶಿಕ್ಷಕರು, ವಿವೇಕಾನಂದ ಗಿರಿಜನ ಸನಿವಾಸ ಪ್ರೌಢಶಾಲೆ, ಬಿಳಿಗಿರಿರಂಗನಬೆಟ್ಟ, ಚಾಮರಾಜನಗರ ಜಿಲ್ಲೆ.

**ಶ್ರೀ ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ ಕುಮಾರಸ್ವಾಮಿ,** ಪ್ರಾಂಶುಪಾಲರು, ವಿದ್ಯಾವಾಹಿನಿ ಪದವಿಪೂರ್ವ ಕಾಲೇಜು, ತುಮಕೂರು.

**ಶ್ರೀ ಎಸ್.ಹೆಚ್. ಕುರಕುಂದಿ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಾಸಣಗಿ, ಬ್ಯಾಡಗಿ ತಾ॥, ಹಾವೇರಿ ಜಿಲ್ಲೆ.

**ಪರಿಶೀಲಕರು**

**ಡಾ. ರಾಜಾರಾಂ ಹೆಗಡೆ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

**ಪ್ರೊ. ಟಿ.ಡಿ. ದೇವೇಗೌಡ,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಡೀನ್ (ಅಧ್ಯಯನ ಕೇಂದ್ರಗಳು), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ಶೌಕತ್ ಅಝೀಮ್,** ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

**ಪ್ರೊ. ಪಿ. ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಎಸ್.ಆರ್. ಕೇಶವ,** ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಕೆ.ಆರ್. ಶ್ರೀಲಕ್ಷ್ಮಿ,** ಸಹಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಜಯನಗರ, 6ನೇ ಬ್ಲಾಕ್, ಯಡಿಯೂರು, ಬೆಂಗಳೂರು.

**ಸಂಪಾದಕ ಮಂಡಳಿ**

**ಡಾ. ಎಂ.ವಿ. ಶ್ರೀನಿವಾಸ್,** ನಿವೃತ್ತ ಪ್ರಾಧ್ಯಾಪಕರು ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಈಶ್ವರಪ್ಪ,** ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಶ್ರೀಮತಿ ಎಲ್.ಬಿ. ಜಾದವ್,** ಸಹ ಶಿಕ್ಷಕರು, ಮರಾಠಾ ಮಂಡಳ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಗಾವಿ.

**ಶ್ರೀಮತಿ ಎಂ.ಸಿ. ಮಾಲಗಾವೆ,** ಸಹ ಶಿಕ್ಷಕರು, ಜನತಾ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಾಂಬ್ರ, ಬೆಳಗಾವಿ ತಾ.

**ಶ್ರೀ ಎಸ್.ಆರ್. ದಾನಿ,** ಸಹ ಶಿಕ್ಷಕರು, ಶ್ರೀಹರಿ ವಿದ್ಯಾಲಯ, ಉಗಾರ್, ಅಥಣಿ ತಾಲ್ಲೂಕ್, ಬೆಳಗಾವಿ ಜಿಲ್ಲೆ.

**ಶ್ರೀಮತಿ ದೀಪ್ತಿ ಭೊಸಲೆ,** ಸಹ ಶಿಕ್ಷಕರು, ಶ್ರೀಹರಿ ವಿದ್ಯಾಲಯ, ಉಗಾರ್, ಅಥಣಿ ತಾಲ್ಲೂಕ್, ಬೆಳಗಾವಿ ಜಿಲ್ಲೆ.

**ಮುಖ್ಯ ಸಂಯೋಜಕರು**

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಮುಖ್ಯಸಲಹೆಗಾರರು**

**ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಶ್ರೀಮತಿ ನಾಗಮಣಿ ಸಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಎ.ಟಿ. ರಂಗದಾಸಪ್ಪ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

© KTBS NOT TO BE REPUBLISHED

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" – ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (NCERT) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

© KTBS NOT TO BE REPUBLISHED

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಮತ್ತು ಪರಿಷ್ಕೃತ ಪಾಠಗಳ ರಚನೆ ಮಾಡಿದ ತಜ್ಞರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

@KTBS
NOT TO BE REPUBLISHED

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು.

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು.

## ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ,** ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಅಧ್ಯಕ್ಷರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು.

**ಸದಸ್ಯರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಜೆ. ಸೋಮಶೇಖರ್,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.

**ಡಾ. ಎಚ್.ಡಿ. ಪ್ರಶಾಂತ್,** ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಬಿ. ಶೇಖರ್,** ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಶ್ರೀ ಈರಣ್ಣ. ಎಂ. ಅಂಬಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತಡಕೊಡು, ಧಾರವಾಡ ತಾ. ಮತ್ತು ಜಿಲ್ಲೆ.

**ಶ್ರೀ ಡಿ.ಎನ್. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರಕಸಲಗೆರೆ, ಮಂಡ್ಯ ತಾ. ಮತ್ತು ಜಿಲ್ಲೆ.

**ಉನ್ನತ ಪರಿಶೀಲನಾ ಸಮಿತಿ**

**ಶ್ರೀ ಅಶೋಕ ಶೆಟ್ಟರ್,** ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಎಂ.ಎಸ್. ತಳವಾರ್,** ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ದಶರಥ್ ನಾಯಕ್,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ.

**ಡಾ. ಹಸೀನ್ ತಾಜ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಸಲಹೆಗಾರರು**

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

**ಎನ್. ಎಸ್. ಸೌಮ್ಯ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

@KTBS NOT TO BE REPUBLISHED

# ಪುನರ್ ಪರಿಷ್ಕರಣೆ ಕುರಿತು

2014ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು 2017–18ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು 2021ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಮುಖ್ಯವಾಗಿ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಲ್ಲಿ (1) ಯಾವುದೇ ಜಾತಿ, ಧರ್ಮ, ಪಂಥ, ಸಮುದಾಯಗಳಿಗೆ ಅಥವಾ ವ್ಯಕ್ತಿಗಳಿಗೆ ಅಪಮಾನವಾಗುವ ಆಕ್ಷೇಪಾರ್ಹ ಅಂಶಗಳಿರದಂತೆ ಎಚ್ಚರ ವಹಿಸಬೇಕು (2) ವಿಷಯಗಳನ್ನು ಕ್ರಮಬದ್ಧವಾಗಿ, ಕಾಲಪಟ್ಟಿಗನುಗುಣವಾಗಿ ಕೊಡಬೇಕು (3) ಅನಗತ್ಯ ವಿಷಯಗಳು ತುಂಬಿತುಳುಕಾಡುವ ಮಾಹಿತಿಕೋಶವಾಗಿಸದೆ ಜ್ಞಾನಕೋಶಗಳಾಗಿ ಮಾಡಬೇಕು (4) ಸ್ವಹಿತಾಸಕ್ತಿಯ ಯಾವ ಸಿದ್ಧಾಂತಗಳಿಗೂ ಜಾಗ ಕೊಡಕೂಡದು (5) ಅರ್ಧಸತ್ಯ, ಅಸತ್ಯ, ಉತ್ಪ್ರೇಕ್ಷೆ, ನಿರ್ಣಯ ಮುಂತಾದವನ್ನು ಕೈಬಿಟ್ಟು ಅಧಿಕೃತ ಆಧಾರಗಳಿರುವ ಸಂಗತಿಗಳನ್ನಷ್ಟೇ ಮುಂದಿಡಬೇಕು (6) ಎಲ್ಲ ವಿಷಯಗಳಿಗೆ ತಕ್ಕ ಪ್ರಾತಿನಿಧ್ಯ ಕೊಡಬೇಕು (7) ಐತಿಹಾಸಿಕ ಉಪೇಕ್ಷಿತ ಸಂಗತಿಗಳನ್ನು, ಅವುಗಳ ಪ್ರಾಮುಖ್ಯಕ್ಕನುಗುಣವಾಗಿ ಪಠ್ಯಗಳಲ್ಲಿ ತರಬೇಕು (8) ಎಲ್ಲ ಬಗೆಯ ತಪ್ಪುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಗ್ಗಿಸಬೇಕು – ಎಂಬುದು ನಮ್ಮ ಆಶಯವಾಗಿತ್ತು. ಸಮಾಜವಿಜ್ಞಾನ ಪಠ್ಯವು ನಮ್ಮ ವಿದ್ಯಾರ್ಥಿಗಳನ್ನು ದೇಶದ ಬಗ್ಗೆ ಪ್ರೀತಿ ಅಭಿಮಾನಗಳುಳ್ಳ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಬೇಕೇ ಹೊರತು ದೇಶದ ಬಗ್ಗೆ, ದೇಶದೊಳಗಿನ ಹಲವು ಜಾತಿ, ಸಮುದಾಯ, ಭಾಷೆ, ಪಂಥಗಳ ಬಗ್ಗೆ ತಾತ್ಸಾರಭಾವವನ್ನು ತಾಳುವಂಥ ಜನಾಂಗವನ್ನು ಸೃಷ್ಟಿಸಬಾರದು ಎಂಬುದು ಪರಿಷ್ಕರಣೆಯ ಪ್ರತಿಹಂತದಲ್ಲೂ ನಾವು ವಹಿಸಿದ್ದ ಎಚ್ಚರಿಕೆಯಾಗಿತ್ತು.

© KTBS NOT TO BE REPUBLISHED

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (2014ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ, ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು.

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು,
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

@KTBS
NOT TO BE REPUBLISHED

# ಪುನರ್ ಪರಿಷ್ಕರಣ ಸಮಿತಿ

## ಅಧ್ಯಕ್ಷರು

**ಶ್ರೀ ರೋಹಿತ್ ಚಕ್ರತೀರ್ಥ,** ಸದಸ್ಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

## ಸದಸ್ಯರು

**ಡಾ. ರಾಜರಾಮ್ ಹೆಗಡೆ,** ನಿವೃತ್ತ ವಿಭಾಗ ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

**ಡಾ. ಎನ್. ಸತ್ಯಪ್ರಕಾಶ್,** ನಿವೃತ್ತ ಮುಖ್ಯೋಪಾಧ್ಯಾಯರು, ವಿ.ವಿ.ಎಸ್. ಪ್ರೌಢಶಾಲೆ, ಬೆಂಗಳೂರು.

**ಶ್ರೀ. ರಂಗನಾಥ,** ಪ್ರಾಂಶುಪಾಲರು, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

**ಶ್ರೀ. ಬಿ.ಕೆ. ವಾಸುಕಿ,** ಶಿಕ್ಷಕರು, ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಶಾಲೆ, ಬೆಂಗಳೂರು.

**ಡಾ. ಅನಂತಕೃಷ್ಣ ಭಟ್,** ಕೊಡಿಯಾಲಗುತ್ತು, ದ್ವಾರಕ, ಕೊಡಿಯಾಲ್ ಬೈಲ್, ಎರಡನೇ ಅಡ್ಡರಸ್ತೆ, ಮಂಗಳೂರು.

**ಡಾ. ವಿಠ್ಠಲ್ ಪೋತದಾರ,** ಹಿರಿಯ ಸಂಶೋಧನಾ ಸಂಯೋಜಕರು, ದಿ ಮಿಥಿಕ್ ಸೊಸೈಟಿ, ಬೆಂಗಳೂರು.

**ಶ್ರೀ ಕೆ.ಆರ್. ಮಂಜುನಾಥ್,** ಸಹ ಶಿಕ್ಷಕರು, ನ್ಯಾಷನಲ್ ಪ್ರೌಢಶಾಲೆ, ಬೆಂಗಳೂರು.

**ಶ್ರೀಮತಿ ಪಿ. ರಾಧಾ,** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬನಶಂಕರಿ 3ನೇ ಹಂತ, ಬೆಂಗಳೂರು.

**ಶ್ರೀ ಸಂದೀಪ್ ಕುಮಾರ ಪಿ.ಎಲ್.,** ಜಿ.ಪಿ.ಟಿ., ಸ.ಮಾ.ಪ್ರಾ. ಶಾಲೆ, ಸಿದ್ದನಹೊಸಹಳ್ಳಿ, ಬೆಂಗಳೂರು ಉತ್ತರ ವಲಯ–1.

## ಸಲಹೆಗಾರರು

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಎನ್. ಎಸ್. ಸೌಮ್ಯ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

@KTBS NOT TO BE REPUBLISHED

# ಮುನ್ನುಡಿ

2023–24ನೇ ಸಾಲಿನಲ್ಲಿ ಜಾರಿಯಲ್ಲಿರುವ ಒಂದರಿಂದ ಹತ್ತನೇ ತರಗತಿಯ ವರೆಗಿನ ಕನ್ನಡ ಭಾಷಾ ಪಠ್ಯಪುಸ್ತಕಗಳು ಮತ್ತು ಆರರಿಂದ ಹತ್ತನೇ ತರಗತಿಯವರೆಗಿನ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದಕ್ಕಾಗಿ ವಿಷಯ ತಜ್ಞರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವವರು ಸದಸ್ಯರಾಗಿದ್ದ ಐದು ಸಮಿತಿಗಳನ್ನು ರಚಿಸಿ, ಸರ್ಕಾರವು ಆದೇಶವನ್ನು ಹೊರಡಿಸಿತು. ಈ ಸಮಿತಿಗಳು ಮೂರು ತಿಂಗಳಿಗೂ ಹೆಚ್ಚು ಕಾಲ ಪರಿಷ್ಕರಣೆಯ ಕಾರ್ಯವನ್ನು ನೆರವೇರಿಸಿದೆ. ಪ್ರಸ್ತುತ ಪರಿಷ್ಕರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಲು ಬಯಸುತ್ತೇವೆ.

1. ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳು ಮತ್ತು ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗದಂತೆ, ಪರಿಷ್ಕರಣೆಗೆ ಒಳಪಟ್ಟ ಪಠ್ಯಪುಸ್ತಕಗಳ ಮೂಲ ಸ್ವರೂಪ ಬದಲಾಗದಂತೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿರಿಸಿಕೊಂಡು ಈ ಪರಿಷ್ಕರಣೆಯನ್ನು ನಡೆಸಲಾಗಿದೆ.

2. ಪ್ರಸ್ತುತ ಪರಿಷ್ಕರಣ ಸಮಿತಿಗೆ ಪೂರ್ವದಲ್ಲಿಯೇ ಶಾಲಾ ಶಿಕ್ಷಣ ಇಲಾಖೆಯು ಹೊರಡಿಸಿದ್ದ "2023–24ನೇ ಸಾಲಿನ ಪಠ್ಯಪುಸ್ತಕಗಳ ತಿದ್ದೋಲೆ" ಯನ್ನು ಸಮಿತಿಯು ಅಳವಡಿಸಿಕೊಂಡಿದೆ.

3. ವಿವಿಧ ಸಂಘಟನೆಗಳು, ವ್ಯಕ್ತಿಗಳು ಹಾಗೂ ಸರ್ಕಾರದ ಇಲಾಖೆಗಳು ಪಠ್ಯಪುಸ್ತಕದಲ್ಲಿ ನಿರ್ದಿಷ್ಟ ವಿಷಯಾಂಶವನ್ನು ಅಳವಡಿಸುವ/ಕೈಬಿಡುವ/ಪರಿಷ್ಕರಿಸುವ ಕುರಿತು ಮಾಡಿದ ಎಲ್ಲಾ ಮನವಿಗಳನ್ನು ಪರಿಶೀಲಿಸಿ ಸೂಕ್ತವೆನಿಸಿದ ಸಲಹೆಗಳನ್ನು ಅಳವಡಿಸಿಕೊಳ್ಳಲಾಗಿದೆ.

4. ವಿವಿಧ ವ್ಯಕ್ತಿಗಳು, ಸಂಘಟನೆಗಳು ಸ್ವಯಂ ಪ್ರೇರಣೆಯಿಂದ ಅಪಾರ ಶ್ರಮ ಹಾಗೂ ವ್ಯವಧಾನದಿಂದ ಪಠ್ಯಪುಸ್ತಕಗಳಲ್ಲಿರುವ ವಿಸಂಗತಿ, ಆಶಯ ದೋಷ ಹಾಗೂ ಅಪಕಲ್ಪನೆಗಳನ್ನು ಜಾಲತಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚಿಸಿದ್ದವು. ಈ ಬಹುತೇಕ ಎಲ್ಲಾ ಬರಹಗಳನ್ನು ಗಮನಿಸಿ, ಚರ್ಚಿಸಿ ಸೂಕ್ತ ಪರಿಷ್ಕರಣೆಯನ್ನು ಮಾಡಲಾಗಿದೆ.

5. ನಿರ್ದಿಷ್ಟ ಪಠ್ಯಗಳನ್ನು ಬೋಧಿಸುವ ಶಿಕ್ಷಕರಿಂದ ಪಡೆದುಕೊಂಡ ಅಭಿಪ್ರಾಯಗಳು ಸಹ ಪ್ರಸ್ತುತ ಪರಿಷ್ಕರಣೆಯಲ್ಲಿ ಅಪಾರ ನೆರವು ನೀಡಿವೆ.

ವಿಷಯಾಂಶಗಳಿಗೆ ಸಂಬಂಧಿಸಿದ ಪರಿಷ್ಕರಣೆಯೊಂದಿಗೆ ಪಠ್ಯಪುಸ್ತಕಗಳಲ್ಲಿರುವ ಎಲ್ಲಾ ಬಗೆಯ ಅಂಕಿ ಅಂಶಗಳು, ಮಾಹಿತಿಗಳು ಮತ್ತು ನಕ್ಷೆಗಳನ್ನು ಈ ಪರಿಷ್ಕರಣೆಯ ಹೊತ್ತಿಗೆ ಲಭ್ಯವಿರುವ ಮಾಹಿತಿಗಳನ್ನು ಒಳಗೊಳ್ಳುವಂತೆ ನವೀಕರಿಸಲಾಗಿದೆ.

ಮಕ್ಕಳ ಪಠ್ಯಪುಸ್ತಕದ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಎಲ್ಲಾ ಪಠ್ಯಪುಸ್ತಕಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎರಡು ಸಂಪುಟಗಳಾಗಿ ವಿಭಾಗಿಸುವ ಸರ್ಕಾರದ ನಿರ್ಣಯಕ್ಕೆ ಅನುಸಾರವಾಗಿ,

@KTBS
NOT TO BE REPUBLISHED

ಎರಡೂ ಸಂಪುಟಗಳಲ್ಲಿನ ಕಲಿಕಾಂಶಗಳು/ಪಾಠಗಳು ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ವ್ಯವಸ್ಥಿತವಾಗಿ ಅಳವಡಿಸಲಾಗಿದೆ.

ಈ ಪರಿಷ್ಕರಣಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ಲುಪ್ತವಾಗಿ ಕಾರ್ಯನಿರ್ವಹಿಸಿದ ಐದೂ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಅದರಲ್ಲೂ ಪಠ್ಯ ಬೋಧನೆಯ ತಮ್ಮ ಅನುಭವವನ್ನು ಪರಿಷ್ಕರಣೆಯಲ್ಲಿ ಧಾರೆಯೆರೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಪಠ್ಯಪುಸ್ತಕಗಳ ಕುರಿತು ತುಂಬ ಕಳಕಳಿಯಿಂದ ಗಂಭೀರ ಅಧ್ಯಯನ ನಡೆಸಿ ಬರೆಹಗಳನ್ನು ಪ್ರಕಟಿಸಿದ ವ್ಯಕ್ತಿಗಳು, ಸಂಘಟನೆಗಳು ಮಾಡಿದ ಶೋಧಗಳು ಪ್ರಸ್ತುತ ಪರಿಷ್ಕರಣೆಯ ಕಾರ್ಯಕ್ಕೆ ತುಂಬಾ ಸಹಾಯ ಮಾಡಿವೆ. ಅಂತಹ ಎಲ್ಲಾ ಸ್ಪಂದನೆಗಳಿಗೂ ನಾವು ಕೃತಜ್ಞರಾಗಿದ್ದೇವೆ.

ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ ಇಲಾಖಾ ಅಧಿಕಾರಿಗಳು ಮತ್ತು ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೂ, ಸಿಬ್ಬಂದಿಗಳಿಗೂ ವಂದನೆಗಳು.

**ಎನ್. ಮಂಜುಶ್ರೀ . ಭಾ.ಆ.ಸೇ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),
ಬೆಂಗಳೂರು

**ಡಾ ಎಂ. ಜಿ. ಹೆಗಡೆ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ

@KTBS
NOT TO BE REPUBLISHED

# ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ

**ಮುಖ್ಯ ಸಂಯೋಜಕರು :**
**ಡಾ. ಮಂಜುನಾಥ ಜಿ. ಹೆಗಡೆ,** 'ಅಹಲ್ಯ', ಚಿತ್ರಗಿ ಗ್ರಾಮ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಅಧ್ಯಕ್ಷರು :**
**ಡಾ. ಅಶ್ವತ್ಥ ನಾರಾಯಣ,** ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಸದಸ್ಯರು**
**ಡಾ. ಕೃಷ್ಣ ಹೊಂಬಳ್,** ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

**ಡಾ. ಬಿ.ಶೇಖರ್,** ಪ್ರಾಧ್ಯಾಪಕರು, ಮುಖ್ಯಸ್ಥರು ಮತ್ತು ಡೀನ್, ವಾಣಿಜ್ಯ ಶಾಸ್ತ್ರ–ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**ಡಾ. ಎ.ಬಿ.ವಗ್ಗರ, ಸಹ ಪ್ರಾಧ್ಯಾಪಕರು,** ಎಸ್.ಐ.ಎಸ್.ವಾಯ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

**ಡಾ. ಶ್ರೀನಿವಾಸ್ ಯಡವಾಣಿ,** ಸಹಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ, ಬೆಂಗಳೂರು

**ಡಾ. ಕಿರಣ್ .ಎಂ ಗಾಜನೂರು,** ಸಹಾಯಕ ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ. (6 ಮತ್ತು 7ನೇ ತರಗತಿ ಸಮಾಜವಿಜ್ಞಾನ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು)

**ಡಾ. ಗಂಗಾಧರ.ಪಿ.ಎಸ್,** ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ

**ಶ್ರೀ ಕಾಗಿನಕರ್.ಪಿ.ಎಮ್.** ಸ.ಶಿ., ಕರ್ನಾಟಕ ಪಬ್ಲಿಕ್ ಸ್ಕೂಲ್, ಚಿಕ್ಕನಹಳ್ಳಿ, ಸಿರಾ ತಾ., ಮಧುಗಿರಿ ಶೈಕ್ಷಣಿಕ ಜಿಲ್ಲೆ.

**ಶ್ರೀಮತಿ ಶಾಹಿನಾ ಅಲ್ಲಾಪುರ,** ಸ.ಶಿ., ಸರ್ಕಾರಿ ಪ್ರೌಢಶಾಲೆ, ಬರದಿ ಮಂಡಿಗೆರೆ, ನೆಲಮಂಗಲ ತಾಲ್ಲೂಕು, ಬೆಂ.ಗ್ರಾ. ಜಿಲ್ಲೆ.

**ಶ್ರೀಮತಿ ತಬಸುಮ್ ಫಾತಿಮಾ,** ಸ.ಶಿ.,ಸರ್ಕಾರಿ ಉರ್ದು ಪ್ರೌಢ ಶಾಲೆ, ಕನಕಪುರ ಟೌನ್, ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ.

**ಶ್ರೀಮತಿ ಮೋಹನ್ ಕುಮಾರಿ.ಎಸ್.,** ಸ.ಶಿ., ಜಿ.ಪಿ.ಟಿ., ಸ.ಮಾ.ಪ್ರಾ. ಶಾಲೆ, ಕರಿತಿಮ್ಮನಹಳ್ಳಿ, ದಕ್ಷಿಣ ವಲಯ–2, ಬೆಂಗಳೂರು

**ಸಂಪನ್ಮೂಲ ಶಿಕ್ಷಕರು :**
**ಶ್ರೀ ಸುಧಾಕರರೆಡ್ಡಿ .ಹೆಚ್,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕಾದಲವೇಣಿ, ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ.

**ಶ್ರೀಮತಿ ಜಯಶ್ರೀ ಹೆಗಡೆ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ದೊಡ್ಡಬನಹಳ್ಳಿ, ಬೆಂಗಳೂರು ದಕ್ಷಿಣ ವಲಯ–4, ಬೆಂಗಳೂರು ದಕ್ಷಿಣ ಜಿಲ್ಲೆ.

**ಶ್ರೀಮತಿ ಕವಿತ ಎಂ. ಎನ್,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹೊಂಬೆಗೌಡ ನಗರ, ಬೆಂಗಳೂರು ದಕ್ಷಿಣ ವಲಯ–3, ಬೆಂಗಳೂರು ದಕ್ಷಿಣ ಜಿಲ್ಲೆ.

**ಸಲಹೆಗಾರರು**
**ಶ್ರೀ ಎಂ. ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.
**ಶ್ರೀಮತಿ ಎಂ. ಡಿ. ಉಷಾ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**
**ಶ್ರೀಮತಿ. ಎನ್. ಎಸ್. ಸೌಮ್ಯ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

© KTBS NOT TO BE REPUBLISHED

J8H1U9

# ಪರಿವಿಡಿ


| ಅಧ್ಯಾಯದ ಸಂಖ್ಯೆ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1 | ಪಾಶ್ಚಾತ್ಯ ಧರ್ಮಗಳು | 1 |
| 2 | 6 ರಿಂದ 14ನೇ ಶತಮಾನದ ಭಾರತ | 8 |
| 3 | ಭಾರತದ ಮತ ಪ್ರವರ್ತಕರು | 21 |
| 4 | ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ | 27 |
| | **ರಾಜ್ಯಶಾಸ್ತ್ರ** | |
| 5 | ನಮ್ಮ ಸಂವಿಧಾನ | 43 |
| 6 | ಕೇಂದ್ರ ಸರ್ಕಾರ | 57 |
| 7 | ರಾಜ್ಯ ಸರ್ಕಾರ | 70 |
| 8 | ನ್ಯಾಯಾಂಗ | 80 |
| | **ಸಮಾಜಶಾಸ್ತ್ರ** | |
| 9 | ಕುಟುಂಬ | 88 |
| | **ಭೂಗೋಳ ಶಾಸ್ತ್ರ** | |
| 10 | ನಮ್ಮ ರಾಜ್ಯ–ಕರ್ನಾಟಕ–ಪ್ರಾಕೃತಿಕ ವಿಭಾಗಗಳು | 94 |
| 11 | ಕರ್ನಾಟಕದ ಪ್ರಾಕೃತಿಕ ವೈವಿಧ್ಯ | 102 |
| 12 | ಕರ್ನಾಟಕದ ಜಲಸಂಪನ್ಮೂಲಗಳು | 110 |
| 13 | ಕರ್ನಾಟಕದ ಭೂಸಂಪತ್ತು | 115 |
| | **ಅರ್ಥಶಾಸ್ತ್ರ** | |
| 14 | ಆರ್ಥಿಕ ರಚನೆ | 124 |
| 15 | ಭಾರತೀಯ ಅರ್ಥವ್ಯವಸ್ಥೆಯ ವಲಯಗಳು | 130 |
| | **ವ್ಯವಹಾರ ಅಧ್ಯಯನ** | |
| 16 | ವ್ಯವಹಾರ ನಿರ್ವಹಣೆ | 142 |


@KTBS NOT TO BE REPUBLISHED

## ಇತಿಹಾಸ

## ಅಧ್ಯಾಯ – 1

# ಪಾಶ್ಚಾತ್ಯ ಧರ್ಮಗಳು

Y9G9P4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಯಹೂದಿ, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಬೆಳವಣಿಗೆ.
- ಯೇಸು ಕ್ರಿಸ್ತ ಹಾಗೂ ಮೊಹಮ್ಮದ್ ಪೈಗಂಬರರ ಜೀವನ.
- ಯಹೂದಿ, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಬೋಧನೆಗಳು.

ಪ್ರಪಂಚದ ಚರಿತ್ರೆಯಲ್ಲಿ ಪುರಾತನ ಕಾಲದಿಂದ ಹಲವಾರು ಧರ್ಮಗಳ ಹುಟ್ಟು ಹಾಗೂ ಬೆಳವಣಿಗೆಯನ್ನು ಕಾಣುತ್ತೇವೆ. ಯಹೂದಿ, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಪಾಶ್ಚಾತ್ಯ ಪ್ರದೇಶಗಳಲ್ಲಿ ಜನ್ಮತಾಳಿದವು. ಇವುಗಳನ್ನು ಇಂಗ್ಲೀಷ್‌ನಲ್ಲಿ ಸೆಮೆಟಿಕ್ ರಿಲಿಜನ್‌ಗಳೆಂದೂ ಕರೆಯುವರು. ಇವು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಹರಡಿಕೊಂಡಿವೆ. ಇವುಗಳಲ್ಲಿ ಕೆಲವು ಸಾಮಾನ್ಯ ಅಂಶಗಳನ್ನು ಗುರುತಿಸಬಹುದು:

1. ಏಕದೇವನಲ್ಲಿ ನಂಬಿಕೆ
2. ದೇವರ ಸಂದೇಶಗಳು ದೇವದೂತ (ಪ್ರವಾದಿ)ನ ಮೂಲಕ ವ್ಯಕ್ತವಾಗುವುದು ಎಂಬುವುದರಲ್ಲಿ ನಂಬಿಕೆ.
3. ಪ್ರವಾದಿಯ ಚಿಂತನೆಗಳನ್ನು ಸಂಕಲಿಸಿದ ಪವಿತ್ರ ಗ್ರಂಥದ ಅನುಸರಣೆ.
4. ಅದರಲ್ಲಿ ನಿರ್ದಿಷ್ಟ ವಿಧಿ–ನಿಷೇಧಗಳ ಪಾಲನೆ.
5. ನಿರ್ದಿಷ್ಟ ಸ್ಥಳದಲ್ಲಿ ಸಾಮೂಹಿಕ ಪ್ರಾರ್ಥನೆ.

**ನಿಮಗಿದು ತಿಳಿದಿರಲಿ :**

'ರಿಲಿಜನ್' ಪದಕ್ಕೆ ಸಂವಾದಿಯಾಗಿ 'ಧರ್ಮ' ಎಂಬ ಪದವನ್ನು ಬಳಸುವುದು ವಾಡಿಕೆಯಾಗಿದೆ.

NOT TO BE REPUBLISHED @KTBS

## ಯಹೂದಿ ಧರ್ಮ

ಪ್ರಾಶ್ಚಾತ್ಯ ಜಗತ್ತಿನ ಅತ್ಯಂತ ಪ್ರಾಚೀನ ಧರ್ಮ ಎಂದರೆ ಯಹೂದಿ ಅಥವಾ ಜುಡಾಯಿಸಂ. ಇದರ ಅನುಯಾಯಿಗಳನ್ನು ಜ್ಯೂಗಳು ಅಥವಾ ಯಹೂದ್ಯರು ಎನ್ನುತ್ತಾರೆ. ಯಹೂದ್ಯರ ಆದಿಮ ಭಾಷೆಯನ್ನು ಹೀಬ್ರೂ ಎನ್ನುತ್ತಾರೆ. ಇವರ ದೇವರು ಯಾವೇ (Yahweh); ಅಬ್ರಹಾಂ ಅಥವಾ ಏಬ್ರಹಾಂ ಇವರ ಮೂಲಪುರುಷ ಹಾಗೂ ಮೋಸೆಸ್ ಇವರ ಪ್ರವಾದಿ. ಈ ಧರ್ಮದ ತತ್ವಗಳು ಹಾಗೂ ಪರಂಪರೆಗಳು ಮುಂದೆ ಉಗಮಿಸಿದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳೆರಡಕ್ಕೂ ಬುನಾದಿಯಾಗಿವೆ. 'ಅಬ್ರಹಾಂ'ನನ್ನು ಪ್ರಮುಖನಾಗಿ ಕಾಣುವ ಈ ಮೂರೂ ಧರ್ಮಗಳನ್ನು 'ಅಬ್ರಹಮೀಯ' ಧರ್ಮಗಳೆಂದೂ ಕರೆಯುತ್ತಾರೆ.



**ಪ್ರವಾದಿ ಮೋಸೆಸ್**

## ಯಹೂದ್ಯರ ಇತಿಹಾಸ

ಡೇವಿಡ್ ಎಂಬಾತನನ್ನು ಯಹೂದ್ಯರು ತಮ್ಮ ಆದಿ ದೊರೆ ಎಂದು ಭಾವಿಸುತ್ತಾರೆ. ಈತ ಶಕ್ತಿ ಮತ್ತು ಆಕಾರದಲ್ಲಿ ತನಗಿಂತ ಹಲವು ಪಟ್ಟು ದೊಡ್ಡವನಾದ ಗೋಲಾಯತ್ ಎಂಬಾತನನ್ನು ಸೋಲಿಸಿ ಯಹೂದ್ಯರಿಗೆ ಅರಸನಾದನು. ಈತನ ಮಗ ಸಾಲೊಮನ್ ಎಂಬವನು. ಈತ ಪ್ರಸಿದ್ಧ ದೊರೆಯಾಗಿ ದೀರ್ಘಕಾಲ ರಾಜ್ಯಭಾರ ಮಾಡಿದನು. ಸಾಲೊಮನ್ ತನ್ನ ರಾಜ್ಯದಲ್ಲಿ ಯಹೂದ್ಯರ ಮೊದಲ ದೇವಾಲಯವನ್ನು ಕಟ್ಟಿಸಿದನು.

ಸಾಲೊಮನ್ ತೀರಿಕೊಂಡ ಮೇಲೆ, ಯಹೂದಿ ರಾಜ್ಯವು ಎರಡು ಪ್ರಾಂತ್ಯಗಳಾಗಿ ಒಡೆದುಹೋಯಿತು. ಇವುಗಳಲ್ಲಿ ಒಂದನ್ನು ಇಸ್ರೇಲ್ ಎಂದು ಕರೆದರೆ ಇನ್ನೊಂದನ್ನು ಜೂಡಾ ಎಂದು ಕರೆಯಲಾಯಿತು. ಇಸ್ರೇಲ್ ಹಾಗೂ ಜೂಡಾ ಪ್ರಾಂತ್ಯಗಳು ಮುಂದಿನ ಹಲವು ಶತಮಾನಗಳ ಕಾಲ ಒಂದಿಲ್ಲೊಂದು ಆಕ್ರಮಣಕ್ಕೆ ತುತ್ತಾಗುತ್ತಲೇ ಇದ್ದವು ಹಾಗೂ ಈ ಆಕ್ರಮಣಗಳ ಪರಿಣಾಮವಾಗಿ ಯಹೂದಿಗಳು ಮಧ್ಯ ಪ್ರಾಚ್ಯದಲ್ಲಷ್ಟೇ ಅಲ್ಲದೇ ಯುರೋಪ್, ಏಷ್ಯಾ, ಆಫ್ರಿಕಾದಂಥಹ ಸುತ್ತಮುತ್ತಲಿನ ಖಂಡಗಳಲ್ಲಿಯೂ ಚದುರಿ ನೆಲಸಬೇಕಾಯಿತು. ಹೀಗೆ ಯಹೂದ್ಯರ ನಾಗರಿಕತೆ ಎಂದರೆ ಅಸ್ತಿತ್ವಕ್ಕಾಗಿನ ಹೋರಾಟದ ಕತೆಯಾಗಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಹಿಟ್ಲರ್ ಸುಮಾರು 60 ಲಕ್ಷ ಯಹೂದಿಗಳನ್ನು ಕೊಲ್ಲಿಸಿದನು. ಎರಡನೇ ಮಹಾಯುದ್ಧ ಮುಗಿದ ಬಳಿಕ ವಿಶ್ವಸಂಸ್ಥೆಯ ನೆರವಿನೊಂದಿಗೆ ಯಹೂದಿಯರಿಗೆಂದೇ "ಇಸ್ರೇಲ್" ಎಂಬ ರಾಷ್ಟ್ರವನ್ನು ನಿರ್ಮಿಸಿಕೊಡಲಾಯಿತು. ಪ್ರಪಂಚದಾದ್ಯಂತ ಹರಡಿಹೋಗಿದ್ದ ಯಹೂದಿಯರಿಗೆ 3,000 ವರ್ಷಗಳ ನಂತರ ತಮ್ಮದೆಂಬ ಮಾತೃಭೂಮಿ ಸಿಕ್ಕಿತು.

ಹೀಬ್ರೂ ಬೈಬಲ್ ಯಹೂದಿಗಳ ಮೂಲ ಪವಿತ್ರಗ್ರಂಥ. ಇದನ್ನು 'ಓಲ್ಡ್ ಟೆಸ್ಟಮೆಂಟ್' ಎಂದೂ ಕರೆಯುತ್ತಾರೆ. ಇದರಲ್ಲಿ ಮೂರು ವಿಭಾಗಗಳಿದ್ದವು: ಕಾನೂನು, ಬರಹಗಳು ಹಾಗೂ ಪ್ರವಾದಿ ಮೋಸಸ್‌ರ ನುಡಿಗಳು. ಇವು ವಿಧಿಸುವ ಹತ್ತು ಕಟ್ಟಳೆಗಳೆಂದರೆ

1) 'ಯಾವೇ' (Yahweh) ಹೊರತಾಗಿ ಬೇರೆ ದೇವರಿಲ್ಲ.
2) ಮೂರ್ತಿ ಪೂಜೆ ಸಲ್ಲದು.
3) ದೇವರ ಹೆಸರಿಗೆ ಕಳಂಕ ತರಬಾರದು.
4) ಸಬ್ಬತ್ ದಿನವನ್ನು ಪವಿತ್ರವೆಂದು ಕಾಣುವುದು.
5) ತಂದೆ ತಾಯಿಯರನ್ನು ಗೌರವಿಸಬೇಕು.
6) ವ್ಯಭಿಚಾರ ಸಲ್ಲದು.
7) ಕಳ್ಳತನ ಮಾಡಬಾರದು.
8) ಕೊಲೆ ಮಾಡಬಾರದು.
9) ಸುಳ್ಳು ಹೇಳಬಾರದು.
10) ಅಸೂಯೆ ಪಡಬಾರದು.

**ಸಬ್ಬತ್**

ದೇವರು ಸೃಷ್ಟಿಕ್ರಿಯೆಯಿಂದ ವಿರಮಿಸಿದ ದಿನ. ಶುಕ್ರವಾರ ಸಂಜೆಯಿಂದ ಶನಿವಾರ ಸಂಜೆಯವರೆಗಿನ ಅವಧಿ.

@KTBS NOT TO BE REPUBLISHED

## ಪಾರ್ಸಿ ಧರ್ಮ



ಜರಾತುಷ್ಟ್ರ

ಪಾರ್ಸಿ ಧರ್ಮವು ಪರ್ಷಿಯಾ (ಇರಾನ್) ದಲ್ಲಿ ಪ್ರಾರಂಭವಾದರೂ, ಭಾರತದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಿದೆ. ಮುಸಲ್ಮಾನರ ದಾಳಿಯ ಕಾಲದಲ್ಲಿ ಹಂತಹಂತವಾಗಿ ಅವರು ಭಾರತದಲ್ಲಿ ಬಂದು ನೆಲಸಿದರು. ವಿಶ್ವದ ಬೇರೆ ಯಾವುದೇ ಭಾಗಕ್ಕಿಂತ ಭಾರತದಲ್ಲಿ ಅತಿ ಹೆಚ್ಚು ಪಾರ್ಸಿ ಜನಾಂಗದವರು ನೆಲೆಸಿದ್ದಾರೆ ಎಂಬ ಅಂಶವು ಮುಖ್ಯವಾಗಿದೆ. ಭಾರತದ ಅರ್ಥವ್ಯವಸ್ಥೆ, ಸೈನ್ಯ ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಕೊಡುಗೆ ಅಪಾರವಾಗಿದೆ.

ಪಾರ್ಸಿ ಧರ್ಮವನ್ನು ಸ್ಥಾಪಿಸಿದವನು ಸಾ.ಶ.ಪೂ. 6ನೇ ಶತಮಾನದಲ್ಲಿದ್ದ ಜರಾತುಷ್ಟ್ರ. ಈತನು ಇರಾನಿನ ಒಬ್ಬ ಪ್ರವಾದಿ ಹಾಗೂ ಧಾರ್ಮಿಕ ಸುಧಾರಕ. ಹೀಗಾಗಿ ಈ ಧರ್ಮವನ್ನು ಜೊರಾಷ್ಟ್ರಿಯನ್ ಧರ್ಮ ಎಂದೂ ಕರೆಯಲಾಗುತ್ತದೆ. ಅಹುರ್ ಮಾಜ್ದಾ ಇವರ ದೈವ. ಉಪವಾಸ, ಬ್ರಹ್ಮಚರ್ಯ ಹಾಗೂ ನೈರ್ಮಲ್ಯತೆ ಇವರ ಆಚರಣೆಗಳಾಗಿವೆ. ಪಾರ್ಸಿ ಧರ್ಮ ಪ್ರಾಚೀನ ವೈದಿಕಾಚರಣೆಗಳಿಗೆ ಹತ್ತಿರವಾಗಿದೆ. ಉದಾಹರಣೆಗೆ ಒಳಿತು ಕೆಡುಕುಗಳ ನಡುವಿನ ಸಂಘರ್ಷದಲ್ಲಿ ಒಳಿತು ಗೆಲುವು ಸಾಧಿಸುವುದರಿಂದ ಮಾನವನು ಒಳಿತನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂಬುದು ಇವರ ನಂಬಿಕೆ. ಇವರ ಸೂರ್ಯೋಪಾಸನೆಯು ಇದೇ ರೀತಿಯ ನಂಬಿಕೆಯಾಗಿದೆ. ಪಾರ್ಸಿಗಳ ಧರ್ಮ ಗ್ರಂಥವಾದ 'ಅವೆಸ್ತ'ದಲ್ಲಿ ಬರುವ ಪದ್ಯ/ಶ್ಲೋಕರೂಪದ ಸಾಹಿತ್ಯವನ್ನು "ಗಾಥಾ" ಎನ್ನುತ್ತಾರೆ. ಹಾಗೆಯೇ ಪೂಜೆ / ಆರಾಧನೆ / ಅಚರಣೆಗಳಿಗೆ ಸಂಬಂಧಿಸಿದ ಭಾಗವನ್ನು ಯಷ್ನ ಎನ್ನುತ್ತಾರೆ. ಇವೆಲ್ಲವೂ ಸಂಸ್ಕೃತ ಮೂಲದ ಪದಗಳು ಎನ್ನುವುದನ್ನು ಗಮನಿಸಬಹುದು.

## ಕ್ರೈಸ್ತ ಧರ್ಮ (ಕ್ರಿಶ್ಚಿಯಾನಿಟಿ)



ಯೇಸು ಕ್ರಿಸ್ತ

ಜೀಸಸ್ (ಯೇಸು)ರ ಜನನ ಸ್ಥಳವು ಜ್ಯೂಡಿಯಾ ಪ್ರಾಂತ್ಯಕ್ಕೆ ಸೇರಿದ ಜೆರುಸಲೆಂನಿಂದ 5 ಕಿ.ಮೀ. ದೂರದಲ್ಲಿರುವ ಬೆತ್ಲೆಹೆಂ. ಜೀಸಸ್‌ರು, ಜೋಸೆಫ್ ಮತ್ತು ಮೇರಿ ಎಂಬ ಬಡ ದಂಪತಿಗಳ ಏಕೈಕ ಪುತ್ರ.

ಯೇಸು ಕ್ರಿಸ್ತರ ಆರಂಭಿಕ ಜೀವನದ ಬಗ್ಗೆ ಹೆಚ್ಚಾಗಿ ತಿಳಿದುಬಂದಿಲ್ಲ. ಜೀಸಸ್ ಅರಾಮಿಕ್ ಮತ್ತು ಸೆಮಿಟಿಕ್ ಭಾಷೆಗಳನ್ನು ಬಲ್ಲವರಾಗಿದ್ದರು. ಇದೇ ಸಮಯದಲ್ಲಿ ಯಹೂದಿಗಳು ತಮ್ಮನ್ನು ಕಷ್ಟಗಳಿಂದ ರಕ್ಷಿಸುವ 'ಮಸೀಹ' ಅಥವಾ 'ಮಹಾರಕ್ಷಕ'ನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಈ ಆಗಮನದ ಕಲ್ಪನೆ ಜಾನ್ ಎಂಬ ವ್ಯಕ್ತಿಯದಾಗಿತ್ತು. ಜಾನ್ ಮೂಲತಃ ಧಾರ್ಮಿಕ ಪ್ರವರ್ತಕರಾಗಿದ್ದರು. ತಮ್ಮ ಬಳಿಗೆ ಬರುವ ವ್ಯಕ್ತಿಗಳಿಗೆ ದೀಕ್ಷಾ ಸ್ನಾನ ಮಾಡಿಸುವುದರ ಮೂಲಕ ದೀಕ್ಷೆ ನೀಡುತ್ತಿದ್ದರು. ಯೇಸು ಕ್ರಿಸ್ತರು ಸಹ ಜಾನ್‌ನಿಂದ ದೀಕ್ಷಾಸ್ನಾನಕ್ಕೆ ಒಳಗಾದರು. ಜಾನ್ ಜೀಸಸ್‌ರನ್ನು 'ಮಸೀಹ' ಅಥವಾ 'ಮಹಾರಕ್ಷಕ' ಎಂದು ಉದ್ಗರಿಸಿದರು. ಆಗ ಯೇಸು ಕ್ರಿಸ್ತರಿಗೆ 30 ವರ್ಷ ವಯಸ್ಸು.

©KTBS NOT TO BE REPUBLISHED

ಯೇಸು ಕ್ರಿಸ್ತರು ಇಸ್ರೇಲ್ ದೇಶದಲ್ಲೆಲ್ಲಾ ಸಂಚರಿಸುತ್ತಾ ಮತ ಪ್ರಚಾರ ಹಾಗೂ ಬೋಧನೆಯಲ್ಲಿ ತೊಡಗಿದರು. ಕಾಲಾನಂತರದಲ್ಲಿ ಯಹೂದಿಗಳು ಯೇಸು ಕ್ರಿಸ್ತರನ್ನು ತಮ್ಮ ಧಾರ್ಮಿಕ ಮುಖಂಡನನ್ನಾಗಿ ಸ್ವೀಕರಿಸಿದರು. ಯೇಸು ಕ್ರಿಸ್ತರು ಮೊದಲು 12 ಜನ ಶಿಷ್ಯರನ್ನು ಹೊಂದಿದ್ದರು. ಅವರನ್ನು 'ಅಪೋಸಲ್ಸ್' ಎಂದು ಕರೆಯಲಾಗಿದೆ. ಪೀಟರ್ ಅವರ ಮೊದಲ ಅನುಯಾಯಿಯಾಗಿದ್ದನು.

ಯೇಸು ಕ್ರಿಸ್ತರು ರೋಗದಿಂದ ನರಳುವವರ ಮತ್ತು ಅಸಹಾಯಕರ ಬಗ್ಗೆ ಸಹಾನುಭೂತಿ ಹಾಗೂ ಕನಿಕರ–ಕರುಣೆಯನ್ನು ಹೊಂದಿದ್ದರು. ಈ ಅಸಾಮಾನ್ಯ ಶಕ್ತಿಯ ಮೂಲಕ ಬಡವರ ಕಷ್ಟಗಳನ್ನು ಪರಿಹರಿಸಲು ಮುಂದಿರುತ್ತಿದ್ದರು.

### ಯೇಸು ಕ್ರಿಸ್ತರನ್ನು ಶಿಲುಬೆಗೇರಿಸುವಿಕೆ

ಯೇಸು ಕ್ರಿಸ್ತ ಯಹೂದಿಗಳಿಂದ ಮಹಾರಕ್ಷಕರೆಂದು ಪರಿಗಣಿಸಲ್ಪಟ್ಟು ಜನಪ್ರಿಯರಾದರು. ಡಂಭಾಚಾರದಿಂದ ಕೂಡಿದ್ದ ಧಾರ್ಮಿಕ ವಿಧಿವಿಧಾನಗಳನ್ನು ಅಲ್ಲಗಳೆದುದರಿಂದ ಯಹೂದಿಗಳ ಸಂಪ್ರದಾಯ ವರ್ಗ ಅವರನ್ನು ವಿರೋಧಿಸಲು ಆರಂಭಿಸಿತು.

ಈ ಎಲ್ಲ ಕಾರಣಗಳಿಂದ, ಯೇಸುಕ್ರಿಸ್ತರು ಜೆರುಸಲೆಂಗೆ ಭೇಟಿ ನೀಡಿದಾಗ ಯಹೂದಿಗಳು, ಅವರನ್ನು ಬಂಧಿಸಿ, ರೋಮ್‌ನ ರಾಜ್ಯಪಾಲನ ವಶಕ್ಕೆ ಒಪ್ಪಿಸಿದರು. ರಾಜ್ಯಪಾಲನು ಯೇಸು ಕ್ರಿಸ್ತರನ್ನು 'ಶಿಲುಬೆಗೇರಿಸುವ' ಮರಣದಂಡನೆ ಶಿಕ್ಷೆಯನ್ನು ವಿಧಿಸಿದನು. ಅವರನ್ನು ರೋಮ್‌ನ ಸೈನಿಕರು 'ಗೊಲ್ಗೊಥಾ' ಎಂಬ ಬೆಟ್ಟದ ಮೇಲೆ ಶಿಲುಬೆಗೇರಿಸಿದರು.

### ಯೇಸು ಕ್ರಿಸ್ತರ ಬೋಧನೆಗಳು

ಕ್ರಿಸ್ತರ ಬೋಧನೆಗಳು ಅತ್ಯಂತ ಸರಳ ಹಾಗೂ ಸುಲಭವಾಗಿ ಅನುಸರಿಸಬಲ್ಲವಾಗಿದ್ದವು. ಅವುಗಳು ಕಥೆ ಅಥವಾ ದೃಷ್ಟಾಂತಗಳ ಮೂಲಕ ಬೋಧಿಸಲ್ಪಟ್ಟವು.

1) ದೇವರು ಒಬ್ಬನೇ, ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ.
2) ಪ್ರತಿಯೊಬ್ಬರಲ್ಲಿ ಸಹೋದರತ್ವ ಭಾವನೆಯಿರಬೇಕು.
3) ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ .
4) ಪರರಿಂದ ಯಾವುದನ್ನೂ ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು.
5) ಮಾನವನ ಸೇವೆಯು ದೇವರ ಸೇವೆಗೆ ಸಮಾನವಾದುದು.
6) ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ, ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ.
7) ನಿನ್ನ ಶತ್ರುವನ್ನು ನೀನು ಪ್ರೀತಿಸು; ನಿನಗೆ ಕೆಟ್ಟದ್ದನ್ನು ಬಯಸುವವರಿಗೆ ನೀನು ಒಳ್ಳೆಯದನ್ನು ಬಯಸು.

ಹೀಗೆ ಅವರ ಬೋಧನೆಗಳು ಪ್ರೀತಿ, ಸೇವೆ ಹಾಗೂ ಭ್ರಾತೃತ್ವದಂತಹ ಉತ್ಕೃಷ್ಟ ವಿಚಾರಗಳನ್ನು ತಮ್ಮ ತಳಹದಿಯನ್ನಾಗಿ ಹೊಂದಿದ್ದವು.

### ಕ್ರೈಸ್ತ ಧರ್ಮದ ಪ್ರಚಾರ

ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಿದ ನಂತರ ಅವರ ಅನುಯಾಯಿಗಳಿಗೆ ಕಿರುಕುಳ ನೀಡಲಾಯಿತು. ಕೆಲವರನ್ನು ಶಿಲುಬೆಗೇರಿಸಲಾಯಿತು. ಚಕ್ರವರ್ತಿಯಾದ ಕಾನ್‌ಸ್ಟಾಂಟೈನ್‌ನ ಆಳ್ವಿಕೆಯ ಅವಧಿಯಲ್ಲಿ ಕ್ರೈಸ್ತ ಧರ್ಮವು ರೋಮ್‌ನ ರಾಜ್ಯ ಧರ್ಮವಾಯಿತು. ನಂತರ ಈ ಧರ್ಮ ಯೂರೋಪಿನಾದ್ಯಂತ ಹರಡಿತು. ಇಂದು ಚರ್ಚ್‌ಗಳು ಪ್ರಪಂಚದ ತುಂಬೆಲ್ಲಾ ಇದ್ದು ಹೆಚ್ಚು ಜನರ ಸದಸ್ಯತ್ವವನ್ನು ಹೊಂದಿವೆ. ಬೈಬಲ್ ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾಗಿದೆ.

© KTBS NOT TO BE REPUBLISHED

**ಕ್ರೈಸ್ತ ಧರ್ಮದ ಪಂಗಡಗಳು:** 16ನೆಯ ಶತಮಾನದವರೆಗೂ ರೋಮನ್ ಕ್ಯಾಥೋಲಿಕ್‌ರ ಹಿಡಿತದಲ್ಲಿದ್ದ ಕ್ರೈಸ್ತ ಧರ್ಮ ಹೊಸ ಕವಲುಗಳಿಗೆ ಕಾರಣವಾಯಿತು. ಕ್ರಮೇಣ ಜನಸಾಮಾನ್ಯರಿಂದ ಮತ್ತು ಕ್ರೈಸ್ತ ಬೋಧನೆಗಳಿಂದ ದೂರ ಸರಿಯಿತು. ಚರ್ಚ್‌ಗಳಲ್ಲಿ ಪುರೋಹಿತರು ಮತ್ತು ಭೂಮಾಲೀಕರು ಮೆರೆಯಲಾರಂಭಿಸಿದರು. ಧರ್ಮ ಜನರ ವಿರೋಧಕ್ಕೆ ಗುರಿಯಾಯಿತು. ಈ ಹಿನ್ನೆಲೆಯಲ್ಲಿ ಮಾರ್ಟಿನ್‌ಲೂಥರ್ ನೇತೃತ್ವದಲ್ಲಿ ಜರ್ಮನಿಯಲ್ಲಿ ಸುಧಾರಣಾ ಚಳವಳಿ ಪ್ರಾರಂಭವಾಯಿತು. ಪ್ರೊಟೆಸ್ಟೆಂಟ್ ಎನ್ನುವ ಹೊಸ ಪಂಗಡವು ಸೃಷ್ಟಿಯಾಯಿತು. ಇದರಿಂದ ಕ್ರೈಸ್ತ ಧರ್ಮವು ಎರಡು ಪಂಗಡಗಳಾಯಿತು. ಅವುಗಳೆಂದರೆ; 1) ಕ್ಯಾಥೋಲಿಕರು 2) ಪ್ರೊಟೆಸ್ಟೆಂಟರು

## ಇಸ್ಲಾಂ ಧರ್ಮ

ಇಸ್ಲಾಂ ಧರ್ಮ ಪ್ರಾರಂಭವಾದುದು ಅರೇಬಿಯಾ ದೇಶದಲ್ಲಿ. ಇದು ಪಶ್ಚಿಮ ಏಷ್ಯಾದ ಒಂದು ಪರ್ಯಾಯ ದ್ವೀಪ. ಈ ಪ್ರದೇಶ ಮರುಭೂಮಿಯಾಗಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ, ಇದರಿಂದಾಗಿ ಅರಬ್ಬರು ವಲಸೆಗಾರರಾಗಿ ಎಲ್ಲಿ ಫಲವತ್ತಾದ ಭೂಮಿ ಮತ್ತು ನೀರು ದೊರಕುತ್ತಿತ್ತೋ ಅಲ್ಲಿ ನೆಲೆಸುತ್ತಿದ್ದರು. ಈ ರೀತಿ ನೆಲೆಸಿದ ಪ್ರದೇಶಗಳೇ ಮೆಕ್ಕಾ ಮತ್ತು ಮದೀನಾಗಳು.

ಪ್ರವಾದಿ ಮೊಹಮ್ಮದ್ ಪೈಗಂಬರರು ಇಸ್ಲಾಂ ಧರ್ಮದ ಪ್ರವರ್ತಕರು. ಇವರು 570 ರಲ್ಲಿ ಮೆಕ್ಕಾದಲ್ಲಿ ಜನಿಸಿದರು. ಇವರ ತಂದೆ ಅಬ್ದುಲ್ಲಾ ಹಾಗೂ ತಾಯಿ ಅಮಿನಾ. ಇವರು ಜನಿಸುವ ಕೆಲವೇ ತಿಂಗಳುಗಳ ಮುಂಚೆ ತಂದೆ ಮರಣ ಹೊಂದಿದ್ದರು. ಅವರ ಆರನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರು. ಇದರಿಂದಾಗಿ ಚಿಕ್ಕಪ್ಪನ ಆರೈಕೆಯಲ್ಲಿ ಬೆಳೆದರು. ಮೂಲತಃ ಚಿಕ್ಕಪ್ಪನು ವ್ಯಾಪಾರಿಯಾಗಿದ್ದನು. ಕೆಲಸದ ನಿಮಿತ್ತ ಅನೇಕ ದೂರದ ಸ್ಥಳಗಳಿಗೆ ಪ್ರಯಾಣ ಮಾಡಬೇಕಿತ್ತು. ಈ ಸಂದರ್ಭದಲ್ಲಿ ಮೊಹಮ್ಮದ್‌ರು ಸಹಪ್ರಯಾಣಿಕರಾಗಿದ್ದರು. ಕಾಲಾನಂತರದಲ್ಲಿ ಒಬ್ಬ ಶ್ರೀಮಂತ ವಿಧವೆಯಾಗಿದ್ದ ಖದೀಜಾ ಬಳಿ ಸೇವಾ ನೌಕರಿಗೆ ಮೊಹಮ್ಮದ್‌ರು ಸೇರಿದರು. ಮುಂದೆ ಆ ವಿಧವೆಯೊಂದಿಗೆ ವಿವಾಹವಾಯಿತು. ಅವರಿಗೆ ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದರು.


**ಮೆಕ್ಕಾ**

ಮೊಹಮ್ಮದ್‌ರು ಸದಾ ಚಿಂತನಾ ಮಗ್ನರು ಮತ್ತು ಒಂಟಿಯಾಗಿ ಪ್ರಾರ್ಥಿಸುವ ಅಭ್ಯಾಸವುಳ್ಳವರಾಗಿದ್ದರು. ಆ ಪ್ರಾರ್ಥನಾ ಸ್ಥಳ ಮೆಕ್ಕಾದ ಬಳಿಯ ಹೀರಾ ಎನ್ನುವ ಬೆಟ್ಟದ ತಪ್ಪಲಿನಲ್ಲಿದ್ದ ಗುಹೆಯಾಗಿತ್ತು. ಹೀಗೆ ಒಮ್ಮೆ ಅಲ್ಲಿ ಧ್ಯಾನಾಸಕ್ತರಾಗಿದ್ದಾಗ ದೇವದೂತನ ಧ್ವನಿ ಆಲಿಸಿದರು. ಆ ದೇವದೂತನು ಮೊಹಮ್ಮದ್‌ರನ್ನು 'ನೀನು ಅಲ್ಲಾನ (ದೇವರ) ಪ್ರವಾದಿ' ಎಂದು ಉದ್ಗರಿಸಿದನು. ಮುಂದೆ ತಾನು ಅಲ್ಲಾನ ಪ್ರವಾದಿಯೆಂದು ತಮ್ಮ ಕುಟುಂಬ–ಬಂಧು ವರ್ಗ ಹಾಗೂ ಸ್ನೇಹಿತವರ್ಗಕ್ಕೆ ಮನಗಾಣಿಸಿದರು. ಇವರು ತಮ್ಮನ್ನು ತಾವು ದೇವರೆಂದು ಎಂದೂ ಕರೆದುಕೊಳ್ಳಲಿಲ್ಲ. ತಾವು ಕೇವಲ ಅಲ್ಲಾನ ಪ್ರವಾದಿ ಎಂದೇ ಪರಿಗಣಿಸುತ್ತಿದ್ದರು ಹಾಗೂ ತಾವು ಆಲಿಸಿದ ದೈವೀ ಸತ್ಯ (ಸುವಾರ್ತೆ)ವನ್ನು ಅಭಿವ್ಯಕ್ತಿಸಿದರು. ಅವರ ಶಿಷ್ಯರು ಈ ನುಡಿಗಳನ್ನು ಗ್ರಂಥ ರೂಪದಲ್ಲಿ ಸಂಗ್ರಹಿಸಿಟ್ಟರು. ಇದೇ ಇಸ್ಲಾಂನ ಪವಿತ್ರ ಗ್ರಂಥ 'ಕುರಾನ್'.

©KTBS NOT TO BE REPUBLISHED

ಮೆಕ್ಕಾದ ಸಾಂಪ್ರದಾಯಿಕ ವರ್ಗ ಇವರನ್ನು ವಿರೋಧಿಸಲು ಆರಂಭಿಸಿತು. ಈ ಕಾರಣದಿಂದ ಮುಂದೆ ಪೈಗಂಬರರಿಗೆ ಮೆಕ್ಕಾದಲ್ಲಿ ಬೋಧಿಸಲು ಸಾಧ್ಯವಾಗಲಿಲ್ಲ. 622 ರಲ್ಲಿ ಮೆಕ್ಕಾದಿಂದ ಮದೀನಾದ ಕಡೆ ಪಯಣಿಸಿದರು. ಈ ಪಯಣವು 'ಹಿಜಿರಾ ಶಕ' ಎಂಬ ಹೆಸರಿನಿಂದ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಸ್ವಲ್ಪ ಕಾಲ ಮದೀನಾದಲ್ಲಿ ನೆಲೆಯೂರಿದರು. ಅಲ್ಲಿ ಅರೇಬಿಯಾದ ಅನೇಕ ಬುಡಕಟ್ಟುಗಳನ್ನು ಒಂದುಗೂಡಿಸಿದರು. ಇದರ ಮೂಲಕ ಅವರ ಬಲ ಇಮ್ಮಡಿಗೊಂಡಿತು. ಪುನಃ ಮೆಕ್ಕಾಕ್ಕೆ ತಮ್ಮ ಅನುಯಾಯಿಗಳೊಂದಿಗೆ ಬಂದು ನೆಲೆಸಿದರು. ನಂತರ ಅಲ್ಲಿಯೇ 632ರಲ್ಲಿ ಕೊನೆಯುಸಿರೆಳೆದರು.

### ಇಸ್ಲಾಂ ಧರ್ಮದ ಬೋಧನೆಗಳು

ಇಸ್ಲಾಂ ಎಂದರೆ ಒಂದು ದೇವರಿಗೆ ಶರಣಾಗು, ಮುಸ್ಲಿಂ ಎಂದರೆ ದೇವರ ಅನುಯಾಯಿ ಎಂಬುದಾಗಿದೆ. ಈ ಧರ್ಮದ ಬೋಧನೆಗಳು ಹೀಗಿವೆ:

1) ದೇವರು ಒಬ್ಬನೇ. ಆತನೇ ಅಲ್ಲಾ. ಅಲ್ಲಾನನ್ನು ಒಲಿಸಿಕೊಳ್ಳಲು ಸರಳ ಪ್ರಾರ್ಥನೆಯೊಂದು ಸಾಕು.
2) ಪ್ರಾಮಾಣಿಕತೆ ಮತ್ತು ನೀತಿಯುತ ಜೀವನ ನಡೆಸಬೇಕು, ದುಶ್ಚಟಗಳಿಂದ ದೂರವಿರಬೇಕು.
3) ದೀನ ದುರ್ಬಲರ ಬಗ್ಗೆ ಕರುಣೆ ಹಾಗು ಸ್ತ್ರೀಯರ ಬಗ್ಗೆ ಗೌರವವಿರಬೇಕು.

### ಇಸ್ಲಾಂ ಧರ್ಮದ ಆಚರಣೆಗಳು

ಇಸ್ಲಾಂ ಧರ್ಮದಲ್ಲಿ ಐದು ಪ್ರಮುಖ ಆಚರಣೆಗಳಿವೆ.

1) ಕಲೀಮಾ – ಅಲ್ಲಾನಲ್ಲಿ ಮಾತ್ರ ನಂಬಿಕೆ. ಮೊಹಮ್ಮದರು ಅವರ ಪ್ರವಾದಿಗಳು.
2) ನಮಾಜ್ – ಪ್ರತೀ ದಿನ ಐದು ಬಾರಿ ಅಲ್ಲಾನಿಗೆ ಪ್ರಾರ್ಥನೆ ಸಲ್ಲಿಸಬೇಕು.
3) ರೋಜ – ರಂಜಾನ್ ತಿಂಗಳಲ್ಲಿ ಉಪವಾಸ.
4) ಜಕಾತ್ – ಆದಾಯದಲ್ಲಿ ನಿಗದಿಪಡಿಸಿದ ಭಾಗವನ್ನು ಬಡವರಿಗೆ ದಾನ ನೀಡಬೇಕು.
5) ಹಜ್ – ಜೀವನದಲ್ಲಿ ಒಂದು ಬಾರಿ ಮೆಕ್ಕಾ ಯಾತ್ರೆ ಕೈಗೊಳ್ಳಬೇಕು.

ಈ ಐದು ಆಚರಣೆಗಳನ್ನು "ಇಸ್ಲಾಂನ ಆಧಾರಸ್ತಂಭಗಳೆಂದು" ಕರೆಯಲಾಗಿದೆ.

ಮೊಹಮ್ಮದ್ ಪೈಗಂಬರ್‌ರ ಉತ್ತರಾಧಿಕಾರಿಗಳನ್ನು 'ಖಲೀಫರು' ಎನ್ನುವರು. ಮೊಹಮದ್ ಪೈಗಂಬರ್‌ರ ನಂತರ ಖಲೀಫರು ಇಸ್ಲಾಂನ ಧಾರ್ಮಿಕ ಮತ್ತು ರಾಜಕೀಯ ಮುಖಂಡರಾದರು. ಅಬೂಬಕರ್ ಮೊದಲನೆಯ ಖಲೀಫನಾಗಿದ್ದನು.

**ಇಸ್ಲಾಂ ಧರ್ಮದ ಪಂಗಡಗಳು :**

ಇತರ ಧರ್ಮಗಳಲ್ಲಿರುವಂತೆ ಇಸ್ಲಾಂ ಧರ್ಮದಲ್ಲಿಯೂ ಅನೇಕ ಪಂಗಡಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ– ಶಿಯಾ ಮತ್ತು ಸುನ್ನಿ ಪಂಗಡಗಳು..

© KTBS NOT TO BE REPUBLISHED

ದಯವಿಟ್ಟು ಗಮನಿಸಿ : ಸಾ.ಶ.ಪೂ – ಸಾಮಾನ್ಯ ಶಕೆ ಪೂರ್ವ
(ಸಾ.ಶ.ಪೂ ಇಲ್ಲದಿದ್ದಲ್ಲಿ ಸಾಮಾನ್ಯ ಶಕೆ ಎಂದು ತಿಳಿಯುವುದು)

## ಅಭ್ಯಾಸಗಳು

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.

1. ಯಹೂದಿ ಧರ್ಮದ ಮೂಲ ಪುರುಷ _________ .
2. ಪಾರ್ಸಿ ಧರ್ಮದ ಸ್ಥಾಪಕರು _________ .
3. ಯೇಸುಕ್ರಿಸ್ತರು ಹುಟ್ಟಿದ ಸ್ಥಳ _________ .
4. ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿದ ಬೆಟ್ಟ _________ .
5. ಕ್ರೈಸ್ತ ಧರ್ಮವು ರೋಮಿನ ರಾಜ್ಯಧರ್ಮವಾಗಿದ್ದುದು ಚಕ್ರವರ್ತಿ _________ ನ ಆಳ್ವಿಕೆಯ ಅವಧಿಯಲ್ಲಿ.
6. ಮೊಹಮ್ಮದ್ ಪೈಗಂಬರರು ಹುಟ್ಟಿದ ಸ್ಥಳ _________ .
7. ಇಸ್ಲಾಂನ ಪವಿತ್ರ ಗ್ರಂಥ _________ .
8. ಮೊಹಮ್ಮದ್ ಪೈಗಂಬರರ ಉತ್ತರಾಧಿಕಾರಿಗಳನ್ನು _________ ಎನ್ನುವರು.

## II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಮಿತ್ರರೊಂದಿಗೆ ಚರ್ಚಿಸಿ ಉತ್ತರ ಬರೆಯಿರಿ.

9. ಯಹೂದಿ ಧರ್ಮದ ಹತ್ತು ಕಟ್ಟಳೆಗಳನ್ನು ಪಟ್ಟಿಮಾಡಿ.
10. ಪಾರ್ಸಿ ಧರ್ಮವು ವೈದಿಕಾಚರಣೆಗಳಿಗೆ ಹತ್ತಿರವಾಗಿದೆ. ಸಮರ್ಥಿಸಿ.
11. ಯೇಸು ಕ್ರಿಸ್ತರ ಜೀವನವನ್ನು ಕುರಿತು ಬರೆಯಿರಿ.
12. ಯೇಸು ಕ್ರಿಸ್ತರ ಬೋಧನೆಗಳನ್ನು ಪಟ್ಟಿ ಮಾಡಿ.
13. ಕ್ರೈಸ್ತಧರ್ಮವು ಹೇಗೆ ಪ್ರಸಾರವಾಯಿತು ?
14. ಮೊಹಮ್ಮದ್ ಪೈಗಂಬರರ ಜೀವನವನ್ನು ತಿಳಿಸಿರಿ.
15. 'ಹಿಜಿರಾ ಶಕ' ಎಂದರೇನು ?
16. ಇಸ್ಲಾಂ ಧರ್ಮದ ಆಚರಣೆಗಳು ಯಾವುವು ?

## III. ಚಟುವಟಿಕೆಗಳು.

1. ವಿವಿಧ ಪಾಶ್ಚಾತ್ಯ ಧರ್ಮಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ.

## IV. ಯೋಜನೆ.

1. ಯಹೂದಿ, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಬೋಧನೆಗಳ ಕುರಿತು ಪ್ರಬಂಧ ಬರೆಯಿರಿ.

*****

©KTBS NOT TO BE REPUBLISHED

# ಅಧ್ಯಾಯ – 2

# 6 ರಿಂದ 14 ನೇ ಶತಮಾನದ ಭಾರತ

U5Y6D4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಉತ್ತರ ಭಾರತದಲ್ಲಿ ಆಳ್ವಿಕೆ ಮಾಡಿದ ರಜಪೂತ ಮನೆತನಗಳು ಹಾಗೂ ಕೊಡುಗೆಗಳು.
- ಕಾಶ್ಮೀರದ ಕಾರ್ಕೋಟ ಸಾಮ್ರಾಜ್ಯ.
- ಆಫ್ಘನ್ ದಾಳಿಕೋರರು – ಮಹಮ್ಮದ್ ಘಜ್ನಿ ಹಾಗೂ ಮಹಮ್ಮದ್ ಘೋರಿ.
- ದೆಹಲಿ ಸುಲ್ತಾನರ ರಾಜ್ಯ ಸ್ಥಾಪನೆ, ಆಡಳಿತ ಹಾಗೂ ಅವರ ಕೊಡುಗೆಗಳು.

6 ರಿಂದ 14 ನೇ ಶತಮಾನದ ಅವಧಿಯಲ್ಲಿ ಭಾರತದಲ್ಲಿ ಕೆಲವು ಮನೆತನಗಳು ಆಳ್ವಿಕೆ ನಡೆಸಿದವು. ವರ್ಧನ ವಂಶದ ನಂತರ ರಜಪೂತ ಹಾಗೂ ಕಾರ್ಕೋಟ ಮನೆತನಗಳು ಉತ್ತರ ಭಾರತದಲ್ಲಿ ಆಳ್ವಿಕೆ ನಡೆಸಿದವು. ನಂತರದಲ್ಲಿ ಘಜ್ನಿ, ಘೋರಿ ಮತ್ತು ದೆಹಲಿ ಸುಲ್ತಾನರುಗಳು ಆಳ್ವಿಕೆ ನಡೆಸಿದರು.

## ರಜಪೂತರು (6 ರಿಂದ 12ನೇ ಶತಮಾನ)

ಉತ್ತರ ಭಾರತದಲ್ಲಿ ಗುರ್ಜರ ಪ್ರತೀಹಾರರು, ಗಹಡ್ವಾಲರು, ಪಾರಮಾರರು, ಚೌಹ್ವಾಣರು, ಸೋಳಂಕಿಯರು ಮತ್ತು ಚಂದೇಲ ರಜಪೂತ ಮನೆತನಗಳು ಆಳ್ವಿಕೆ ನಡೆಸಿದವು. ಇವರು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ.

**ಗುರ್ಜರ ಪ್ರತೀಹಾರರು :** ಹರಿಚಂದ್ರನು ಗುರ್ಜರ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದನು. ಈತನ ನಾಲ್ಕು ಮಕ್ಕಳು ಪ್ರತೀಹಾರರ ಬೇರೆ ಬೇರೆ ಶಾಖೆಗಳಾದ – ಜೋಧ್‌ಪುರ, ನಂದಿಪುರ, ಬ್ರೋಚ್ ಮತ್ತು ಉಜ್ಜಯಿನಿಗಳಿಂದ ಆಳ್ವಿಕೆ ನಡೆಸಿದರು. ಇವುಗಳಲ್ಲಿ ಉಜ್ಜಯನಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ ನಾಗಭಟನು ಪ್ರಮುಖ ದೊರೆಯಾಗಿದ್ದು, ಅರಬ್ಬರ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಿದನು. ಈತನು ಗುಜರಾತ್, ಮಾಳ್ವಾ, ರಜಪುತಾನದ ಸ್ವಲ್ಪ ಭಾಗದವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಇನ್ನೊಬ್ಬ ಪ್ರಮುಖ ದೊರೆಯಾದ ಮಿಹಿರಭೋಜನು ಪಾಲರ ನಾರಾಯಣಪಾಲನನ್ನು ಸೋಲಿಸಿ ರಾಜ್ಯ ವಿಸ್ತರಿಸಿದನು. ಅರಬ್ ಪ್ರವಾಸಿಗರಾದ ಸುಲೈಮಾನ್ ಮತ್ತು ಅಲ್–ಮಸೂದ್ ಈತನ ಆಸ್ಥಾನಕ್ಕೆ ಭೇಟಿ ನೀಡಿದ್ದರು. ಪ್ರತೀಹಾರ ಮನೆತನದ ಮಹೇಂದ್ರಪಾಲ ಹಾಗೂ ಮೊದಲನೆಯ ಮಹಿಪಾಲರ ನಂತರ ಈ ಮನೆತನವು ಪತನ ಹೊಂದಲು ಪ್ರಾರಂಭಿಸಿತು.

**ಗಹಡ್ವಾಲರು :** ಈ ಮನೆತನದ ಆಳ್ವಿಕೆಯ ಸ್ಥಾಪಕ ಚಂದ್ರದೇವ. ಉತ್ತರ ಭಾರತದ ಬಹುಭಾಗವನ್ನು ವಶಪಡಿಸಿಕೊಂಡು ರಾಜ್ಯಭಾರ ನಡೆಸಿದನು. ಇವರಲ್ಲಿ ಗೋವಿಂದಚಂದ್ರ ಪ್ರಸಿದ್ಧ ದೊರೆ. ಈತನು ಪಾಲರಿಂದ ಮಗಧ, ಮಾಳ್ವಾವನ್ನು ವಶಪಡಿಸಿಕೊಂಡನಲ್ಲದೆ ಕಳಿಂಗ ಮತ್ತು ಒರಿಸ್ಸಾ ಅರಸರೊಂದಿಗೆ ಯುದ್ಧ ಮಾಡಿ ರಾಜ್ಯವನ್ನು ವಿಸ್ತರಿಸಿದನು. ಕಾಶ್ಮೀರ, ಗುಜರಾತ್ ಮತ್ತು ಚೋಳ ಅರಸರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದನು.

**ಪಾರಮಾರರು :** ಉಪೇಂದ್ರ ಕೃಷ್ಣರಾಜ ಈ ಮನೆತನದ ಆಳ್ವಿಕೆಯಸ್ಥಾಪಕ. ಇವರ ರಾಜಧಾನಿ ಮಾಳ್ವಾದ ಧಾರ. ಈ ಮನೆತನದ ಶಿಯಾಕ್ ದೊರೆಯು ರಾಷ್ಟ್ರಕೂಟರ ಎರಡನೆಯ ಕೊಟ್ಟಿಗನನ್ನು ಸೋಲಿಸಿ ಅವರ ಮಾಂಡಳೀಕತ್ವದಿಂದ ಮುಕ್ತನಾದನು. ಇವರು ಅನೇಕ ಕೆರೆ ಮತ್ತು ದೇವಾಲಯಗಳನ್ನು ನಿರ್ಮಿಸಿದರು. ಇವರ ಆಸ್ಥಾನದಲ್ಲಿ ಧನಂಜಯ, ಭಟ್ಟ ಹಲಾಯುಧ, ಧನಿಕ ಮತ್ತು ಪದ್ಮಗುಪ್ತರೆಂಬ ವಿದ್ವಾಂಸರಿದ್ದರು.

NOT TO BE REPUBLISHED @KTBS

**ಚೌವ್ಹಾಣರು :** ಈ ಮನೆತನದ ಆಳ್ವಿಕೆಯ ಸ್ಥಾಪಕರು ವಾಸುದೇವ ಚೌವ್ಹಾಣ. ಈ ಮನೆತನವು ರಜಪೂತ ಮನೆತನಗಳಲ್ಲಿ ಪ್ರಮುಖವಾದುದು. ಮೂಲತಃ ಅಜ್ಮೀರದವನಾದ ಪೃಥ್ವೀರಾಜ ಚೌವ್ಹಾಣನು ಈ ಮನೆತನದ ಪ್ರಸಿದ್ಧ ದೊರೆ. ಬುಂದೇಲ್‌ಖಂಡದ ಚಂದೇಲ ದೊರೆಗಳನ್ನು ಸೋಲಿಸಿದನು. ಮೊದಲನೇ ತರೈನ್ ಕದನದಲ್ಲಿ ಮಹಮ್ಮದ್ ಘೋರಿ ವಿರುದ್ಧ ಜಯಿಸಿದ್ದ ಇವನು 2 ನೇ ತರೈನ್ ಯುದ್ಧದಲ್ಲಿ ಜಯಚಂದ್ರನು ಮೋಸ ಮಾಡಿದ್ದರಿಂದ ಮಹಮ್ಮದ್ ಘೋರಿಯಿಂದ ಸೋತನು. ಈತನ ರಾಜಧಾನಿಯಾಗಿದ್ದ ದೆಹಲಿಯು ಈ ಸೋಲಿನಿಂದ ಮಹಮ್ಮದ್ ಘೋರಿಯ ಪಾಲಾಯಿತು. ಪೃಥ್ವೀರಾಜನು ಶೌರ್ಯ ಮತ್ತು ಸಾಹಸಕ್ಕೆ ಹೆಸರಾಗಿದ್ದನು 'ಪೃಥ್ವೀರಾಜರಾಸೋ' ಎಂಬ ಹಿಂದಿ ಮಹಾಕಾವ್ಯದಲ್ಲಿ ಈತನ ಶೌರ್ಯ ಮತ್ತು ಸಾಹಸಗಳ ಬಗ್ಗೆ ವರ್ಣನೆ ಇದೆ. ಇವನು ತೆಗೆದುಕೊಂಡ ಕೆಲವು ತಪ್ಪು ನಿಲುವುಗಳೇ ಇವನ ಅವನತಿಗೆ ಕಾರಣಗಳಾದವು.


**ಪೃಥ್ವೀರಾಜ ಚೌವ್ಹಾಣ**

**ಸೋಳಂಕಿಯರು :** ಸೋಳಂಕಿ ಮನೆತನದ ಆಳ್ವಿಕೆಯ ಸ್ಥಾಪಕ ಮೊದಲನೆಯ ಮೂಲರಾಜ. ಮೊದಲನೆಯ ಭೀಮರಾಯನು ಈ ಮನೆತನದ ಪ್ರಸಿದ್ಧ ದೊರೆ. ಈತನ ಆಳ್ವಿಕೆಯ ಕಾಲದಲ್ಲಿ ಮಹಮ್ಮದ್ ಘಜ್ನಿ ಗುಜರಾತಿನ ಸೋಮನಾಥ ದೇವಾಲಯದ ಮೇಲೆ ದಾಳಿ ಮಾಡಿದನು. ಘಜ್ನಿಯ ದಾಳಿಯನ್ನು ತಡೆಯುವಲ್ಲಿ ಭೀಮರಾಯನು ವಿಫಲನಾದ್ದರಿಂದ ಅಧಿಕಾರವನ್ನು ತನ್ನ ಪುತ್ರ ಕರ್ಣದೇವನಿಗೆ ನೀಡಿದನು. ಈ ಮನೆತನದ ಆಳ್ವಿಕೆಯಲ್ಲಿ ಖ್ಯಾತ ಜೈನ ಪಂಡಿತನಾದ ಹೇಮಚಂದ್ರನು "ದೇಶೀನಾಮ ಮಾಲಾ" ಎಂಬ ಖ್ಯಾತ ನಿಘಂಟನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದನು. ಎರಡನೇ ಮೂಲರಾಜನು ಮಹಮ್ಮದ್ ಘೋರಿಯನ್ನು ಮೌಂಟ್ ಅಬು ಸಮೀಪ ಸೋಲಿಸಿದನು. ನಂತರದಲ್ಲಿ ಅಲ್ಲಾ-ಉದ್-ದೀನ್ ಖಿಲ್ಜಿಯ ದಂಡನಾಯಕರಾದ ಉಲುಘ್‌ಖಾನ್ ಮತ್ತು ನುಸ್ರತ್‌ಖಾನ್‌ರು ಕರ್ಣದೇವನನ್ನು ಸೋಲಿಸಿ ಈ ಪ್ರಾಂತ್ಯವನ್ನು ವಿಲೀನಗೊಳಿಸಿಕೊಂಡರು.

**ಚಂದೇಲರು :** ಪಾರಮಾರರ ಪತನದ ನಂತರ ಚಂದೇಲರು ರಾಜ್ಯ ಸ್ಥಾಪಿಸಿದರು. ಈ ವಂಶದ ಆಳ್ವಿಕೆಯ ಸ್ಥಾಪಕ ನನ್ನುಕ. ಇವರು ಪ್ರತೀಹಾರರ ಮಾಂಡಲಿಕರ ಆಳ್ವಿಕೆಯಲ್ಲಿದ್ದರು. ಡಂಗ ಈ ವಂಶದ ಪ್ರಸಿದ್ಧ ಅರಸ. ಪ್ರತೀಹಾರರಿಂದ ಸ್ವಾತಂತ್ರ್ಯ ಘೋಷಿಸಿಕೊಂಡು ಅವರ ರಾಜ್ಯದ ಪೂರ್ವಭಾಗವನ್ನು ವಶಪಡಿಸಿಕೊಂಡನು. ಪಾಲರನ್ನು ಮತ್ತು ಆದ್ರರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದನು. ಹಿಂದೂಷಾಹಿ ರಾಜ ಜಯಪಾಲನಿಗೆ ಮುಸ್ಲಿಂರ ವಿರುದ್ಧ ಸೈನಿಕ ನೆರವು ನೀಡಿದನು. 'ಮಹಾರಾಜಾಧಿರಾಜ' ಎಂಬ ಬಿರುದು ಪಡೆದಿದ್ದನು. ಈ ಮನೆತನದ ಅವಧಿಯಲ್ಲಿ ಭವಭೂತಿಯು ಸಂಸ್ಕೃತದಲ್ಲಿ 'ಮಾಲತೀ ಮಾಧವ', 'ಉತ್ತರರಾಮಚರಿತ' ಮತ್ತು 'ಮಹಾವೀರ ಚರಿತ' ಕಾವ್ಯಗಳನ್ನು ರಚಿಸಿದನು. ಡಂಗ ದೊರೆಯು ಸ್ವತಃ ವಿದ್ವಾಂಸನಾಗಿದ್ದು, ಹಲವಾರು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಈ ರಾಜ್ಯವನ್ನು ಖಿಲ್ಜಿ ಸುಲ್ತಾನರು ಗೆದ್ದುಕೊಂಡರು. ರಜಪೂತ ಅರಸರಲ್ಲಿನ ಪರಸ್ಪರ ದ್ವೇಷ, ಐಕ್ಯತೆಯ ಕೊರತೆಯಿಂದಾಗಿ ಇವರ ಆಳ್ವಿಕೆ ಅಂತ್ಯಗೊಂಡಿತು.

© KTBS NOT TO BE REPUBLISHED

**ರಜಪೂತರ ಕೊಡುಗೆಗಳು**

ರಜಪೂತರು ಕ್ಷತ್ರಿಯರಾಗಿದ್ದು, ಶೂರ ಯೋಧರಾಗಿದ್ದರು. ಇವರ ಸಮಾಜದಲ್ಲಿ ಸತಿ ಪದ್ಧತಿ, ಜೋಹರ್ ಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಸ್ವಯಂವರ ವಿವಾಹ ಪದ್ಧತಿ ರಾಜಮನೆತನಗಳಲ್ಲಿ ರೂಢಿಯಲ್ಲಿತ್ತು. ರಜಪೂತ ಸ್ತ್ರೀಯರು ಸ್ವಾಭಿಮಾನದಿಂದ ಕೂಡಿದವರಾಗಿದ್ದು, ಅತ್ಯಂತ ಧೈರ್ಯಶಾಲಿಗಳಾಗಿದ್ದರು. ಇವರು ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆ, ಕಸೂತಿ ಕಲೆಗಳಲ್ಲಿ ಪರಿಣಿತರಿದ್ದರು.

ರಜಪೂತ ಅರಸರು ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಭೋಜ, ಮುಂಜ ಎಂಬ ರಜಪೂತ ಅರಸರುಗಳೇ ಸ್ವತಃ ವಿದ್ವಾಂಸರಾಗಿದ್ದರು. ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು. ಭೋಜರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಧನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದಿದ್ದರು. ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು. ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ' ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವೀರಾಜವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ. ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವೀರಾಜರಾಸೋ'ವನ್ನು ಚಾಂದ್‌ಬರ್ದಾಯಿ ಮತ್ತು 'ಭೋಜ ಪ್ರಬಂಧ' ವನ್ನು ಬಲ್ಲಾಳ ಎಂಬುವನು ರಚಿಸಿದನು. ಈ ಕಾಲದಲ್ಲಿ ಗುಜರಾತಿ, ರಾಜಸ್ಥಾನಿ, ಹಿಂದಿ ಭಾಷೆಗಳು ಅಭಿವೃದ್ಧಿಯತ್ತ ಸಾಗಿದವು. ಇವರು ವಿದ್ಯಾಕೇಂದ್ರಗಳಾದ ನಳಂದಾ, ಕಾಶಿ, ವಿಕ್ರಮಶಿಲಾ, ಉಜ್ಜಯಿನಿಗಳಿಗೆ ಪ್ರೋತ್ಸಾಹ ನೀಡಿದರು.

**ಕಲೆ ಮತ್ತು ವಾಸ್ತುಶಿಲ್ಪ**

ರಜಪೂತ ಅರಸರು ಉತ್ತರ ಭಾರತದ ಚಿತ್ತೋಡ, ಮಾಂಡು, ರಣಥಂಬೋರ್, ಜೋಧ್‌ಪುರ ಹಾಗೂ ಗ್ವಾಲಿಯರ್‌ಗಳಲ್ಲಿ ವಿಶಾಲವಾದ ಕೋಟೆಗಳನ್ನು ನಿರ್ಮಿಸಿದರು. ಇವರು ನಿರ್ಮಿಸಿದ ಜೈಪುರ, ಗ್ವಾಲಿಯರ್, ಉದಯಪುರಗಳ ಅರಮನೆಗಳು ಮೌಂಟ್ ಅಬುವಿನ ದಿಲಾವರ್ ದೇವಾಲಯ, ವಿಮಲಾ ವಸಾಯಿ ಮತ್ತು ಲುನಾ ವಸಾಯಿ ದೇವಾಲಯಗಳು ಸುಂದರ ಕಲಾತ್ಮಕತೆಯಿಂದ ಕೂಡಿವೆ. ಚಂದೇಲರು ಮಧ್ಯಪ್ರದೇಶದ ಖಜುರಾಹೋದ ಖಂಡರಾಯ ಮಹಾದೇವ ದೇವಾಲಯವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳಿವೆ. ಇವರು ಚಿತ್ರಕಲೆಗೂ ಪ್ರೋತ್ಸಾಹ ನೀಡಿದರು. ಚಿತ್ರಕಲಾ ಶೈಲಿಯನ್ನು ರಾಜಾಸ್ಥಾನಿ ಕಲಾಶೈಲಿ ಮತ್ತು ಪಹಾರಿ ಕಲಾಶೈಲಿಯೆಂದು ವರ್ಗೀಕರಿಸಲಾಗಿದೆ. ಮೇವಾರ್, ಬಿಕಾನೇರ್, ಜೋಧ್‌ಪುರ, ಜೈಸಲ್ಮೇರ್ ಮತ್ತು ಬುನಿಗಳಲ್ಲಿ ರಾಜಾಸ್ಥಾನಿ ಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ. ಖಸೋಲಿ, ಜಮ್ಮು, ಗರ್ವಾಲ್‌ಗಳಲ್ಲಿ ಪಹಾರಿ ಕಲಾಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ.



**ಮೌಂಟ್ ಅಬು ಬಸದಿ**

@KTBS NOT TO BE REPUBLISHED

## ಕಾಶ್ಮೀರದ ಕಾರ್ಕೋಟರು (625 ರಿಂದ 855)




ಭಾರತವನ್ನು ಆಳಿದ ಪ್ರಾಚೀನ ರಾಜವಂಶಗಳಲ್ಲಿ ಕಾಶ್ಮೀರದ ಕಾರ್ಕೋಟ ವಂಶಸ್ಥರು ಒಬ್ಬರು. 625ರಲ್ಲಿ ರಾಜಾ ದುರ್ಲಭವರ್ಧನನಿಂದ ಸ್ಥಾಪಿತವಾದ ಕಾರ್ಕೋಟ ಮನೆತನ ಆ ಕಾಲದ ಭಾರತದ ಬಲಿಷ್ಠ ಸಂಸ್ಥಾನಗಳಲ್ಲಿ ಒಂದಾಗಿತ್ತು. ದುರ್ಲಭವರ್ಧನನ ಮಗ ದುರ್ಲಭಕ (ಪ್ರತಾಪಾದಿತ್ಯ). ಈತನು ನರೇಂದ್ರಪ್ರಭಾ ಎಂಬವಳನ್ನು ಮದುವೆಯಾಗಿ ಮೂವರು ಮಕ್ಕಳನ್ನು ಪಡೆದನು. ಅವರುಗಳೆಂದರೆ ಚಂದ್ರಾಪೀಡ (ವಜ್ರಾದಿತ್ಯ), ತಾರಾಪೀಡ (ಉದಯಾದಿತ್ಯ) ಹಾಗೂ ಮುಕ್ತಾಪೀಡ (ಲಲಿತಾದಿತ್ಯ). ಇವರಲ್ಲಿ ಮೊದಲ ಇಬ್ಬರು ರಾಜ್ಯಭಾರವನ್ನು ನಡೆಸಿದ ಮೇಲೆ ಲಲಿತಾದಿತ್ಯನಿಗೆ ಕಾರ್ಕೋಟ ವಂಶದ ಉಸ್ತುವಾರಿಯು ವಹಿಸಲ್ಪಟ್ಟಿತು. ಈತನು ಒಟ್ಟು 36 ವರ್ಷಗಳ ಕಾಲ (724 – 760) ರಾಜ್ಯವಾಳಿದನು. ಕಾರ್ಕೋಟ ಸಾಮ್ರಾಜ್ಯದ ಮೇರೆಗಳನ್ನು ವಿಸ್ತರಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ.


**ಲಲಿತಾದಿತ್ಯ ಮುಕ್ತಾಪೀಡ**

**ಲಲಿತಾದಿತ್ಯ ಮುಕ್ತಾಪೀಡ:** ಲಲಿತಾದಿತ್ಯನ ಆಸ್ಥಾನಕವಿಯಾಗಿದ್ದ ಕಲ್ಹಣನ ಇತಿಹಾಸ ಗ್ರಂಥವಾದ "ರಾಜತರಂಗಿಣಿ"ಯಲ್ಲಿ ಲಲಿತಾದಿತ್ಯನ ಬಹಳಷ್ಟು ವಿವರಗಳು ಸಿಗುತ್ತವೆ. ಅಲ್ಲದೆ ಅಲ್‌ಬೆರೂನಿ ಬರೆದ "ತಾರಿಖ್ ಇ ಹಿಂದ್" ಕೃತಿಯೂ ಲಲಿತಾದಿತ್ಯನ ಸಾಹಸಗಳನ್ನು ಮುಕ್ತವಾಗಿ ಕೊಂಡಾಡುತ್ತದೆ. ಚೀನಾದ ಬಹಳಷ್ಟು ಐತಿಹಾಸಿಕ ಗ್ರಂಥಗಳಲ್ಲಿ ಈತನ ಉಲ್ಲೇಖಗಳನ್ನು ನಾವು ಗಮನಿಸಬಹುದು. ಲಲಿತಾದಿತ್ಯನು ಜನ್ಮತಃ ಶೂರನೂ ಧೀರನೂ ಮಹತ್ವಾಕಾಂಕ್ಷಿಯೂ ಆಗಿದ್ದನು. ಪ್ರಾರಂಭದಲ್ಲಿ ಈತ ಕನ್ಯಾಕುಬ್ಜ (ಕನೌಜ)ದ ಯಶೋವರ್ಮನನ್ನು ಯುದ್ಧದಲ್ಲಿ ಸೋಲಿಸಿ ತನ್ನ ಪರಾಕ್ರಮ ಮೆರೆದನು. ನಂತರ ಕಾಬೂಲ್ ಪ್ರಾಂತ್ಯವನ್ನಾಳುತ್ತಿದ್ದ ಶಾಹಿ ವಂಶಸ್ಥರನ್ನು ಸೋಲಿಸಿ ಆ ಪ್ರದೇಶದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಿದನು. ವಿಂಧ್ಯಾಚಲದ ಬಹಳಷ್ಟು ರಾಜರ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಸಾಧಿಸಿ, ಈ ಭಾಗಗಳಲ್ಲಿ ತನಗೆ ಯಾರೂ

©KTBS NOT TO BE REPUBLISHED

ಹಗೆಗಳಾಗದಂತೆ ನೋಡಿಕೊಂಡನು. ರಾಷ್ಟ್ರಕೂಟರ ಜೊತೆಯೂ ಲಲಿತಾದಿತ್ಯನು ಸ್ನೇಹಸಂಬಂಧಗಳನ್ನು ಬೆಳೆಸಿಕೊಂಡನು. ಪೂರ್ವದಲ್ಲಿ ತನ್ನ ಸಾಮ್ರಾಜ್ಯದ ಪ್ರಭಾವವನ್ನು ಬಂಗಾಳದವರೆಗೆ ವಿಸ್ತರಿಸಿದನು. ಚೀನಾದ ಟಾಂಗ್ ರಾಜರುಗಳ ಜೊತೆ ಸ್ನೇಹ ಸಂಪಾದಿಸಿದ ಲಲಿತಾದಿತ್ಯ, ಅವರ ನೆರವು ಪಡೆದು ಟಿಬೆಟಿಯನ್ನರ ಮೇಲೆ ಯುದ್ಧ ಮಾಡಿ ಅವರ ವಶದಲ್ಲಿದ್ದ ವಾಯವ್ಯ ಭಾರತದ ಬಹಳಷ್ಟು ರಾಜ್ಯಗಳನ್ನು ಸ್ವತಂತ್ರಗೊಳಿಸಿದನು. ಅಲ್ಲದೆ ತನ್ನ ಕಾರ್ಕೋಟ ಸಾಮ್ರಾಜ್ಯವನ್ನು ಟರ್ಕಿಯವರೆಗೆ ವಿಸ್ತರಿಸಿದನು. ಆಗಿನ ಕಾರ್ಕೋಟ ರಾಜ್ಯವು ಇಂದಿನ ಉಜ್ಬೇಕಿಸ್ತಾನ, ತಜಕಿಸ್ತಾನ, ಕಿರ್ಗಿಸ್ತಾನ, ಕಜಕಿಸ್ತಾನ, ಕಾಬೂಲುಗಳನ್ನೆಲ್ಲ ಒಳಗೊಂಡಿತ್ತು.

**ಕಲೆಗೆ ಕಾರ್ಕೋಟರ ಕೊಡುಗೆಗಳು :** ಒಟ್ಟು 230 ವರ್ಷ (625 – 855) ಆಳಿದ ಕಾರ್ಕೋಟ ಸಾಮ್ರಾಜ್ಯ ಹಿಮಾಲಯ ಮತ್ತು ಅದರ ತಪ್ಪಲಿನ ಪ್ರದೇಶಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದು ಮಾತ್ರವಲ್ಲದೆ ಮಧ್ಯ ಏಷ್ಯಾದವರೆಗೂ ವಿಸ್ತರಿಸಿತ್ತು. ಪೂರ್ವದಲ್ಲಿ ಬಂಗಾಳ ಕೊಲ್ಲಿ, ದಕ್ಷಿಣದಲ್ಲಿ ವಿಂಧ್ಯಾಚಲ, ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರ ಹಾಗೂ ಉತ್ತರದಲ್ಲಿ ಟಿಬೆಟ್‌ಗಳನ್ನು ತನ್ನ ಸೀಮಾರೇಖೆಗಳಾಗಿ ಪಡೆದಿದ್ದ ಕಾರ್ಕೋಟ ಸಾಮ್ರಾಜ್ಯ ಸರ್ವಮತಸಮನ್ವಯದ ತತ್ತ್ವವನ್ನು ಪಾಲಿಸಿತು.

ಕಾಶ್ಮೀರದ ಶೈವಸಿದ್ಧಾಂತದ ಅತ್ಯಂತ ವೈಭವದ ಕಾಲಘಟ್ಟವೆಂದು ಕಾರ್ಕೋಟರ ಕಾಲವನ್ನು ಹೇಳಲಾಗುತ್ತದೆ. ವಸುಗುಪ್ತನ ಶೈವಸೂತ್ರ ಈ ಅವಧಿಯಲ್ಲಿ ರಚನೆಯಾಯಿತು. ಖ್ಯಾತ ತತ್ತ್ವಶಾಸ್ತ್ರಜ್ಞ, ಕವಿ ಅಭಿನವಗುಪ್ತ ಕಾರ್ಕೋಟಕರ ಕಾಲದವನಾಗಿದ್ದ. ಶೈವಸೂತ್ರಗಳ ತ್ರಿಕ ಮತ್ತು ಕೌಲ ಸಂಪ್ರದಾಯಗಳು ಈ ಅವಧಿಯಲ್ಲಿ ಉಚ್ಛ್ರಾಯಸ್ಥಿತಿಯನ್ನು ತಲುಪಿದವು.

**ಅವನತಿ:** ಲಲಿತಾದಿತ್ಯನ ನಂತರ ಬಂದ ರಾಜರು ಅವನಷ್ಟು ಪ್ರತಿಭಾಶಾಲಿಗಳಾಗಿರಲಿಲ್ಲ. ಕಾರ್ಕೋಟ ವಂಶವು ಮುಂದೆ ಅವನತಿಯತ್ತ ಸಾಗುತ್ತ ಹೋಯಿತು.

## ಆಫ್ಘನ್ ದಾಳಿಕೋರರು

### ಮಹಮ್ಮದ್ ಘಜ್ನಿ (997 – 1030)

ಅಲಫ್ತಗೀನ್ ಎಂಬ ತುರ್ಕಿ ಗುಲಾಮನು ಘಜ್ನಿಯಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ಇವನೇ ಮಹಮ್ಮದ್ ಘಜ್ನಿ. ಮಹಮ್ಮದ್ ಘಜ್ನಿಯು ಭಾರತದ ಮೇಲೆ ಹದಿನೇಳು ಬಾರಿ ದಂಡಯಾತ್ರೆ ಮಾಡಿ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದನು. ತನ್ನ ದಾಳಿಯ ಸಮಯದಲ್ಲಿ ಮುಲ್ತಾನದ ದೊರೆ, ರಾಜ ಜಯಪಾಲ, ಭೀಮಪಾಲ, ಚಂದೇಲರ ರಾಜ ತ್ರಿಲೋಚನಪಾಲರನ್ನು ಸೋಲಿಸಿದನು. ನಾಗರಕೋಟೆ, ಥಾಣೇಶ್ವರ, ಗ್ವಾಲಿಯರ್, ಉಜ್ಜಯಿನಿ ಮೊದಲಾದ ನಗರಗಳ ಮೇಲೆ ದಾಳಿ ನಡೆಸಿದನು.

ಇವನು ಗುಜರಾತಿನ ಪ್ರಸಿದ್ಧ ಸೋಮನಾಥ ದೇವಾಲಯದ ಮೇಲೆ ಬೃಹತ್ ಸೈನ್ಯದೊಂದಿಗೆ ದಾಳಿ ಮಾಡಿ ಶಿವಲಿಂಗವನ್ನು ನಾಶ ಮಾಡಿ, ಅಲ್ಲಿನ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ಘಜ್ನಿಯ ದಂಡಯಾತ್ರೆಗಳು ನಂತರದ ಟರ್ಕರ ದಾಳಿಗಳಿಗೆ ನಾಂದಿಯಾದವು.

ಈತನು ಕವಿಗಳು, ವಿದ್ವಾಂಸರು ಮತ್ತು ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡಿದನು. ಆಸ್ಥಾನದಲ್ಲಿದ್ದ ಅಲ್‌ಬೆರೂನಿ ಎಂಬ ವಿದ್ವಾಂಸ, 'ತಾರೀಖ್–ಉಲ್–ಹಿಂದ್' ಎಂಬ ಗ್ರಂಥ ರಚಿಸಿದ್ದಾನೆ. ಈ ಗ್ರಂಥದಲ್ಲಿ ಭಾರತದ ಜೀವನ ಮತ್ತು ವಿದ್ವತ್ತನ್ನು ಪ್ರಸ್ತಾಪಿಸಲಾಗಿದೆ.

©KTBS NOT TO BE REPUBLISHED

## ಮಹಮ್ಮದ್ ಘೋರಿ (1149 ರಿಂದ 1206)

ಮಹಮ್ಮದ್ ಘಜ್ನಿಯು ಭಾರತದಲ್ಲಿ ಟರ್ಕರ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ವಿಫಲನಾಗಿದ್ದರಿಂದ ಮಹಮ್ಮದ್ ಘೋರಿಯು ಈ ಪ್ರಯತ್ನವನ್ನು ಮುಂದುವರಿಸಿದನು. ಮಹಮ್ಮದ್ ಘೋರಿಯು ರಾಜ್ಯವನ್ನು ವಿಸ್ತರಿಸುವ ಆಕಾಂಕ್ಷೆಯಿಂದ, ಭಾರತದ ಮುಲ್ತಾನಿಗೆ ಮುತ್ತಿಗೆ ಹಾಕುವ ಮೂಲಕ ದಂಡಯಾತ್ರೆಯನ್ನು ಆರಂಭಿಸಿದನು. ಮುಲ್ತಾನ್ ಪ್ರಾಂತ್ಯವನ್ನು ವಶಪಡಿಸಿಕೊಂಡ ನಂತರ ಗುಜರಾತ್‌ನ ಅನಿಲವಾಡದ ಮೇಲೆ ಆಕ್ರಮಣ ನಡೆಸಿದನು. ಈ ಆಕ್ರಮಣವು ವಿಫಲವಾಯಿತು. ಇದರಿಂದ ಧೃತಿಗೆಡದೆ ಪಂಜಾಬಿನ ಭಾಗವಾಗಿದ್ದ ಪೇಶಾವರವನ್ನು ಆಕ್ರಮಿಸಿದನು. ನಂತರದಲ್ಲಿ ಖುಸ್ರೋಮಲ್ಲಿಕ್‌ನಿಂದ ಲಾಹೋರನ್ನು ವಶಪಡಿಸಿಕೊಂಡು ಪಂಜಾಬಿನಲ್ಲಿ ಪ್ರಬಲನಾದನು. ಪೇಶಾವರ ಈತನ ಸೈನಿಕ ಕೇಂದ್ರವಾಯಿತು. ಇದರಿಂದಾಗಿ ಪಂಜಾಬಿನ ನೆರೆ ಪ್ರದೇಶವಾದ ದೆಹಲಿ ಮತ್ತು ಅಜ್ಮೀರದ ಆಕ್ರಮಣಕ್ಕೆ ಪ್ರಯತ್ನಿಸಿ ರಜಪೂತ ರಾಜನಾದ ಪೃಥ್ವೀರಾಜ ಚೌವ್ಹಾಣನೊಂದಿಗೆ ಮೊದಲನೇ ತರೈನ್ ಕಾಳಗದಲ್ಲಿ ಸೋತನು. ನಂತರ ನಡೆದ ಎರಡನೇ ತರೈನ್ ಕಾಳಗದಲ್ಲಿ ಪೃಥ್ವೀರಾಜನನ್ನು ಸೋಲಿಸಿದನು. ಘೋರಿಯ ದಂಡನಾಯಕನಾದ ಕುತುಬುದ್ದೀನ್ ಐಬಕ್ ದೆಹಲಿಯನ್ನು ವಶಪಡಿಸಿಕೊಂಡು, ಗಂಗಾ ಬಯಲು ಪ್ರದೇಶದ ಇನ್ನಿತರ ರಜಪೂತರನ್ನು ಸೋಲಿಸಿ ಘೋರಿ ರಾಜ್ಯವನ್ನು ವಿಸ್ತರಿಸಿದನು. ಈ ರೀತಿ ಉತ್ತರ ಭಾರತದಲ್ಲಿ ಟರ್ಕರ ಆಡಳಿತವು ಆರಂಭವಾಯಿತು. ಭಾರತದ ಆಡಳಿತ ನೋಡಿಕೊಳ್ಳಲು ತನ್ನ ನಿಷ್ಠಾವಂತ ಗುಲಾಮನಾದ ಕುತ್ಬುದ್ದೀನ್ ಐಬಕ್‌ನನ್ನು ನೇಮಿಸಿದನು. ಭಾರತದಲ್ಲಿ ರಜಪೂತರು ಒಗ್ಗಟ್ಟಿನಿಂದ ಇರದೇ ಇದ್ದದ್ದು ಘೋರಿ ಸಾಮ್ರಾಜ್ಯದ ವಿಸ್ತರಣೆಗೆ ಕಾರಣವಾಯಿತು.

@KTBS NOT TO BE REPUBLISHED

## ದೆಹಲಿ ಸುಲ್ತಾನರು (1206 ರಿಂದ 1526)

ಗುಲಾಮಿ, ಖಿಲ್ಜಿ, ತುಘಲಕ್, ಸೈಯ್ಯದ್ ಮತ್ತು ಲೋಧಿ ವಂಶಗಳು ದೆಹಲಿ ಸುಲ್ತಾನರ ಕಾಲದಲ್ಲಿ ಆಳಿದ ಸಂತತಿಗಳಾಗಿವೆ.

### ಗುಲಾಮಿ ಸಂತತಿ

ಕುತುಬುದ್ದೀನ್ ಐಬಕ್ ಮುಸ್ಲಿಂ ಆಡಳಿತವನ್ನು ಭಾರತದಲ್ಲಿ ಮುಂದುವರೆಸಿದನು. ಐಬಕ್ ಹಾಗೂ ಆತನ ಉತ್ತರಾಧಿಕಾರಿಗಳೆಲ್ಲರೂ ಗುಲಾಮರಾಗಿದ್ದರಿಂದ ಐಬಕ್ ಸ್ಥಾಪಿಸಿದ ಮನೆತನಕ್ಕೆ ಗುಲಾಮಿ ಸಂತತಿ ಎಂದು ಹೆಸರು ಬಂದಿತು.

#### ಕುತುಬುದ್ದೀನ್ ಐಬಕ್

ಈತನು ಭಾರತದಲ್ಲಿ ದೆಹಲಿ ಸುಲ್ತಾನರ ಆಳ್ವಿಕೆಗೆ ಭದ್ರ ಬುನಾದಿ ಹಾಕಿದನು. ಅಫ್ಘಾನಿಸ್ತಾನದ ತುರ್ಕಿ ಜನಾಂಗಕ್ಕೆ ಸೇರಿದ



ಕುತುಬ್ ಮಿನಾರ್

**ನಿಮಗಿದು ತಿಳಿದಿರಲಿ :**

ಕುತುಬ್ ಮಿನಾರ್ ದೆಹಲಿಯಲ್ಲಿರುವ ಭಾರತದ ಅತ್ಯಂತ ಎತ್ತರದ ಗೋಪುರ. ಇದನ್ನು ಕುತುಬುದ್ದೀನ್ ಐಬಕ್ ನಿರ್ಮಿಸಲು ಪ್ರಾರಂಭಿಸಿ ಇಲ್ತಮಶ್ ಪೂರ್ಣಗೊಳಿಸಿದನು. ಇದು 225 ಅಡಿ ಎತ್ತರವಾಗಿದ್ದು ಅದರ ಮೇಲೆ ಸೂಕ್ಷ್ಮ ಕೆತ್ತನೆಗಳಿವೆ. ಐದು ಅಂತಸ್ತಿನ ಕಟ್ಟಡದಲ್ಲಿ ಮೆಟ್ಟಿಲುಗಳಿವೆ.

ಕುತುಬುದ್ಧೀನ್‌ನನ್ನು ಬಾಲ್ಯದಲ್ಲಿ ಈತನ ಪಾಲಕರು ನಿಶಾಪುರದ ಖಾಜಿಗೆ ಗುಲಾಮನನ್ನಾಗಿ ಮಾರಿದರು. ಐಬಕ್‌ನು ಪರ್ಷಿಯನ್, ಅರೇಬಿಕ್ ಭಾಷೆಗಳ ಶಿಕ್ಷಣದ ಜೊತೆಗೆ ಬಿಲ್ಲುಗಾರಿಕೆ, ಕುದುರೆ ಸವಾರಿ ಮತ್ತು ಸೈನಿಕ ತರಬೇತಿಯನ್ನು ಪಡೆದಿದ್ದನು. ಘಜ್ನಿಯ ರಾಜ್ಯಪಾಲನಾಗಿದ್ದ ಮಹಮ್ಮದ್ ಘೋರಿ ಇವನನ್ನು ಗುಲಾಮನನ್ನಾಗಿ ಖರೀದಿಸಿದ್ದನು. ಐಬಕ್‌ನು ಘಜ್ನಿಯಲ್ಲಿದ್ದಾಗ ತನ್ನ ಶೌರ್ಯದಿಂದ ಮಹಮ್ಮದ್ ಘೋರಿಯ ಗಮನವನ್ನು ಸೆಳೆದನು. ಎರಡನೆಯ ತರೈನ್ ಕಾಳಗದ ನಂತರ ಭಾರತದ ಮೇಲಿನ ಆಕ್ರಮಣಗಳ ಉಸ್ತುವಾರಿಯನ್ನು ಪಡೆದನು. ಐಬಕ್‌ನು ಮಹಮ್ಮದ್ ಘೋರಿಯ ಕಾಲದಲ್ಲಿ ಉತ್ತರ ಭಾರತದ ಉತ್ತರಾಧಿಕಾರಿಯಾದನು. ಘೋರಿಯ ನಂತರ ಸ್ವತಂತ್ರನಾಗಿ ಆಳಿದನು. ಅಧಿಕಾರ ವಹಿಸಿಕೊಂಡ ಮೇಲೆ ತನ್ನ ಸ್ಥಾನವನ್ನು ಪ್ರಬಲಗೊಳಿಸಿಕೊಳ್ಳಲು ತಾಜುದ್ದೀನ್ ಇಲ್ದೋಜ್‌ನ ಮಗಳನ್ನು ಇವನು ಮದುವೆಯಾದನು. ನಾಸೀರುದ್ದೀನ್ ಕಬಾಚನೊಂದಿಗೆ ಹೋರಾಡಿದನು.

ಐಬಕ್‌ನು ದೆಹಲಿಯಲ್ಲಿ ಕುವ್ವತ್-ಉಲ್-ಇಸ್ಲಾಂ ಮಸೀದಿಯನ್ನು ಕಟ್ಟಿಸಿದನು. ಇವನು ಅಲ್ಲಿಯೇ ಕುತುಬ್ ಮಿನಾರ್ ನಿರ್ಮಿಸಲು ಪ್ರಾರಂಭಿಸಿದನು. ಇವನ ಆಸ್ಥಾನದಲ್ಲಿ ನಿಜಾಮಿ ಮತ್ತು ಫಖ್-ಇ-ಮುದಬ್ಬೀರರೆಂಬ ವಿದ್ವಾಂಸರಿದ್ದರು. 'ತಾಜುಲ್ ಮಾಸಿರ್' ಐಬಕ್‌ನ ಬಗ್ಗೆ ಮಾಹಿತಿ ನೀಡುವ ಕೃತಿಯಾಗಿದೆ.

**ಇಲ್ತಮಶ್**

ಇಲ್ಬರಿ ಕುಟುಂಬಕ್ಕೆ ಸೇರಿದ ಈತನು ಕುತುಬುದ್ದೀನ್‌ನ ಗುಲಾಮನಾಗಿದ್ದನು. ಗ್ವಾಲಿಯರ್‌ನ ಆಡಳಿತಗಾರನಾಗಿದ್ದ ಇವನು ಐಬಕ್‌ನ ಉತ್ತರಾಧಿಕಾರಿಯಾದನು.

ಇಲ್ತಮಶ್ ಸುಲ್ತಾನನಾಗಿದ್ದುದನ್ನು ಸಹಿಸದ ಘಜ್ನಿಯ ದೊರೆ ತಾಜುದ್ದೀನ ಇಲ್ದೋಜ್ ಮತ್ತು ಸಿಂಧ್‌ನ ನಾಸೀರುದ್ದೀನ್ ಕಬಾಚ ಆತನ ವಿರುದ್ಧ ಬಂಡೆದ್ದರು. ಇಲ್ತಮಶ್ ಅವರನ್ನು ಸೋಲಿಸಿ ತನ್ನ ಸ್ಥಾನ ಭದ್ರಪಡಿಸಿಕೊಂಡ ನಂತರ ರಣಥಂಭೋರ್, ಮಾಂಡೋರ್, ಗ್ವಾಲಿಯರ್, ಭಿಲ್ಸಾ, ಅಜ್ಮೀರ್, ಬನಾರಸ್, ಕನೌಜ್‌ಗಳನ್ನು ವಶಪಡಿಸಿಕೊಂಡನು. ಭಾರತದ ಮೇಲೆ ಪ್ರಪ್ರಥಮ ಬಾರಿಗೆ ಮಂಗೋಲರು ಚೆಂಗೀಸ್ ಖಾನನ ನೇತೃತ್ವದಲ್ಲಿ ದಾಳಿ ಮಾಡಿದರು. ಇಲ್ತಮಶ್ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಈ ಸಾಧನೆಗಳಿಂದಾಗಿ ಬಾಗ್ದಾದ್ ಖಲೀಫನು ಇಲ್ತಮಶ್‌ನಿಗೆ ಅಧಿಕೃತ ಅಧಿಕಾರ ಸಮ್ಮತಿ ಪತ್ರ ನೀಡಿದನು.

ಇಲ್ತಮಶ್ ರಾಜ್ಯವನ್ನು ಅನೇಕ ಇಕ್ತಾಗಳನ್ನಾಗಿ ವಿಂಗಡಿಸಿ, ಆಡಳಿತ ನಿರ್ವಹಣೆಗಾಗಿ ಇಕ್ತಾದಾರರನ್ನು ನೇಮಿಸಿದನು. ಆಡಳಿತದಲ್ಲಿ ಸಲಹೆ ಸೂಚನೆ ನೀಡಲು 'ನಲವತ್ತು ಸರದಾರರ ಕೂಟ' ನೇಮಕ ಮಾಡಿದನು. ಪ್ರಧಾನ ಮಂತ್ರಿ ಮತ್ತು ನ್ಯಾಯಾಧೀಶರು ಸುಲ್ತಾನನಿಗೆ ಸಲಹೆ ನೀಡುತ್ತಿದ್ದರು. ಇಲ್ತಮಶ್‌ನು ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದನು. ಇವನು ಕುತುಬುದ್ಧೀನ್‌ನ ಕಾಲದಲ್ಲಿ ನಿರ್ಮಿಸಲು ಪ್ರಾರಂಭಿಸಿದ್ದ ದೆಹಲಿಯ ಕುತುಬ್‌ಮಿನಾರನ್ನು ಪೂರ್ಣಗೊಳಿಸಿದನು.

**ರಜಿಯಾ ಸುಲ್ತಾನಾ**

ಇಲ್ತಮಶ್‌ನ ಪುತ್ರ ರುಕ್ನುದ್ದೀನ್ ಫಿರೋಜ್ ಅಸಮರ್ಥನಾಗಿದ್ದರಿಂದ ಅವನ ಪುತ್ರಿ ರಜಿಯಾ ಬೇಗಂ ಆತನ ಉತ್ತರಾಧಿಕಾರಿಯಾದಳು. ದೆಹಲಿ ಸಿಂಹಾಸನವನ್ನೇರಿದ ಪ್ರಥಮ ಮಹಿಳೆ ಸುಲ್ತಾನಾ ಎಂಬ ಬಿರುದು ಪಡೆದು ಪುರುಷನಂತೆ ವೇಷ ಧರಿಸಿ ಯುದ್ಧದಲ್ಲಿ ಭಾಗವಹಿಸುತ್ತಿದ್ದಳು. ಸಿಂಧ್‌ನಿಂದ ಬಂಗಾಳದ ವಿಶಾಲ ಪ್ರದೇಶದವರೆಗೂ ತನ್ನ ಅಧಿಕಾರ ಸ್ಥಾಪಿಸಿದಳು. ಇವಳ ಆಡಳಿತವನ್ನು ಸಹಿಸದ ಪ್ರಾಂತ್ಯಾಧಿಕಾರಿಗಳು ದಂಗೆಯೆದ್ದು ಅವಳನ್ನು ಹತ್ಯೆಗೈದರು.

NOT TO BE REPUBLISHED ©KTBS

**ಘಿಯಾಸ್–ಉದ್–ದೀನ್ ಬಲ್ಬನ್**

ದೆಹಲಿಯಲ್ಲಿ ಇಲ್ತಮಶ್‌ನಿಗೆ ಗುಲಾಮನಾಗಿದ್ದ ಬಲ್ಬನ್ ತನ್ನ ಸ್ವಾಮಿನಿಷ್ಠೆ, ಬುದ್ಧಿಮತ್ತೆ, ಸದ್ಗುಣಗಳಿಂದ ತುರ್ಕಿ ಗುಲಾಮರ ಕೂಟದ ಸದಸ್ಯನಾದನು. ರಜಿಯಾ ಸುಲ್ತಾನಳ ಆಸ್ಥಾನದಲ್ಲಿ ಅಮೀರ್–ಇ–ಶಿಕಾರ್ ಎಂಬ ಹುದ್ದೆಗೆ ನೇಮಿಸಲ್ಪಟ್ಟನು.

ಅವಿಧೇಯ ತುರ್ಕಿ ಸರದಾರರ ದುರಾಡಳಿತ ನಿಯಂತ್ರಿಸಿದನು. ಮಂಗೋಲರ ದಾಳಿಯನ್ನು ತಡೆಗಟ್ಟಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿದನು. ಆಸ್ಥಾನದ ದರ್ಬಾರಿನಲ್ಲಿ ಸಂಪ್ರದಾಯ ಮತ್ತು ಶಿಷ್ಟಾಚಾರಗಳನ್ನು ತಂದನು. ಪರ್ಶಿಯನ್ ಶೈಲಿಯ ಆಡಂಬರದ ವೇಷಭೂಷಣ ಧರಿಸುತ್ತಿದ್ದನು. ತನ್ನನ್ನು ದೇವರ ಪ್ರತಿನಿಧಿಯೆಂದು ಸಾರಿ ನಿರಂಕುಶ ರಾಜಪ್ರಭುತ್ವ ಜಾರಿಗೆ ತಂದನು. ಅನುಭವಿ ಹಾಗೂ ವಿಶ್ವಾಸಿಕ ಸೇನಾಪತಿಗಳ ನೇತೃತ್ವದಲ್ಲಿ ಸೈನ್ಯವನ್ನು ಪುನರ್ ಸಂಘಟಿಸಿದನು. ಜಾಗೀರ್ ಪಡೆದು ಸೇವೆ ಸಲ್ಲಿಸದ ಕುಟುಂಬಗಳಿಂದ ಭೂಮಿಯನ್ನು ಹಿಂತೆಗೆದುಕೊಂಡನು. ಮಂಗೋಲರ ದಾಳಿ ತಡೆಗಟ್ಟಲು ವಾಯುವ್ಯ ಗಡಿ ಭಾಗದಲ್ಲಿ ಕೋಟೆಗಳನ್ನು ಕಟ್ಟಿಸಿದನು. ದಕ್ಷ ಆಡಳಿತಗಾರನಾಗಿದ್ದ ಬಲ್ಬನ್ನನ ನಂತರದ ಸುಲ್ತಾನ ಕೈಕುಬಾದ್ ಆತನು ವಜೀರನಿಂದ ಕೊಲೆಯಾದನು. ಅಲ್ಲಿಗೆ ಗುಲಾಮ ಸಂತತಿಯ ಆಡಳಿತ ಅಂತ್ಯಗೊಂಡಿತು.

## ಖಿಲ್ಜಿ ಸಂತತಿ (1290–1320)

ಖಿಲ್ಜಿ ಸಂತತಿಯನ್ನು ಜಲಾಲುದ್ದೀನನು ಸ್ಥಾಪಿಸಿದನು. ಇವನು ಮೃದುಸ್ವಭಾವ, ಕ್ಷಮಾಶೀಲತೆ ಗುಣಗಳನ್ನು ಹೊಂದಿದ್ದನು. ಇದರಿಂದ ಸರದಾರರು ಪ್ರಬಲರಾಗಿ ಒಳಸಂಚು ನಡೆಸಿದರು. ಮುಂದೆ ಈತನನ್ನು ಅಲ್ಲಾವುದ್ದೀನನು ಕೊಲೆ ಮಾಡಿ ದೆಹಲಿಯ ಸುಲ್ತಾನನಾದನು.

**ಅಲ್ಲಾವುದ್ದೀನ್ ಖಿಲ್ಜಿ**

ಈತನು ಬಾಲ್ಯದಲ್ಲಿ ಜಲಾಲುದ್ದೀನ್‌ನನ ಆಶ್ರಯದಲ್ಲಿ ಬೆಳೆದನು. ಶೂರ ಯೋಧನಾದ ಇವನು ರಾಜ್ಯಪಾಲನಾಗಿ ಹಾಗೂ ದಂಡನಾಯಕನಾಗಿ ಸೇವೆ ಸಲ್ಲಿಸಿದನು. ದಂಡನಾಯಕನಾಗಿ ಮಾಳ್ವಾ, ಭಿಲ್ಸಾ ಮತ್ತು ದೇವಗಿರಿ ಮೇಲಿನ ದಾಳಿಗಳಲ್ಲಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ತನ್ನ ಮಾರ್ಗದರ್ಶಕ, ಪೋಷಕ ಜಲಾಲುದ್ದೀನ್‌ನನ್ನು ಕೊಲೆ ಮಾಡಿದನು. ಹೀಗೆ ಅಲ್ಲಾವುದ್ದೀನ್ ದೆಹಲಿಯ ಸುಲ್ತಾನನಾದನು.

ಅಲ್ಲಾವುದ್ದೀನನು ಮಂಗೋಲರ ದಾಳಿಯನ್ನು ಹಿಮ್ಮೆಟ್ಟಿಸಿದ್ದಲ್ಲದೆ ಉತ್ತರ ಮತ್ತು ದಕ್ಷಿಣ ಭಾರತದ ಅರಸರನ್ನು ಸೋಲಿಸಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ಗುಜರಾತಿನ ವಾಘೇಲಾ ವಂಶದ ರಜಪೂತ ದೊರೆ ಇಮ್ಮಡಿ ಕರ್ಣದೇವ, ರಣಥಂಭೋರ್‌ನ ಹಮ್ಮೀರದೇವ, ಚಿತ್ತೋರದ ರಾಜ ಭೀಮಸಿಂಗನನ್ನು ಸೋಲಿಸಿದನು. ಇವುಗಳಲ್ಲದೆ ಮಾಳ್ವ, ಜಾಲೋರ್, ಬುಂದಿ, ಮಾಂಡೋರ್ ಮತ್ತು ಟೋಂಕ್‌ಗಳನ್ನು ಗೆದ್ದುಕೊಂಡನು.

> *ನಿಮಗಿದು ತಿಳಿದಿರಲಿ :*
>
> ***ದೋ–ಅಬ್***
>
> *ಎರಡು ನದಿಗಳ ನಡುವಣ ಪ್ರದೇಶವನ್ನು ದೋ–ಅಬ್ ಎನ್ನುತ್ತಾರೆ.*

ಈತನ ದಂಡನಾಯಕ ಮಲ್ಲಿಕಾಫರ್ ದಕ್ಷಿಣ ಭಾರತದ ದಂಡಯಾತ್ರೆ ನಡೆಸಿ ಅಪಾರ ಹಿಂಸಾಚಾರ, ಸಂಪತ್ತು, ಲೂಟಿ, ಕೊಲೆ–ಸುಲಿಗೆ ನಡೆಸಿದನು. ದೇವಗಿರಿ, ವಾರಂಗಲ್, ದ್ವಾರಸಮುದ್ರ ಮತ್ತು ಮಧುರೈಗಳ ಮೇಲೆ ದಾಳಿ ನಡೆಸಿ ಅವುಗಳ ಅವನತಿಗೆ ಕಾರಣನಾದನು. ಆದರೆ ಗೆದ್ದ ರಾಜ್ಯಗಳನ್ನು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳದೆ ಕೇವಲ ಸಂಪತ್ತನ್ನು ಮಾತ್ರ ಲೂಟಿ ಮಾಡಿದನು. ಆತನ ಮೂರನೆಯ ಮಗ ಕುತುಬುದ್ದೀನ್ ಮುಬಾರಕ್ ನಾಲ್ಕು ವರ್ಷ ಅಧಿಕಾರ ನಡೆಸಿ ಖುಸ್ರು ಎಂಬ ಸೈನಿಕನಿಂದ ಕೊಲ್ಲಲ್ಪಟ್ಟನು. ಮುಂದೆ ಘಿಯಾಸುದ್ದೀನ್ ತುಘಲಕ್ ಖುಸ್ರುನನ್ನು ಕೊಂದು ತುಘಲಕ್ ಸಂತತಿ ಸ್ಥಾಪಿಸಿದನು.

NOT TO BE REPUBLISHED ©KTBS

**ಆಡಳಿತಾತ್ಮಕ ಸುಧಾರಣೆಗಳು :** ಅಲ್ಲಾವುದ್ದೀನ್ ಖಿಲ್ಜಿಯು ಆಡಳಿತದಲ್ಲಿ ಹಲವು ಸುಧಾರಣೆಗಳನ್ನು ಕೈಗೊಂಡನು. ಧಾರ್ಮಿಕ ದತ್ತಿ, ಇನಾಮ್ ಭೂಮಿ ಮತ್ತು ಸಹಾಯಧನಗಳನ್ನು ರದ್ದುಗೊಳಿಸಿದನು. ದಕ್ಷ ಗೂಢಚಾರ ವ್ಯವಸ್ಥೆ ರಚಿಸಿದನು. ಮದ್ಯಪಾನ, ಮಾದಕ ವಸ್ತುಗಳ ಮಾರಾಟ, ಪಗಡೆಯಾಟಗಳನ್ನು ನಿಷೇಧಿಸಿದನು. ಸರದಾರರ ಕೂಟ, ಸಾರ್ವಜನಿಕರೊಂದಿಗಿನ ಸ್ನೇಹಸಮಾರಂಭ ಹಾಗೂ ಅಂತರ್‌ಜಾತಿ ವಿವಾಹಗಳನ್ನು ನಿಷೇಧಿಸಿದನು. ಪ್ರಜೆಗಳಿಂದ ಅಧಿಕ ಪ್ರಮಾಣದ ತೆರಿಗೆ ಸಂಗ್ರಹಿಸಲು ಆದೇಶ ನೀಡಿದನು.

**ಸೈನಿಕ ಸುಧಾರಣೆಗಳು :** ಸೈನಿಕರ ಭರ್ತಿ, ತರಬೇತಿ, ಶಸ್ತ್ರಾಸ್ತ್ರ, ಕುದುರೆ ಹಾಗೂ ನಗದು ರೂಪದಲ್ಲಿ ವೇತನ ನೀಡುವ ಹೊಣೆಯನ್ನು ವಜೀರನಿಗೆ ನೀಡಲಾಯಿತು. ಪ್ರತಿಯೊಬ್ಬ ಸೈನಿಕ ಹಾಗೂ ಕುದುರೆಗಳ ಬಗ್ಗೆ ವಿವರ ನೀಡುವ ದಾಖಲೆ ಇಡಲಾಯಿತು. ಇದನ್ನು 'ಹುಲಿಯಾ' ಪದ್ಧತಿ ಎಂದು ಕರೆಯಲಾಯಿತು. ಕುದುರೆಗಳಿಗೆ ಮುದ್ರೆ (ದಾಗ್) ಹಾಕುವ ಪದ್ಧತಿ ಜಾರಿಗೆ ತಂದನು. ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದನು.

**ವಾಣಿಜ್ಯ ಸುಧಾರಣೆಗಳು :** ಜೀವನಾವಶ್ಯಕ ವಸ್ತುಗಳಾದ ಧಾನ್ಯ, ಖಾದ್ಯ, ತೈಲ, ಸಕ್ಕರೆ, ಉಪ್ಪು, ಬಟ್ಟೆ ಮುಂತಾದವುಗಳ ಬೆಲೆಯನ್ನು ಅಲ್ಪ ಪ್ರಮಾಣದ ಲಾಭದ ಮೇಲೆ ನಿಗದಿಪಡಿಸಿದನು. ವರ್ತಕರು ನಿಗದಿ ಪಡಿಸಿದ ಬೆಲೆಯಲ್ಲಿ ವಸ್ತುಗಳನ್ನು ಮಾರಾಟ ಮಾಡಲು ಆದೇಶ ನೀಡಿದನು. ಮಾರುಕಟ್ಟೆಗಳ ನಿಯಂತ್ರಣಕ್ಕಾಗಿ 'ಸಹನಾ–ಇ–ಮಂಡಿ'ಯೆಂಬ ಉನ್ನತಾಧಿಕಾರಿಯನ್ನು ನೇಮಕ ಮಾಡಿದನು.

## ತುಘಲಕ್ ಸಂತತಿ (1320–1399)

ತುಘಲಕ್ ಸಂತತಿಯನ್ನು ಘಿಯಾಸುದ್ದೀನ್ ಸ್ಥಾಪಿಸಿದನು. ಈ ಸಂತತಿಯಲ್ಲಿ ಮಹಮ್ಮದ್ ಬಿನ್ ತುಘಲಕ್ ಮತ್ತು ಫಿರೋಜ್ ತುಘಲಕರು ಪ್ರಮುಖರು. ಘಿಯಾಸುದ್ದೀನನು ಕೆಲವು ಉದಾರ ಆಡಳಿತಾತ್ಮಕ ನೀತಿಯ ಮೂಲಕ ದೆಹಲಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಸ್ಥಾಪಿಸಿದನು. ಮಂಗೋಲರ ದಾಳಿ ತಡೆಗಟ್ಟಲು ಗಡಿಯನ್ನು ಭದ್ರಪಡಿಸಿದನು. ರೈತರಿಗೆ ನೀರಾವರಿ ಕಾಲುವೆಗಳನ್ನು ನಿರ್ಮಿಸಿ, ಭೂಕಂದಾಯ ಕಡಿಮೆ ಮಾಡಿದನು. ಕುದುರೆ ಮತ್ತು ಕಾಲಾಳುಗಳ ಮೂಲಕ ಅಂಚೆ ಪದ್ಧತಿ ಪ್ರಾರಂಭಿಸಿದನು. ದೆಹಲಿ ಬಳಿ ತುಘಲಕಾಬಾದ್ ಕೋಟೆ ಕಟ್ಟಿಸಿದನು. ವಾರಂಗಲ್, ಮಧುರೈಯನ್ನು ವಶಪಡಿಸಿಕೊಂಡು ಗುಜರಾತ್ ಮತ್ತು ಬಂಗಾಳಗಳಲ್ಲಿ ಸುವ್ಯವಸ್ಥೆ ಕಾಪಾಡಿದನು.

### ಮಹಮ್ಮದ್ ಬಿನ್ ತುಘಲಕ್

ಈತನು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದನು. ಅಪಾರ ಜ್ಞಾನ ಹೊಂದಿದ್ದರೂ, ಆತನ ವ್ಯಕ್ತಿತ್ವದಲ್ಲಿ ಅನೇಕ ದೋಷಗಳಿದ್ದವು. ಮಹಮ್ಮದ್ ಬಿನ್ ತುಘಲಕ್‌ನಲ್ಲಿ ವ್ಯಾವಹಾರಿಕ ಬುದ್ಧಿವಂತಿಕೆ, ಪರಿಜ್ಞಾನ, ತಾಳ್ಮೆಗುಣ, ಮಾನಸಿಕ ಸಮತೋಲನ, ದೂರದೃಷ್ಟಿ, ವಾಸ್ತವಿಕವಾದ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಇರಲಿಲ್ಲ.

### ಆಡಳಿತಾತ್ಮಕ ಸುಧಾರಣೆಗಳು

**ಕಂದಾಯ ಸುಧಾರಣೆ :** ಸಾಮ್ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದಂತೆ ಭೂಮಿಯ ಎಲ್ಲ ವಿವರಗಳನ್ನೊಳಗೊಂಡ ಅಧಿಕೃತ ದಾಖಲೆ ಪುಸ್ತಕವನ್ನು ತಯಾರಿಸಿದನು. ಕೃಷಿ ಇಲಾಖೆಯನ್ನು ಸ್ಥಾಪಿಸಿದನು. ಕೃಷಿಗೆ ಒಳಪಡದ ಭೂಮಿಯನ್ನು ಸಾಗುವಳಿಗೆ ಒಳಪಡಿಸಿದನು. ರೈತರಿಗೆ ಆರ್ಥಿಕ ನೆರವು ನೀಡಿದನು. ದೋ–ಅಬ್ ಪ್ರದೇಶದಲ್ಲಿ ಭೂಕಂದಾಯ ಹೆಚ್ಚಿಸಿದನು.

©KTBS NOT TO BE REPUBLISHED

**ರಾಜಧಾನಿಯ ವರ್ಗಾವಣೆ :** ಮಹಮ್ಮದ್ ಬಿನ್ ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಮಧ್ಯ ಭಾರತದಲ್ಲಿದ್ದ ದೇವಗಿರಿಗೆ ವರ್ಗಾಯಿಸಿದನು. ಇದರ ಮುಖ್ಯ ಉದ್ದೇಶ ವಿಶಾಲವಾದ ಸಾಮ್ರಾಜ್ಯ ನಿರ್ವಹಣೆ ಮತ್ತು ಮಂಗೋಲರ ದಾಳಿಗಳಿಂದ ರಾಜಧಾನಿಯನ್ನು ರಕ್ಷಿಸುವುದಾಗಿತ್ತು. ಯೋಜನೆ ಉತ್ತಮವಾಗಿದ್ದರೂ ಸ್ಥಳಾಂತರಕ್ಕೆ ಸೂಕ್ತ ಏರ್ಪಾಡುಗಳನ್ನು ಕೈಗೊಂಡಿರಲಿಲ್ಲ. ಇದರಿಂದ ಅಸಂಖ್ಯಾತ ಜನರು ಸಂಕಷ್ಟಕ್ಕೆ ಈಡಾದರು.

**ಸಾಂಕೇತಿಕ ನಾಣ್ಯ ಪ್ರಯೋಗ :** ಮಹಮದ್ ಬಿನ್ ತುಘಲಕ್‌ನು ನಾಣ್ಯಗಳ ಮೌಲ್ಯಗಳನ್ನು ತನ್ನ ಕಾಲದ ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳ ಮೌಲ್ಯಕ್ಕೆ ಸರಿಹೊಂದುವಂತೆ ಮಾಡಿದನು. ದಿನಾರ ಎಂಬ ಬಂಗಾರದ ಹಾಗೂ ಅದಲಿ ಎಂಬ ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದನು.

ನಾಣ್ಯವನ್ನು ಟಂಕಿಸುವುದು ಸರ್ಕಾರದ ಏಕಸ್ವಾಮ್ಯವಾಗಿರಲಿಲ್ಲ. ಆದ್ದರಿಂದ ಸಾರ್ವಜನಿಕರು ಅವುಗಳನ್ನು ಟಂಕಿಸಿದ್ದರಿಂದ ಅವ್ಯವಸ್ಥೆ ಉಂಟಾಯಿತು. ಅಧಿಕ ವೆಚ್ಚದಾಯಕ ಆಡಳಿತಾತ್ಮಕ ಪ್ರಯೋಗಗಳು, ಭೀಕರ ಬರಗಾಲ, ರಾಜಧಾನಿಯ ಸ್ಥಳಾಂತರ, ಪುನರ್ ಸ್ಥಳಾಂತರಗಳಿಂದ ರಾಜ್ಯದ ಖಜಾನೆ ಬರಿದಾಯಿತು.

**ದಖನ್ ನೀತಿ :** ಮಹಮ್ಮದ್ ಬಿನ್ ತುಘಲಕ್‌ನು ದಖ್ಖನ್‌ನಲ್ಲಿ ಗೆದ್ದ ಪ್ರದೇಶಗಳಲ್ಲಿ ತನ್ನ ಆಡಳಿತ ನಡೆಸಿದನು. ಕಾಕತೀಯರ ರಾಜಧಾನಿ ವಾರಂಗಲನ್ನು ವಶಪಡಿಸಿಕೊಂಡು, ಹೊಯ್ಸಳರ ರಾಜಧಾನಿ ದ್ವಾರಸಮುದ್ರವನ್ನು ಧ್ವಂಸಗೊಳಿಸಿದನು. ದಕ್ಷಿಣ ಭಾರತದಲ್ಲಿರುವ ಮಧುರೈಯನ್ನು ಗೆದ್ದು ಅದರ ಆಡಳಿತ ನಿರ್ವಹಣೆಗೆ ಜಲಾಲುದ್ದೀನ್ ಹಸನ್‌ಷಾನನ್ನು ರಾಜ್ಯಪಾಲನನ್ನಾಗಿ ನೇಮಿಸಿದನು. ಹೀಗೆ ಭಾರತದಲ್ಲಿ ವಿಶಾಲ ಮುಸ್ಲಿಂ ಸಾಮ್ರಾಜ್ಯ ಸ್ಥಾಪಿಸಿದ ದೆಹಲಿ ಸುಲ್ತಾನರಲ್ಲಿ ಮಹಮ್ಮದ್ ಬಿನ್ ತುಘಲಕ್ ಮೊದಲಿಗನು.

ಮಹಮ್ಮದ್ ಬಿನ್ ತುಘಲಕನು ದೊಡ್ಡ ಸೈನ್ಯವನ್ನು ಸಂಘಟಿಸಿದನು. ಆದರೆ ಯಾವುದೇ ದಂಡಯಾತ್ರೆ ಕೈಗೊಳ್ಳದೆ ಸಮಯ ಹಾಗೂ ಹಣ ಅಪವ್ಯಯ ಮಾಡಿ ರಾಜ್ಯದ ಬೊಕ್ಕಸಕ್ಕೆ ಅಪಾರ ನಷ್ಟವನ್ನುಂಟು ಮಾಡಿದನು. ಈತನ ಕೊನೆಯ ಹನ್ನೊಂದು ವರ್ಷಗಳ ಆಡಳಿತಾವಧಿಯಲ್ಲಿ ದಕ್ಷಿಣ ಭಾರತದಲ್ಲಿ ಇಪ್ಪತ್ತೇಳು ದಂಗೆಗಳು ನಡೆದು ವಿಜಯನಗರ ಮತ್ತು ಬಹಮನಿ ರಾಜ್ಯಗಳ ಉದಯಕ್ಕೆ ಕಾರಣವಾಯಿತು.

ಮಹಮ್ಮದ್ ಬಿನ್ ತುಘಲಕ್‌ನ ನಂತರ ಬಂದ ಫಿರೋಜ್ ಷಾ ತುಘಲಕ್‌ನ ಕಾಲದಲ್ಲಿ ಅನೇಕ ಪ್ರಜಾಹಿತ ಕಾರ್ಯಗಳು ಜಾರಿಗೆ ಬಂದವು. ಪ್ರಜೆಗಳಿಗೆ ನೆರವು ನೀಡುವ ಉದ್ದೇಶದಿಂದ ತಕಾವಿ ಸಾಲ ಮನ್ನಾ ಮಾಡಿದನು. ಮಹಮ್ಮದ್ ಬಿನ್ ತುಘಲಕನ ದಾಳಿಗೆ ತುತ್ತಾಗಿದ್ದ ಪ್ರಜೆಗಳಿಗೆ ಪರಿಹಾರ ಹಣ ನೀಡಿದನು. ಸುಮಾರು ಇಪ್ಪತ್ತು ತೆರಿಗೆಗಳನ್ನು ರದ್ದುಪಡಿಸಿದನು.

ನಗರ, ಮಸೀದಿ, ಮದರಸಾ, ಅಣೆಕಟ್ಟು, ಕಾಲುವೆಗಳನ್ನು ನಿರ್ಮಿಸಿದನು. ಈತನು ಕಟ್ಟಿಸಿದ ಪ್ರಮುಖ ನಗರಗಳೆಂದರೆ ಜಾನಪುರ, ಫತೇಬಾದ್, ಹಿಸ್ಸಾರ, ಫಿರೋಜಪುರ, ಫಿರೋಜಾಬಾದ್ ಮತ್ತು ಜಾನ್‌ಪುರ ಅಂದಿನ ಪ್ರಸಿದ್ಧ ವಿದ್ಯಾ ಕೇಂದ್ರವಾಗಿತ್ತು. ಪ್ರವಾಸಿಗರ ಅನುಕೂಲಕ್ಕಾಗಿ ಧರ್ಮಶಾಲೆಗಳನ್ನು ಸ್ಥಾಪಿಸಿದನು.

## ಸಯ್ಯದ್ ಸಂತತಿ (1414–1451)

ಮುಲ್ತಾನದ ರಾಜ್ಯಪಾಲನಾಗಿದ್ದ ಖಿಜರ್‌ಖಾನ್‌ಸಯ್ಯದ್ ದೆಹಲಿಯನ್ನು ವಶಪಡಿಸಿಕೊಂಡು ದೋ ಅಬ್, ಬಿಯಾನ್ ಮತ್ತು ಗ್ವಾಲಿಯರ್‌ಗಳಲ್ಲಿ ಅಧಿಕಾರ ಸ್ಥಾಪಿಸಿ ದಂಗೆಗಳನ್ನು ಅಡಗಿಸಿ ಶಾಂತಿ, ಸುವ್ಯವಸ್ಥೆ ಮತ್ತು ಭದ್ರತೆಯನ್ನು ನೆಲೆಗೊಳಿಸಿದನು. ಮಹಮ್ಮದ್ ಷಾ, ಅಲ್ಲಾ–ಉದ್–ದೀನ್ ಹಾಗೂ ಅಲಂ ಷಾ ಈ ಸಂತತಿಯ ಪ್ರಮುಖ ಸುಲ್ತಾನರು. ಅಲಂ ಷಾನನ್ನು ಬಹಲೋಲ್ ಲೋಧಿ ಸೋಲಿಸಿ ಸಯ್ಯದ್ ಸಂತತಿಯ ಆಡಳಿತವನ್ನು ಅಂತ್ಯಗೊಳಿಸಿದನು.

NOT TO BE REPUBLISHED ©KTBS

## ಲೋದಿ ಸಂತತಿ (1451– 1526)

ಇದು ದೆಹಲಿಯನ್ನಾಳಿದ ಕೊನೆಯ ಸುಲ್ತಾನ ಸಂತತಿ. ಬಹುಲೋಲ್ ಲೋದಿ, ಸಿಕಂದರ್ ಲೋದಿ ಮತ್ತು ಇಬ್ರಾಹಿಂ ಲೋದಿ ಈ ಸಂತತಿಯ ಸುಲ್ತಾನರು. ಸಿಕಂದರ್ ಲೋದಿಯು ಬಿಹಾರ, ಬಂಗಾಳ, ಧೋಲಪುರ್ ಮತ್ತು ಚಂದೇರಿಗಳನ್ನು ವಶಪಡಿಸಿಕೊಂಡನು. ದೆಹಲಿಯಲ್ಲಿ ಶಾಂತಿ ನೆಲೆಸುವಂತೆ ಕ್ರಮ ತೆಗೆದುಕೊಂಡನು.

ಈತನ ಉತ್ತರಾಧಿಕಾರಿಯಾದ ಇಬ್ರಾಹಿಂ ಲೋದಿಯು ಅಸಮರ್ಥನಾಗಿದ್ದನು. ಭಾರತದ ಮೇಲೆ ದಾಳಿ ಮಾಡುವಂತೆ ರಾಜ್ಯಪಾಲರಾದ ಆಲಂಖಾನ್ ಮತ್ತು ದೌಲತ್‌ಖಾನ್ ಅಫ್ಘನ್ನರಿಗೆ ಆಮಂತ್ರಣ ನೀಡಿದರು. ಅದರಂತೆ ಬಾಬರ್ ಭಾರತದ ಮೇಲೆ ದಾಳಿಮಾಡಿ 1526 ರಲ್ಲಿ ಮೊದಲನೇ ಪಾಣಿಪತ್ ಯುದ್ಧದಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ಮೊಘಲರ ಆಳ್ವಿಕೆ ಪ್ರಾರಂಭಿಸಿದನು.

### ದೆಹಲಿ ಸುಲ್ತಾನರ ಕೊಡುಗೆಗಳು

**ಆಡಳಿತ ಪದ್ಧತಿ :** ದೆಹಲಿ ಸುಲ್ತಾನರು ನಿರಂಕುಶ ಪ್ರಭುಗಳಾಗಿದ್ದು, ಸೈನ್ಯದ ಮುಖ್ಯಸ್ಥ ಹಾಗೂ ಮುಖ್ಯ ನ್ಯಾಯಾಧೀಶರಾಗಿದ್ದರು. ಸುಲ್ತಾನನ ಆಡಳಿತವು ಕುರಾನಿನ ಕಾನೂನಿನನ್ವಯ ನಡೆಯುತ್ತಿತ್ತು. ಸರದಾರರು, ಅಮೀರರು ಮತ್ತು ಉಲೇಮರು ಆಡಳಿತದಲ್ಲಿ ತಮ್ಮ ಪ್ರಭಾವ ಹೊಂದಿದ್ದರು. ಕೇಂದ್ರ ಸರ್ಕಾರದಲ್ಲಿ ಆಡಳಿತದ ನಿರ್ವಹಣೆಗೆ ಸೈನ್ಯ ಇಲಾಖೆ, ವಿದೇಶಾಂಗ ಇಲಾಖೆ, ಪತ್ರ ವ್ಯವಹಾರ ಇಲಾಖೆ, ದಾನ ಧರ್ಮ ಮತ್ತು ದತ್ತಿ ಇಲಾಖೆಗಳಿದ್ದು ಅವುಗಳ ಮೇಲ್ವಿಚಾರಣೆಗೆ ಮಂತ್ರಿಗಳು ಮತ್ತು ಅಧಿಕಾರಿಗಳಿದ್ದರು. ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಆಡಳಿತ ಘಟಕಗಳಿಗೆ ಶಿಕ್‌ದಾರ್, ಅಮೀನ್ ಮತ್ತು ಚೌಕಿದಾರ ಮುಖ್ಯಸ್ಥರಾಗಿದ್ದರು. ಕಂದಾಯ ಸಂಗ್ರಹಣೆ, ಶಾಂತಿ ಕಾಪಾಡುವುದು, ಶಿಕ್ಷಣ ನೀಡುವುದು, ನೈರ್ಮಲ್ಯ ಕಾಪಾಡುವುದು ಇವರ ಪ್ರಮುಖ ಕರ್ತವ್ಯಗಳಾಗಿದ್ದವು.

ಸುಲ್ತಾನರ ಕಾಲದಲ್ಲಿ ಖರಾಜ್ (ಭೂತೆರಿಗೆ), ಜಕಾತ್, ಉಶ್ರು, ಖಮ್ಸ್ (ಯುದ್ಧದಲ್ಲಿ ಲೂಟಿ ಮಾಡಿದ ಸಂಪತ್ತಿನ ತೆರಿಗೆ) ಜೆಸಿಯ, ವಾರಸುದಾರರಿಲ್ಲದ ಆಸ್ತಿ ಮೇಲೆ ತೆರಿಗೆ, ಆಮದು ಸುಂಕ, ಮನೆ ತೆರಿಗೆ ಮುಂತಾದವುಗಳು ವರಮಾನದ ಪ್ರಮುಖ ಮೂಲಗಳಾಗಿದ್ದವು. ಕಂದಾಯ ಸಂಗ್ರಹಣೆಗೆ ಅಧಿಕಾರಿಗಳಿದ್ದರು. ಖಾಜಿಗಳು ಪ್ರಾಂತ್ಯಗಳಲ್ಲಿ ಮತ್ತು ಪಟ್ಟಣಗಳಲ್ಲಿ ನ್ಯಾಯದಾನ ವಿಷಯದಲ್ಲಿ ಸುಲ್ತಾನನಿಗೆ ನೆರವಾಗುತ್ತಿದ್ದರು.

**ಸಾಮಾಜಿಕ ವ್ಯವಸ್ಥೆ :** ಸುಲ್ತಾನರ ಆಡಳಿತದಲ್ಲಿ ಷಿಯಾ ಮತ್ತು ಹಿಂದೂ ಪ್ರಜೆಗಳಿಗೆ ಧಾರ್ಮಿಕ ನಿರ್ಬಂಧಗಳಿದ್ದವು. ಮುಸ್ಲಿಂ ಸರದಾರರನ್ನೇ ಉನ್ನತ ಹುದ್ದೆಗಳಿಗೆ ನೇಮಕ ಮಾಡುತ್ತಿದ್ದರು. ಸುಲ್ತಾನರು ಆಡಳಿತದಲ್ಲಿ ನೆರವು ನೀಡಲು ಹಿಂದೂ ಕಂದಾಯ ಅಧಿಕಾರಿಗಳನ್ನು, ಕಾರಕೂನರನ್ನು ನೇಮಕ ಮಾಡಿಕೊಂಡಿದ್ದರು. ಇತರ ಕುಶಲ ಕಸುಬುದಾರರು, ವಾಸ್ತುಶಿಲ್ಪಿಗಳನ್ನು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ನೇಮಿಸಿಕೊಂಡಿದ್ದರು.

ಗುಲಾಮಗಿರಿ ಪದ್ಧತಿ ಇವರ ಕಾಲದಲ್ಲಿ ವ್ಯಾಪಕವಾಗಿ ಬೆಳೆಯಿತು. ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ನೇಮಿಸುತ್ತಿದ್ದರು. ಅರಮನೆಯಲ್ಲಿ ಅನೇಕ ಮಹಿಳಾ ಗುಲಾಮರಿದ್ದರು. ಸ್ತ್ರೀಯರ ಸ್ಥಾನಮಾನ ಉತ್ತಮವಾಗಿರಲಿಲ್ಲ. ಪರದಾ ಮತ್ತು ಬಾಲ್ಯವಿವಾಹ ಪದ್ಧತಿಗಳು ರೂಢಿಯಲ್ಲಿದ್ದವು. ಮೇಲ್ವರ್ಗದ ಮಹಿಳೆಯರು ಲಲಿತಕಲೆಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮೀಣ ಮಹಿಳೆಯರು ಕೃಷಿ, ಮನೆಗೆಲಸಗಳಲ್ಲಿ ನಿರತರಾಗುತ್ತಿದ್ದರು.

@KTBS NOT TO BE REPUBLISHED

**ಆರ್ಥಿಕ ವ್ಯವಸ್ಥೆ :** ಅಧಿಕ ತೆರಿಗೆ ಭಾರ ಜನರ ಮೇಲಿತ್ತು. ಸಾರಿಗೆ ಸಂಪರ್ಕ ಕಷ್ಟವಾದದ್ದರಿಂದ ಬೆಲೆಗಳು ಎಲ್ಲಾ ಭಾಗದಲ್ಲೂ ಏಕರೂಪದಲ್ಲಿರಲಿಲ್ಲ. ಕೃಷಿಯು ಸಂಪತ್ತಿನ ಮೂಲವಾಗಿತ್ತು. ದೆಹಲಿಯಲ್ಲಿ ಸುಲ್ತಾನರು ತಮ್ಮದೇ ಆದ ಕಾರ್ಖಾನೆಗಳನ್ನು ಹೊಂದಿದ್ದರು. ಚಿನ್ನ-ಬೆಳ್ಳಿ ಸಾಮಾಗ್ರಿ ತಯಾರಿಕೆ, ಕಸೂತಿ ಹಾಕುವಿಕೆ, ಬಟ್ಟೆ ತಯಾರಿಕೆ, ಬಣ್ಣ ಹಾಕುವಿಕೆ ಮೊದಲಾದ ಕೈಗಾರಿಕೆಗಳಿದ್ದವು.

**ಸಾಹಿತ್ಯ :** ವಿದೇಶಿ ಬರಹಗಾರರು ಮತ್ತು ಇತಿಹಾಸ ತಜ್ಞರು ಸುಲ್ತಾನರ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಅವರ ಕೃತಿಗಳು ಅರೇಬಿಕ್, ಪರ್ಷಿಯನ್ ಭಾಷೆಗಳಲ್ಲಿವೆ. ಮಹಮ್ಮದ್ ಘಜ್ನಿಯ ಆಸ್ಥಾನದಲ್ಲಿ ಆಲ್‌ಬೆರೂನಿ ಎಂಬ ಪ್ರಸಿದ್ಧ ವಿದ್ವಾಂಸನಿದ್ದನು. ಈತನು ತತ್ವಜ್ಞಾನಿ, ಗಣಿತಶಾಸ್ತ್ರಜ್ಞ, ಭೂಗೋಳಶಾಸ್ತ್ರಜ್ಞ ಮತ್ತು ಸಾಹಿತಿಯಾಗಿದ್ದನು. ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಷಯಗಳನ್ನೊಳಗೊಂಡ ತಾರೀಖ್-ಉಲ್- ಹಿಂದ್ ಎಂಬ ಕೃತಿ ರಚಿಸಿದನು. ಉತ್ಬಿ ಎಂಬ ವಿದ್ವಾಂಸ ಅರೇಬಿಕ್ ಭಾಷೆಯಲ್ಲಿ ತಾರೀಖ್- ಇ-ಯಾಮಿನಿ, ಹಸನ್ ನಿಜಾಮಿಯು 'ತಾಜುಲ್ ಮಾಸಿರ್' ಎಂಬ ಗ್ರಂಥಗಳನ್ನು ರಚಿಸಿದರು. ಮಿನ್ಹಾಜ್-ಉಸ್-ಸಿರಾಜ್‌ನು 'ತಬಖತ್-ಈ-ನಾಸಿರಿ' ಕೃತಿ ರಚಿಸಿದನು. ಅಮೀರ್ ಖುಸ್ರುವು ಆರು ಪ್ರಮುಖ ಗ್ರಂಥಗಳನ್ನು ರಚಿಸಿ ಹಿಂದೂ-ಮುಸ್ಲಿಂ ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ. ಈತನನ್ನು 'ಭಾರತದ ಗಿಳಿ' ಎಂದು ಕರೆಯಲಾಗಿತ್ತು. ಜಿಯಾಉದ್ದೀನ್ ಬರಾನಿಯು 'ತಾರೀಖ್-ಇ-ಫಿರೋಜ್ ಷಾಹಿ' ಹಾಗೂ ಫಿರೋಜ್ ತುಘಲಕ್‌ನು 'ಫುತುಹತ್-ಇ-ಫಿರೋಜ್‌ಷಾಹಿ' ಎಂಬ ಕೃತಿಗಳನ್ನು ರಚಿಸಿದ್ದಾರೆ.

**ಕಲೆ ಮತ್ತು ವಾಸ್ತುಶಿಲ್ಪ :** ದೆಹಲಿ ಸುಲ್ತಾನರು ಭಾರತದಲ್ಲಿ 'ಇಂಡೋ-ಇಸ್ಲಾಮಿಕ್' ಎಂಬ ಹೊಸ ಶೈಲಿಯ ವಾಸ್ತುಶಿಲ್ಪವನ್ನು ಪರಿಚಯಿಸಿದರು. ಕಮಾನುಗಳು, ಗುಮ್ಮಟಗಳು ಹಾಗೂ ಮಿನಾರ್‌ಗಳು ಈ ಶೈಲಿಯ ಮುಖ್ಯ ಲಕ್ಷಣಗಳು. ದೆಹಲಿ ಸುಲ್ತಾನರು ಕೋಟೆ, ಮಸೀದಿ, ಅರಮನೆ, ಸಾರ್ವಜನಿಕ ಕಟ್ಟಡ, ಮದರಸಾ, ಧರ್ಮಶಾಲೆಗಳನ್ನು ನಿರ್ಮಿಸಿದರು. ಇಂಡೋ-ಇಸ್ಲಾಮಿಕ್ ಶೈಲಿಗೆ ಉದಾಹರಣೆ : ದೆಹಲಿಯ ಕುವ್ವತ್-ಉಲ್-ಇಸ್ಲಾಂ ಮಸೀದಿ, ಕುತುಬ್ ಮಿನಾರ್, ಅಲ್ಲೈ ದರ್ವಾಜಾ, ಜಮ್ಯೆತ್ ಖಾನಾ ಮಸೀದಿಗಳು.



ಅಲ್ಲೈ ದರ್ವಾಜಾ



ಕುವ್ವತ್-ಉಲ್-ಇಸ್ಲಾಂ ಮಸೀದಿ

@KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಗುರ್ಜರ–ಪ್ರತೀಹಾರ ರಜಪೂತ ಮನೆತನ ಸ್ಥಾಪಕ _________ .
2. ಪೃಥ್ವೀರಾಜ ಚೌವ್ಹಾಣನು ಮೊದಲನೆಯ ತರೈನ್ ಕಾಳಗದಲ್ಲಿ _________ ನನ್ನು ಸೋಲಿಸಿದನು.
3. ಮಹಮ್ಮದ್ ಘೋರಿಯ ಪ್ರಮುಖ ದಂಡನಾಯಕ _________ .
4. ದೆಹಲಿ ಸುಲ್ತಾನರಲ್ಲಿ ಆಳ್ವಿಕೆ ಮಾಡಿದ ಪ್ರಥಮ ಮಹಿಳೆ _________ .
5. ಖಿಲ್ಜಿ ವಂಶದ ಪ್ರಸಿದ್ಧ ಸುಲ್ತಾನ _________ .
6. ತುಘಲಕ್‌ರ ಕಾಲದಲ್ಲಿ ರಾಜಧಾನಿಯನ್ನು ದೆಹಲಿಯಿಂದ _________ ಗೆ ವರ್ಗಾಯಿಸಲಾಯಿತು.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

7. ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿ.
8. ಕಾಶ್ಮೀರದ ಕಾರ್ಕೋಟ ಮನೆತನದ ಪ್ರಮುಖ ಅರಸ ಯಾರು? ಅವನು ತನ್ನ ಸಾಮ್ರಾಜ್ಯವನ್ನು ಹೇಗೆ ವಿಸ್ತರಿಸಿದನು?
9. ಇಲ್ತುಮಶ್‌ನ ಆಡಳಿತ ಪದ್ಧತಿಯನ್ನು ಸ್ಥೂಲವಾಗಿ ವಿವರಿಸಿ.
10. ಅಲ್ಲಾವುದ್ಧೀನ್ ಖಿಲ್ಜಿಯ ಆಡಳಿತಾತ್ಮಕ ಸುಧಾರಣೆಗಳಾವುವು?
11. ಮಹಮ್ಮದ್–ಬಿನ್–ತುಘಲಕ್‌ನು ಜಾರಿಗೊಳಿಸಿದ ಆಡಳಿತಾತ್ಮಕ ಸುಧಾರಣೆಗಳನ್ನು ತಿಳಿಸಿ.
12. ದೆಹಲಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಾವುವು? ಉದಾಹರಿಸಿ.
13. ಮೊದಲನೇ ಪಾಣಿಪತ್ ಕದನದ ಪರಿಣಾಮವೇನು?

**III. ಚಟುವಟಿಕೆ.**

1. ಭಾರತದ ನಕ್ಷೆಯಲ್ಲಿ ರಜಪೂತರ ರಾಜ್ಯಗಳನ್ನು ಗುರುತಿಸಿ.

**IV. ಯೋಜನೆ.**

1. ಶಿಕ್ಷಕರ ಮಾರ್ಗದರ್ಶನದಲ್ಲಿ ರಜಪೂತರ ವಾಸ್ತು ನಿರ್ಮಾಣಗಳು ಹಾಗೂ ಸ್ಮಾರಕಗಳ ಬಗ್ಗೆ ಚಿತ್ರಗಳು ಮತ್ತು ಮಾಹಿತಿ ಸಂಗ್ರಹಿಸಿ ಆಲ್ಬಂ ತಯಾರಿಸಿ.

*****

NOT TO BE REPUBLISHED © KTBS

# ಅಧ್ಯಾಯ – 3

# ಭಾರತದ ಮತ ಪ್ರವರ್ತಕರು

N4S1HZ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದ ಮತ ಪ್ರವರ್ತಕರುಗಳು ಮತ್ತು ಧರ್ಮ ಸುಧಾರಕರ ಪರಿಚಯ ಹಾಗೂ ಅವರು ಪ್ರತಿಪಾದಿಸಿದ ತತ್ವ ಬೋಧನೆಗಳು.
- ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳು.

ಭಾರತದ ಸಾಮಾಜಿಕ, ಧಾರ್ಮಿಕ ಇತಿಹಾಸದಲ್ಲಿ ಸಾ.ಶ. 8ನೆಯ ಶತಮಾನದಿಂದ 13ನೆಯ ಶತಮಾನದ ಮೊದಲಾರ್ಧದವರೆಗಿನ ಅವಧಿ ಅತ್ಯಂತ ಪ್ರಮುಖವಾದುದು. ಈ ಅವಧಿಯಲ್ಲಿಯೇ ಮೂರು ವೈದಿಕ ಮತಗಳನ್ನು ಬೆಳೆಸಿ, ಪೋಷಿಸಿದ ಪ್ರವರ್ತಕರಾದ ಆಚಾರ್ಯತ್ರಯರಾದ ಶಂಕರರು, ಮಧ್ವರು ಮತ್ತು ರಾಮಾನುಜರು ಕನ್ನಡನಾಡಿನಲ್ಲಿ ಜೀವಿಸಿದ್ದರು. ಮೂರು ಮುಖ್ಯ ವೇದಾಂತ ಶಾಖೆಗಳಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳು ಸಹ ಪ್ರಚುರತೆಗೆ ಬಂದವು. ಅಲ್ಲದೆ ಜಾತಿ ಮತ್ತು ಲಿಂಗಾಧಾರಿತ ಅಸಮಾನತೆಯನ್ನು ವಿರೋಧಿಸಿ ಬಸವೇಶ್ವರರು ಕಲ್ಯಾಣದಲ್ಲಿ ಸಾಮಾಜಿಕ ಕ್ರಾಂತಿಗೆ ನಾಂದಿಯಾಡಿದ್ದರು. ಇವರು ಬೋಧಿಸಿದ ತತ್ವಗಳು ಕೇವಲ ಆಧ್ಯಾತ್ಮಿಕ ಸಿದ್ಧಾಂತಗಳಾಗದೆ ಸಮಾಜ ಮತ್ತು ಧರ್ಮವನ್ನು ವೈಚಾರಿಕವಾಗಿ ಸುಧಾರಣೆಗೊಳಿಸಿದವು. ಈ ಗುರಿ ಸಾಧನೆಗಾಗಿ ಆಚಾರ್ಯತ್ರಯರು ಮತ್ತು ಬಸವೇಶ್ವರರು ಕುಲ, ಮತ ಮತ್ತು ಲಿಂಗಭೇದಗಳಿಲ್ಲದೆ ಎಲ್ಲ ವರ್ಗದ ಜನರನ್ನು ಭಗವಂತನಲ್ಲಿ ಶರಣಾಗುವಂತೆ ಬೋಧಿಸಿದ ಭಕ್ತಿ ಮಾರ್ಗದ ಮೂಲಕ ಸಮಾಜ ಮತ್ತು ಧರ್ಮವನ್ನು ಪುನಃಶ್ಚೇತನಗೊಳಿಸಿದರು.

©KTBS NOT TO BE REPUBLISHED

**ಶಂಕರಾಚಾರ್ಯರು**

ಶಂಕರಾಚಾರ್ಯರು ಕೇರಳದ ಕಾಲಡಿ ಗ್ರಾಮದ ನಂಬೂದರಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಶಿವಗುರು, ತಾಯಿ ಆರ್ಯಾಂಬ. ಶಂಕರರ ಬುದ್ಧಿಶಕ್ತಿ ಬಹಳ ಚುರುಕಾಗಿತ್ತು. ತಮ್ಮ ಎಳನೇ ವಯಸ್ಸಿನಲ್ಲಿಯೇ ಎಲ್ಲಾ ಸೂತ್ರಗಳಲ್ಲಿಯೂ ಪಾಂಡಿತ್ಯವನ್ನು ಪಡೆದಿದ್ದರು. ಗೋವಿಂದ ಭಗವತ್ಪಾದರೆಂಬ ಗುರುಗಳಲ್ಲಿ ಇವರು ವೇದ–ಶಾಸ್ತ್ರಗಳ ಅಧ್ಯಯನವನ್ನು ನಡೆಸಿದರು.



ಶಂಕರಾಚಾರ್ಯರು

ಶಂಕರರು ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳ ಆಳವಾದ ಅಧ್ಯಯನ ಮಾಡಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದರ ಪ್ರಕಾರ ಬ್ರಹ್ಮನೊಬ್ಬನೇ ಸತ್ಯ, ಉಳಿದ ಜಗತ್ತು ಮಿಥ್ಯ ರೂಪವಾದದ್ದು. ಜೀವನೂ ಬ್ರಹ್ಮನೇ ಮತ್ತು ಜೀವ ಬ್ರಹ್ಮನಿಂದ ಬೇರೆಯಲ್ಲ.

ಜಗತ್ತು ಒಂದು ಮಾಯೆ, ಬ್ರಹ್ಮ ಮಾತ್ರ ಸತ್ಯ. ಜನರು ಅಜ್ಞಾನಿಗಳು, ಅವರಿಗೆ ಜಗತ್ತು ಮಾಯೆ ಎಂಬುದು ಗೊತ್ತಿಲ್ಲ ಮತ್ತು ಬ್ರಹ್ಮನು ಸತ್ಯವೆಂಬುದೂ ಗೊತ್ತಿಲ್ಲ. ಆದ್ದರಿಂದ ಜ್ಞಾನ ಮಾರ್ಗದಿಂದ ನಾವು ಪ್ರಪಂಚದ ಮಾಯೆಯನ್ನು ತಿಳಿದು, ಪರಮ ಸತ್ಯವಾದ ಬ್ರಹ್ಮನೊಡನೆ ನಮ್ಮ ಜೀವಾತ್ಮವನ್ನು ವಿಲೀನಗೊಳಿಸಬೇಕು. ಆಗ ಮಾತ್ರ ನಮಗೆ ಮೋಕ್ಷವು ದೊರೆಯುವುದು. ಹೀಗೆ ಶಂಕರರು ಜ್ಞಾನ ಮಾರ್ಗವನ್ನು ಬೋಧಿಸಿದರು.

ಜೀವಾತ್ಮನಿಗೆ ಪ್ರತ್ಯೇಕ ಅಸ್ತಿತ್ವವಿಲ್ಲವೆಂದು ಪ್ರತಿಪಾದಿಸಿದ ಶಂಕರರು ಇದನ್ನೇ ನಾನೇ ಬ್ರಹ್ಮನು ಅಥವಾ **"ಅಹಂ ಬ್ರಹ್ಮಾಸ್ಮಿ"** ಎಂಬುದಾಗಿ ಪ್ರತಿಪಾದಿಸಿದರು. ಬ್ರಹ್ಮವು ಸತ್ಯ, ಅದು ನಿರ್ಗುಣ, ಅದಕ್ಕೆ ಲಕ್ಷಣಗಳಿಲ್ಲ ಮತ್ತು ಆಕಾರವಿಲ್ಲ ಎಂದು ಪ್ರತಿಪಾದಿಸಿದರು. ಶಂಕರರು ಭಾರತೀಯ ಚಿಂತನೆಗೆ ಹೊಸ ರೂಪ ಮತ್ತು ಚೈತನ್ಯವನ್ನು ಕೊಟ್ಟರು.

**ಶಂಕರರು ರಚಿಸಿದ ಗ್ರಂಥಗಳು :** ಪ್ರಬೋಧ ಆನಂದ ಲಹರಿ, ಸೌಂದರ್ಯ ಲಹರಿ, ಶಿವಾನಂದ ಲಹರಿ, ವಿವೇಕ ಚೂಡಾಮಣಿ, ಪ್ರಬೋಧ ಸುಧಾಕರ ಹಾಗೂ ದಕ್ಷಿಣಾಮೂರ್ತಿ ಸ್ತೋತ್ರ ಮುಖ್ಯವಾದ ಗ್ರಂಥಗಳು. ಶಂಕರರ "ಭಜ ಗೋವಿಂದಂ" ಸ್ತೋತ್ರವು ಅತ್ಯಂತ ಜನಪ್ರಿಯವಾಗಿದೆ.

ಶಂಕರರು ಕಾಲ್ನಡಿಗೆಯಲ್ಲೇ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಇಡೀ ಭಾರತದಲ್ಲಿ ಸಂಚರಿಸಿ ತಮ್ಮ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ತಮ್ಮ ಅದ್ವೈತ ಸಿದ್ಧಾಂತದ ಪ್ರಚಾರಕ್ಕಾಗಿ ಭಾರತದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿದರು.

**ನಿಮಗಿದು ತಿಳಿದಿರಲಿ :**

ಶಂಕರಾಚಾರ್ಯರು ಸ್ಥಾಪಿಸಿದ ಪೀಠಗಳು.

| | |
|---|---|
| 1) ಬದರಿನಾಥ್ – ಜ್ಯೋತಿರ್‌ಪೀಠ | 2) ದ್ವಾರಕಾ – ಕಾಳಿಕಾ ಪೀಠ |
| 3) ಪುರಿ – ಗೋವರ್ಧನ ಪೀಠ | 4) ಶೃಂಗೇರಿ – ಶಾರದಾ ಪೀಠ |

© KTBS NOT TO BE REPUBLISHED

**ರಾಮಾನುಜಾಚಾರ್ಯರು**


**ರಾಮಾನುಜಾಚಾರ್ಯರು**

ರಾಮಾನುಜಾಚಾರ್ಯರು ಚೆನ್ನೈ ಹತ್ತಿರದ ಶ್ರೀ ಪೆರಂಬದೂರ್ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಕೇಶವ ಸೋಮಯಾಜಿ, ತಾಯಿ ಕಾಂತಿಮತಿ. ದಕ್ಷಿಣ ಭಾರತದಲ್ಲಿ ಪ್ರಸಿದ್ಧ ವಿದ್ಯಾ ಕೇಂದ್ರವಾಗಿದ್ದ ಕಂಚಿಯಲ್ಲಿ ಯಾದವ ಪ್ರಕಾಶರ ಬಳಿ ವೇದ ಉಪನಿಷತ್ತುಗಳ ಅಧ್ಯಯನ ಮಾಡಿದರು. ನಂತರ ಶ್ರೀರಂಗಕ್ಕೆ ತೆರಳಿ ಅಲ್ಲಿಯ ಮಠದ ಪೀಠಾಧೀಶರಾದರು. ಶೈವ ಧರ್ಮಾವಲಂಬಿಯಾದ ಚೋಳ ದೊರೆಯು ರಾಮಾನುಜಾಚಾರ್ಯರಿಗೆ ಕಿರುಕುಳ ಕೊಡುತ್ತಿದ್ದ. ಆಗ ಕರ್ನಾಟಕದ ಹೊಯ್ಸಳರ ದೊರೆ ವಿಷ್ಣುವರ್ಧನನು ಇವರನ್ನು ಸ್ವಾಗತಿಸಿದನು. ಮೇಲುಕೋಟೆಗೆ ಹೋಗಿ ಚೆಲುವನಾರಾಯಣ ದೇವಾಲಯವನ್ನು ಕಟ್ಟಿಸಿದರು.

ರಾಮಾನುಜಾಚಾರ್ಯರು ಜನಸಾಮಾನ್ಯರಿಗೆ ಮುಕ್ತಿಮಾರ್ಗವನ್ನು ತೋರಿಸಲು ಅತೀವ ಆಸಕ್ತಿ ವಹಿಸಿದರು. ಅವರು ಶಾಸ್ತ್ರಾಧ್ಯಯನ ಮಾಡಿ, 'ವೇದಾಂತ ಸಂಗ್ರಹ', 'ವೇದಾಂತ ಸಾರ', 'ವೇದಾಂತ ದೀಪಿಕ', ಶ್ರೀ ಭಾಷ್ಯದಂತಹ ಅನೇಕ ಕೃತಿಗಳನ್ನು ರಚಿಸಿದರು. ಅವರು ತಮ್ಮ ಮಹತ್ವಪೂರ್ಣ ಗ್ರಂಥವಾದ "ಗೀತಾಭಾಷ್ಯ"ದಲ್ಲಿ ಭಕ್ತಿ ತತ್ವಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ.

ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತವನ್ನು "ವಿಶಿಷ್ಟಾದ್ವೈತ" ಎಂದೂ, ಆ ಸಿದ್ಧಾಂತವನ್ನು ಆಧರಿಸಿದ ಮತವನ್ನು "ಶ್ರೀ ವೈಷ್ಣವ ಮತ" ಎಂದೂ ಕರೆಯುತ್ತಾರೆ. ಹಾಗಾಗಿ ಅವರ ಶಿಷ್ಯರು "ಶ್ರೀವೈಷ್ಣವ"ರಾದರು.

ರಾಮಾನುಜಾಚಾರ್ಯರು ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ ಎಂದೂ ಆತ್ಮ ಮತ್ತು ಪರಮಾತ್ಮ ಏಕಕಾಲದಲ್ಲಿ ಒಂದಾಗಲು ಸಾಧ್ಯವಿಲ್ಲವೆಂದೂ ತಿಳಿಸಿದರು. ಮುಕ್ತಿಗೆ ಭಕ್ತಿ ಮತ್ತು ಶರಣಾಗತಿ (ಪ್ರಪತ್ತಿ) ಬಹಳ ಮುಖ್ಯವೆಂದು ತಿಳಿಸಿದರು. ಜಾತಿವಾದವನ್ನು ಖಂಡಿಸಿದ ರಾಮಾನುಜಾಚಾರ್ಯರು ಭಕ್ತಿ ತತ್ವವನ್ನು ಎಲ್ಲಾ ಜಾತಿಯ ಜನರಿಗೂ ಉಪದೇಶಿಸಿದರು. ಎಲ್ಲಾ ಆಸೆಗಳನ್ನು ತ್ಯಜಿಸಿ ಭಗವಂತನಿಗೆ ಶರಣಾಗಬೇಕೆಂದು ತಿಳಿಸಿದರು. ರಾಮಾನುಜರು ಭಕ್ತಿ ಮಾರ್ಗದಿಂದ ಮೋಕ್ಷ ಪಡೆಯಬಹುದೆಂದು ಪ್ರತಿಪಾದಿಸಿದರು.

ಉತ್ತರದ ಸಂತ ರಮಾನಂದ, ರಾಯಿದಾಸ ಇವರುಗಳು ರಾಮಾನುಜರ ಸಿದ್ಧಾಂತದಿಂದ ಪ್ರಭಾವಿತರಾದರು. ಇದರಿಂದ ಉತ್ತರ ಭಾರತದಲ್ಲಿ ಭಕ್ತಿ ಪಂಥ ಬೆಳೆಯಲು ದಾರಿಯಾಯಿತು. ವಿಜಯನಗರದ ತುಳುವ, ಅರವೀಡು ದೊರೆಗಳು ಶ್ರೀವೈಷ್ಣವ ಪಂಥದ ಅನುಯಾಯಿಗಳಾದರು.

**ನಿಮಗಿದು ತಿಳಿದಿರಲಿ**

**ದಕ್ಷಿಣ ಭಾರತದಲ್ಲಿನ ಕೆಲವು ಪ್ರಮುಖ ಶ್ರೀ ವೈಷ್ಣವ ಮಠಗಳು**

| | | |
|---|---|---|
| 1) ಯತಿರಾಜ ಮಠ | – | ಮೇಲುಕೋಟೆ ಮತ್ತು ಶ್ರೀಪೆರಂಬದೂರು |
| 2) ಪರಕಾಲ (ಬ್ರಹ್ಮತಂತ್ರ) ಮಠ | – | ಮೈಸೂರು |
| 3) ಅಹೋಬಿಲ ಮಠ | – | ಅಹೋಬಿಲ, (ಕರ್ನೂಲ್‌ಜಿಲ್ಲೆ, ಆಂಧ್ರ ಪ್ರದೇಶ) |
| 4) ಆಂಡವನ್ ಮಠ | – | ಶ್ರೀರಂಗಂ |
| 5) ವಾನ್ಮೈಮಲೈ ಮಠ | – | ಸುಚೀಂದ್ರಂ |

## ಮಧ್ವಾಚಾರ್ಯರು

ಮಧ್ವಾಚಾರ್ಯರು ಕರ್ನಾಟಕದ ಉಡುಪಿ ಹತ್ತಿರದ ಪಾಜಕ ಗ್ರಾಮದಲ್ಲಿ ಜನಿಸಿದರು. ಇವರು ಮಧ್ಯಗೇಹ ನಾರಾಯಣ ಭಟ್ಟ ಮತ್ತು ವೇದವತಿಯವರ ಮಗ. ವಿಷ್ಣು ಇವರ ಆರಾಧ್ಯದೈವ. ಮಧ್ವಾಚಾರ್ಯರು ಬಾಲಕರಾಗಿದ್ದಾಗಲೇ ಅಪ್ರತಿಮ ಪಾಂಡಿತ್ಯವನ್ನು ತೋರಿದ್ದರೆಂದು ಹೇಳಲಾಗಿದೆ. ಗುರುಗಳಾದ ಅಚ್ಯುತಪ್ರೇಕ್ಷರಲ್ಲಿ ವೇದ ಮತ್ತು ಉಪನಿಷತ್ತುಗಳ ಅಭ್ಯಾಸವನ್ನು ಮಾಡಿದರು. ಇದೇ ಗುರುಗಳು ಮಧ್ವಾಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟರು. ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಮಧ್ವಾಚಾರ್ಯರು ಸ್ವತಂತ್ರವಾಗಿ ತಮ್ಮ ಜ್ಞಾನ ಶಕ್ತಿಯನ್ನು ಬೆಳೆಸಿಕೊಂಡರು ಹಾಗೂ ಧರ್ಮ ಶಾಸ್ತ್ರಗಳ ವಾದದಲ್ಲಿ ತಮ್ಮ ಗುರುಗಳನ್ನೇ ಸೋಲಿಸಿದರು. ಇವರು “ದ್ವೈತ ಸಿದ್ಧಾಂತ”ವನ್ನು ಪ್ರತಿಪಾದಿಸಿದರು. ಜೀವ ಮತ್ತು ಪರಮಾತ್ಮರು ಬೇರೆ ಬೇರೆ ಎಂಬುದು ದ್ವೈತದ ಅರ್ಥ.



**ಮಧ್ವಾಚಾರ್ಯರು**

ಮಧ್ವಾಚಾರ್ಯರು ತಮ್ಮ ಸಿದ್ಧಾಂತದ ಪ್ರತಿಪಾದನೆಗಾಗಿ ತೀರ್ಥಯಾತ್ರೆ ಕೈಗೊಂಡು ಹಲವಾರು ಕಡೆಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸಿದರು. ಇವರು ಉಡುಪಿಯಲ್ಲಿ ಶ್ರೀ ಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದರು ಹಾಗೂ ಶ್ರೀ ಕೃಷ್ಣನ ಪೂಜೆಗಾಗಿ ಅಷ್ಟ ಯತಿಗಳನ್ನು ನಿಯೋಜಿಸಿದರು. ಶ್ರೀ ಕೃಷ್ಣನ ಪೂಜೆಯ ಹೊಣೆಹೊತ್ತು ಮುಂದೆ ಅಷ್ಟಮಠಗಳು ರೂಪುಗೊಂಡವು.

NOT TO BE REPUBLISHED @KTBS

ಮಧ್ವಾಚಾರ್ಯರ ಪ್ರಕಾರ ಜಗತ್ತು ಮಾಯೆಯಲ್ಲ. ಅದು ಪರಮಾತ್ಮನಷ್ಟೇ ಸತ್ಯವಾಗಿದೆ. ಇವುಗಳಲ್ಲಿ ಈಶ್ವರ ಮಾತ್ರ ಸ್ವತಂತ್ರ, ಉಳಿದ ಜಗತ್ತು ಮಿಥ್ಯ (ಭ್ರಮೆ) ರೂಪವಾದದ್ದು. ಪರಮಾತ್ಮನಿಗೂ ಜೀವಿಗಳಿಗೂ ಸ್ವಾಮಿ–ಸೇವಕ ಸಂಬಂಧವಿದೆ. ವಿಷ್ಣು ಅಥವಾ ನಾರಾಯಣ ಒಬ್ಬನೇ ಸರ್ವೋತ್ತಮ. ವಿಷ್ಣುವನ್ನು ಭಕ್ತಿಯಿಂದ ಪೂಜಿಸುವುದರಿಂದ ಆತ್ಮೋದ್ಧಾರ ಅಥವಾ ಮುಕ್ತಿ ಸಾಧ್ಯವೆಂದು ತಿಳಿಸಿದರು.

**ಮಧ್ವಾಚಾರ್ಯರ ಕೃತಿಗಳು :** ಗೀತಾಭಾಷ್ಯ, ಗೀತಾ ತಾತ್ಪರ್ಯ ನಿರ್ಣಯ, ಮಹಾಭಾರತ ತಾತ್ಪರ್ಯ ನಿರ್ಣಯ, ವಿಷ್ಣು ತತ್ವ ನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ, ಸೂತ್ರ ಭಾಷ್ಯ, ಮಾಯಾವಾದ ಖಂಡನಾ ಮುಂತಾದವು.

ಮಧ್ವಾಚಾರ್ಯರ ಸಿದ್ಧಾಂತವನ್ನು ಪ್ರಚಾರ ಮಾಡಿದ ಅವರ ಮುಖ್ಯ ಶಿಷ್ಯರೆಂದರೆ ಪದ್ಮನಾಭ ತೀರ್ಥರು, ನರಹರಿ ತೀರ್ಥರು, ವಿಜಯೇಂದ್ರ ತೀರ್ಥರು ಹಾಗೂ ವಾದಿರಾಜ ತೀರ್ಥರು.

### ವಿಶ್ವಗುರು ಬಸವಣ್ಣನವರು – ಸಾಂಸ್ಕೃತಿಕ ನಾಯಕ


ವಿಶ್ವಗುರು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ

ಕರ್ನಾಟಕದ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯ ಅಗ್ರಗಣ್ಯರಲ್ಲಿ ಬಸವಣ್ಣನವರು ಒಬ್ಬರಾಗಿದ್ದಾರೆ. ಬಸವಣ್ಣನವರ ಕಾಲ 12ನೆಯ ಶತಮಾನವಾಗಿದೆ. ಅವರ ತಂದೆ ಮಾದರಸ ಮತ್ತು ತಾಯಿ ಮಾದಲಾಂಬಿಕೆ. ಬಸವಣ್ಣನವರು ಇಂದಿನ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಜನಿಸಿದರು. ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು. ಕೂಡಲಸಂಗಮದಲ್ಲಿ ಧ್ಯಾನ ಸಾಧನೆ ಮಾಡಿದ ಅವರು ಕೂಡಲಸಂಗಮ ದೇವನನ್ನೇ ಅಂಕಿತವಾಗಿರಿಸಿಕೊಂಡು ವಚನಗಳನ್ನು ರಚಿಸಿದರು. ಅವರು ಮಂಗಳವಾಡಿಯ ರಾಜ ಬಿಜ್ಜಳನಲ್ಲಿ ಹಣಕಾಸು ಸಚಿವರಾಗಿದ್ದರು. ತಮ್ಮ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ದೂರದೃಷ್ಟಿ, ಜನಪರ ಕಾಳಜಿಯಿಂದ ಮುಂದೆ ಕಲ್ಯಾಣ ರಾಜ್ಯದಲ್ಲಿ ಪ್ರಧಾನಿಯಾದರು. ಸಮಾಜದಲ್ಲಿ ಬೇರೂರಿದ್ದ ಅಂಧಶ್ರದ್ಧೆ, ಮೂಢನಂಬಿಕೆ, ಕರ್ಮಾಚರಣೆಗಳನ್ನು ಖಂಡಿಸಿದರು. ಬಸವಣ್ಣನವರು ಆರ್ಥಿಕ, ಸಾಮಾಜಿಕ, ಧಾರ್ಮಿಕ ಸುಧಾರಣೆಗೆ ಕಾರಣರಾದರು.

ವಿಶ್ವದ ಮೊಟ್ಟಮೊದಲ ಸಂಸತ್ ಎಂದು ಪ್ರಖ್ಯಾತವಾಗಿರುವ 'ಅನುಭವಮಂಟಪ' ವನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಅಸ್ತಿತ್ವಕ್ಕೆ ತಂದರು. ಬಸವಣ್ಣನವರು ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣದ ಕಾರ್ಯಗಳನ್ನು ಮಾಡಿದರು.

ಬಸವಣ್ಣನವರು 'ಅರಿವನ್ನೇ ಗುರು' ವಾಗಿಸಿಕೊಂಡು ಇಷ್ಟಲಿಂಗದ ಪರಿಕಲ್ಪನೆಯೊಂದಿಗೆ ದೇಹವೇ ದೇಗುಲವೆಂದು ಸ್ಥಾವರ, ದೇವಾಲಯಗಳನ್ನು ನಿರಾಕರಿಸಿ ಏಕದೇವನಿಷ್ಠೆಯನ್ನು ಪ್ರತಿಪಾದಿಸಿದರು. 'ದಯವೇ ಧರ್ಮದ ಮೂಲ' ಎನ್ನುವ ಅಹಿಂಸಾ ತತ್ವಕ್ಕೆ ಒತ್ತು ಕೊಟ್ಟರು. ಕಾಯಕ, ದಾಸೋಹ ಮತ್ತು ಇಷ್ಟಲಿಂಗ ಇವು ಬಸವಣ್ಣನವರು ಜಾರಿಗೆ ತಂದ ವಿನೂತನ ಪರಿಕಲ್ಪನೆಗಳಾಗಿವೆ. ಇವುಗಳ ಮೂಲಕ ಬಸವಣ್ಣನವರು ಜಾತ್ಯತೀತ, ಲಿಂಗಾತೀತ ಸಮಸಮಾಜವನ್ನು ಕಲ್ಯಾಣದಲ್ಲಿ ನೆಲೆಗೊಳಿಸಿದರು. ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ, 'ಕಾಯವೇ ಕೈಲಾಸ' ಎಂದ ಬಸವಣ್ಣನವರು

© KTBS NOT TO BE REPUBLISHED

'ಕಾಯ'ದ ಪಾವಿತ್ರ್ಯದ ಜೊತೆಗೆ ಜನರಲ್ಲಿ ದುಡಿಮೆಯ ಸಂಸ್ಕೃತಿಯನ್ನು ಬೆಳೆಸುವ ಕಾಯಕ ತತ್ವಕ್ಕೂ ಒತ್ತುಕೊಟ್ಟರು. ಕಾಯಕದಲ್ಲಿ ಮೇಲು–ಕೀಳುಗಳಿಲ್ಲ ಎಂದರು. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತಿದ್ದರು. 'ದಾಸೋಹ' ತತ್ವದ ಮೂಲಕ ಸಂಪತ್ತು ಸಂಗ್ರಹ ಪ್ರವೃತ್ತಿಯನ್ನು ತೊಲಗಿಸಿದರು. ಅವರ ಸಮಾಜೋ–ಧಾರ್ಮಿಕ ಚಿಂತನೆ ಮತ್ತು ಅದನ್ನು ಸಾಕಾರಗೊಳಿಸಿದ ಪರಿ ಅನನ್ಯವಾದದ್ದಾಗಿದೆ. ಅವರು ಸ್ತ್ರೀಯರ ಸ್ವಾತಂತ್ರ್ಯ ಸಮಾನತೆಯನ್ನು ಪ್ರತಿಪಾದಿಸಿದರು.

ವಿಶ್ವದ ಜನರೆಲ್ಲರೂ ಸಮಾನರು, ಹುಟ್ಟಿನಿಂದ ಯಾರೂ ಅಸ್ಪೃಶ್ಯರಲ್ಲ ಎಂದು ಬಸವಣ್ಣನವರು ಸಾರಿದರು. ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣದ ಹಿನ್ನೆಲೆಯಲ್ಲಿ ಬರೆದ ಬರಹಗಳೇ ವಚನಗಳು.

ಇವು ಕನ್ನಡ ಸಾಹಿತ್ಯಕ್ಕೆ ನೀಡಿದ ವಿನೂತನ ಕೊಡುಗೆಗಳಾಗಿವೆ. ವಚನಗಳು ಒಂದರ್ಥದಲ್ಲಿ ವಿಶ್ವಕ್ಕೆ ನೀಡಿದ 'ಸಂವಿಧಾನ' ಎನ್ನಬಹುದು. ಅನೇಕ ವಚನಗಳ ಮೂಲಕ ವಚನಕಾರರು ಅಂದಿನ ಸಮಾಜದಲ್ಲಿದ್ದ ಲೋಪ ದೋಷಗಳನ್ನು ಎತ್ತಿ ತೋರಿಸಿ, ಅರಿವು ಮೂಡಿಸಲು ಪ್ರಯತ್ನಿಸಿದರು.

> ***ನಿಮಗಿದು ತಿಳಿದಿರಲಿ : (ಒಂದು ವಚನ)***
>
> *ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ*
> *ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ*
> *ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,*
> *ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ*
> *ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ.*

ವಚನ ಚಳವಳಿಯ ಕಾರಣ ಅವರ ಅನುಯಾಯಿಗಳು ಜಾತಿ, ವರ್ಣ, ವರ್ಗ, ಲಿಂಗ ಭೇದವಿಲ್ಲದೆ ಒಗ್ಗೂಡಿದರು. ಇವರಲ್ಲಿ ಪ್ರಮುಖರಾದವರು ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಸಿದ್ಧರಾಮ, ಚನ್ನಬಸವಣ್ಣ, ಮೋಳಿಗೆ ಮಾರಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ, ಕಿನ್ನರಿ ಬೊಮ್ಮಯ್ಯ ಮತ್ತಿತರರು.

ಶ್ರೀ ಬಸವೇಶ್ವರರು ಮಾನವ ಕುಲದ ಕಲ್ಯಾಣಕ್ಕೆ ನೀಡಿರುವ ಸಂದೇಶಗಳು ಸಾರ್ವಕಾಲಿಕವಾದವು. ಎಲ್ಲರನ್ನೂ ಒಳಗೊಳ್ಳುವ ಸಮಸಮಾಜದ ಆಶಯಗಳಿಗೆ ಪ್ರತೀಕ ಇವರು. ಇವರ ಸಂದೇಶಗಳಿಂದ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ಹಿರಿಮೆ ದೇಶ–ವಿದೇಶಗಳಲ್ಲಿ ಮತ್ತಷ್ಟು ಎತ್ತರಕ್ಕೆ ಏರಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ದಿನಾಂಕ 13.02.2024 ರಂದು ವಿಧಾನಸೌಧದಲ್ಲಿ ವಿಶ್ವಗುರು ಬಸವಣ್ಣ ಅವರ ಭಾವಚಿತ್ರವನ್ನು ಅನಾವರಣ ಮಾಡುವ ಮೂಲಕ ಇವರನ್ನು **'ಕರ್ನಾಟಕದ ಸಾಂಸ್ಕೃತಿಕ ನಾಯಕ'** ಎಂದು ಘೋಷಿಸಿದೆ.

NOT TO BE REPUBLISHED ©KTBS

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಶಂಕರಾಚಾರ್ಯರು ಕೇರಳದ ____________ ಎಂಬಲ್ಲಿ ಜನಿಸಿದರು.
2. ಜಗತ್ತು ಮಾಯೆ, ಬ್ರಹ್ಮ ಮಾತ್ರ ಸತ್ಯ ಎಂದು ಪ್ರತಿಪಾದಿಸಿದವರು ____________
3. ರಾಮಾನುಜಾಚಾರ್ಯರ ಶಿಷ್ಯರನ್ನು ____________ ಎಂದು ಕರೆಯಲಾಗಿದೆ.
4. ದ್ವೈತ ಸಿದ್ಧಾಂತದ ಪ್ರತಿಪಾದಕರು ____________

## II. ಕೆಳಕಂಡ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

5. ಅದ್ವೈತ ಸಿದ್ಧಾಂತದ ಪ್ರತಿಪಾದಕರು ಯಾರು ?
6. ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು ? ಅವರ ಮತವನ್ನು ಏನೆಂದು ಕರೆಯಲಾಗಿದೆ ?
7. ರಾಮಾನುಜಾಚಾರ್ಯರು ರಚಿಸಿದ ಗ್ರಂಥಗಳನ್ನು ಹೆಸರಿಸಿ.
8. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಗಳಾವುವು ?
9. ಶಂಕರಾಚಾರ್ಯರು ರಚಿಸಿದ ಗ್ರಂಥಗಳನ್ನು ಹೆಸರಿಸಿ.
10. ಬಸವಣ್ಣನವರು ಮಾಡಿದ ಕಲ್ಯಾಣ ಕಾರ್ಯಗಳಾವುವು?
11. ಬಸವಣ್ಣನವರೊಂದಿಗೆ ವಚನ ಚಳವಳಿಯಲ್ಲಿ ಗುರ್ತಿಸಿಕೊಂಡ ಅನುಯಾಯಿಗಳಾರು?
12. ಬಸವಣ್ಣನವರು ಪ್ರತಿಪಾದಿಸಿದ 'ಕಾಯವೇ ಕೈಲಾಸ' ಎಂದರೇನು?

## III. ಚಟುವಟಿಕೆಗಳು :

1. ಪ್ರಮುಖ ವಚನಕಾರರ ವಚನಗಳನ್ನು ಸಂಗ್ರಹಿಸಿ ಒಂದು ಗುಂಪಿನಲ್ಲಿ ವಾಚಿಸಿ ವ್ಯಾಖ್ಯಾನಿಸಿ.
2. ಬಸವಣ್ಣನವರ ಸಮಕಾಲೀನ ವಚನಕಾರರ ಭಾವ ಚಿತ್ರಗಳನ್ನು ಸಂಗ್ರಹಿಸಿ.
3. ವಚನಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಿ.

## IV. ಯೋಜನೆಗಳು :

1. ಶಿಕ್ಷಕರ ನೆರವಿನಿಂದ ದ್ವೈತ ಮತ್ತು ಅದ್ವೈತ ಸಿದ್ಧಾಂತಗಳ ತತ್ವಗಳ ಬಗ್ಗೆ ಪ್ರಬಂಧ ಬರೆಯಿರಿ.
2. ಸ್ಥಳೀಯವಾಗಿ ಇರುವ ವಚನಗಾಯಕರನ್ನು ಶಾಲೆಗೆ ಆಹ್ವಾನಿಸಿ ವಿವಿಧ ವಚನಗಳನ್ನು ವಾಚನ ಮಾಡಿಸಿ.

@KTBS NOT TO BE REPUBLISHED

*****

R3X8N1

## ಅಧ್ಯಾಯ – 4

# ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯಗಳ ಸ್ಥಾಪನೆ.
- ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯಗಳನ್ನು ಆಳಿದ ರಾಜವಂಶಗಳು.
- ಶ್ರೀಕೃಷ್ಣದೇವರಾಯನ ಸಾಧನೆ ಮತ್ತು ಕೊಡುಗೆಗಳು.
- ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳು.
- ಬಹಮನಿ ರಾಜ್ಯದ ಸಾಂಸ್ಕೃತಿಕ ಸಾಧನೆಗಳು.

NOT TO BE REPUBLISHED @KTBS

ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಒಂದು ಮಹತ್ವದ ಘಟನೆ. ದಕ್ಷಿಣ ಭಾರತದ ರಾಜಮನೆತನಗಳಾಗಿದ್ದ ದೇವಗಿರಿಯ ಯಾದವರು, ವಾರಂಗಲ್‌ನ ಕಾಕತೀಯರು, ಮಧುರೈಯ ಪಾಂಡ್ಯರು, ದ್ವಾರಸಮುದ್ರದ (ಹಳೇಬೀಡು) ಹೊಯ್ಸಳರು ಮತ್ತು ತಂಜಾವೂರಿನ ಚೋಳರು ಅಲ್ಲಾವುದ್ದೀನ್ ಖಿಲ್ಜಿಯ ಭೀಕರ ದಾಳಿಗಳಿಗೆ ತುತ್ತಾದರು. ಇದರ ಪರಿಣಾಮವಾಗಿ ರಾಜಕೀಯ ಅಭದ್ರತೆ ಅಸ್ಥಿರತೆ, ಕ್ಷೋಭೆ, ಭಯ ಮತ್ತು ಧಾರ್ಮಿಕ ವಿಪ್ಲವ ಕಾಣಿಸಿಕೊಂಡವು. ಈ ಸನ್ನಿವೇಶದಲ್ಲಿ ವಿಜಯನಗರ ಸಾಮ್ರಾಜ್ಯ ಉದಯವಾಯಿತು.

ಹರಿಹರ–ಬುಕ್ಕರು 1336 ರಲ್ಲಿ ತುಂಗಭದ್ರಾ ನದಿಯ ದಕ್ಷಿಣ ದಡದ ಮೇಲೆ ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮುಂದೆ ಹಂಪಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಯಿತು.

**ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳು**

↓

| ಸಂಗಮ | ಸಾಳುವ | ತುಳುವ | ಅರವೀಡು |
|---|---|---|---|

ಸಂಗಮ ವಂಶದ (1336–1486) ಪ್ರಸಿದ್ಧ ದೊರೆಗಳೆಂದರೆ ಒಂದನೆಯ ಹರಿಹರ, ಬುಕ್ಕರಾಯ, ಎರಡನೆಯ ಹರಿಹರ ಮತ್ತು ಪ್ರೌಢದೇವರಾಯ. ಒಂದನೆಯ ಹರಿಹರ ವಿಜಯನಗರ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿ ಕಡಿದಾದ ಬೆಟ್ಟಗಳ ನಡುವಣ ಹೊಸ ರಾಜಧಾನಿಯನ್ನು ಅಭಿವೃದ್ಧಿಪಡಿಸಿದನು.

### ಬುಕ್ಕರಾಯ

ಮಧುರೈಯ ಸುಲ್ತಾನನನ್ನು ಪದಚ್ಯುತಗೊಳಿಸಿ ಬುಕ್ಕನ ಪುತ್ರ ಕಂಪಣನು ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ದಿಗ್ವಿಜಯದ ಬಗ್ಗೆ ಗಂಗಾದೇವಿ ಬರೆದ 'ಮಧುರಾವಿಜಯಂ' (ವೀರ ಕಂಪಣ್ಣರಾಯ ವಿಜಯಂ) ಎಂಬ ಸಂಸ್ಕೃತ ಕೃತಿಯು ಹೆಚ್ಚಿನ ವಿವರಣೆ ನೀಡುತ್ತದೆ. ಕೊಂಡವೀಡಿನ ರೆಡ್ಡಿಗಳನ್ನು ಸೋಲಿಸಿ ಪೆನುಗೊಂಡೆ ಪ್ರದೇಶವನ್ನು ಬುಕ್ಕನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿದನು. ಬುಕ್ಕನು ಜೈನರ ಮತ್ತು ಶ್ರೀವೈಷ್ಣವರ ನಡುವಿನ ಧಾರ್ಮಿಕ ಕಲಹವನ್ನು ಬಗೆಹರಿಸಿ ಸರ್ವಮತ ಸಮನ್ವಯತೆಯ ನೀತಿಯನ್ನು ಎತ್ತಿ ಹಿಡಿದನೆಂದು ಶ್ರವಣಬೆಳಗೊಳದ ಶಾಸನ ತಿಳಿಸುತ್ತದೆ. ರಾಜಧಾನಿಯಲ್ಲಿ ಕೋಟೆಯನ್ನು ಕಟ್ಟಿಸಿ, ದೇವಾಲಯಗಳನ್ನು ನಿರ್ಮಿಸಿದನು, ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಚೀನಾ ದೇಶದ ಮಿಂಗ್ ವಂಶದ ಸಾಮ್ರಾಟನ ಆಸ್ಥಾನಕ್ಕೆ ಬುಕ್ಕರಾಯ ರಾಯಭಾರಿಯನ್ನು ಕಳುಹಿಸಿದ್ದನು.

### ಎರಡನೆಯ ಹರಿಹರ

ಬುಕ್ಕರಾಯನ ಮಗನಾದ ಎರಡನೆಯ ಹರಿಹರನ 27 ವರ್ಷಗಳ ಆಡಳಿತದ ಅವಧಿಯಲ್ಲಿ ವಿಜಯನಗರವು ವಿಶಾಲ ಪ್ರದೇಶಗಳನ್ನು ಒಳಗೊಂಡಿತ್ತು. ಈತನು ಕೊಂಡವೀಡು, ಕರ್ನೂಲ್, ನೆಲ್ಲೂರು ಕೋಟೆಗಳನ್ನು ಗೆದ್ದುಕೊಂಡನು. ಬಹಮನಿಯ ಸುಲ್ತಾನ ಮುಜಾಹಿದ್ ತೀರಿಕೊಂಡ ಕಾಲದಲ್ಲಿ ಈತನು ರಾಜ್ಯವನ್ನು ಗೋವೆಯಿಂದ ಕೊಂಕಣ ಕರಾವಳಿಯ ಉತ್ತರಕ್ಕೆ ವಿಸ್ತರಿಸಿದ. ಕೃಷ್ಣೆಯ ಉತ್ತರ ದಿಕ್ಕಿನ ಪಾಂಗಳ ಕೋಟೆಯನ್ನು 1398 ರಲ್ಲಿ ವಶಪಡಿಸಿಕೊಂಡನು.

> **ನಿಮಗಿದು ಗೊತ್ತೇ ?**
>
> *ನಿಕೋಲೋಕೊಂಟಿ ಎಂಬ ಇಟಲಿಯ ಪ್ರವಾಸಿ ವಿಜಯನಗರಕ್ಕೆ ಬಂದಿದ್ದು, ಆತ ವಿಜಯನಗರದ ಬಗ್ಗೆ ಸ್ವಾರಸ್ಯಕರ ವರ್ಣನೆ ನೀಡಿದ್ದಾನೆ. ರಾಜಧಾನಿಯು 60 ಮೈಲಿ ಸುತ್ತಳತೆಯುಳ್ಳದ್ದಾಗಿದೆಯೆಂದು ಆತನು ತಿಳಿಸಿದ್ದಾನೆ.*

### ಎರಡನೆಯ ದೇವರಾಯ (ಪ್ರೌಢದೇವರಾಯ) :

ಸಂಗಮ ವಂಶದಲ್ಲಿಯೇ ಶ್ರೇಷ್ಠ ದೊರೆ ಎರಡನೆಯ ದೇವರಾಯ (ಪ್ರೌಢದೇವರಾಯ). ಈತ 'ಗಜ ಬೇಂಟೆಕಾರ' ಎಂಬ ಬಿರುದು ಸಹ ಧರಿಸಿದ್ದ. ಎರಡನೆಯ ದೇವರಾಯನು ಒರಿಸ್ಸಾದ ಗಜಪತಿ ವಂಶದ ಕಪಿಲೇಂದ್ರನನ್ನು ಸೋಲಿಸಿ ಕೊಂಡವೀಡನ್ನು ಗೆದ್ದುಕೊಂಡನು. ಗಡಿ ಪ್ರದೇಶದ ರಾಜರುಗಳನ್ನು ಅಡಗಿಸಿ ಈಶಾನ್ಯ ಗಡಿಯನ್ನು ಕೃಷ್ಣಾನದಿಯವರೆಗೂ ವಿಸ್ತರಿಸಿದ. ನಂತರ ಕೇರಳವನ್ನು ಗೆದ್ದು, ಕೇರಳ ಹಾಗೂ ಶ್ರೀಲಂಕಾದಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿದನು. ಇದರಿಂದ "ದಕ್ಷಿಣಾಪಥದ ಚಕ್ರವರ್ತಿ" ಎನಿಸಿದ. ಈ ವಿಜಯಗಳಿಂದ ವಿಜಯನಗರ ಸಾಮ್ರಾಜ್ಯ ಸಿಂಹಳದ ಗಡಿಗಳಿಂದ ಗುಲ್ಬರ್ಗದವರೆಗೆ ಮತ್ತು ತೆಲಂಗಾಣದಿಂದ ಮಲಬಾರ್‌ವರೆಗೆ ವಿಸ್ತರಿಸಿಕೊಂಡಿತು.

> **ನಿಮಗಿದು ತಿಳಿದಿರಲಿ**
>
> *ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್ 1443ರ ಏಪ್ರಿಲ್ ಕೊನೆಯಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಲ್ಲಿದ್ದು, ಇದರ ವೈಭವದಿಂದ ಪ್ರಭಾವಿತನಾಗಿ ಹೇಳಿದ ಮಾತುಗಳು ಈ ಕೆಳಗಿನಂತಿವೆ.. "ವಿಜಯನಗರದಂತಹ ನಗರವನ್ನು ಕಣ್ಣು ಕಂಡಿಲ್ಲ ಮತ್ತು ಕಿವಿ ಕೇಳಿಲ್ಲ. ಏಕೆಂದರೆ ಇದಕ್ಕೆ ಸರಿದೂಗುವ ಪಟ್ಟಣವೇ ಪ್ರಪಂಚದಲ್ಲಿ ಕಾಣಲಾಗದು".*

ಸಾಂಪ್ರದಾಯಿಕ ಶತ್ರುಗಳಾದ ಬಹಮನಿ ಸುಲ್ತಾನ ಅಹಮದ್ ಷಾನನ್ನು ಬಿಜಾಪುರದವರೆಗೆ ಅಟ್ಟಿಸಿಕೊಂಡು ಹೋಗಿ ಮುದಗಲ್ ಮತ್ತು ಬಂಕಾಪುರಗಳನ್ನು ತನ್ನ ಸ್ವಾಧೀನ ಮಾಡಿಕೊಂಡನು. ಎರಡನೇ ದೇವರಾಯನ ದಳಪತಿಯಾದ ಲಕ್ಕಣ್ಣದಂಡೇಶನು ಒಂದು ನೌಕಾ ವಿಜಯಯಾತ್ರೆಯನ್ನು ಕೈಗೊಂಡು ಯಶಸ್ವಿಯಾದನು.

@KTBS NOT TO BE REPUBLISHED

ಈತನು ಪರ ಮತ ಸಹಿಷ್ಣುವಾಗಿದ್ದನು. ರಾಜಧಾನಿಯಲ್ಲಿ ಮಸೀದಿಯನ್ನು ನಿರ್ಮಿಸಿದನು. ಜೈನ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಸ್ವತಃ ಕವಿಯಾಗಿದ್ದ ಈತನ ಆಸ್ಥಾನದಲ್ಲಿ ಸಂಸ್ಕೃತ ಕವಿ ಡಿಂಡಿಮ ಮತ್ತು ಕನ್ನಡ ಕವಿ ಲಕ್ಕಣದಂಡೇಶರು ಇದ್ದರು. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಸಂಪ್ರದಾಯ ಹಾಗೂ ಸಾಹಿತ್ಯ ಪುನರುಜ್ಜೀವನ ಪಡೆದವು. 1446 ರಲ್ಲಿ ಎರಡನೆಯ ದೇವರಾಯನ ಮರಣದ ನಂತರ ಬಂದ ದುರ್ಬಲ ಅರಸರೊಂದಿಗೆ ಸಂಗಮ ವಂಶದ ಆಳ್ವಿಕೆ ಮುಕ್ತಾಯವಾಯಿತು.


ರಾಜ ಲಾಂಛನ ವರಾಹ

1485 ರಿಂದ 1505 ರ ನಡುವಿನ ಅವಧಿಯಲ್ಲಿ ಸಾಳುವ ಮನೆತನವು ಆಡಳಿತವನ್ನು ನಡೆಸಿತ್ತು. ಈ ಮನೆತನದ ಪ್ರಸಿದ್ಧ ದೊರೆ ಸಾಳುವ ನರಸಿಂಹ.

**ಕೃಷ್ಣದೇವರಾಯ (1509–1529)**

ತುಳುವ ಸಂತತಿಯ ನರಸನಾಯಕ ಹಾಗೂ ನಾಗಲಾಂಬಿಕೆಯ ಪುತ್ರನಾದ ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯದ ಅರಸರಲ್ಲಿಯೇ ಅತ್ಯಂತ ಶ್ರೇಷ್ಠ ದೊರೆ. ಇವನ ಆಳ್ವಿಕೆಯ ಅವಧಿಯಲ್ಲಿ ವಿಜಯನಗರವು ತನ್ನ ವೈಭವದ ಪರಾಕಾಷ್ಠೆಯನ್ನು ತಲುಪಿತು. ಜಗದ್ವಿಖ್ಯಾತರಾದ ಅಶೋಕ, ಸಮುದ್ರಗುಪ್ತ, ಹರ್ಷವರ್ಧನರ ಸಾಲಿನಲ್ಲಿ ನಿಲ್ಲುವ ಇವನು 20 ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಕೃಷ್ಣದೇವರಾಯ ಪಟ್ಟಕ್ಕೆ ಬಂದಾಗ ರಾಜ್ಯದ ಒಳ ಹಾಗೂ ಹೊರಗೆ ಜಟಿಲವಾದ ಸಮಸ್ಯೆಗಳಿದ್ದವು. ಹೊಸ ಜಲಮಾರ್ಗಗಳ ಮೂಲಕ ಆಗಮಿಸಿದ ಐರೋಪ್ಯರು ಇಲ್ಲಿ ನೆಲೆಗಳನ್ನು ಸ್ಥಾಪಿಸಲು ಆರಂಭಿಸಿದರು. ಬಹಮನಿ ರಾಜ್ಯದ ಐದು ಷಾಹಿ ಸುಲ್ತಾನರು ಕೃಷ್ಣದೇವರಾಯನ ವಿರುದ್ಧ ಕದನಕ್ಕಿಳಿದರು. ಜೊತೆಗೆ ಉಮ್ಮತ್ತೂರಿನ ಸಾಮಂತ ಹಾಗೂ ಒರಿಸ್ಸಾದ ಅರಸರು ವಿಜಯನಗರದ ಮೇಲೆ ಹಗೆತನವನ್ನು ಸಾಧಿಸುತ್ತಲೇ ಇದ್ದರು.


ಶ್ರೀಕೃಷ್ಣದೇವರಾಯ

**ಕೃಷ್ಣದೇವರಾಯನ ಸೈನಿಕ ಸಾಧನೆಗಳು**

ರಾಬರ್ಟ್ ಸಿವೆಲ್ ಹೇಳುವಂತೆ ಕೃಷ್ಣದೇವರಾಯನು ಅಸಾಮಾನ್ಯ ಪರಾಕ್ರಮಿ, ಚತುರ ಸೇನಾನಿ ಮತ್ತು ರಾಜತಂತ್ರ ನಿಪುಣ. ಇವನು ಎಲ್ಲಾ ಯುದ್ಧಗಳನ್ನು ಜಯಿಸಿ ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದನು. ಉಮ್ಮತ್ತೂರಿನ ಮಾಂಡಲಿಕ ಗಂಗರಾಜನನ್ನು ಸೋಲಿಸಿ ಅವನಿಂದ ಶಿವನಸಮುದ್ರದ ಕೋಟೆಯನ್ನು ಗೆದ್ದುಕೊಂಡನು. ನಂತರ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು. ಗೋವೆಯನ್ನು – ಬಿಜಾಪುರ (ಈಗಿನ ವಿಜಯಪುರ) ಸುಲ್ತಾನನಿಂದ ಗೆಲ್ಲಲು ಪೋರ್ಚುಗೀಸರಿಗೆ ನೆರವು ನೀಡುವ ಮೂಲಕ ಅವರೊಂದಿಗೆ ವ್ಯಾಪಾರ ಸಂಬಂಧ ಬೆಳೆಸಿದನು. ಉದಯಗಿರಿ ಕೋಟೆಯನ್ನು ಆಕ್ರಮಿಸಿದನು. ಉದಯಗಿರಿಯನ್ನು ಗೆಲ್ಲುವಾಗ ರಾಯನು "ನಾನು ಗೆಲ್ಲಲಾರದಂಥ ಪ್ರಬಲವಾದ ಕೋಟೆಯೇ ಇದು? ಇನ್ನು ಒಂದೇ ದಿನದಲ್ಲಿ ಈ ಕೋಟೆಯನ್ನು ಗೆದ್ದುಕೊಳ್ಳದೆಬಿಡೆನು" ಎಂದನು. ರಾಯನ ಈ ಮಾತು ಆತನ ಕಾರ್ಯಛಲವನ್ನು ತೋರಿಸುತ್ತದೆ. ಕಳಿಂಗದ ರಾಜಧಾನಿ ಕಟಕ್ ಅನ್ನು ಜಯಿಸಿ, ಗಜಪತಿ ವಂಶದ ಪ್ರತಾಪರುದ್ರದೇವನನ್ನು ಸೋಲಿಸಿ ಅವನೊಂದಿಗೆ ವೈವಾಹಿಕ ಸಂಬಂಧ ಬೆಳೆಸಿಕೊಂಡನು.

©KTBS NOT TO BE REPUBLISHED

ಕೃಷ್ಣದೇವರಾಯ ಬಿಜಾಪುರದ (ಈಗಿನ ವಿಜಯಪುರ) ಆದಿಲ್ ಷಾನನ್ನು ಸೋಲಿಸಿ ರಾಯಚೂರನ್ನು ಗೆದ್ದುಕೊಂಡನು. ರಾಯಚೂರು ಮುತ್ತಿಗೆಯ ಆರಂಭದಲ್ಲಿ ರಾಯನು ಸೈನಿಕರನ್ನು ಉದ್ದೇಶಿಸಿ "ಈ ಪ್ರಪಂಚದಲ್ಲಿ ಎಲ್ಲರೂ ಸಾಯಲೇಬೇಕು, ಯುದ್ಧದಲ್ಲಿ ಮಡಿದರೆ ವೀರಸ್ವರ್ಗ, ಗೆದ್ದರೆ ವಿಜಯಲಕ್ಷ್ಮಿ. ಆದ್ದರಿಂದ ಎಲ್ಲರೂ ನನ್ನೊಡನೆ ಬನ್ನಿ ; ಹೇಡಿಗಳಾಗಬೇಡಿ" ಎಂದು ಅವರನ್ನು ಹುರಿದುಂಬಿಸಿದನು.

ರಾಯಚೂರು, ಬೀದರ್ ಮತ್ತು ಕಲಬುರಗಿ ಕೋಟೆಗಳನ್ನು ವಶಪಡಿಸಿಕೊಂಡನು. ಕೃಷ್ಣದೇವರಾಯನು ಬಹಮನಿ ರಾಜ್ಯದ ಪ್ರಧಾನಿ ಕಾಸಿಂ ಬರೀದನನ್ನು ಸೋಲಿಸಿ, ಅವನು ಬಂಧಿಸಿದ್ದ ಅಪ್ರಾಪ್ತ ವಯಸ್ಕ ಸುಲ್ತಾನ ಎರಡನೇ ಮಹಮದ್ ಷಾನನ್ನು ಬಿಡುಗಡೆಗೊಳಿಸಿ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿ "ಯವನರಾಜ್ಯ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದನ್ನು ಧರಿಸಿದನು. ಕೃಷ್ಣದೇವರಾಯನು ಮರಣ ಹೊಂದಿದಾಗ ವಿಜಯನಗರ ಸಾಮ್ರಾಜ್ಯವು ಅತ್ಯಂತ ವಿಶಾಲವಾಗಿದ್ದು, ಎಲ್ಲಾ ದಿಕ್ಕುಗಳಿಗೂ ವಿಸ್ತರಿಸಿದ್ದಿತು.



@KTBS NOT TO BE REPUBLISHED

ಕೃಷ್ಣದೇವರಾಯ ಯುದ್ಧ ನೈಪುಣ್ಯತೆಯ ಜೊತೆಗೆ ಸಮರ್ಥ ಆಡಳಿತಗಾರನಾಗಿದ್ದನು. ರಾಜ್ಯಾಡಳಿತದ ವಿಚಾರದಲ್ಲಿ ಈತನಿಗೆ ಇದ್ದ ವ್ಯಾವಹಾರಿಕ ಜ್ಞಾನವನ್ನು ಇವನು ಬರೆದ 'ಅಮುಕ್ತಮೌಲ್ಯದ' ತೆಲುಗು ಕೃತಿಯು ತಿಳಿಸುತ್ತದೆ. ಕೃಷಿ ವಿಸ್ತರಣೆಗೆ ನೀರಾವರಿ ಅನುಕೂಲತೆಗಳನ್ನು ಒದಗಿಸಿದನು. ಪೋರ್ಚುಗೀಸರ ಸ್ನೇಹದಿಂದ ವಿದೇಶಿ ವ್ಯಾಪಾರ ಹೆಚ್ಚಿಸಿಕೊಂಡನು. ಮದುವೆಯ ಮೇಲಿನ ತೆರಿಗೆಯನ್ನು ರದ್ದುಗೊಳಿಸಿದನು. ಕಲೆ, ಸಾಹಿತ್ಯ ಮತ್ತು ಧರ್ಮಗಳ ಶ್ರೇಷ್ಠ ಪೋಷಕನಾಗಿದ್ದನು. ಈತನ ಆಸ್ಥಾನದಲ್ಲಿ ಅಷ್ಟ ದಿಗ್ಗಜರೆಂಬ ಕವಿಗಳಿದ್ದರು. ಸ್ವತ: ಕವಿಯಾಗಿದ್ದ ಕೃಷ್ಣದೇವರಾಯ 'ಜಾಂಬವತಿ ಕಲ್ಯಾಣ' ಎಂಬ ನಾಟಕವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದನು. ಅಲ್ಲಸಾನಿ ಪೆದ್ದನ್ನ, ನಂದಿ ತಿಮ್ಮಣ್ಣ, ದೂರ್ಜಟಿ, ತೆನಾಲಿರಾಮಕೃಷ್ಣ ಮುಂತಾದವರು ಆಸ್ಥಾನದ ಕವಿಗಳಾಗಿದ್ದರು.

**ಚಟುವಟಿಕೆ**

*ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಗೆ ಸಂಬಂಧಿಸಿದ ಕಥೆಗಳನ್ನು ಓದಿರಿ.*

ಕೃಷ್ಣದೇವರಾಯನು ಹಂಪಿಯಲ್ಲಿ ಕೃಷ್ಣ ದೇವಾಲಯವನ್ನು ಕಟ್ಟಿಸಿದನು. ಈತನು ತನ್ನ ಕಾಲದಲ್ಲಿ ಇನ್ನೂ ಕೆಲವು ದೇವಾಲಯಗಳ ಜೊತೆಗೆ ಹಂಪಿಯ ವಿರೂಪಾಕ್ಷ ದೇವಾಲಯದ ಮಹಾ ರಂಗಮಂಟಪವನ್ನು ನಿರ್ಮಿಸಿದನು. ಎಲ್ಲ ಮತೀಯರು ಈತನ ಕಾಲದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹೊಂದಿದ್ದರೆಂದು ಪೋರ್ಚುಗೀಸ್ ಪ್ರವಾಸಿಗಳಾದ ಪಾಯೆಸ್ ಮತ್ತು ಬಾರ್ಬೋಸ ಹೇಳುತ್ತಾ, ಇವನ ಘನತೆ ಮತ್ತು ಸಾಮರ್ಥ್ಯವನ್ನು ಕೊಂಡಾಡಿದ್ದಾರೆ.

**ವಿಜಯನಗರ ಸಾಮ್ರಾಜ್ಯದ ಪತನ**

ಕೃಷ್ಣದೇವರಾಯನ ನಂತರ ಅಚ್ಯುತರಾಯ ಮತ್ತು ಸದಾಶಿವರಾಯ ಆಳಿದರು. ಕೃಷ್ಣದೇವರಾಯನ ಅಳಿಯ ಅರವೀಡು ವಂಶದ ರಾಮರಾಯನು ಆಡಳಿತವನ್ನು ನಡೆಸಿದನು. ರಾಮರಾಯನು ತನ್ನ 23 ವರ್ಷಗಳ ಆಳ್ವಿಕೆಯಲ್ಲಿ ಕೈಗೊಂಡ ಯುದ್ಧಗಳು ಸಾಮ್ರಾಜ್ಯದ ಗೌರವವನ್ನು ಹೆಚ್ಚಿಸಿದ್ದರೂ, ಇದು ವಿಜಯನಗರಕ್ಕೆ ಅನೇಕ ಶತ್ರುಗಳನ್ನು ಸೃಷ್ಟಿಸಲು ಕಾರಣವಾಯಿತು.

ದಖ್ಖನಿನ ಸುಲ್ತಾನರ ರಾಜ್ಯಗಳು ಆಗಾಗ ನಡೆಸುತ್ತಿದ್ದ ದಾಳಿಗೆ, ಪ್ರತೀಕಾರವಾಗಿ ರಾಮರಾಯನು ಬಿಜಾಪುರ (ಈಗಿನ ವಿಜಯಪುರ) ಹಾಗೂ ಗೋಲ್ಕೊಂಡದ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು ಕದನಕ್ಕೆ ಪ್ರಚೋದನೆ ನೀಡಿದವು. ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಸಮೃದ್ಧಿಯ ಬಗ್ಗೆ ಮತ್ಸರ ಮತ್ತು ದ್ವೇಷಗಳನ್ನು ಹೊಂದಿದ್ದ ದಖನ್ನಿನ ಸುಲ್ತಾನರು ಧರ್ಮದ ಹೆಸರಿನಲ್ಲಿ ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾದರು.

> ***ನಿಮಗಿದು ತಿಳಿದಿರಲಿ***
>
> *ವಿಜಯನಗರ ಸಾಮ್ರಾಜ್ಯದಲ್ಲಿ ಪೆನುಕೊಂಡ, ಚಂದ್ರಗಿರಿ, ಪಡ್ಡೆಬೀಡು, ತಿರುವಾಡಿ (ತಿರುವಾಂಕೂರು), ಮುಳುವಾಯಿ (ಮುಳಬಾಗಿಲು), ಸಾಂತಳಿಗೆ (ಶಿವಮೊಗ್ಗ ಪ್ರದೇಶ), ಮತ್ತು ಮಂಗಳೂರು ಪ್ರಮುಖ ಪ್ರಾಂತ್ಯಗಳಾಗಿದ್ದವು.*

1565 ರಲ್ಲಿ ನಡೆದ ರಕ್ಕಸತಂಗಡಿ (ತಾಳಿಕೋಟೆ) ಕದನದಲ್ಲಿ ನಾಲ್ಕು ರಾಜ್ಯಗಳ ಒಕ್ಕೂಟ ಸೈನ್ಯ ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿ ಮಾಡಿತು. ಇದರಲ್ಲಿ ರಾಮರಾಯನ ಸೈನ್ಯ ಸೋತಿತು ಮತ್ತು ಅವನು ಹತನಾದನು. ವಿಜಯ ಸಾಧಿಸಿದ ದಖನ್ನಿನ ಸುಲ್ತಾನರ ಸೈನ್ಯವು ಭವ್ಯವಾಗಿದ್ದ ವಿಜಯನಗರವನ್ನು ಕೊಳ್ಳೆ ಹೊಡೆಯಿತು. ಇದರ ಫಲವಾಗಿ ಸಾಮ್ರಾಜ್ಯದ ರಾಜಧಾನಿ ಹಂಪಿಯ ಹಾಳು ಹಂಪಿಯಾಯಿತು. ಮುಂದೆ ಪೆನುಕೊಂಡ, ಚಂದ್ರಗಿರಿ, ಕೊನೆಗೆ ವೆಲ್ಲೂರುಗಳಿಂದ ಅರವೀಡು ವಂಶದ ಆಡಳಿತ 1646ರವರೆಗೆ ಮುಂದುವರೆಯಿತು. ಕರ್ನಾಟಕದಲ್ಲಿ ಮೈಸೂರಿನ ಒಡೆಯರು, ಕೆಳದಿಯ ನಾಯಕರು ಮತ್ತು ಚಿತ್ರದುರ್ಗದ ಪಾಳೇಗಾರರು ಮುಂತಾದ ವಿಜಯನಗರದ ಸಾಮಂತರು ಸ್ವತಂತ್ರರಾದರು.

NOT TO BE REPUBLISHED © KTBS

**ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳು**

**ಆಡಳಿತ :** ವಿಜಯನಗರ ಸಾಮ್ರಾಜ್ಯದ ಆಡಳಿತವು ಪಾರಂಪರಿಕವಾಗಿ ಮುಂದುವರೆಯಿತು. ರಾಜರು ತಮ್ಮ ಜ್ಯೇಷ್ಠ ಪುತ್ರರನ್ನೇ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡುತ್ತಿದ್ದರು. ವಿಕೇಂದ್ರಿಕೃತ ಅಧಿಕಾರವುಳ್ಳ ಪ್ರಬಲ ಕೇಂದ್ರಾಡಳಿತವನ್ನು ಹೊಂದಿತ್ತು. ಮಂತ್ರಿಮಂಡಲ, ಸೈನ್ಯ ಪ್ರಭುತ್ವ, ಪ್ರಾಂತೀಯ ಮಾಂಡಲಿಕರು ಅಥವಾ ರಾಜನು ಒಬ್ಬ ನಾಯಕನಿಗೆ ಅಥವಾ ಪಾಳೆಗಾರನಿಗೆ ಸೈನಿಕ ಸೇವೆಯ ಷರತ್ತಿನ ಮೇಲೆ ಭೂಮಿಯನ್ನು ಕೊಡುತ್ತಿದ್ದ. ಪ್ರಾಂತೀಯ ಹಂತದಲ್ಲಿ ನಾಯಂಕರರು ಅಥವಾ ಅಮರ ನಾಯಂಕರರು ಜೊತೆಗೆ ಸ್ಥಳೀಯ ಮಟ್ಟದಲ್ಲಿ ಗ್ರಾಮಾಡಳಿತ ಅಸ್ತಿತ್ವದಲ್ಲಿತ್ತು. ತಿಮ್ಮರಸ ಪ್ರಧಾನ ಮಂತ್ರಿಯಾಗಿದ್ದನು. ಸಾಮ್ರಾಜ್ಯವು ರಾಜ್ಯ, ನಾಡು ಹಾಗೂ ಗ್ರಾಮಗಳೆಂಬ ಆಡಳಿತ ಘಟಕಗಳನ್ನು ಹೊಂದಿತ್ತು.

> ***ನಿಮಗಿದು ಗೊತ್ತೇ ?***
>
> - *ಹೊನ್ನಮ್ಮ ಎಂಬುವವಳು 2ನೇ ದೇವರಾಯನ ಆಸ್ಥಾನದಲ್ಲಿ ವರದಿಗಾರಳಾಗಿದ್ದಳು.*
> - *ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅತ್ಯಂತ ಜನಪ್ರಿಯ ಕ್ರೀಡೆ ಕುಸ್ತಿ. ಹರಿಯಕ್ಕ ಎಂಬುವವಳು ಆ ಕಾಲದ ಖ್ಯಾತ ಮಹಿಳಾ ಕುಸ್ತಿಪಟು.*

ಅರಸನು ನ್ಯಾಯಾಂಗ ವಿಚಾರಗಳಲ್ಲಿ ಪರಮಾಧಿಕಾರವನ್ನು ಪಡೆದಿದ್ದನು. ಪ್ರಾಂತ್ಯಗಳಲ್ಲಿ ಪ್ರಾಂತ್ಯಾಧಿಕಾರಿಯು ನ್ಯಾಯ ತೀರ್ಮಾನ ಮಾಡುತ್ತಿದ್ದನು. ಶಿಕ್ಷೆಗಳು ಉಗ್ರವಾಗಿದ್ದವು. ಗ್ರಾಮಗಳು ಆಡಳಿತ ವ್ಯವಸ್ಥೆಯ ಕೊನೆಯ ಘಟಕಗಳಾಗಿದ್ದು, ಅಲ್ಲಿ ಗ್ರಾಮಸಭೆಗಳು ಆಡಳಿತ ನಿರ್ವಹಿಸುತ್ತಿದ್ದವು. ಗಾವುಂಡ, ಕರಣಿಕ (ಶಾನುಭೋಗ), ತಳಾರ (ತಳವಾರ) ಗ್ರಾಮಾಡಳಿತದಲ್ಲಿ ನೆರವಾಗುತ್ತಿದ್ದರು.

***ಚಟುವಟಿಕೆ :***

*ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಾಮಸಭೆಗಳು ನಡೆಯುವ ರೀತಿಯ ಬಗ್ಗೆ ಮಾಹಿತಿ ಸಂಗ್ರಹಿಸಿ.*

**ಸೇನಾ ವ್ಯವಸ್ಥೆ**

ವಿಜಯನಗರ ಸಾಮ್ರಾಜ್ಯವು ಸಮರ್ಥವಾದ ಸೈನ್ಯವನ್ನು ಹೊಂದಿತ್ತು. ಖಾಯಂ ಸೈನ್ಯ, ಸಾಮಂತರ ಸೈನ್ಯ ಮತ್ತು ಸುಸಭ್ಯ (ಇದು ರಾಜನ ರಕ್ಷಣಾ ಪಡೆಯಾಗಿತ್ತು) ಸೇನಾ ಎಂಬ ಮೂರು ಹಂತಗಳಿಂದ ಕೂಡಿತ್ತು. ಕಾಲುದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳ ಸೈನ್ಯದ ಪ್ರಮುಖ ಭಾಗಗಳು. 1368 ರಿಂದ ಯುದ್ಧದಲ್ಲಿ ಫಿರಂಗಿಗಳ ಉಪಯೋಗ ಆರಂಭವಾಯಿತು. ಬೃಹದಾಕಾರದ ಆನೆಗಳು ಇದ್ದವು. ಅರಬ್ ದೇಶದ ಕುದುರೆಗಳು ವಿಜಯನಗರ ಸಾಮ್ರಾಜ್ಯದ ಆಕರ್ಷಣೆಯಾಗಿದ್ದವು. ಸೈನ್ಯದಲ್ಲಿ ನೌಕಾಪಡೆಯೂ ಇತ್ತು. ಯಾವ ಜಾತಿಯವರಾದರೂ ಸೈನ್ಯದಲ್ಲಿ ಸೇರಿ ಗೌರವದ ಸ್ಥಾನಮಾನ ಹೊಂದಬಹುದಿತ್ತು. ಮುಸ್ಲಿಂಮರು ಸೈನ್ಯಾಧಿಕಾರಿಗಳಾಗಿದ್ದರು, ಒಕ್ಕಲಿಗರು, ಬೇಡರು ಪಾಳೆಯಗಾರರಾದರು. ಕೋಟೆ–ಕೊತ್ತಲಗಳು ಯುದ್ಧದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು.

**ಸಾಮಾಜಿಕ ವ್ಯವಸ್ಥೆ :** ಅನೇಕ ವೃತ್ತಿ ಆಧಾರಿತ ಜಾತಿ ವ್ಯವಸ್ಥೆ ಜಾರಿಯಲ್ಲಿತ್ತು. ಕುಶಲ ಕಲೆಗಾರರು, ಕಮ್ಮಾರರು, ಅಕ್ಕಸಾಲಿಗರು, ಕಂಚುಗಾರರು, ಬಡಗಿಗಳು, ನೇಕಾರರು, ಸಮಗಾರರು (ಚಮ್ಮಾರರು) ಅಧಿಕ ಸಂಖ್ಯೆಯಲ್ಲಿದ್ದರು. ಬಾಲ್ಯ ವಿವಾಹ, ಸತಿ ಸಹಗಮನ ಮತ್ತು ದೇವದಾಸಿ ಪದ್ಧತಿಗಳು ರೂಢಿಯಲ್ಲಿದ್ದವು. ಸಾಮಾನ್ಯವಾಗಿ ಏಕಪತ್ನಿತ್ವ ರೂಢಿಯಲ್ಲಿದ್ದರೂ, ದೊರೆಗಳು ಮತ್ತು ಶ್ರೀಮಂತರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು. ಸ್ತ್ರೀಯರು ಗೌರವದ ಸ್ಥಾನ ಪಡೆದಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ಸ್ತ್ರೀ ಜಟ್ಟಿಗಳು (ಕುಸ್ತಿಪಟುಗಳು), ಅರಮನೆ ಕಾವಲುಗಾರ್ತಿಯರು ಇದ್ದರು. ಹೋಳಿ, ದೀಪಾವಳಿ ಮತ್ತು ದಸರಾ ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸಲಾಗುತ್ತಿತ್ತು. ದಸರಾ ಹಬ್ಬವು ಹಂಪಿಯಲ್ಲಿ ರಾಜಾಶ್ರಯದಲ್ಲಿ ವೈಭವದಿಂದ ನಡೆಯುತ್ತಿತ್ತು. ಇದರ ಕುರುಹಾಗಿ ಮಹಾನವಮಿ ದಿಬ್ಬವನ್ನು ಇಂದಿಗೂ ಕಾಣಬಹುದು. ಸಂಗೀತ, ನೃತ್ಯಗಳು ಹೆಚ್ಚಿನ ಜನಮನ್ನಣೆ ಪಡೆದವು.

**ಆರ್ಥಿಕ ವ್ಯವಸ್ಥೆ :** ವಿಜಯನಗರ ಸಾಮ್ರಾಜ್ಯವು ಆರ್ಥಿಕವಾಗಿ ಸುಭಿಕ್ಷವಾಗಿತ್ತು. ಭೂ ಕಂದಾಯ ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು. ಕೃಷಿಕರು ಸಾಮಾನ್ಯವಾಗಿ ತಮ್ಮ ಉತ್ಪಾದನೆಯ ನಾಲ್ಕನೆಯ ಒಂದು ($\frac{1}{4}$) ಭಾಗವನ್ನು ಸರಕಾರಕ್ಕೆ ತೆರಿಗೆ ರೂಪದಲ್ಲಿ ಕೊಡುತ್ತಿದ್ದರು. ವೃತ್ತಿ ತೆರಿಗೆ, ಮನೆ ಕಂದಾಯ, ದಾರಿ ಸುಂಕ, ಸಂತೆ ಸುಂಕ, ವಾಣಿಜ್ಯ ತೆರಿಗೆ, ಆಮದು ಮತ್ತು ರಫ್ತು

***ಚಟುವಟಿಕೆ :***

*ಇಂದಿನ ಮೈಸೂರಿನ ದಸರಾ ಮತ್ತು ಅಂದಿನ ವಿಜಯನಗರ ಸಾಮ್ರಾಜ್ಯದ ದಸರಾ ಹಬ್ಬದ ಬಗ್ಗೆ ಹೋಲಿಸಿ ಮತ್ತು ವಿಶ್ಲೇಷಿಸಿ.*

@KTBS NOT TO BE REPUBLISHED

ತೆರಿಗೆಗಳು, ಸಾಮಂತರಿಂದ ಬರುವ ಕಪ್ಪಕಾಣಿಕೆಗಳು ರಾಜ್ಯದ ಇತರ ಆದಾಯದ ಮೂಲಗಳಾಗಿದ್ದವು. ಕೃಷಿ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು. ಇವರು ವರ್ಷದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳನ್ನು ಬೆಳೆಯುತ್ತಿದ್ದರು. ಜೋಳ, ರಾಗಿ, ಭತ್ತ, ಸಜ್ಜೆ, ಗೋಧಿ, ಅವರೆ, ಹೆಸರು, ಉದ್ದು, ತೊಗರಿ, ಎಳ್ಳು, ಶೇಂಗಾ, ಹತ್ತಿ, ಕಬ್ಬು, ತೆಂಗು ಮುಖ್ಯ ಬೆಳೆಗಳಾಗಿದ್ದವು. ವಿಜಯನಗರದ ಅರಸರು ಬಾವಿ, ಕೆರೆ–ಕಾಲುವೆಗಳನ್ನು ಕಟ್ಟಿಸುವುದರ ಮೂಲಕ ಕೃಷಿ ಮತ್ತು ನೀರಾವರಿಯನ್ನು ಉತ್ತೇಜಿಸಿದರು. ಇವರ ಕಾಲದಲ್ಲಿ ಗೇಣಿ, ಗುತ್ತಿಗೆ, ಸಿದ್ಧಾಯ, ವಾರ ಮತ್ತು ಗಡಿ ಎಂಬ ಐದು ಬಗೆಯ ಭೂ ಹಿಡುವಳಿ ಪದ್ಧತಿಗಳಿದ್ದವು.

ವಿಜಯನಗರ ಸಾಮ್ರಾಜ್ಯದ ಕಾಲವು ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿತ್ತು. ಮೆಣಸು, ಲವಂಗ, ಏಲಕ್ಕಿ ಮುಂತಾದ ಮಸಾಲೆ ಸಾಮಾನುಗಳು, ಪೆಟ್ಲುಪ್ಪು (ಸೋರುಪ್ಪು), ಕಬ್ಬಿಣದ ಅದಿರು, ವಜ್ರ, ಕಲ್ಲುಸಕ್ಕರೆ, ಕಸ್ತೂರಿ, ಶ್ರೀಗಂಧ, ಸುಗಂಧ ದ್ರವ್ಯ ಮುಂತಾದವುಗಳನ್ನು ರಫ್ತು ಮಾಡುತ್ತಿದ್ದರು. ಬಟ್ಟೆ ನೇಯ್ಗೆಯ ಮುಖ್ಯ ಕೈಗಾರಿಕೆಗಳು ಇದ್ದವು. 'ಚಿನ್ನದ ವರಹ', 'ಗದ್ಯಾಣ' ಮತ್ತು 'ಪಗೋಡ', ಬೆಳ್ಳಿಯ 'ತಾರಾ', ತಾಮ್ರದ 'ಪಣ', 'ದುಡ್ಡು' ಮತ್ತು 'ಕಾಸು' ಮುಂತಾದ ನಾಣ್ಯಗಳು ಬಳಕೆಯಲ್ಲಿದ್ದವು.

> ***ಚಟುವಟಿಕೆ :***
> *ಹಿಂದಿನಕಾಲದ ದುಡ್ಡು, ಕಾಸುಗಳು ಮತ್ತು ನಾಣ್ಯಗಳನ್ನು ಅಥವಾ ಅವುಗಳ ಚಿತ್ರಗಳನ್ನು ಸಂಗ್ರಹಿಸಿ.*

ಭಟ್ಕಳ, ಹೊನ್ನಾವರ, ಮಂಗಳೂರು ವಿಜಯನಗರ ಸಾಮ್ರಾಜ್ಯದ ಮುಖ್ಯ ಬಂದರುಗಳಾಗಿದ್ದು, ಅರಬ್, ಚೀನಾ, ಪೋರ್ಚುಗಲ್ ಮುಂತಾದ ವಿದೇಶಿ ವ್ಯಾಪಾರಿಗಳು ಸಾಮ್ರಾಜ್ಯದ ಸಂಪರ್ಕ ಹೊಂದಿದ್ದರು.

**ಧಾರ್ಮಿಕ ವ್ಯವಸ್ಥೆ :** ವಿಜಯನಗರ ಸಾಮ್ರಾಜ್ಯವು ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದ ಕೀರ್ತಿಗೆ ಪಾತ್ರವಾಗಿದೆ. ಶ್ರೀವೈಷ್ಣವ ಮತ್ತು ಜೈನ ಮತಾವಲಂಬಿಗಳು ತಮ್ಮ ತಮ್ಮ ಮತಾಭಿಪ್ರಾಯಗಳನ್ನು ಮರೆತು, ಪರಸ್ಪರ ಗೌರವದಿಂದ ಬಾಳುವಂತ ವಾತಾವರಣವಿತ್ತು. ವಿಜಯನಗರ ಸಾಮ್ರಾಜ್ಯವನ್ನಾಳಿದ ಆರಂಭದ ಅರಸರು ಶೈವ ಮತ್ತು ವೀರಶೈವ ಪೋಷಕರಾಗಿದ್ದರೆ, ನಂತರದವರು ವೈಷ್ಣವ ಮತದ ಉಪಾಸಕರಾಗಿದ್ದರು.

> ***ನಿಮಗಿದು ತಿಳಿದಿರಲಿ***
> *ಕ್ರೈಸ್ತನೇ, ಯಹೂದಿಯೇ, ಮಹಮ್ಮದೀಯನೇ ಅಥವಾ ಹಿಂದೂವೇ ಯಾರಾದರೂ ನಿರಾತಂಕವಾಗಿ ಈ ರಾಜ್ಯದಲ್ಲಿ ಬಾಳಬಹುದು.*
> *– ಬಾರ್ಬೋಸ, ವಿದೇಶಿ ಪ್ರವಾಸಿ.*

ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಮರಿಗೆ ಮಸೀದಿಗಳನ್ನು ಕಟ್ಟಿಸಲಾಗಿತ್ತು. ಪೋರ್ಚುಗೀಸರೊಂದಿಗೆ ವ್ಯಾಪಾರ ವೃದ್ಧಿಸಿಕೊಂಡ ವಿಜಯನಗರದ ಅರಸರು ಕ್ರೈಸ್ತ ಧರ್ಮಕ್ಕೂ ಪ್ರೋತ್ಸಾಹ ಕೊಟ್ಟರಲ್ಲದೆ ಚರ್ಚುಗಳನ್ನು ಕಟ್ಟಲು ಅನುಮತಿ ನೀಡಿದರು.

**ಸಾಹಿತ್ಯ :** ಸಾಮ್ರಾಜ್ಯದಲ್ಲಿ ಏರ್ಪಟ್ಟಿದ್ದ ಶಾಂತಿ ಮತ್ತು ಸುವ್ಯವಸ್ಥೆ, ಆರ್ಥಿಕ ಪ್ರಗತಿಯ ಪರಿಣಾಮದಿಂದ ಸಾಹಿತ್ಯವು ಹುಲುಸಾಗಿ ಬೆಳೆಯಿತು. ಕನ್ನಡ, ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಯ ಸಾಹಿತ್ಯ ಕೃತಿಗಳು ರಚನೆಯಾದವು.

©KTBS NOT TO BE REPUBLISHED

ರತ್ನಾಕರವರ್ಣಿ ಬರೆದ 'ಭರತೇಶ ವೈಭವ', ಚಾಮರಸರು ರಚಿಸಿದ 'ಪ್ರಭುಲಿಂಗಲೀಲೆ', ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ' ಕನ್ನಡದ ಮುಖ್ಯ ಕಾವ್ಯಗಳಾಗಿವೆ. ಭೀಮಕವಿಯು ಪಾಲ್ಕುರಿಕೆ ಸೋಮನಾಥನ ತೆಲುಗು ಕೃತಿ 'ಬಸವ ಪುರಾಣ'ವನ್ನು ಕನ್ನಡದಲ್ಲಿ ಬರೆದಿದ್ದಾನೆ. ಬಸವಾದಿ ಶಿವಶರಣರ ವಚನಗಳ ಸಂಕಲನವಾದ 'ಶೂನ್ಯ ಸಂಪಾದನೆ' ರಚನೆಯಾಯಿತು. ಲಕ್ಕಣದಂಡೇಶನ 'ಶಿವತತ್ವ ಚಿಂತಾಮಣಿ' ಅಲ್ಲದೆ ಕನ್ನಡದಲ್ಲಿ ಮಾನವ ವೈದ್ಯಶಾಸ್ತ್ರ, ಪಶುವೈದ್ಯಶಾಸ್ತ್ರ, ಕಾವ್ಯಶಾಸ್ತ್ರ, ಜೋತಿಷ್ಯ, ಪಾಕಶಾಸ್ತ್ರ ರಚನೆಯಾದವು. ಪುರಂದರದಾಸರು, ಕನಕದಾಸರು, ಶ್ರೀಪಾದರಾಯರು, ವ್ಯಾಸರಾಯರು ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಕನಕದಾಸರ 'ಮೋಹನ ತರಂಗಿಣಿ', 'ನಳ ಚರಿತ್ರೆ', 'ಹರಿಭಕ್ತಸಾರ' ಮತ್ತು 'ರಾಮಧಾನ್ಯ ಚರಿತ್ರೆ' ಮುಖ್ಯವಾದವು.

ಸಂಸ್ಕೃತದಲ್ಲಿ ವಿದ್ಯಾರಣ್ಯರ 'ಶಂಕರ ವಿಜಯ' ಮತ್ತು 'ಸರ್ವದರ್ಶನ ಸಂಗ್ರಹ' ರಚನೆಗೊಂಡವು. ಇವರ ಸೋದರ ಸಾಯಣಾಚಾರ್ಯರು 'ವೇದಾರ್ಥ ಪ್ರಕಾಶ' ಎಂಬ ವೇದಭಾಷ್ಯ ಮತ್ತು ಆಯುರ್ವೇದ ಸುಧಾನಿಧಿ, ಪುರುಷಾರ್ಥ ಸುಧಾನಿಧಿ ಮುಂತಾದ ಕೃತಿಗಳನ್ನು ರಚಿಸಿದರು. ಕಂಪಣರಾಯನ ಮಡದಿ ಗಂಗಾದೇವಿ 'ಮಧುರಾವಿಜಯಂ' ಎಂಬ ಕೃತಿಯನ್ನು ರಚಿಸಿದಳು. ಇದು ಕಂಪಣ್ಣನ ದಂಡಯಾತ್ರೆಯನ್ನು, ಅಲ್ಲಿನ ಪವಿತ್ರ ಸ್ಥಳಗಳ ವರ್ಣನೆಯನ್ನು ತಿಳಿಸುತ್ತದೆ.

ಎರಡನೇ ದೇವರಾಯನ ಆಸ್ಥಾನ ಕವಿಯಾದ ಶ್ರೀನಾಥನು 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು. ಅಲ್ಲಸಾನಿ ಪೆದ್ದನನ 'ಮನುಚರಿತಮು', ತಿಮ್ಮಣನ 'ಪಾರಿಜಾತಾಹಪಹರಣಂ', ತೆನಾಲಿ ರಾಮಕೃಷ್ಣನ 'ಉಭಟಾರಾಧ್ಯ ಚರಿತಂ' ಪ್ರಮುಖ ಕೃತಿಗಳಾಗಿವೆ.

ತಮಿಳು ಕವಿಗಳಾದ ಪರಂಜ್ಯೋತಿಯರ್, ವೀರ ರಾಘವರ್, ಮಂಡಲಪುರುಷ, ಜ್ಞಾನ ಪ್ರಕಾಶ, ಹರಿಹರ ಮುಂತಾದವರು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದರು. ಪರಂಜ್ಯೋತಿಯರ್ ಕವಿಯು 'ತಿರುವಳಯಾಡಲ್ ಪುರಾಣಂ' ಕೃತಿಯನ್ನು ರಚಿಸಿದನು. ವಿಜಯನಗರ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಭಾಷೆಗಳಿಗೆ ಪ್ರೋತ್ಸಾಹ ಸಿಕ್ಕಿತ್ತು.

@KTBS NOT TO BE REPUBLISHED

### ಕಲೆ ಮತ್ತು ವಾಸ್ತುಶಿಲ್ಪ

ವಿಜಯನಗರ ಸಾಮ್ರಾಜ್ಯದ ಅರಸರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಮಾಡಿದ ಸಾಧನೆ ಸ್ಮರಣೀಯವಾಗಿದೆ. ಹಾಗಾಗಿ ಈ ಸಾಮ್ರಾಟರನ್ನು ವಾಸ್ತುಕಲೆಯ ಮಹಾನ್ ಪೋಷಕರು ಎನ್ನಲಾಗಿದೆ. ಇವರ ಕಾಲದಲ್ಲಿ ದೇವಾಲಯ, ಅರಮನೆ, ಕೋಟೆ, ಗೋಪುರ, ಮಹಾಮಂಟಪ, ಸಾರ್ವಜನಿಕ ಕಟ್ಟಡಗಳು, ಕೆರೆ ಕಟ್ಟೆ, ಕಾಲುವೆ, ಅಣೆಕಟ್ಟೆ ಮುಂತಾದವು ನಿರ್ಮಾಣವಾಗಿವೆ.

**ವಿಜಯನಗರ ಸಾಮ್ರಾಜ್ಯದ ಕಲೆಯ ಪ್ರಮುಖ ವೈಶಿಷ್ಟ್ಯಗಳು :** ವಿಜಯನಗರ ಸಾಮ್ರಾಜ್ಯದ ಅರಸರು ಚಾಲುಕ್ಯ, ರಾಷ್ಟ್ರಕೂಟ, ಚೋಳ ಮತ್ತು ಹೊಯ್ಸಳ ವಾಸ್ತುಶೈಲಿಯ ಮಾದರಿಗಳನ್ನು ಮುಂದುವರೆಸಿದರು. ಇವರ ಶೈಲಿಯ ಪ್ರಧಾನ ಲಕ್ಷಣವೆಂದರೆ ಹಲವಾರು ಕಂಭಗಳ ಸಾಲುಗಳಿಂದ ಕೂಡಿದ ವಿಶಾಲ ಸಭಾ

> ***ಚಟುವಟಿಕೆ :***
> *ಹಂಪಿಗೆ ಪ್ರವಾಸ ಕೈಗೊಂಡು ಅಲ್ಲಿನ ದೇವಾಲಯಗಳು ಮತ್ತು ಕಟ್ಟಡಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.*

ಮಂಟಪ ಅಥವಾ ಕಲ್ಯಾಣ ಮಂಟಪಗಳು. ದೇವಾಲಯಗಳು ಎತ್ತರವಾದ ಗೋಪುರಗಳನ್ನು (ರಾಯ ಗೋಪುರ) ಹೊಂದಿದ್ದು ಪತ್ರಾಕೃತಿಯ ಕಮಾನುಗಳನ್ನು ಮತ್ತು ಮಂಟಪಗಳನ್ನು ಹೊಂದಿವೆ. ಈ ಕಲೆಯಲ್ಲಿ ಅಲಂಕಾರಕ್ಕಿಂತ ಭವ್ಯತೆ ಮತ್ತು ಗಾಂಭೀರ್ಯದ ಭಾವನೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇವರು ಕಟ್ಟಡಗಳಿಗೆ ಉಸುಕು ಮಿಶ್ರಿತ ಕೆಂಪು ಕಲ್ಲುಗಳನ್ನು ಬಳಸಿದ್ದಾರೆ, ದೇವಾಲಯಗಳ ಮುಂದೆ ಗೋಪುರಗಳ ನಿರ್ಮಾಣ ಪದ್ಧತಿಯನ್ನು ಮೊಟ್ಟಮೊದಲ ಬಾರಿಗೆ ವಿಜಯನಗರ ಅರಸರು ಪ್ರಾರಂಭಿಸಿದರು.

**ಪ್ರಮುಖ ದೇವಾಲಯಗಳು :**

> **ನಿಮಗಿದು ತಿಳಿದಿರಲಿ**
>
> *ಇವರು ಕಟ್ಟಿಸಿದ ದೇವಾಲಯಗಳು, ಕಟ್ಟಡಗಳು ಮತ್ತು ನಿರ್ಮಿಸಿದ ಮೂರ್ತಿಗಳನ್ನು ಉಲ್ಲೇಖಿಸಿ ಖ್ಯಾತ ಕಲಾ ಇತಿಹಾಸಕಾರರಾಗಿರುವ ಪರ್ಸಿ ಬ್ರೌನರು ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು 'ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ರೂಪ' ಎಂದು ವರ್ಣಿಸಿದ್ದಾರೆ.*

ಇವರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು ಹಂಪಿ, ಶೃಂಗೇರಿ, ತಿರುಪತಿ, ಕಂಚಿ, ಲೇಪಾಕ್ಷಿ, ಕಾರ್ಕಳ, ಭಟ್ಕಳ, ಚಿದಂಬರಂ, ಕಾಳಹಸ್ತಿ, ನಂದಿ, ಶ್ರೀಶೈಲ, ಕೋಲಾರ ಮುಂತಾದ ಕಡೆಗಳಲ್ಲಿ ಕಾಣಬಹುದು.

ಶೃಂಗೇರಿಯ ವಿದ್ಯಾಶಂಕರ ದೇವಾಲಯವು ವಿಜಯನಗರ ಕಾಲದ ಆರಂಭದ ದೇವಾಲಯಗಳಲ್ಲಿ ಪ್ರಮುಖವಾಗಿದೆ. ಈ ದೇವಾಲಯದ ವಿನ್ಯಾಸವು ಭಾರತದಲ್ಲಿಯೇ ಅಪೂರ್ವ ಮಾದರಿಯದಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಹಂಪಿಯ ವಿರೂಪಾಕ್ಷ ದೇವಾಲಯ. ವಿಶಾಲವಾದ ಪ್ರಾಂಗಣವನ್ನು ಹೊಂದಿರುವ ಇದು ಸೊಗಸಾದ ಕೆತ್ತನೆಯ ಕಂಬಗಳು, ಅಲಂಕೃತ ಚಾವಣಿಗಳನ್ನು ಹೊಂದಿದೆ.

©KTBS NOT TO BE REPUBLISHED



**ವಿಜಯ ವಿಠ್ಠಲ ದೇವಾಲಯ**



**ಹಂಪಿ ವಿರೂಪಾಕ್ಷ ದೇವಾಲಯ**

ಹಂಪಿಯಲ್ಲಿರುವ ವಿಜಯ ವಿಠ್ಠಲ ದೇವಾಲಯವು ಶೃಂಗಾರಮಯ ಕಲಾತ್ಮಕ ಕೆಲಸಕ್ಕೆ ಹೆಸರಾಗಿದೆ. ಸಪ್ತಸ್ವರಗಳನ್ನು ಧ್ವನಿಸುವ ಕಂಬಗಳು, ವಿಶಾಲವಾದ ಕಲ್ಯಾಣಮಂಟಪಗಳು, ಕಲ್ಲಿನಲ್ಲಿ ಕೆತ್ತಿದ ರಥ ಈ ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.

ಕೃಷ್ಣದೇವರಾಯ ನಿರ್ಮಿಸಿದ ಮಹಾನವಮಿ ದಿಬ್ಬದಲ್ಲಿ ನವರಾತ್ರಿ ಉತ್ಸವ ನಡೆಯುತ್ತಿತ್ತು. ರಾಜಧಾನಿಗೆ ಬಹಳ ದೂರದ ಪ್ರಾಂತಗಳಿಂದಲೂ ರಾಜರು, ಮಂಡಲೇಶ್ವರರೂ ಚಕ್ರವರ್ತಿಯ ಆಜ್ಞೆಯ ಮೇರೆಗೆ ಬಂದು ಸೇರುತ್ತಿದ್ದರೆಂದು ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕ್ ಹೇಳುತ್ತಾನೆ. ಕಮಲ್ ಮಹಲ್, ಗಜಶಾಲೆ, ರಾಣಿ ಸ್ನಾನಗೃಹ ಇಂಡೋ–ಮುಸ್ಲಿಂ ಶೈಲಿಯ ಉತ್ತಮ ಕಟ್ಟಡಗಳಾಗಿವೆ. ಲಕ್ಷ್ಮೀನರಸಿಂಹ, ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಉದ್ದಾನ ವೀರಭದ್ರನ ಶಿಲ್ಪಗಳು ಆಕರ್ಷಕವಾಗಿವೆ. ವಿಜಯನಗರ ಸಾಮ್ರಾಜ್ಯದ ಕಾಲದ ಹಂಪಿಯ ಕೋಟೆಯು ಭದ್ರವಾದ 7 ಸುತ್ತಿನಿಂದ ಕೂಡಿತ್ತು. ಪ್ರಸ್ತುತ 4 ಸುತ್ತುಗಳು ಉಳಿದುಕೊಂಡಿವೆ.

**ಸಂಗೀತ ಮತ್ತು ನೃತ್ಯ :** ವಿಜಯನಗರ ಸಾಮ್ರಾಜ್ಯದ ದೊರೆಗಳು ಲಲಿತಕಲೆಗಳಾದ ಸಂಗೀತ, ನೃತ್ಯ, ನಾಟಕ ಇತ್ಯಾದಿ ಕಲೆಗಳನ್ನು ಪೋಷಿಸಿ ಬೆಳೆಸಿದರು. ಕಲಾವಿದರಿಗೆ ಅರಮನೆ ಮತ್ತು ದೇವಾಲಯಗಳಲ್ಲಿ ಹೆಚ್ಚಿನ ಗೌರವವಿತ್ತು. ಪುರಂದರದಾಸರು, ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಕರ್ನಾಟಕ ಸಂಗೀತಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ನರ್ತಕಿಯರು ಸರ್ವಾಲಂಕಾರ ಭೂಷಿತರಾಗಿ ದೇವಾಲಯ ಮತ್ತು ಅರಮನೆಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದರು.



**ಕಲ್ಲಿನ ರಥ**

© KTBS NOT TO BE REPUBLISHED

## ಬಹಮನಿ ರಾಜ್ಯ

14 ನೆಯ ಶತಮಾನದಲ್ಲಿ ಕಂಡುಬಂದ ಮತ್ತೊಂದು ಬದಲಾವಣೆಯೇ ಬಹಮನಿ ರಾಜ್ಯದ ಉದಯ. 1347 ರಲ್ಲಿ ಅಲ್ಲಾಉದ್ದೀನ್ ಹಸನ್‌ಗಂಗು ಬಹಮನ್‌ಷಾನು ಇದನ್ನು ಸ್ಥಾಪಿಸಿದನು. 1347 ರಿಂದ 1686 ರವರೆಗೆ ಬಹಮನಿ ಹಾಗೂ ಶಾಹಿ ಮನೆತನಗಳು ಆಳ್ವಿಕೆ ಮಾಡಿದವು. ಈ ಮನೆತನಗಳಲ್ಲಿ ಒಂದನೇ ಮಹಮದ್‌ಷಾ, ಎರಡನೇ ಮಹಮದ್‌ಷಾ, ಫಿರೋಜ್‌ಷಾ, ಯುಸುಫ್ ಆದಿಲ್ ಖಾನ್, ಒಂದನೇ ಇಬ್ರಾಹಿಂ ಆದಿಲ್‌ಷಾ, ಎರಡನೇ ಇಬ್ರಾಹಿಂ ಆದಿಲ್‌ಷಾ ಪ್ರಮುಖರು. ಅಲ್ಲಾಉದ್ದೀನ್ ಹಸನ್‌ಗಂಗು ಬಹಮನ್‌ಷಾನ ಪುತ್ರ ಮಹಮದ್‌ಷಾ ಕಲಬುರಗಿ (ಕಲ್ಬುರ್ಗಿ)ಯ ಖ್ಯಾತ ವಿಶಾಲವಾದ ಜಾಮಿಯ ಮಸೀದಿಯನ್ನು 1367 ರಲ್ಲಿ ಕಟ್ಟಿಸಿದನು. ಇವನ ನಂತರದ ಫಿರೋಜ್‌ಷಾನು ಫಿರೋಜಾಬಾದ್ ಎಂಬ ಹೊಸ ರಾಜಧಾನಿ ಕಟ್ಟಿಸಿದನು. ನಕ್ಷತ್ರ ವೀಕ್ಷಣಾಲಯ ರಚಿಸಿದನು. ಈತ ಒಳ್ಳೆಯ ವಿದ್ವಾಂಸನಾಗಿದ್ದನು.

**ಮಹಮ್ಮದ್ ಗವಾನ (1411–1481) :** 1347 ರಿಂದ 1426 ರವರೆಗೆ ಕಲಬುರಗಿಯು ಬಹಮನಿಯರ ರಾಜಧಾನಿಯಾಗಿತ್ತು. ಈ ಕಾಲಘಟ್ಟದಲ್ಲಿ ಮಹಮ್ಮದ್ ಗವಾನನು ನಿಷ್ಠೆ, ನಿಸ್ವಾರ್ಥತೆಯಿಂದ ಆಳ್ವಿಕೆ ನಡೆಸಿದನು. ಪ್ರಧಾನಮಂತ್ರಿಯಾಗಿ ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದನು. ಕೈರೋದಲ್ಲಿ

ಇಸ್ಲಾಂ ಮತಶಾಸ್ತ್ರ ಮತ್ತು ಕಾನೂನು ಅಭ್ಯಸಿಸಿ, ಅರಬ್ಬೀ, ಪಾರ್ಸಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದನು. ಬಹಮನಿ ಸುಲ್ತಾನರಾದ ಹುಮಾಯೂನ್, ನಿಜಾಂ ಷಾ ಹಾಗೂ ಮೂರನೇ ಮಹಮದ್‌ಷಾನ ಆಳ್ವಿಕೆಯ ಕಾಲದಲ್ಲಿ ಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಇವನು ತನ್ನ ದಿಗ್ವಿಜಯಗಳು ಹಾಗೂ ಅಚ್ಚುಕಟ್ಟಾದ ಆಡಳಿತ ಕ್ರಮದಿಂದ ಬಹಮನಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದನು. ಗವಾನನು ಕೊಂಕಣ, ಗೋವ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು. ನಂತರ ಓರಿಸ್ಸಾದ ಮೇಲೆ ದಾಳಿ ಮಾಡಿ, ಅಲ್ಲಿಂದ ಕೊಂಡವೀಡು ಪ್ರದೇಶವನ್ನು ವಶಪಡಿಸಿಕೊಂಡನು. 1481 ರಲ್ಲಿ ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ಬಹಮನಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣನಾಗಿದ್ದ ಮಹಮ್ಮದ್ ಗವಾನನ ಮೇಲೆ ಶತ್ರುಗಳು ಕುತಂತ್ರದಿಂದ ರಾಜದ್ರೋಹದ ಆರೋಪ ಮಾಡಿ ಶಿರಚ್ಛೇದನಕ್ಕೆ ಕಾರಣರಾದರು. ಇವನ ನಂತರ ರಾಜ್ಯವು ದುರ್ಬಲವಾಗಿ ಐದು ಭಾಗಗಳಲ್ಲಿ ಒಡೆಯಿತು.




NOT TO BE REPUBLISHED @KTBS

**ಬಹಮನಿಯು ಐದು ರಾಜ್ಯಗಳಾಗಿ ವಿಂಗಡಣೆ (1518)**

| ಅಹಮದ್ ನಗರ | ವಿಜಯಪುರ | ಬಿರಾರ್ | ಬೀದರ್ | ಗೋಲ್ಕೊಂಡ |
|---|---|---|---|---|
| ↓ | ↓ | ↓ | ↓ | ↓ |
| (ನಿಜಾಮ್ ಷಾಹಿ) | (ಆದಿಲ್ ಷಾಹಿ) | (ಇಮಾದ್ ಷಾಹಿ) | (ಬರೀದ್ ಷಾಹಿ) | (ಕುತುಬ್ ಷಾಹಿ) |

**ಎರಡನೇ ಇಬ್ರಾಹಿಂ ಆದಿಲ್ ಷಾ (1580–1627) :**

ಆದಿಲ್ ಷಾಹಿಗಳಲ್ಲಿ ಶ್ರೇಷ್ಠ ದೊರೆಯಾದ ಎರಡನೇ ಇಬ್ರಾಹಿಂನು ತನ್ನ ಒಂಬತ್ತನೆಯ ವಯಸ್ಸಿನಲ್ಲಿ ಸಿಂಹಾಸನಾರೋಹಣ ಮಾಡಿದನು. ಈತನ ಆಡಳಿತಾವಧಿಯು 47 ವರ್ಷಗಳಾಗಿದ್ದು, ಚರಿತ್ರಾರ್ಹ ಘಟನೆಗಳನ್ನು ಒಳಗೊಂಡಿದೆ. ಈತನು ರಾಜಕೀಯವಾಗಿ ವಿಜಯಪುರವನ್ನು ವೈಭವದ ಉತ್ತುಂಗ ಶಿಖರಕ್ಕೆ ಏರಿಸಿ, ದಕ್ಷ ಆಡಳಿತವನ್ನು ನೀಡಿ, ಕಲೆ, ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದನು.

"ಕಿತಾಬ್–ಏ–ನವರಸ" ಎಂಬ ಗ್ರಂಥವನ್ನು ಈತನು ಸರಸ್ವತಿ, ಗಣೇಶ ಮತ್ತು ನರಸಿಂಹರ ಸ್ತುತಿಯೊಂದಿಗೆ ಆರಂಭಿಸಿದ್ದು ಇದರ ವೈಶಿಷ್ಟ್ಯವಾಗಿದೆ. ಇದರಲ್ಲಿ ಮಹಮ್ಮದ್ ಪೈಗಂಬರರ ಬಗ್ಗೆಯೂ ಸ್ತುತಿಗಳಿವೆ. ಈ ಗ್ರಂಥವು ಇಬ್ರಾಹಿಂನ ವಿದ್ವತ್ತು, ಘನತೆ ಹಾಗೂ ಮತೀಯ ಉದಾರತೆಗೆ ಸಾಕ್ಷಿಯಾಗಿದೆ.

**ಬಹಮನಿ ಸುಲ್ತಾನರ ಸಾಂಸ್ಕೃತಿಕ ಕೊಡುಗೆಗಳು**

ಬಹಮನಿ ಹಾಗೂ ಷಾಹಿ ಸುಲ್ತಾನರು ಸುಮಾರು ಎರಡು ಶತಮಾನಗಳ ಕಾಲ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದರು. ಕರ್ನಾಟಕವು ಸೇರಿದಂತೆ ತಮಿಳುನಾಡಿನ ತಂಜಾವೂರಿನವರೆಗೆ ರಾಜ್ಯವನ್ನು ವಿಸ್ತರಿಸಿದ್ದರು. ಆಡಳಿತವನ್ನು ಇಸ್ಲಾಂ ಮತಶಾಸ್ತ್ರದ ಆಧಾರದ ಮೇಲೆ ವ್ಯವಸ್ಥೆಗೊಳಿಸಿದ್ದರು.

> ***ನಿಮಗಿದು ತಿಳಿದಿರಲಿ***
>
> *ಎರಡನೇಇಬ್ರಾಹಿಂ ಆದಿಲ್ ಷಾಹನು ಮಹಿಪತಿದಾಸರ ಭಾಗವತ ಪ್ರವಚನದಿಂದ ಆಕರ್ಷಿತನಾಗಿ ಅವರನ್ನು ಆಸ್ಥಾನದಲ್ಲಿ ಖಾಜಾಂದಾರ್ ಅಧಿಕಾರಿಯನ್ನಾಗಿ ನೇಮಿಸಿದನು.*

**ಆಡಳಿತ :** ಆಡಳಿತದಲ್ಲಿ ಕೇಂದ್ರ, ಪ್ರಾಂತೀಯ ಹಾಗೂ ಗ್ರಾಮ ಆಡಳಿತವೆಂಬ ಮೂರು ಭಾಗಗಳಿದ್ದವು. ಇವುಗಳಲ್ಲಿ ಕಂದಾಯ ನ್ಯಾಯ ಮತ್ತು ಸೈನ್ಯ ಆಡಳಿತಗಳಿದ್ದವು. ಕೇಂದ್ರ ಸರ್ಕಾರದಲ್ಲಿ ಸುಲ್ತಾನನೇ ಆಡಳಿತದ ಮುಖ್ಯಸ್ಥನಾಗಿರುತ್ತಿದ್ದ. ಮಂತ್ರಿಮಂಡಲಕ್ಕೆ 'ಮಜ್ಲಿಸ್–ಇ–ಇಲ್ವಿತ್' ಎಂದು ಕರೆಯುತ್ತಿದ್ದರು. ಉನ್ನತ ಅಧಿಕಾರಿಗಳು, ದಂಡನಾಯಕರು, ಉಲೇಮರು, ಅಮೀರರು ಸುಲ್ತಾನನ ಆಪ್ತರು ಮತ್ತು ಸಂಬಂಧಿಗಳು ಆಗಿದ್ದರು.

ಗವಾನನು ರಾಜ್ಯದಲ್ಲಿ ಹಿಂದೆ ಇದ್ದ ನಾಲ್ಕು ತರಫ್ (ಪ್ರಾಂತ್ಯ) ಗಳನ್ನು ಎಂಟು ಘಟಕಗಳಾಗಿ ವಿಂಗಡಿಸಿ, ಪ್ರಾಂತಗಳನ್ನು 15 ಸರ್ಕಾರಗಳಾಗಿ ವಿಂಗಡಿಸಲಾಗಿತ್ತು. ಸುಭೇದಾರ ಎಂಬ ಅಧಿಕಾರಿಯು

© KTBS NOT TO BE REPUBLISHED

ಸರ್ಕಾರಗಳಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿದ್ದನು. ಸರ್ಕಾರಗಳನ್ನು ಪರಗಣಗಳಾಗಿ ವಿಂಗಡಿಸಲಾಗಿತ್ತು. ಕೊತ್ವಾಲ್, ದೇಶಮುಖ್ ಮತ್ತು ದೇಸಾಯಿ ಎಂಬ ಅಧಿಕಾರಿಗಳು ಪರಗಣದ ಅಧಿಕಾರಿಗಳಾಗಿದ್ದರು. ಆಡಳಿತದ ಕೊನೆಯ ಘಟಕವಾದ ಗ್ರಾಮಗಳಲ್ಲಿ ಪಟೇಲ, ಕುಲಕರ್ಣಿ ಮತ್ತು ಕಾವಲುಗಾರ ಎಂಬ ಅಧಿಕಾರಿಗಳಿದ್ದರು. ಗ್ರಾಮಾಡಳಿತ ಘಟಕಗಳು ಸ್ವಾಯತ್ತ ಸಂಸ್ಥೆಯಾಗಿದ್ದವು.

**ಕಂದಾಯ, ಸೈನ್ಯ ಮತ್ತು ನ್ಯಾಯಾಡಳಿತ :** ಅಮೀರ್–ಏ–ಜುಮ್ಲಾರು ಕಂದಾಯದ ಮುಖ್ಯಸ್ಥರಾಗಿದ್ದರು. ಭೂಕಂದಾಯವು ರಾಜ್ಯಾದಾಯದ ಮೂಲವಾಗಿತ್ತು. ಉತ್ಪತ್ತಿಯ $\frac{1}{3}$ ರಿಂದ $\frac{1}{2}$ ನೇ ಭಾಗದಷ್ಟನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ಮನೆ, ಗಣಿ, ಹೊಗೆಸೊಪ್ಪು, ಹುಲ್ಲುಗಾವಲು, ವ್ಯಾಪಾರ, ವೃತ್ತಿ ತೆರಿಗೆ ಸೇರಿದಂತೆ 50 ಬಗೆಯ ತೆರಿಗೆಗಳಿದ್ದವು. ತೆರಿಗೆಯಿಂದ ಬಂದ ಹಣವನ್ನು ಅರಮನೆ, ಯುದ್ಧ, ಅಂಗರಕ್ಷಕರು, ಕೋಟೆ ಮತ್ತು ಇತರ ಕಟ್ಟಡಗಳ ನಿರ್ಮಾಣಕ್ಕೆ ಬಳಸುತ್ತಿದ್ದರು.

ಬಹಮನಿ ರಾಜ್ಯವು ಸೈನಿಕ ಬಲದ ಮೇಲೆ ನಡೆಯುತ್ತಿತ್ತು. ಸೈನ್ಯದ ಮೇಲಿನ ವೆಚ್ಚ ಬಹಳವಾಗಿತ್ತು. ಇವರ ರಾಜ್ಯದಲ್ಲಿ ನಾಲ್ಕು ಬಗೆಯ ಸೈನಿಕ ವರ್ಗಗಳಿದ್ದವು. ಖಾಯಂ ಸೈನ್ಯ, ಯುದ್ಧಕಾಲದಲ್ಲಿ ನೇಮಿಸಿಕೊಳ್ಳುತ್ತಿದ್ದ ಸೈನ್ಯ, ಸುಲ್ತಾನ ಹಾಗೂ ಕೋಟೆಯ ಕಾವಲುಪಡೆಗಳು. ಪದಾತಿ, ಅಶ್ವದಳ, ಗಜದಳ ಮತ್ತು ಸಿಡಿಮದ್ದು ಪಡೆಗಳು ಸೈನ್ಯದ ಮುಖ್ಯ ವಿಭಾಗಗಳಾಗಿದ್ದವು. ಆದಿಲ್‌ಶಾಹಿ ರಾಜ್ಯದ ಅನೇಕ ಕೋಟೆಗಳಲ್ಲಿ ಬಿಜಾಪುರದ ಕೋಟೆ ಹೆಚ್ಚು ಸುಭದ್ರವಾಗಿತ್ತು.

ಸುಲ್ತಾನನು ರಾಜ್ಯದ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು. ರೂಢಿ, ಸಂಪ್ರದಾಯ ಮತ್ತು ಇಸ್ಲಾಂ ಅನುಸಾರವಾಗಿ ನ್ಯಾಯಪಾಲನೆ ಮಾಡುತ್ತಿದ್ದ. ಖಾಜಿಗಳು, ಹಿರಿಯ ಅಧಿಕಾರಿಗಳು ನ್ಯಾಯಪಾಲನೆಯಲ್ಲಿ ಸುಲ್ತಾನನಿಗೆ ಸಹಕರಿಸುತ್ತಿದ್ದರು. ಇವರ ದಕ್ಷ ಆಡಳಿತದಿಂದಾಗಿ ರಾಜ್ಯವು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿತು.

**ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಗಳು :** ಕೃಷಿ, ಗ್ರಾಮ ಜೀವನದ ಮುಖ್ಯ ಉದ್ಯೋಗವಾಗಿತ್ತು. ನೇಕಾರಿಕೆ, ಸಕ್ಕರೆ, ಬೆಲ್ಲ ತಯಾರಿಕೆ, ನೂಲುವುದು, ನೇಯುವುದು, ಚರ್ಮಗಾರಿಕೆ, ಕುಂಬಾರಿಕೆ, ಬಡಗಿತನ, ಅಕ್ಕಸಾಲಿ, ಸುಗಂಧಿ, ಶಿಲ್ಪಗಾರಿಕೆ ಮುಂತಾದ ಉದ್ಯೋಗಗಳು ಅಸ್ತಿತ್ವದಲ್ಲಿದ್ದವು.

> ***ನಿಮಗಿದು ತಿಳಿದಿರಲಿ***
>
> *ಯುಸುಫ್ ಆದಿಲ್‌ಷಹನ ಹೆಂಡತಿ ಬೀಬಿಜಿ ಖಾನುಂ, ದಿಲ್‌ಷ್ ಅಘಾ, ಚಾಂದ್ ಬೀಬಿ, ಶಹರ್ ಭಾನು ಬೇಗಂರು ಈ ಮನೆತನದ ಪ್ರಖ್ಯಾತ ಮಹಿಳೆಯರಾಗಿದ್ದರು.*

ಧಾಬೋಲ್, ರಾಜಾಪುರ, ಚೌಲ ಮತ್ತು ಗೋವಾ ಬಂದರುಗಳಾಗಿದ್ದವು. ರೇಷ್ಮೆ, ಮದ್ಯ, ಚಿನ್ನ, ಬೆಳ್ಳಿ, ತಾಮ್ರ, ತವರ, ಸೀಸ, ಗಾಜು ಮತ್ತು ಕುದುರೆಗಳು ಪ್ರಮುಖ ಆಮದುಗಳಾಗಿದ್ದವು. ವ್ಯಾಪಾರ ಹಾಗೂ ವೃತ್ತಿ ಸಂಘಗಳು ಅಸ್ತಿತ್ವದಲ್ಲಿದ್ದವು. 'ಹೊನ್ನು' ಎಂಬ ಬಂಗಾರದ ನಾಣ್ಯ, 'ಲಾರಿ', 'ಟಂಕ' ಎಂಬ ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದವು.

ಸಮಾಜದಲ್ಲಿ ಅವಿಭಕ್ತ ಪಿತೃಪ್ರಧಾನ ಕುಟುಂಬಗಳು ಮುಂದುವರೆದವು. ಜಾತಿ ಪದ್ಧತಿ ಹಾಗೂ ಬಹುಪತ್ನಿತ್ವಗಳು ರೂಢಿಯಲ್ಲಿದ್ದವು. ಭಕ್ತಿಪಂಥದ ಹರಿದಾಸರು ಮತ್ತು ಮುಸ್ಲಿಂ ಸೂಫಿ ಸಂತರು ಎರಡು ಸಮಾಜಗಳಲ್ಲೂ ಪ್ರೀತಿ ಬೆಳೆಸಲು ಪ್ರಯತ್ನಿಸಿದರು. ಮುಸ್ಲಿಂ ಸಮಾಜದಲ್ಲಿ ಸುನ್ನಿ, ಷಿಯಾ,

© KTBS NOT TO BE REPUBLISHED

ಸಯ್ಯದ್, ಶೇಖ್ ಮತ್ತು ಪಠಾಣ ಎಂಬ ವರ್ಗ ವಿಂಗಡಣೆಗಳಿದ್ದವು. ಮುಸ್ಲಿಂ ಸ್ತ್ರೀಯರಲ್ಲಿ ಪರ್ದಾ ಪದ್ಧತಿ ರೂಢಿಯಲ್ಲಿತ್ತು.

**ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪ :** ಇವರ ಶೈಕ್ಷಣಿಕ ನೀತಿಯು ಇಸ್ಲಾಂ ಸಂಸ್ಕೃತಿಯನ್ನು ಬೆಳೆಸುವುದಾಗಿತ್ತು. ಮಕ್ತಬ ಎಂಬ ಶಾಲೆಗಳಿದ್ದವು. ಇವು ಮಸೀದಿಗಳ ನಿಯಂತ್ರಣದಲ್ಲಿದ್ದವು. ಮಕ್ತಬಗಳಲ್ಲಿ ಅಕ್ಷರ ಜ್ಞಾನ, ಮತ, ಕಾನೂನು, ಕಾವ್ಯ, ಅಲಂಕಾರಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ಮದರಸಾಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವು. ಸ್ವತಃ ವಿದ್ವಾಂಸನಾಗಿದ್ದ ಮಹಮ್ಮದ್ ಗವಾನ್ ಬೀದರ್‌ನಲ್ಲಿ ಇಸ್ಲಾಂ ಮತ ಮತ್ತು ಕಾನೂನಿನ ಶಿಕ್ಷಣವನ್ನು ಪ್ರೋತ್ಸಾಹಿಸಲು ಮದರಸ (ಮಹಾವಿದ್ಯಾಲಯ) ವನ್ನು ಸ್ಥಾಪಿಸಿದನು. ಇದು ಸುಮಾರು 242 ಅಡಿ ಉದ್ದ, 222 ಅಡಿ ಅಗಲ ಮತ್ತು 56 ಅಡಿ ಎತ್ತರವಿರುವ ಮೂರು ಅಂತಸ್ತಿನ ದಖ್ಖನಿನ ಶೈಲಿಯ ಭವ್ಯ ಕಟ್ಟಡ. ಇಲ್ಲಿ ಸುಮಾರು 3000 ಹಸ್ತ ಪ್ರತಿಗಳುಳ್ಳ ಗ್ರಂಥಾಲಯವೂ ಇತ್ತು. ಇದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಸಾಂಪ್ರಾದಾಯಿಕ ವ್ಯಕ್ತಿಗಳಿಗೆ ತಂಗುದಾಣವೂ ಆಗಿತ್ತು. ಇಲ್ಲಿ ಖಗೋಳಶಾಸ್ತ್ರ, ವ್ಯಾಕರಣ, ಗಣಿತ, ತತ್ವಶಾಸ್ತ್ರ, ಇತಿಹಾಸ, ರಾಜನೀತಿಗಳ ಅಧ್ಯಯನ ನಡೆಯುತ್ತಿತ್ತು.

ಸುಲ್ತಾನರು ಇಂಡೋ ಸಾರ್ಸೆನಿಕ್ ಶೈಲಿಯ ವಾಸ್ತುಶಿಲ್ಪ ಬೆಳೆಸಿದರು. ಒಂದನೆಯ ಅಲಿ ಆದಿಲ್ ಷಾನು ನಿರ್ಮಾಣ ಮಾಡಿದ ಜಾಮಿಯ ಮಸೀದಿಯು ಈ ಕಾಲದ ಒಂದು ಮುಖ್ಯ ಸ್ಮಾರಕವಾಗಿದೆ. ಇಬ್ರಾಹಿಂ ರೋಜಾ, ಗೋಲ್‌ಗುಂಬಜ್, ಗಗನ್‌ಮಹಲ್, ಅಸಾರ್ ಮಹಲ್‌ಗಳು ಇವರ ಪ್ರಮುಖ ಸ್ಮಾರಕಗಳಾಗಿವೆ. ಈ ಸ್ಮಾರಕಗಳಿಂದಾಗಿ ಆದಿಲ್ ಷಾಹಿಗಳು ವಿಶ್ವವಿಖ್ಯಾತರಾಗಿದ್ದಾರೆ. ವಿಶ್ವದ ಶ್ರೇಷ್ಠ ಕಟ್ಟಡಗಳಲ್ಲಿ ವಿಜಯಪುರದಲ್ಲಿರುವ ಗೋಲ್‌ಗುಂಬಜ್ ಒಂದಾಗಿದೆ. 1800 ಚದರ ಅಡಿ ವಿಸ್ತೀರ್ಣವನ್ನು ಒಳಗೊಂಡಿದೆ. ನಾಲ್ಕು ಮೂಲೆಗಳಲ್ಲಿ ಏಳು ಅಂತಸ್ತಿನ ಒಂದೊಂದು ಮಿನಾರ್‌ಗಳಿವೆ. ಮಧ್ಯದಲ್ಲಿ ಬೃಹತ್ ಗುಮ್ಮಟವಿದೆ.

© KTBS NOT TO BE REPUBLISHED

***ಗೋಲ್‌ಗುಂಬಜ್ :*** *ನಮ್ಮ ರಾಜ್ಯದ ವಿಜಯಪುರದಲ್ಲಿ ಈ ಸ್ಮಾರಕವಿದೆ. ಇದನ್ನು ಮಹಮ್ಮದ್ ಆದಿಲ್ ಷಾ ನಿರ್ಮಿಸಿದನೆಂದು ತಿಳಿದಿದೆ. ಇದರ ಕಟ್ಟಡ ನಿರ್ಮಾಣ ಕಾರ್ಯವು ಸುಮಾರು 1626ರಲ್ಲಿ ಪ್ರಾರಂಭವಾಗಿ 1656ರಲ್ಲಿ ಮುಗಿಯಿತೆಂದು ತಿಳಿದಿದೆ. ಇದು ಸುಮಾರು 51 ಮೀ. ಎತ್ತರವನ್ನು ಹೊಂದಿದ್ದು ವಿಶಾಲವಾದ ಗುಮ್ಮಟವಾಗಿರುತ್ತದೆ. ಗುಮ್ಮಟದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳಿಂದ ಮೇಲೆ ಹತ್ತಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗುಮ್ಮಟದ ಗೋಲಾಕಾರದ ಗೋಡೆಯಲ್ಲಿ ಒಂದು ಬದಿಯಲ್ಲಿ ನಿಂತು ಪಿಸುಗುಟ್ಟಿದರೆ ಮತ್ತೊಂದು ಬದಿಯಲ್ಲಿ ಕಿವಿಕೊಟ್ಟು ಆಲಿಸಬಹುದಾಗಿರುವುದು ಇದರ ವಿಶೇಷತೆಯಾಗಿದೆ. ಇದು ಭಾರತದ ಅತ್ಯಂತ ದೊಡ್ಡ ಗುಮ್ಮಟವೂ ಆಗಿದೆ.*



**ಗೋಲ್‌ಗುಂಬಜ್**



ಜಾಮಿಯಾ ಮಸೀದಿ



ಬೀದರ್ ಕೋಟೆ

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ವರ್ಷ __________ .
2. 'ಮಧುರಾವಿಜಯಂ' ಬರೆದ ಕವಯತ್ರಿ __________ .
3. ಪ್ರೌಢದೇವರಾಯನ ಮಂತ್ರಿ __________ .
4. 'ಅಮುಕ್ತ-ಮಾಲ್ಯದ' ಕೃತಿಯನ್ನು ತೆಲುಗಿನಲ್ಲಿ ರಚಿಸಿದ ದೊರೆ __________ .
5. ಬೀದರಿನಲ್ಲಿ ಮದರಸವನ್ನು ಸ್ಥಾಪಿಸಿದವನು ________ .
6. 'ಕಿತಾಬ್ ಏ ನವರಸ' ಗ್ರಂಥವನ್ನು ಬರೆದವನು _______ .

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

7. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳನ್ನು ಹೆಸರಿಸಿ.
8. ಎರಡನೆಯ ದೇವರಾಯನ ಸಾಧನೆಗಳೇನು ?
9. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಎದುರಿಸಿದ ಸಮಸ್ಯೆಗಳನ್ನು ತಿಳಿಸಿ.
10. ಅರ್ಥ ವ್ಯವಸ್ಥೆ ಮತ್ತು ಸಮಾಜಕ್ಕೆ ವಿಜಯನಗರದ ಕೊಡುಗೆಗಳೇನು?
11. ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಬರೆಯಿರಿ.
12. ಮಹಮ್ಮದ್ ಗವಾನನು ಬಹಮನಿ ರಾಜ್ಯದಲ್ಲಿ ಉತ್ತಮ ಪ್ರಧಾನಮಂತ್ರಿ ಹೇಗೆ?

© KTBS NOT TO BE REPUBLISHED

13. ಬಹಮನಿ ಸುಲ್ತಾನರ ಆಡಳಿತ, ಕಂದಾಯ ವ್ಯವಸ್ಥೆಯನ್ನು ತಿಳಿಸಿ.

14. ಬಹಮನಿ ಸುಲ್ತಾನರ ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

## III. ಚಟುವಟಿಕೆಗಳು.

1. ಹಂಪಿಯಲ್ಲಿರುವ ವಿವಿಧ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ.
2. ಹಂಪಿಯಲ್ಲಿರುವ ಮಹಾನವಮಿ ದಿಬ್ಬದಲ್ಲಿ ಆಚರಿಸುತ್ತಿದ್ದ ವಿಜಯದಶಮಿಯ ಬಗ್ಗೆ ವಿವಿಧ ಗ್ರಂಥಗಳ ಅಧ್ಯಯನ ನಡೆಸಿ.
3. ತೆನಾಲಿ ರಾಮಕೃಷ್ಣರ ಕಥೆಗಳನ್ನು ನಿಮ್ಮ ಹಿರಿಯರಿಂದ ತಿಳಿದುಕೊಂಡು ಬರೆಯಿರಿ.

## IV. ಯೋಜನೆಗಳು.

1. ಹಂಪಿಗೆ ಭೇಟಿ ನೀಡಿ ಅಲ್ಲಿನ ಸ್ಮಾರಕಗಳ ಬಗ್ಗೆ ಪ್ರಬಂಧ ಬರೆಯಿರಿ.
2. ಹಂಪಿಯಲ್ಲಿನ ವಿಜಯನಗರ ಕಾಲದ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಪ್ರಬಂಧ ರಚಿಸಿ.

*****

@KTBS
NOT TO BE REPUBLISHED

# ರಾಜ್ಯಶಾಸ್ತ್ರ

## ಅಧ್ಯಾಯ – 5

# ನಮ್ಮ ಸಂವಿಧಾನ

E5R3N9

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸಂವಿಧಾನ ರಚನಾ ಸಮಿತಿ.
- ಸಂವಿಧಾನದ ಕರಡು ಸಮಿತಿ.
- ಸಂವಿಧಾನದ ಪ್ರಸ್ತಾವನೆ.
- ಸಂವಿಧಾನದ ಲಕ್ಷಣಗಳು.
- ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯನೀತಿ ನಿರ್ದೇಶಕ ತತ್ವಗಳು.

ನಮ್ಮ ದೇಶವು ಸ್ವಾತಂತ್ರ್ಯಾನಂತರ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಈ ಸಮಯದಲ್ಲಿ ಪಾಕಿಸ್ತಾನದಿಂದ ವಲಸೆ ಬಂದ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು, ದೇಶೀಯ ಸಂಸ್ಥಾನಗಳ ವಿಲೀನೀಕರಣ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಮುಂತಾದ ಸವಾಲುಗಳಿದ್ದವು. ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಅಂದಿನ ಕೇಂದ್ರ ಗೃಹಸಚಿವರಾಗಿದ್ದ ಸರ್ದಾರ್‌ವಲ್ಲಭಭಾಯಿ ಪಟೇಲರು ಯಶಸ್ವಿಯಾಗಿ ಸಾಧಿಸಿದರು. ದೇಶದ ವ್ಯವಸ್ಥಿತ ಆಡಳಿತ ನಿರ್ವಹಣೆಗಾಗಿ ಅವಶ್ಯಕವಾದ ಕಾನೂನುಗಳನ್ನು ರೂಪಿಸುವುದು ಮತ್ತು ಸಂವಿಧಾನದ ರಚನೆಯಂತಹ ಸವಾಲನ್ನು ಕೂಡಾ ಸಮರ್ಪಕವಾಗಿ ನಿರ್ವಹಿಸಲಾಯಿತು. ಇಂತಹ ಸಂವಿಧಾನದ ರಚನೆ, ಅದರ ಲಕ್ಷಣಗಳು ಮತ್ತು ಅದರಲ್ಲಿ ಪ್ರಸ್ತಾಪಿತವಾಗಿರುವ ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ರಾಜ್ಯನೀತಿ ನಿರ್ದೇಶಕ ತತ್ವಗಳ ಬಗ್ಗೆ ತಿಳಿಯೋಣ.

**ನಿಮಗಿದು ತಿಳಿದಿರಲಿ :**

**ಕ್ಯಾಬಿನೆಟ್ ನಿಯೋಗದ ಸದಸ್ಯರು :**

ಲಾರ್ಡ್ ಫೆಥಿಕ್ ಲಾರೆನ್ಸ್ – ಭಾರತದ ವ್ಯವಹಾರಗಳ ಕಾರ್ಯದರ್ಶಿ, ಸರ್ ಸ್ಟಾಫೋರ್ಡ್ ಕ್ರಿಪ್ಸ್ – ವಾಣಿಜ್ಯ ಮಂಡಳಿಯ ಅಧ್ಯಕ್ಷರು, ಎ. ವಿ. ಅಲೆಗ್ಸಾಂಡರ್ – ನೌಕಾ ಪಡೆಯ ಮುಖ್ಯಸ್ಥರು

**ಭಾರತ ಸಂವಿಧಾನ ರಚನಾ ಸಭೆ :** ಯಾವುದೇ ರಾಷ್ಟ್ರದಲ್ಲಿ ಸರ್ಕಾರವು ಕೆಲವು ಮೂಲಭೂತ ತತ್ವಗಳು ಮತ್ತು ನಿಯಮಗಳಿಗೆ ಅನುಗುಣವಾಗಿ ಆಡಳಿತ ನಿರ್ವಹಿಸುತ್ತದೆ. ಇಂತಹ ತತ್ವಗಳು ಮತ್ತು ನಿಯಮಗಳ ಸಂಕಲನವನ್ನು ಸಂವಿಧಾನ ಎಂದು ಕರೆಯಲಾಗುತ್ತದೆ. ಸಂವಿಧಾನವು ಒಂದು ರಾಷ್ಟ್ರದ ಮೂಲಭೂತ ಕಾನೂನು. ಸಂವಿಧಾನ ರಚನಾ ಸಭೆಯೊಂದರ ರಚನೆಗೆ ಸಂಬಂಧಿಸಿದಂತೆ ಮೋತಿಲಾಲ್ ನೆಹರು ಸಮಿತಿಯ ಶಿಫಾರಸ್ಸು ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕರಾಚಿ ಅಧಿವೇಶನದ ನಿರ್ಣಯಗಳು ಒತ್ತಾಯಿಸಿದವು. ಕ್ಯಾಬಿನೆಟ್ ನಿಯೋಗದ ಶಿಫಾರಸ್ಸಿನ ಮೇರೆಗೆ 1946ರ ಜುಲೈನಲ್ಲಿ ಸಂವಿಧಾನ ರಚನಾ ಸಭೆಯನ್ನು ರಚಿಸಲಾಯಿತು.

© KTBS NOT TO BE REPUBLISHED

ಸಂವಿಧಾನದ ರಚನಾ ಸಭೆಯ ಮೊದಲ ಸಭೆ ಡಿಸೆಂಬರ್ 9, 1946 ರಂದು ನಡೆಯಿತು. ಡಿಸೆಂಬರ್ 11, 1946 ರಂದು ಡಾ. ರಾಜೇಂದ್ರ ಪ್ರಸಾದ್‌ರವರನ್ನು ಸಂವಿಧಾನ ರಚನಾ ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಈ ಸಭೆಯಲ್ಲಿ ಜವಾಹರ್‌ಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ. ಬಿ.ಆರ್. ಅಂಬೇಡ್ಕರ್, ಮೌಲಾನಾ ಅಬುಲ್‌ಕಲಾಂ ಆಜಾದ್, ಸಿ. ರಾಜಗೋಪಾಲಾಚಾರಿ, ಕೆ.ಎಂ. ಮುನ್ಷಿ, ಟಿ.ಟಿ. ಕೃಷ್ಣಮಾಚಾರಿ, ಶ್ರೀಮತಿ ಸರೋಜಿನಿ ನಾಯ್ಡು, ಶ್ರೀಮತಿ ಸುಚೇತಾ ಕೃಪಲಾನಿ, ಕರ್ನಾಟಕದ ಎಸ್. ನಿಜಲಿಂಗಪ್ಪ, ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಟಿ. ಸಿದ್ಧಲಿಂಗಯ್ಯ ಮುಂತಾದವರು ಭಾಗವಹಿಸಿದ್ದರು.


ಡಾ. ರಾಜೇಂದ್ರ ಪ್ರಸಾದ್

**ಸಂವಿಧಾನದ ಕರಡು ಸಮಿತಿ :** ಸಂವಿಧಾನ ರಚನಾ ಸಭೆಯು ರಾಷ್ಟ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವರವಾಗಿ ಪರಿಶೀಲಿಸಲು 22 ಸಮಿತಿಗಳು ಹಾಗೂ ಕೆಲವು ಉಪಸಮಿತಿಗಳನ್ನು ರಚಿಸಿತು. ಅವುಗಳಲ್ಲಿ ಮುಖ್ಯವಾದುದು ಕರಡು ಸಮಿತಿ. ಡಾ. ಬಿ.ಆರ್.ಅಂಬೇಡ್ಕರ್‌ರವರು ಅದರ ಅಧ್ಯಕ್ಷರಾಗಿದ್ದರು. ಇವರು ಸಂವಿಧಾನ ರಚನೆಗೆ ನೀಡಿದ ಕೊಡುಗೆಯನ್ನು ಆಧರಿಸಿ ಅವರನ್ನು **'ಸಂವಿಧಾನ ಶಿಲ್ಪಿ'** ಎಂದು ಕರೆಯಲಾಗಿದೆ. ಈ ಸಮಿತಿಯಲ್ಲಿ ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಕೆ.ಎಂ. ಮುನ್ಷಿ, ಟಿ.ಟಿ. ಕೃಷ್ಣಮಾಚಾರಿ ಮುಂತಾದ ಮುತ್ಸದ್ಧಿಗಳು ಸದಸ್ಯರುಗಳಾಗಿದ್ದರು.


ಡಾ. ಬಿ.ಆರ್. ಅಂಬೇಡ್ಕರ್

**ಸಂವಿಧಾನದ ರಚನೆ :** ಸಂವಿಧಾನ ರಚನಾ ಸಭೆ ಈ ಅವಧಿಯಲ್ಲಿ 145 ಸಭೆಗಳನ್ನು ನಡೆಸಿತ್ತು. ಈ ಸಭೆ ನಿರಂತರವಾಗಿ ಕಾರ್ಯನಿರ್ವಹಿಸಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿತು ಮತ್ತು ಕರಡು ಸಂವಿಧಾನವನ್ನು ರಚಿಸಿತು. ಬ್ರಿಟೀಷ್ ಸರ್ಕಾರ ಹೊರಡಿಸಿದ 1909, 1919 ಮತ್ತು 1935ರ ಕಾಯಿದೆಗಳು, ಬ್ರಿಟನ್ನಿನ ಸಂಸದೀಯ ವ್ಯವಸ್ಥೆ, ಅಮೆರಿಕಾದ ಬಿಲ್ ಆಫ್ ರೈಟ್ಸ್, ಐರ್ಲೆಂಡಿನ ಸಾಮಾಜಿಕ ನಿರ್ದೇಶಕ ತತ್ವಗಳು ಮುಂತಾದವುಗಳನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. ಅಂತಿಮವಾಗಿ ನಮ್ಮ ಸಂವಿಧಾನವು ನವೆಂಬರ್ 26, 1949 ರಂದು ಅಂಗೀಕರಿಸಲ್ಪಟ್ಟು ಜನವರಿ 26, 1950 ರಂದು ಜಾರಿಗೆ ಬಂದಿತು. ಈ ದಿನವನ್ನು ಗಣರಾಜ್ಯ ದಿನವನ್ನಾಗಿ ಆಚರಿಸುತ್ತೇವೆ.

**ನಿಮಗಿದು ತಿಳಿದಿರಲಿ :**

- 1929ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನದಲ್ಲಿ ಭಾರತ ಪೂರ್ಣಸ್ವರಾಜ್ಯ ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ನಿರ್ಣಯದಂತೆ 1930ರ ಜನವರಿ 26 ರಂದು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಯಿತು. ಅದರ ಸವಿನೆನಪಿಗಾಗಿ ನಮ್ಮ ಸಂವಿಧಾನವನ್ನು ಜನವರಿ 26, 1950 ರಂದು ಜಾರಿಗೆ ತರಲಾಯಿತು.
- ಬೆನಗಲ್ ನರಸಿಂಗರಾವ್‌ರವರು ಸಂವಿಧಾನ ರಚನಾ ಸಭೆಯ ಮುಖ್ಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದರು. ಇವರು ನೆದರ್‌ಲ್ಯಾಂಡ್‌ನ ದಿ ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿಯೂ ಸೇವೆ ಸಲ್ಲಿಸಿದರು. ಇವರು ಜಮ್ಮು ಮತ್ತು ಕಾಶ್ಮೀರ ದೇಶೀಯ ಸಂಸ್ಥಾನದ ಪ್ರಧಾನಮಂತ್ರಿಯಾಗಿದ್ದರು. ಇವರು ಕನ್ನಡಿಗರೆಂಬುದು ನಮ್ಮ ಹೆಮ್ಮೆ.


ಬಿ.ಎನ್. ರಾವ್

- **ಸಂವಿಧಾನ ದಿನ** – ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನಾಂಕವಾದ ನವೆಂಬರ್ 26ನ್ನು ಸಂವಿಧಾನ ದಿನವನ್ನಾಗಿ 2015 ರಿಂದ ಆಚರಿಸಲಾಗುತ್ತಿದೆ.

**ಸಂವಿಧಾನದ ಪ್ರಸ್ತಾವನೆ**

ವಿಶ್ವದ ಇತರೆ ರಾಷ್ಟ್ರಗಳ ಸಂವಿಧಾನದಂತೆ ಭಾರತ ಸಂವಿಧಾನವು ತನ್ನದೇ ಆದ ಪ್ರಸ್ತಾವನೆಯನ್ನು ಹೊಂದಿದೆ. ಈ ಪ್ರಸ್ತಾವನೆ ನಮ್ಮ ಸಂವಿಧಾನದ ಮೂಲ ತತ್ವಗಳು ಹಾಗೂ ಪ್ರಜೆಗಳ ಧ್ಯೇಯೋದ್ದೇಶಗಳನ್ನು

©KTBS NOT TO BE REPUBLISHED

ಪ್ರತಿಬಿಂಬಿಸುತ್ತದೆ. ಆದ್ದರಿಂದ ಇದನ್ನು ಸಂವಿಧಾನದ ಕೈಗನ್ನಡಿ ಎಂದು ಕರೆಯಲಾಗುತ್ತದೆ. ಪ್ರಸ್ತಾವನೆಯು ನಮ್ಮ ಸಂವಿಧಾನಕ್ಕೆ ಪೀಠಿಕೆ ಇದ್ದಂತೆ. ಜವಾಹರ್‌ಲಾಲ್ ನೆಹರೂರವರು 13 ಡಿಸೆಂಬರ್ 1946ರಂದು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದ ಧ್ಯೇಯಗಳ ನಿರ್ಣಯವು ನಮ್ಮ ಸಂವಿಧಾನದ ಪ್ರಸ್ತಾವನೆಗೆ ಆಧಾರವಾಗಿದೆ. ಈ ನಿರ್ಣಯವನ್ನು ಸಂವಿಧಾನ ರಚನಾ ಸಭೆಯು 22 ಜನವರಿ 1947ರಂದು ಅಂಗೀಕರಿಸಿ ಅನುಮೋದಿಸಿತು.



## ಭಾರತದ ಸಂವಿಧಾನ

### ಪ್ರಸ್ತಾವನೆ

**ಭಾರತದ ಜನಗಳಾದ ನಾವು**
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;**
**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು**
**ಉಪಾಸನಾ ಸ್ವಾತಂತ್ರ್ಯ;**
**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
**ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ**
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,**
**ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

© KTBS NOT TO BE REPUBLISHED

## ಸಂವಿಧಾನದ ಪ್ರಸ್ತಾವನೆಯ ಮುಖ್ಯಾಂಶಗಳು

### 1. ಭಾರತದ ಪ್ರಜೆಗಳಾದ ನಾವು (We the people of india) :

ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾದ ತತ್ವಗಳು ಸಂವಿಧಾನದ ಚಿಂತನೆಯನ್ನು ಬಿಂಬಿಸುತ್ತವೆ. ಭಾರತದ ಪ್ರಜೆಗಳಾದ ನಾವು ಎಂಬುವುದರೊಂದಿಗೆ ಆರಂಭವಾಗುವ ಪ್ರಸ್ತಾವನೆಯು ಮಹತ್ವಪೂರ್ಣದ್ದಾಗಿದೆ. ಸಂವಿಧಾನ ರಚನಾ ಸಭೆಯ ಸದಸ್ಯರುಗಳು ಸಂವಿಧಾನವನ್ನು ರಚಿಸಿದ್ದರೂ ಅದರ ರಚನಾ ಅಧಿಕಾರವನ್ನು ಭಾರತದ ಪ್ರಜೆಗಳಿಂದ ಪಡೆದಿರುವರೆಂಬುದನ್ನು ಇದು ಸೂಚಿಸುತ್ತದೆ.

### 2. ಸಾರ್ವಭೌಮತ್ವ (Sovereignty) :

ಸಾರ್ವಭೌಮತ್ವವೇ ಸ್ವತಂತ್ರ ರಾಷ್ಟ್ರದ ಜೀವಾಳ, ಸಾರ್ವಭೌಮ ರಾಷ್ಟ್ರವಾದ ಭಾರತ ತನ್ನ ಆಂತರಿಕ ನೀತಿ ಮತ್ತು ವಿದೇಶಾಂಗ ನೀತಿಯನ್ನು ಬೇರೆ ರಾಷ್ಟ್ರಗಳ ಒತ್ತಡಕ್ಕೆ ಒಳಗಾಗದೆ ಸ್ವತಂತ್ರವಾಗಿ ರಚಿಸುತ್ತದೆ. ಇದು ರಾಷ್ಟ್ರದ ಸಾರ್ವಭೌಮ ಅಧಿಕಾರವನ್ನು ಎತ್ತಿಹಿಡಿಯುತ್ತದೆ.

### 3. ಸಮಾಜವಾದ (Socialism):

ಸಂವಿಧಾನದ ಆಶಯದ ಭಾಗವಾದ ಸಮಾಜವಾದಿ ಪರಿಕಲ್ಪನೆಯನ್ನು ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ. ಭಾರತವನ್ನು ಸುಖೀರಾಜ್ಯ ಮತ್ತು ಸಮಾಜವಾದಿ ರಾಷ್ಟ್ರವನ್ನಾಗಿ ಮಾಡುವುದು ಸಂವಿಧಾನದ ಪ್ರಧಾನ ಗುರಿಯಾಗಿದೆ. ಪ್ರಜಾಪ್ರಭುತ್ವದ ಮೂಲಕ ಸಮಾಜವಾದವನ್ನು ಜಾರಿಗೊಳಿಸಬಹುದೆಂದು ಇದು ತಿಳಿಸುತ್ತದೆ.

### 4. ಜಾತ್ಯತೀತತೆ (Secularlism):

ಎಲ್ಲಾ ಧರ್ಮಗಳನ್ನು ಸಮಾನತೆಯಿಂದ ಕಾಣಬೇಕೆಂಬುದನ್ನು ಪ್ರತಿಪಾದಿಸುವುದೇ ಜಾತ್ಯತೀತತೆ. ಇದು ಕೇವಲ ಲೌಕಿಕ ಜೀವನಕ್ಕೆ ಸಂಬಂಧಿಸಿದ್ದಾಗಿರದೇ ಆಧ್ಯಾತ್ಮಿಕ ಜೀವನಕ್ಕೂ ಸಂಬಂದಿಸಿದೆ ಎಂದು ಜವಾಹರಲಾಲ್‌ನೆಹರೂ ರವರು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಿನಲ್ಲಿ ಸರ್ವಧರ್ಮ ಸಮಭಾವದ ನೀತಿಯನ್ನು ಅನುಸರಿಸುವುದೇ ಜಾತ್ಯತೀತತೆಯಾಗಿದೆ.

### 5. ಪ್ರಜಾಸತ್ತಾತ್ಮಕತೆ (Democratic):

ಪ್ರಜಾಪ್ರಭುತ್ವವು ಒಂದು ಸರ್ಕಾರ ಪದ್ಧತಿಯಾಗಿದೆ. ಪ್ರೋ. ಜಾನ್ ರಾಬರ್ಟ್ ಸೀಲೆ ಅವರ ಪ್ರಕಾರ "ಪ್ರತಿಯೊಬ್ಬರಿಗೂ ಪಾಲಿರುವ ಒಂದು ಸರ್ಕಾರವೇ ಪ್ರಜಾಪ್ರಭುತ್ವ" ಎಂದಿದ್ದಾರೆ. ಭಾರತದಲ್ಲಿಯು ಸಹ ಪ್ರಜಾಪ್ರಭುತ್ವವಿದೆ. ಪ್ರಜೆಗಳು ಸಾರ್ವತ್ರಿಕ ಚುನಾವಣೆಗಳಲ್ಲಿ ತಮ್ಮಿಂದ ಆಯ್ಕೆಯಾದ ಪ್ರತಿನಿಧಿಗಳ ಮೂಲಕ ಆಳಲ್ಪಡುತ್ತಾರೆ. ಇಲ್ಲಿ ಪ್ರಜೆಗಳೇ ಪ್ರಭುಗಳಾಗಿರುವ ಸರ್ಕಾರವೇ ಪ್ರಜಾಪ್ರಭುತ್ವವಾಗಿದೆ.

### 6. ಗಣರಾಜ್ಯ (Republic):

ರಾಷ್ಟ್ರದ ಮುಖ್ಯಸ್ಥರನ್ನು ನಿಗಧಿತ ಅವಧಿಗೆ ಪ್ರಜೆಗಳಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾಯಿಸುವ ವ್ಯವಸ್ಥೆಯೇ ಗಣರಾಜ್ಯ. ಇಂಗ್ಲೆಂಡ್ ಪ್ರಜಾಪ್ರಭುತ್ವ ರಾಷ್ಟ್ರವಾದರೂ ಗಣರಾಜ್ಯವಲ್ಲ. ಏಕೆಂದರೆ ಇಂಗ್ಲೆಂಡ್‌ನ ಮುಖ್ಯಸ್ಥರಾದ ದೊರೆ/ರಾಣಿ ಅನುವಂಶಿಕವಾಗಿ ಮುಂದುವರೆಯುತ್ತಾರೆ. ಭಾರತದ ರಾಷ್ಟ್ರಾಧ್ಯಕ್ಷರು ಪರೋಕ್ಷ ಚುನಾವಣಾ ವಿಧಾನದ ಮೂಲಕ ಆಯ್ಕೆಯಾಗುತ್ತಾರೆ.

@KTBS NOT TO BE REPUBLISHED

**7. ನ್ಯಾಯ (Justice) :**

ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಭಾರತದ ರಾಜಕೀಯ ಪದ್ಧತಿಯ ನಾಲ್ಕು ತಾತ್ವಿಕ ಸ್ಥಂಭಗಳಾಗಿವೆ. ಎಲ್ಲ ಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವುದೇ ಸಂವಿಧಾನದ ಮುಖ್ಯ ಗುರಿ. 'ಅಧಿಕೃತವಾಗಿ ದೊರಕಬೇಕಿರುವುದನ್ನು ಪಡೆದುಕೊಳ್ಳುವುದೇ ನ್ಯಾಯ'.

**8. ಸ್ವಾತಂತ್ರ್ಯ (Liberty) :**

ಇತರರ ಹಕ್ಕುಗಳಿಗೆ ಚ್ಯುತಿ ಬಾರದಂತೆ ನಮ್ಮ ಹಕ್ಕುಗಳನ್ನು ನಿರಾತಂಕವಾಗಿ ಅನುಭವಿಸುವುದೇ ಸ್ವಾತಂತ್ರ್ಯ. ಪ್ರಸ್ತಾವನೆಯಲ್ಲಿ ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆಯ ಸ್ವಾತಂತ್ರ್ಯ, ಧರ್ಮಶ್ರದ್ಧೆ ಮತ್ತು ಉಪಾಸನ ಸ್ವಾತಂತ್ರ್ಯಗಳಿಗೆ ಅವಕಾಶ ಕಲ್ಪಿಸಿರುವುದು ಪ್ರಜಾಪ್ರಭುತ್ವದ ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ಸ್ವಾತಂತ್ರ್ಯವು ಎಲ್ಲರ ಸರ್ವತೋಮುಖ ಬೆಳವಣಿಗೆಗೆ ಅತ್ಯವಶ್ಯಕ. ವ್ಯಕ್ತಿಗೆ ಸ್ವಾತಂತ್ರ್ಯವಿಲ್ಲದ ಪ್ರಜಾಪ್ರಭುತ್ವವನ್ನು ಊಹಿಸಿಕೊಳ್ಳಲಾಗದು.

**9. ಸಮಾನತೆ (Equality) :**

ಸ್ವಾತಂತ್ರ್ಯದಂತೆಯೇ ಸಮಾನತೆಯು ಮುಖ್ಯ, ಇವೆರಡು ಒಂದೇ ನಾಣ್ಯದ ಎರಡು ಮುಖಗಳು. ಸಮಾನತೆ ಇಲ್ಲದ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಯಾವುದೇ ಧರ್ಮ, ಜಾತಿ, ಲಿಂಗ, ಬಣ್ಣ ಮತ್ತು ವಾಸಸ್ಥಳ ಮುಂತಾದವುಗಳ ಆಧಾರದ ಮೇಲೆ ತಾರತಮ್ಯ ಮಾಡಬಾರದು ಎಂದು ತಿಳಿಸುವುದೇ ಸಮಾನತೆ. ಸಮಾನ ಸ್ಥಾನ ಮತ್ತು ಸಮಾನ ಅವಕಾಶಗಳು ಎಲ್ಲರಿಗೂ ದೊರೆಯಬೇಕೆಂಬುವುದೇ ಇದರ ಆಶಯವಾಗಿದೆ.

@KTBS NOT TO BE REPUBLISHED

**10. ಭ್ರಾತೃತ್ವ (Fraternity) :**

ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಗೆ ಭ್ರಾತೃತ್ವ ಅತ್ಯಗತ್ಯ. ಭೂಮಿಯ ಮೇಲೆ ವಾಸಿಸುವ ಜನರೆಲ್ಲ ಮೇಲು-ಕೀಳು, ಬಡವ-ಬಲ್ಲಿದ, ಬಿಳಿಯ-ಕರಿಯ ಎಂಬ ಅಮಾನುಷ ಭೇದ ಭಾವನೆಗಳನ್ನು ಬೆಳೆಸಿಕೊಳ್ಳದೇ ಬದುಕುವುದು ಭ್ರಾತೃತ್ವ.

'ಎಲ್ಲರಲ್ಲಿಯೂ ಸಹೋದರತ್ವದ ಭಾವನೆಯನ್ನು ಕಾಣುವುದೇ ಭ್ರಾತೃತ್ವ.' ವ್ಯಕ್ತಿಗೆ ಘನತೆ ಮತ್ತು ಗೌರವಗಳು ಅತ್ಯಗತ್ಯವಾಗಿರುವುದರಿಂದ ಯಾವುದೇ ಬೇಧ ಭಾವ ಮಾಡಬಾರದು.

**11. ಐಕ್ಯತೆ ಮತ್ತು ಸಮಗ್ರತೆ (Unity And Integrity) :**

ವಿವಿಧ ಜಾತಿ ಧರ್ಮಗಳಿಗೆ ಸೇರಿದ ಜನರಿರುವ ಭಾರತದಲ್ಲಿ ಐಕ್ಯತೆಯನ್ನು ಮೂಡಿಸುವ ಅಗತ್ಯತೆಯನ್ನು ಮನಗಾಣಲಾಯಿತು. ರಾಜ್ಯಗಳ ಒಕ್ಕೂಟವಾದ ಭಾರತದಲ್ಲಿ ಐಕ್ಯತೆಯನ್ನು ಬೆಳೆಸುವುದಕ್ಕೋಸ್ಕರವೇ ಏಕ ಪೌರತ್ವವಿದೆ.

ಅದರಂತೆಯೇ ರಾಷ್ಟ್ರದಲ್ಲಿ ಭಾವೈಕ್ಯತೆಯನ್ನು ಬೆಳೆಸುವುದಕ್ಕಾಗಿ ರಾಷ್ಟ್ರದ ಸಂವಿಧಾನ, ರಾಷ್ಟ್ರಧ್ವಜ, ರಾಷ್ಟ್ರಗೀತೆಯನ್ನು ಗೌರವಿಸುವಂತಹ 11 ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ. ಇವೆಲ್ಲವುಗಳು ಭಾರತದ ಪ್ರಜೆಗಳಲ್ಲಿ ಏಕತೆಯೊಂದಿಗೆ ಭಾವೈಕ್ಯತೆಯನ್ನು ವೃದ್ಧಿಸುತ್ತವೆ. ರಾಷ್ಟ್ರವನ್ನು ಕಟ್ಟುವ ಕಾರ್ಯದಲ್ಲಿ ಜನರಿಗೂ ಜವಾಬ್ದಾರಿಗಳಿವೆ ಎಂಬುದನ್ನು ನೆನಪಿಸುತ್ತವೆ.

ಒಟ್ಟಿನಲ್ಲಿ ಪ್ರಸ್ತಾವನೆಯು ಸಂವಿಧಾನದ ಕನ್ನಡಿಯಂತೆಯೂ ಮತ್ತು ಮುನ್ನುಡಿಯಂತೆಯೂ ಇದೆ. ಇದು ಭಾರತದ ರಾಜಕೀಯ ವ್ಯವಸ್ಥೆಯ ಪದ್ಧತಿ, ತತ್ವಗಳು, ಧ್ಯೇಯ, ಗುರಿಗಳು ಮತ್ತು ಮೌಲ್ಯಗಳ ಸಾರಸತ್ವವಾಗಿದೆ. ಪ್ರಸ್ತಾವನೆಯಲ್ಲಿ ಉಲ್ಲೇಖಿತವಾದ ತತ್ವಗಳು ಮತ್ತು ಧ್ಯೇಯ ಗುರಿಗಳನ್ನು ಕರಾರುವಕ್ಕಾಗಿ ಅನುಷ್ಠಾನಗೊಳಿಸಿ ಸಾಕಾರಗೊಳಿಸುವ ಜವಾಬ್ದಾರಿ ಆಡಳಿತಗಾರರೊಂದಿಗೆ ಪ್ರಜೆಗಳಾದ ನಮಗೂ ಇದೆ.

**ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳು**

**ಲಿಖಿತ ಮತ್ತು ಬೃಹತ್ ಸಂವಿಧಾನ :** ಭಾರತ ಸಂವಿಧಾನವು ಲಿಖಿತ ರೂಪದಲ್ಲಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯನೀತಿ ನಿರ್ದೇಶಕ ತತ್ವಗಳು ಬರವಣಿಗೆಯ ರೂಪದಲ್ಲಿವೆ. ನಮ್ಮ ಸಂವಿಧಾನವು ಮೂಲತಃ 22 ಭಾಗಗಳು, 8 ಅನುಸೂಚಿಗಳು ಮತ್ತು 395 ವಿಧಿಗಳನ್ನು ಹೊಂದಿತ್ತು. ನಂತರದಲ್ಲಿ ಹಲವಾರು ತಿದ್ದುಪಡಿಗಳಿಂದಾಗಿ 25 ಭಾಗಗಳು, 12 ಅನುಸೂಚಿಗಳು ಮತ್ತು ಸುಮಾರು 470ಕ್ಕೂ ಹೆಚ್ಚು ವಿಧಿಗಳನ್ನು ಒಳಗೊಂಡ ಬೃಹತ್ ಸಂವಿಧಾನವಾಗಿದೆ.

**ಭಾಗಶಃ ನಮ್ಯ, ಭಾಗಶಃ ಅನಮ್ಯ ಸಂವಿಧಾನ :** ಯಾವ ದೇಶದ ಸಂವಿಧಾನವನ್ನು ಸುಲಭವಾಗಿ ತಿದ್ದುಪಡಿ ಮಾಡಬಹುದೋ ಅದನ್ನು ನಮ್ಯ ಅಥವಾ ಸರಳ ಸಂವಿಧಾನ ಎಂದು ಕರೆಯಲಾಗುತ್ತದೆ. ಯಾವ ಸಂವಿಧಾನದ ತಿದ್ದುಪಡಿ ವಿಶೇಷ ವಿಧಾನವನ್ನು ಒಳಗೊಂಡಿರುತ್ತದೆಯೊ ಅದನ್ನು ಅನಮ್ಯ ಅಥವಾ ಕಠಿಣ ಸಂವಿಧಾನ ಎಂದು ಕರೆಯಲಾಗುತ್ತದೆ. ಭಾರತದ ಸಂವಿಧಾನದ ತಿದ್ದುಪಡಿ ವಿಧಾನವು ಅತಿ ಸರಳವೂ ಆಗಿರದೆ, ಅತಿ ಕಠಿಣವೂ ಆಗಿರದೆ ಸರಳ ಮತ್ತು ಕಠಿಣತೆಗಳ ಮಿಶ್ರಣವಾಗಿದೆ.

**ಸಂಸದೀಯ ಸರ್ಕಾರ ಪದ್ಧತಿ :–** ನಮ್ಮ ಸಂವಿಧಾನವು ಸಂಸದೀಯ ಸರ್ಕಾರ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ದೇಶದ ಸಾರ್ವಭೌಮ ಅಧಿಕಾರವನ್ನು ಚುನಾಯಿತ ಸಂಸತ್ತಿಗೆ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಯಾಗಿದೆ. ಮಂತ್ರಿಮಂಡಲವು ಶಾಸಕಾಂಗದ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿರುತ್ತದೆ. ಶಾಸಕಾಂಗದ ವಿಶ್ವಾಸ ಕಳೆದುಕೊಂಡ ತಕ್ಷಣ ರಾಜೀನಾಮೆ ನೀಡಬೇಕಾಗುತ್ತದೆ.

**ಗಣತಂತ್ರ ವ್ಯವಸ್ಥೆ :–** ರಾಷ್ಟ್ರದ ಮುಖ್ಯಸ್ಥರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾಯಿಸುವ ರಾಜಕೀಯ ವ್ಯವಸ್ಥೆಯನ್ನು ಗಣತಂತ್ರ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಭಾರತದ ರಾಜಕೀಯ ವ್ಯವಸ್ಥೆಯ ಮುಖ್ಯಸ್ಥರಾದ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡುವುದರಿಂದ ಭಾರತವು ಒಂದು ಗಣತಂತ್ರ ವ್ಯವಸ್ಥೆಯಾಗಿದೆ. ಗಣತಂತ್ರ ಎಂಬ ಪದವು ಭಾರತವು ಯಾವುದೇ ಅನುವಂಶೀಯ ರಾಜ ಅಥವಾ ರಾಣಿಯ ಆಳ್ವಿಕೆಗೆ ಒಳಪಟ್ಟಿಲ್ಲ ಎಂಬುದನ್ನು ಸೂಚಿಸುತ್ತದೆ.

**ಒಕ್ಕೂಟ ವ್ಯವಸ್ಥೆ :–** ಭಾರತವು ವಿವಿಧ ಭಾಷೆ, ಜಾತಿ, ಜನಾಂಗ ಮತ್ತು ವಿಶಾಲ ಭೂಪ್ರದೇಶ ಹೊಂದಿರುವುದರಿಂದ ಸಂವಿಧಾನವು ಒಕ್ಕೂಟ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ಹಂಚಿಕೆಯಾಗಿದೆ (ಕೇಂದ್ರಪಟ್ಟಿ 100 ವಿಷಯಗಳು, ರಾಜ್ಯಪಟ್ಟಿ 61 ವಿಷಯಗಳು ಮತ್ತು ಸಮವರ್ತಿಪಟ್ಟಿ 52 ವಿಷಯಗಳನ್ನು ಒಳಗೊಂಡಂತೆ ಅಧಿಕಾರ ವಿಭಜನೆಯಾಗಿದೆ). ಈ ಎರಡೂ ಸರ್ಕಾರಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸಲು ಸರ್ವೋಚ್ಚ ನ್ಯಾಯಾಲಯವು ಅಧಿಕಾರ ಪಡೆದಿದೆ.

**ಮೂಲಭೂತ ಹಕ್ಕುಗಳು :–** ಭಾರತದ ಸಂವಿಧಾನದ ಮೂರನೆಯ ಭಾಗವು ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ

© KTBS NOT TO BE REPUBLISHED

ಹಾಗೂ ಶೈಕ್ಷಣಿಕ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರಗಳ ಹಕ್ಕು ಎಂಬ 6 ಮೂಲಭೂತ ಹಕ್ಕುಗಳನ್ನು ಒಳಗೊಂಡಿದೆ. ಯಾವುದೇ ಸರ್ಕಾರ (ಕೇಂದ್ರ ಅಥವಾ ರಾಜ್ಯ ಸರ್ಕಾರ) ಅಥವಾ ಸಂಸ್ಥೆಗಳಿಂದ ಮೂಲಭೂತ ಹಕ್ಕುಗಳಿಗೆ ಧಕ್ಕೆ ಉಂಟಾದರೆ ಅವುಗಳ ರಕ್ಷಣೆಗಾಗಿ ನೇರವಾಗಿ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ಸಂವಿಧಾನವು ಮೂಲಭೂತ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯನ್ನು ಸರ್ವೋಚ್ಚನ್ಯಾಯಾಲಯಕ್ಕೆ ನೀಡಿದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು "ಮೂಲಭೂತ ಹಕ್ಕುಗಳ ರಕ್ಷಕ" ಎಂದು ಕರೆಯಲಾಗಿದೆ.

**ಮೂಲಭೂತ ಕರ್ತವ್ಯಗಳು :–** ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 1976ರ 42ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ ನಮ್ಮ ಸಂವಿಧಾನದ 4 'A' ಭಾಗದಲ್ಲಿ ಹಾಗೂ 51 'A' ವಿಧಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರ್ಪಡೆ ಮಾಡಲಾಯಿತು. 2002 ರಲ್ಲಿ ಸಂವಿಧಾನದ 86 ನೇ ತಿದ್ದುಪಡಿ ಕಾಯಿದೆಯ ಮೂಲಕ 6 ರಿಂದ 14 ವರ್ಷ ವಯೋಮಿತಿಯಲ್ಲಿನ ಎಲ್ಲಾ ಮಕ್ಕಳಿಗೂ ಪೋಷಕರು ಕಡ್ಡಾಯ ಶಿಕ್ಷಣ ಕೊಡಿಸಬೇಕು ಎಂಬ 11 ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಗಿದೆ. ಪ್ರಸ್ತುತ 11 ಮೂಲಭೂತ ಕರ್ತವ್ಯಗಳನ್ನು ಸಂವಿಧಾನದ 4 'A' ಭಾಗದಲ್ಲಿ ನಮೂದಿಸಲಾಗಿದೆ.

**ರಾಜ್ಯನೀತಿ ನಿರ್ದೇಶಕ ತತ್ವಗಳು :–** ನಮ್ಮ ಸಂವಿಧಾನದ 4ನೇ ಭಾಗದಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿದೆ. ಇವುಗಳನ್ನು ಐರಿಷ್ (ಐರ್ಲೆಂಡ್ ದೇಶದ) ಸಂವಿಧಾನದಿಂದ ಪಡೆಯಲಾಗಿದೆ. ಇವುಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಬುನಾದಿಯಾಗಿವೆ. ಇವುಗಳನ್ನು ಸರ್ಕಾರ ಜಾರಿಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ಆದರೂ ಇವು ದೇಶದ ಆಡಳಿತಕ್ಕೆ ಮೂಲ ನಿಯಮಗಳಾಗಿವೆ. ಕಾನೂನನ್ನು ರೂಪಿಸಿ ಅದನ್ನು ಜಾರಿಗೆ ತರುವಾಗ ಸರ್ಕಾರ ಇವುಗಳಿಗೆ ಹೆಚ್ಚು ಗಮನವನ್ನು ನೀಡಬೇಕು.

**ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ :–** ನಮ್ಮ ನ್ಯಾಯಾಂಗ ವ್ಯವಸ್ಥೆ ಸ್ವತಂತ್ರವಾದುದು ಮತ್ತು ಏಕೀಕೃತವಾದುದು ಆಗಿದೆ. ಪ್ರಜೆಗಳ ಹಕ್ಕುಗಳನ್ನು ರಕ್ಷಿಸಿ ನಿರ್ಭಯವಾಗಿ ಕೆಲಸ ಮಾಡಲು ನ್ಯಾಯಾಲಯಗಳು ಸ್ವಾತಂತ್ರ್ಯ ಪಡೆದಿವೆ. ಶಾಸಕಾಂಗ ಮತ್ತು ಕಾರ್ಯಾಂಗಗಳು ನ್ಯಾಯಾಂಗದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಸರ್ವೋಚ್ಚ ನ್ಯಾಯಾಲಯವು ಅತ್ಯುನ್ನತ ನ್ಯಾಯಾಲಯವಾಗಿದ್ದು ಅದರ ಅಡಿಯಲ್ಲಿ ಉಚ್ಚನ್ಯಾಯಾಲಯಗಳು (ಹೈಕೋರ್ಟ್‌ಗಳು) ಮತ್ತು ಅಧೀನ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ.

**ಏಕ ಪೌರತ್ವ :–** ಭಾರತ ಸಂವಿಧಾನವು ಏಕ ಪೌರತ್ವ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಭಾರತದಲ್ಲಿ ಒಬ್ಬ ವ್ಯಕ್ತಿಯು ರಾಷ್ಟ್ರೀಯ ಪೌರತ್ವವನ್ನು ಹೊಂದಿದ್ದಾನೆಯೇ ಹೊರತು ರಾಜ್ಯದ ಪೌರತ್ವವನ್ನು ಹೊಂದಿರುವುದಿಲ್ಲ. ಭಾರತೀಯರಲ್ಲಿ ಏಕತೆ, ಸಮಗ್ರತೆ ಮತ್ತು ಅವಿಭಜಿತ ನಿಷ್ಠೆ ಮುಂತಾದ ಉದಾತ್ತ ಮನೋಭಾವನೆಗಳನ್ನು ಬೆಳೆಸಲು ಏಕ ಪೌರತ್ವ ಪದ್ಧತಿಯು ಪೂರಕವಾಗಿದೆ.

**ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ :–** ನಮ್ಮ ಸಂವಿಧಾನವು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಯಾವುದೇ ತಾರತಮ್ಯವಿಲ್ಲದೆ 18 ವರ್ಷ ಹಾಗೂ ಮೇಲ್ಪಟ್ಟ ಎಲ್ಲಾ ಪೌರರಿಗೂ ಮತದಾನದ ಹಕ್ಕನ್ನು ನೀಡಲಾಗಿದೆ. ಇದು ಜನತೆಯ ಪರಮಾಧಿಕಾರದ ಸಂಕೇತವಾಗಿದೆ.

©KTBS NOT TO BE REPUBLISHED

**ದ್ವಿಸದನ ಶಾಸಕಾಂಗ :–** ಭಾರತದ ಶಾಸಕಾಂಗವನ್ನು 'ಸಂಸತ್ತು' ಎಂದು ಕರೆಯುತ್ತಾರೆ. ಈ ಸಂಸತ್ತು ದ್ವಿಸದನ ಪದ್ಧತಿಯನ್ನು ಒಳಗೊಂಡಿದ್ದು, ಕೆಳಮನೆ (ಲೋಕಸಭೆ) ಮತ್ತು ಮೇಲ್ಮನೆ (ರಾಜ್ಯಸಭೆ) ಯನ್ನು ಹೊಂದಿದೆ.

**ಪಕ್ಷ ಪದ್ಧತಿ :–** ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಬುನಾದಿ. ಭಾರತದಲ್ಲಿ ಬಹುಪಕ್ಷ ಪದ್ಧತಿ ಅಸ್ಥಿತ್ವದಲ್ಲಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷ ಆಡಳಿತ ನಡೆಸುವ ಪಕ್ಷವಾದರೆ ಉಳಿದ ಪಕ್ಷಗಳು ವಿರೋಧ ಪಕ್ಷಗಳಾಗುತ್ತವೆ.

**ಮೂಲಭೂತ ಹಕ್ಕುಗಳು**

ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಸ್ಥಿತಿಗಳನ್ನು ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ. ಸಮಾಜದಲ್ಲಿ ಮನುಷ್ಯನು ನಾಗರಿಕ ಜೀವನ ನಡೆಸಲು ಮೂಲಭೂತ ಹಕ್ಕುಗಳು ಅತ್ಯವಶ್ಯಕ. ಈ ಹಕ್ಕುಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾದವುಗಳು. ನಮ್ಮ ಸಂವಿಧಾನದ 3 ನೇ ಭಾಗದಲ್ಲಿ 7 ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿತ್ತು. ಆದರೆ 1978ರಲ್ಲಿ ಜಾರಿಗೆ ಬಂದ ಸಂವಿಧಾನದ 44ನೇ ತಿದ್ದುಪಡಿ ಕಾಯಿದೆಯ ಮೂಲಕ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆಯಲಾಗಿದೆ. ಆದ್ದರಿಂದ ಪ್ರಸ್ತುತ 06 ಮೂಲಭೂತ ಹಕ್ಕುಗಳಿವೆ.




©KTBS NOT TO BE REPUBLISHED

**ನಿಮಗಿದು ತಿಳಿದಿರಲಿ**

1895 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಜೆಗಳ ಹಕ್ಕುಗಳ ಬಗ್ಗೆ ಆಗ್ರಹಪಡಿಸಿತು.

1895 ರಲ್ಲಿ ಬಾಲಗಂಗಾಧರ ತಿಲಕ್ ತಮ್ಮ 'ಸ್ವರಾಜ್ ಬಿಲ್' ನಲ್ಲಿ ಹಕ್ಕುಗಳಿಗಾಗಿ ಒತ್ತಾಯಿಸಿದ್ದರು.

1925 ರಲ್ಲಿ ಡಾ. ಅನಿಬೆಸೆಂಟ್‌ರವರು 'ಕಾಮನ್‌ವೆಲ್ತ್ ಆಫ್ ಇಂಡಿಯಾ' ಬಿಲ್‌ನಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಆತ್ಮಸಾಕ್ಷಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕಾನೂನಿನ ಮುಂದೆ ಸಮಾನರು ಎಂಬುದನ್ನು ಪ್ರತಿಪಾದಿಸಿದರು.

1946 ರ ಕ್ಯಾಬಿನೆಟ್ ಮಿಷನ್ ಮೂಲಭೂತ ಹಕ್ಕುಗಳನ್ನು ಬೆಂಬಲಿಸಿತು.

ಆಸ್ತಿಯ ಹಕ್ಕು ಈಗ ಸಂವಿಧಾನದ 300 'A' ವಿಧಿಯ ಅಡಿಯಲ್ಲಿ ಕಾನೂನು ಬದ್ಧ ಹಕ್ಕಾಗಿದೆ.

**ಸಮಾನತೆಯ ಹಕ್ಕು :–** ಪ್ರಜಾಪ್ರಭುತ್ವದ ಯಶಸ್ಸಿಗೆ ಈ ಹಕ್ಕು ಅಗತ್ಯವಾಗಿದ್ದು, ಶಾಸನಾತ್ಮಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನತೆ ಕಲ್ಪಿಸಲಾಗಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು, ಕಾನೂನಿಗಿಂತ ಯಾರೂ ಶ್ರೇಷ್ಠರಲ್ಲ. ಪ್ರತಿಯೊಬ್ಬರೂ ರಾಜ್ಯದ ಕಾನೂನಿಗೆ ಬದ್ಧರಾಗಿರಬೇಕು. ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಭೇದಭಾವ ಮಾಡಬಾರದು. ಸಾರ್ವಜನಿಕ ಸ್ಥಳಗಳು, ಅಂಗಡಿಗಳು, ಹೋಟೆಲ್‌ಗಳು, ಮನರಂಜನಾ ಸ್ಥಳಗಳು, ದೇವಾಲಯಗಳು ಮುಂತಾದ ಸ್ಥಳಗಳಲ್ಲಿ ಯಾರೊಬ್ಬರಿಗೂ ಪ್ರವೇಶ ನಿರಾಕರಿಸಬಾರದು. ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರಕಿಸಿದೆ. ಅಸ್ಪೃಶ್ಯತೆಯನ್ನು ಆಚರಿಸುವಂತಿಲ್ಲ.

**ಸ್ವಾತಂತ್ರ್ಯದ ಹಕ್ಕು :–** ಮೂಲಭೂತ ಹಕ್ಕುಗಳಲ್ಲಿ ಸ್ವಾತಂತ್ರ್ಯದ ಹಕ್ಕು ಮಹತ್ವದ ಸ್ಥಾನ ಪಡೆದಿದೆ. ಈ ಹಕ್ಕಿನಡಿಯಲ್ಲಿ ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ, ಶಸ್ತ್ರರಹಿತವಾಗಿ ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ, ಭಾರತದಾದ್ಯಂತ ಸಂಚರಿಸುವ, ವಾಸಿಸುವ, ಯಾವುದೇ ವೃತ್ತಿ ಹೊಂದುವ ಸ್ವಾತಂತ್ರ್ಯ ನೀಡಲಾಗಿದೆ. ಪೌರರಿಗೆ ಇದು ರಕ್ಷಣಾತ್ಮಕ ಹಕ್ಕಾಗಿದ್ದು, ಸಕಾರಣವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲ ಮತ್ತು ವ್ಯಕ್ತಿಯ ಜೀವ ಅಥವಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಿಲ್ಲ.

**ಶೋಷಣೆಯ ವಿರುದ್ಧದ ಹಕ್ಕು :–** ಈ ಹಕ್ಕು ಯಾವುದೇ ನಾಗರಿಕನ ಮೇಲೆ ನಡೆಯಬಹುದಾದ ಯಾವುದೇ ರೀತಿಯ ಶೋಷಣೆಯನ್ನು ನಿರ್ಬಂಧಿಸಿ ಸಂವಿಧಾನಾತ್ಮಕ ರಕ್ಷಣೆ ನೀಡುತ್ತದೆ. ಈ ಹಕ್ಕಿನ ಪ್ರಮುಖ ಗುರಿ ಮಹಿಳೆಯರು, ಮಕ್ಕಳು, ಬಡವರು ಮತ್ತು ದುರ್ಬಲ ವರ್ಗಗಳಿಗೆ ಸೇರಿದವರನ್ನು ಶೋಷಣೆಯಿಂದ ರಕ್ಷಿಸುವುದಾಗಿದೆ. ಈ ಹಕ್ಕಿನ ಅಡಿಯಲ್ಲಿ ಬಲವಂತದ ದುಡಿಮೆಯನ್ನು ನಿಷೇಧಿಸಲಾಗಿದೆ. ಈ ಹಕ್ಕಿನ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯಕಾರಿ ಕೆಲಸಗಳಿಗೆ ನೇಮಿಸಿಕೊಳ್ಳುವಂತಿಲ್ಲ.

**ನಿಮಗಿದು ತಿಳಿದಿರಲಿ**

**ಶೋಷಣೆಯನ್ನು ತಪ್ಪಿಸಲು ಕೇಂದ್ರ ಸರ್ಕಾರ ಅನೇಕ ಕಾಯಿದೆಗಳನ್ನು ಜಾರಿಗೆ ತಂದಿದೆ.**

| | |
|---|---|
| ಕನಿಷ್ಠ ಕೂಲಿ ಕಾಯಿದೆ–1948 | ಅನೈತಿಕ ಮಾರಾಟ ತಡೆ ಕಾಯಿದೆ–1956 |
| ವರದಕ್ಷಿಣೆ ನಿಷೇಧ ಕಾಯಿದೆ–1961 | ಜೀತಪದ್ಧತಿ ನಿರ್ಮೂಲನಾ ಕಾಯಿದೆ–1976 |
| ಸತಿ ನಿಷೇಧ ಕಾಯಿದೆ–1987 | ಮಾನವ ಹಕ್ಕುಗಳ ರಕ್ಷಣಾ ಕಾಯಿದೆ–1993 |
| ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯಿದೆ–2005 | |

© KTBS NOT TO BE REPUBLISHED

**ಧಾರ್ಮಿಕ ಸ್ವಾತಂತ್ರ್ಯದ ಹಕ್ಕು :–** ಭಾರತ ಒಂದು ಜಾತ್ಯತೀತ (ಧರ್ಮನಿರಪೇಕ್ಷ) ರಾಷ್ಟ್ರ. ಯಾವುದೇ ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಅಂಗೀಕರಿಸಿಲ್ಲ. ಪೌರರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಪ್ರಚಾರ ಮಾಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಒಂದು ನಿರ್ದಿಷ್ಟ ಧರ್ಮವನ್ನು ಪ್ರೋತ್ಸಾಹಿಸಲು ತೆರಿಗೆ ಕೊಡಬೇಕೆಂದು ಒತ್ತಾಯಿಸುವಂತಿಲ್ಲ. ಧಾರ್ಮಿಕ ಸ್ಥಳಗಳನ್ನು ರಾಜಕೀಯ ಮತ್ತು ಇತರೆ ಚಟುವಟಿಕೆಗಳಿಗೆ ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

**ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು :–** ದೇಶದಲ್ಲಿ ವಾಸಿಸುವ ಪೌರರು ತಮ್ಮದೇ ಆದ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ ಅವುಗಳನ್ನು ಅಭಿವೃದ್ಧಿಪಡಿಸುವ ಮತ್ತು ಸಂರಕ್ಷಿಸಿಕೊಳ್ಳುವ ಹಕ್ಕು ಹೊಂದಿದ್ದಾರೆ. ರಾಜ್ಯದ ನಿರ್ವಹಣೆಗೆ ಅಥವಾ ರಾಜ್ಯದ ಅನುದಾನಕ್ಕೆ ಒಳಪಟ್ಟ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಧರ್ಮ, ಜನಾಂಗ, ಜಾತಿ ಅಥವಾ ಭಾಷೆ ಇವುಗಳ ಆಧಾರದ ಮೇಲೆ ಮಾತ್ರವೇ ಯಾವ ಪೌರನಿಗೂ ಪ್ರವೇಶಾವಕಾಶವನ್ನು ನಿರಾಕರಿಸುವಂತಿಲ್ಲ. ಎಲ್ಲಾ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳ ಆಡಳಿತ ನಿರ್ವಹಿಸುವ ಹಕ್ಕನ್ನು ಹೊಂದಿದ್ದಾರೆ. ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಈ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ.

> **ನಿಮಗಿದು ತಿಳಿದಿರಲಿ**
>
> 2002ರ ಸಂವಿಧಾನದ 86ನೇ ತಿದ್ದುಪಡಿ ಕಾಯಿದೆಯ ಮೂಲಕ 21'A' ವಿಧಿಯನ್ನು ಸೇರ್ಪಡೆ ಮಾಡಲಾಯಿತು. ಈ ವಿಧಿಯ ಪ್ರಕಾರ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದು 6 ರಿಂದ 14 ವರ್ಷದೊಳಗಿನ ಮಕ್ಕಳ ಮೂಲಭೂತ ಹಕ್ಕಾಗಿದೆ. ಈ ವಯೋಮಾನದ ಮಕ್ಕಳಿಗೆ ರಾಜ್ಯವು ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು. ಭಾರತ ಸರ್ಕಾರವು ಶಿಕ್ಷಣ ಹಕ್ಕು ಕಾಯಿದೆ – 2009 (RTE - The Right of Children to Free and Compulsory Education Act - 2009)ನ್ನು ಜಾರಿಗೊಳಿಸಿದೆ.

**ಸಂವಿಧಾನಾತ್ಮಕ ಪರಿಹಾರಗಳ ಹಕ್ಕು :–** ಸಂವಿಧಾನದ 32 ನೇ ವಿಧಿಯಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್‌ರವರು ಈ ವಿಧಿಯನ್ನು **'ಸಂವಿಧಾನದ ಆತ್ಮ ಮತ್ತು ಹೃದಯ'** ಎಂದಿದ್ದಾರೆ. ಮೂಲಭೂತ ಹಕ್ಕುಗಳಿಗೆ ಯಾವುದೇ ವ್ಯಕ್ತಿಯಿಂದಾಗಲೀ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದಾಗಲೀ ಧಕ್ಕೆ ಉಂಟಾದರೆ ಅವುಗಳ ರಕ್ಷಣೆಗಾಗಿ ನೇರವಾಗಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸುವಧಿಕಾರಿ ಸರ್ವೋಚ್ಚ ನ್ಯಾಯಾಲಯಕ್ಕೆ ಇದೆ.  ಆದುದರಿಂದ ಸರ್ವೋಚ್ಚ ನ್ಯಾಯಾಲಯವನ್ನು 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಕರೆಯಲಾಗಿದೆ. ಈ ನ್ಯಾಯಾಲಯವು ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಈ ಕೆಳಕಂಡ ರಿಟ್‌ಗಳನ್ನು ಸ್ವೀಕರಿಸಬಹುದು.

ಎ) **ಬಂಧೀ ಪ್ರತ್ಯಕ್ಷೀಕರಣ :–** ಸಕಾರಣವಿಲ್ಲದೆ ವ್ಯಕ್ತಿಯನ್ನು ಬಂಧನಕ್ಕೆ ಒಳಪಡಿಸಿದರೆ ಅವನಾಗಲೀ ಅಥವಾ ಅವನ ಪರವಾಗಿ ಯಾರಾದರೂ ಬಿಡುಗಡೆಗಾಗಿ ಈ ರಿಟ್ ಅರ್ಜಿ ಸಲ್ಲಿಸಬಹುದು. ಬಂಧಿತ ವ್ಯಕ್ತಿಯನ್ನು 24 ಗಂಟೆಯೊಳಗಾಗಿ ಹತ್ತಿರದ ನ್ಯಾಯಾಲಯದ ಮುಂದೆ ಅಥವಾ ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕು.

NOT TO BE REPUBLISHED @KTBS

ಬಿ) **ಪರಮಾದೇಶ :–** ಅಧಿಕಾರಿಯೊಬ್ಬರು ತಮ್ಮ ಅಧಿಕಾರವನ್ನು ಚಲಾಯಿಸಲು ನಿರಾಕರಿಸಿದಾಗ ಅಥವಾ ತನಗೆ ವಹಿಸಿರುವ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಲು ನಿರಾಕರಿಸಿದಾಗ ಮತ್ತು ಯಾವುದೇ ಅಧೀನ ನ್ಯಾಯಾಲಯ ತನ್ನ ಕರ್ತವ್ಯ ನಿರ್ವಹಿಸಲು ನಿರಾಕರಿಸಿದಾಗ ಉಚ್ಚನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯವು ಸಂಬಂಧಪಟ್ಟವರಿಗೆ ತಮ್ಮ ಕರ್ತವ್ಯ ನಿರ್ವಹಿಸಲು ಆದೇಶ ನೀಡುವುದೇ ಪರಮಾದೇಶ.

ಸಿ) **ಪ್ರತಿಬಂಧಕಾಜ್ಞೆ :–** ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಮೊಕದ್ದಮೆಯನ್ನು ವಿಚಾರಣೆ ನಡೆಸಕೂಡದೆಂದು ಅಥವಾ ತೀರ್ಪು ನೀಡಕೂಡದೆಂದು ಸರ್ವೋಚ್ಚ ನ್ಯಾಯಾಲಯ ಹೊರಡಿಸುವ ಲಿಖಿತ ರೂಪದ ನಿಷೇಧಾಜ್ಞೆಯೇ ಪ್ರತಿಬಂಧಕಾಜ್ಞೆ.

ಡಿ) **ಸರ್ಷಿಯೋರರಿ :–** ಈ ರಿಟ್ ಅರ್ಜಿಯ ಪ್ರಕಾರ ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ತೀರ್ಪು ನೀಡಿದ್ದಾದರೆ ಅದನ್ನು ರದ್ದುಗೊಳಿಸಿ ಅದಕ್ಕೆ ಸಂಬಂಧಿಸಿದ ಮೊಕದ್ದಮೆಯನ್ನು ಸಂಬಂಧಪಟ್ಟ ಉನ್ನತ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಸರ್ವೋಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳಿಗೆ ನೀಡುವ ಆಜ್ಞಾ ಪತ್ರವೇ ಸರ್ಷಿಯೋರರಿ.

ಇ) **ಕೋ–ವಾರಂಟೋ :–** ಅರ್ಹತೆ ಇಲ್ಲದ ವ್ಯಕ್ತಿ ಕಾನೂನು ಬಾಹಿರವಾಗಿ ಸರ್ಕಾರದ ಹುದ್ದೆಯನ್ನು ಹೊಂದಿದ್ದರೆ, ಅಂತಹ ವ್ಯಕ್ತಿಗಳ ವಿರುದ್ಧ ಸರ್ವೋಚ್ಚ ನ್ಯಾಯಾಲಯವು ಹೊರಡಿಸುವ ರಿಟ್ ಅರ್ಜಿಯನ್ನು ಕೋ–ವಾರೆಂಟೋ ಎನ್ನುತ್ತಾರೆ.

**ಸಾರ್ವಜನಿಕ ಹಿತಾಸಕ್ತಿ ಅರ್ಜಿ (PIL-Public interest litigation)** : ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲಾಗುತ್ತದೆ. ಶಾಸನೀಯ ಹಕ್ಕುಗಳು, ಜೀವನಾವಶ್ಯಕತೆಗಳನ್ನು ಪಡೆಯುವ ಹಕ್ಕು, ಪರಿಸರ ಮಾಲಿನ್ಯದಿಂದ ಜೀವ ರಕ್ಷಣೆಯ ಹಕ್ಕು, ಗೌರವಯುತ ಜೀವನದ ಹಕ್ಕು ಮೊದಲಾದವುಗಳಿಗೆ ಸಂಬಂಧಿಸಿದಂತೆ ಈ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸಂಘ ಸಂಸ್ಥೆಗಳು, ವ್ಯಕ್ತಿಗಳು ಸಾಮಾನ್ಯವಾಗಿ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಈ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಇತ್ತೀಚೆಗೆ ಮಾಧ್ಯಮಗಳ ಮೂಲಕ ಪ್ರಕಟವಾದ ಮಾಹಿತಿಯ ಆಧಾರದ ಮೇಲೆ ನ್ಯಾಯಾಲಯಗಳೇ ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ದಾಖಲಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.

**ಮೂಲಭೂತ ಕರ್ತವ್ಯಗಳು**

ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ಕರ್ತವ್ಯರಹಿತ ಹಕ್ಕುಗಳಿಗೆ ಪ್ರಾಮುಖ್ಯತೆಯಾಗಲೀ, ಮೌಲ್ಯವಾಗಲೀ ಇರುವುದಿಲ್ಲ. 1976ರಲ್ಲಿ ಸಂವಿಧಾನದ 42 ನೇ ತಿದ್ದುಪಡಿ ಕಾಯಿದೆಯ ಮೂಲಕ 4 'A' ಭಾಗದ 51 'A' ವಿಧಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. 2002 ರಲ್ಲಿ 86ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ 11ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಗಿದೆ. ಇವು ಈ ಕೆಳಕಂಡಂತಿವೆ.

©KTBS NOT TO BE REPUBLISHED

1) ನಮ್ಮ ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

2) ಸ್ವಾತಂತ್ರ್ಯ ಚಳವಳಿಯ ಸ್ಫೂರ್ತಿದಾಯಕ ಆದರ್ಶ ತತ್ವಗಳನ್ನು ಪಾಲಿಸುವುದು.

3) ಭಾರತದ ಸಾರ್ವಭೌಮತೆ, ಏಕತೆ, ಸಮಗ್ರತೆಯನ್ನು ಕಾಪಾಡುವುದು ಮತ್ತು ರಕ್ಷಿಸುವುದು.

4) ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ ದೇಶದ ಸೇವೆ ಮಾಡಬೇಕು.

5) ಭಾರತೀಯರಲ್ಲಿ ಸಾಮರಸ್ಯ ಮತ್ತು ಸಹೋದರತ್ವ ಭಾವನೆಯನ್ನು ಬೆಳೆಸಬೇಕು ಮತ್ತು ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸಬೇಕು.

**ಚಟುವಟಿಕೆ :**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಬಗ್ಗೆ ಮಾಹಿತಿ ಸಂಗ್ರಹಿಸಿ. ಮಾನವ ಹಕ್ಕುಗಳ ಉಲ್ಲಂಘನೆ ಆದಾಗ ಆಯೋಗವು ತೆಗೆದುಕೊಂಡ ಕ್ರಮಗಳ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿನ ಮಾಹಿತಿ ತಿಳಿಯಿರಿ.

6) ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸಬೇಕು.

7) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಮೃಗಗಳು ಸೇರಿದಂತೆ ಪ್ರಕೃತಿ, ಪರಿಸರವನ್ನು ರಕ್ಷಿಸಿ ಅಭಿವೃದ್ಧಿಪಡಿಸಬೇಕು ಹಾಗೂ ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸಬೇಕು.

8) ವೈಜ್ಞಾನಿಕ ಹಾಗೂ ಮಾನವೀಯತೆಯ ಗುಣಗಳ ವಿಚಾರಣಾ ಹಾಗೂ ಸುಧಾರಣಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.

9) ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಮತ್ತು ಹಿಂಸಾಮಾರ್ಗವನ್ನು ತ್ಯಜಿಸಬೇಕು.

10) ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು.

11) ತಂದೆ, ತಾಯಿ ಅಥವಾ ಪೋಷಕರು 6 ವರ್ಷದಿಂದ 14 ವರ್ಷದವರೆಗೆ ತಮ್ಮ ಮಗುವಿನ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ಮೂಲಭೂತ ಹಕ್ಕುಗಳಿಗಿರುವಂತೆ ಮೂಲಭೂತ ಕರ್ತವ್ಯಗಳಿಗೆ ನ್ಯಾಯಾಲಯದ ರಕ್ಷಣೆ ಇರುವುದಿಲ್ಲ. ಕರ್ತವ್ಯಗಳನ್ನು ಉಲ್ಲಂಘಿಸಿದವರಿಗೆ ಸಾಮಾನ್ಯ ಕಾನೂನಿನನ್ವಯ ಶಿಕ್ಷೆ ವಿಧಿಸಲಾಗುತ್ತದೆ.

**ರಾಜ್ಯನೀತಿ ನಿರ್ದೇಶಕ ತತ್ವಗಳು :–** ಸುಖೀ ರಾಜ್ಯದ ಕಲ್ಪನೆಯಿಂದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಈ ತತ್ವಗಳು ರಾಜ್ಯ ನಿರ್ವಹಿಸಬೇಕಾಗಿರುವ ಕಾರ್ಯಕ್ರಮಗಳ ಮಾರ್ಗಸೂಚಿಯಾಗಿದ್ದು, ನಮ್ಮ ಸಂವಿಧಾನದ ರಚನಾಕಾರರು ಐರಿಷ್ ಸಂವಿಧಾನದಲ್ಲಿ ನಮೂದಿಸಲ್ಪಟ್ಟಿರುವ ಸಾಮಾಜಿಕ ನಿರ್ದೇಶಕ ತತ್ವಗಳಿಂದ ಪ್ರಭಾವಿತರಾಗಿ ನಮ್ಮ ಸಂವಿಧಾನದಲ್ಲಿಯೂ ಇವುಗಳನ್ನು ಅಳವಡಿಸಿದ್ದಾರೆ. ರಾಜ್ಯನೀತಿ ನಿರ್ದೇಶಕ ತತ್ವಗಳು ಕೇಂದ್ರ ಮತ್ತು ರಾಜ್ಯಗಳಿಗೆ ನೀಡುವ ನಿರ್ದೇಶನದ ಸ್ವರೂಪದಲ್ಲಿವೆ. ಸರ್ಕಾರವು ಪ್ರಜೆಗಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ನ್ಯಾಯ ದೊರಕಿಸಿಕೊಡುವ ಉದ್ದೇಶ ಹೊಂದಿದೆ. ಆದರೆ ಇವುಗಳು ನೈತಿಕ ತಳಹದಿಯ ಮೇಲೆ ನಿಂತಿದ್ದು, ಸರ್ಕಾರ ಇವುಗಳನ್ನು

**ಚರ್ಚಿಸಿ :**

ಮೂಲಭೂತ ಹಕ್ಕುಗಳನ್ನು ಅನುಭವಿಸುವ ಜೊತೆಗೆ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕಿದೆ ಚರ್ಚಿಸಿ.

©KTBS NOT TO BE REPUBLISHED

(ಕೇಂದ್ರ–ರಾಜ್ಯ–ಸ್ಥಳೀಯ) ಕಾರ್ಯಗತಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಈ ತತ್ವಗಳು ಸಮಾಜವಾದಿ, ಉದಾರವಾದಿ ಮತ್ತು ಗಾಂಧೀಜಿಯವರ ಆದರ್ಶಗಳನ್ನು ಆಧರಿಸಿ ರೂಪುಗೊಂಡಿವೆ. ಯಾವುದೇ ಪಕ್ಷವಾಗಲೀ, ವ್ಯಕ್ತಿಯಾಗಲೀ ಅಧಿಕಾರಕ್ಕೆ ಬಂದರೂ ಈ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸಬೇಕು. ಆದ್ದರಿಂದ ಇವುಗಳನ್ನು ಮಾರ್ಗಸೂಚಿ ತತ್ವಗಳೆಂದು ಕರೆಯುತ್ತಾರೆ.

1) ಎಲ್ಲಾ ಪೌರರಿಗೂ ತಮ್ಮ ಜೀವನೋಪಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.

2) ಸಮುದಾಯದಲ್ಲಿನ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಜನರ ಸ್ವತ್ತಾಗದಂತೆ ತಡೆಗಟ್ಟುವುದು.

3) ಸ್ತ್ರೀ ಮತ್ತು ಪುರುಷರೆಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು, ಕಾರ್ಮಿಕರ ಯೋಗಕ್ಷೇಮವನ್ನು ರಕ್ಷಿಸುವುದು.

4) ವೃದ್ಧರು, ರೋಗಿಗಳು, ದುರ್ಬಲ ವರ್ಗದವರು ಮತ್ತು ಅಸಮರ್ಥರಿಗೆ ಸಹಾಯಧನವನ್ನು ಒದಗಿಸುವುದು.

5) ದೇಶದಾದ್ಯಂತ ಏಕರೂಪದ ನಾಗರಿಕ ಕಾನೂನನ್ನು ಜಾರಿಗೆ ತರುವುದು.

6) 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಬಾಲ್ಯ ಪೋಷಣೆ ಮತ್ತು ಶಾಲಾ ಪೂರ್ವ ಶಿಕ್ಷಣವನ್ನು ಕೊಡಲು ರಾಜ್ಯ ಪ್ರಯತ್ನಿಸಬೇಕು.

7) ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ರಕ್ಷಿಸುವುದು.

8) ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.

9) ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು, ರಾಷ್ಟ್ರ–ರಾಷ್ಟ್ರಗಳ ನಡುವೆ ನ್ಯಾಯಯುತವಾದ ಮತ್ತು ಗೌರವಯುತವಾದ ಸಂಬಂಧಗಳನ್ನು ಕಾಯ್ದುಕೊಂಡು ಬರುವುದು ಹಾಗೂ ಅಂತರರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ತಿಕೆಯ ಮೂಲಕ ಇತ್ಯರ್ಥ ಪಡಿಸಲು ಪ್ರೋತ್ಸಾಹಿಸುವುದು.

10) ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸುವುದು.

11) ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.

12) ಕೃಷಿ ಹಾಗೂ ಪಶುಸಂಗೋಪನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು.

13) ಪಾನ ನಿಷೇಧವನ್ನು ಜಾರಿಗೆ ತರುವುದು.

14) ವೈಜ್ಞಾನಿಕ ಕೃಷಿಯನ್ನು ಪ್ರೋತ್ಸಾಹಿಸುವುದು.

ರಾಜ್ಯನೀತಿ ನಿರ್ದೇಶಕ ತತ್ವಗಳು ಅತ್ಯಂತ ಪ್ರಮುಖವಾಗಿದ್ದು, ಎಲ್ಲರ ಸುಖವನ್ನು ಸಾಧಿಸುವುದೇ ಅವುಗಳ ಗುರಿಯಾಗಿದೆ. ಮೂಲಭೂತ ಹಕ್ಕು ವ್ಯಕ್ತಿಗೆ ಸಂಬಂಧಿಸಿದ್ದರೆ, ರಾಜ್ಯನೀತಿ ನಿರ್ದೇಶಕ ತತ್ವಗಳು ಸಮುದಾಯಕ್ಕೆ ಸಂಬಂಧಿಸಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೇಲಿನ ತತ್ವಗಳನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿವೆ. ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಈ ತತ್ವಗಳು ದಿಕ್ಸೂಚಿಯಾಗಿವೆ.

© KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ರಾಜ್ಯವನ್ನಾಳುವ ಮೂಲ ಕಾನೂನೇ ________ .
2. ಸಂವಿಧಾನ ರಚನಾ ಸಭೆಯ ಮೊದಲ ಸಭೆ ________ ರಂದು ನಡೆಯಿತು.
3. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷತೆ ವಹಿಸಿದ್ದವರು________ .
4. ನಮ್ಮ ಸಂವಿಧಾನವು ________ ಸರ್ಕಾರ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ.
5. ನಮ್ಮ ಸಂವಿಧಾನವು ಪ್ರಜೆಗಳಿಗೆ ________ ಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ.
6. ಸಂವಿಧಾನಾತ್ಮಕ ಪರಿಹಾರಗಳ ಹಕ್ಕನ್ನು ________ ನೇ ವಿಧಿಯಲ್ಲಿ ಅಳವಡಿಸಲಾಗಿದೆ.
7. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ________ ಸಂವಿಧಾನದಿಂದ ಪಡೆಯಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

8. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರು ?
9. ಸಂವಿಧಾನ ಜಾರಿಗೆ ಬಂದಿದ್ದು ಯಾವಾಗ ?
10. ಭಾರತ ಸಂವಿಧಾನದ ಪ್ರಸ್ತಾವನೆಯ ಸಾರಾಂಶವನ್ನು ತಿಳಿಸಿ.
11. ಜಾತ್ಯತೀತತೆ ಎಂದರೇನು ?
12. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.
13. ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಾವುವು ?
14. ಮೂಲಭೂತ ಕರ್ತವ್ಯಗಳನ್ನು ಬರೆಯಿರಿ.
15. ರಾಜ್ಯನೀತಿ ನಿರ್ದೇಶಕ ತತ್ವಗಳಾವುವು ?

**III. ಚಟುವಟಿಕೆಗಳು.**

1. ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರ ಭಾವ ಚಿತ್ರಗಳು ಮತ್ತು ಮಾಹಿತಿಯನ್ನು ಸಂಗ್ರಹಿಸಿ.
2. ನೀವು ಅನುಭವಿಸುತ್ತಿರುವ ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿ.
3. ನೀವು ಪಾಲಿಸಬೇಕಾದ ಮೂಲಭೂತ ಕರ್ತವ್ಯಗಳನ್ನು ಪಟ್ಟಿಮಾಡಿ.
4. ದೇಶಾದ್ಯಂತ ಏಕರೂಪದ ನಾಗರಿಕ ಕಾನೂನು ಜಾರಿಗೆ ತರಲು ಇರುವ ಅಡೆ-ತಡೆಗಳನ್ನು ಚರ್ಚಿಸಿ.

**IV. ಯೋಜನೆ.**

1. ತರಗತಿ ಶಿಕ್ಷಕರ ನೆರವಿನಿಂದ ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಬಗ್ಗೆ ಪ್ರಬಂಧವನ್ನು ಸಿದ್ಧಪಡಿಸಿ ಹಾಗೂ ಚರ್ಚಿಸಿ.

*****

@KTBS NOT TO BE REPUBLISHED

## ಅಧ್ಯಾಯ – 6

# ಕೇಂದ್ರ ಸರ್ಕಾರ

D1E7I8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕೇಂದ್ರ ಶಾಸಕಾಂಗದಲ್ಲಿನ ರಾಜ್ಯಸಭೆ ಮತ್ತು ಲೋಕಸಭೆಯ ರಚನೆ, ಸದಸ್ಯತ್ವ, ಅರ್ಹತೆ ಮತ್ತು ಕಾರ್ಯಗಳು.
- ಕೇಂದ್ರ ಕಾರ್ಯಾಂಗ – ರಾಷ್ಟ್ರಾಧ್ಯಕ್ಷರ ಚುನಾವಣೆ, ಅರ್ಹತೆ, ಅಧಿಕಾರ ಮತ್ತು ಕಾರ್ಯಗಳು.
- ಪ್ರಧಾನ ಮಂತ್ರಿ – ಮಂತ್ರಿಮಂಡಲ, ಅಧಿಕಾರ ಮತ್ತು ಕಾರ್ಯಗಳು.

ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಭಾರತವು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ತಿಳಿದಿದ್ದೇವೆ. ಇಂಗ್ಲೆಂಡ್ ಮತ್ತು ಫ್ರಾನ್ಸ್ ಏಕಾತ್ಮಕ ಸರ್ಕಾರವನ್ನು ಹೊಂದಿವೆ. ಭಾರತವು ಒಕ್ಕೂಟ ಸರ್ಕಾರ ವ್ಯವಸ್ಥೆಯನ್ನು ಹೊಂದಿದೆ. ಅಂದರೆ ಕೇಂದ್ರದಲ್ಲಿ ಕೇಂದ್ರ ಸರ್ಕಾರ, ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳು ಅಸ್ತಿತ್ವದಲ್ಲಿವೆ. ಭಾರತವು ರಾಜ್ಯಗಳ ಒಕ್ಕೂಟವಾಗಿದ್ದು, ಅಧಿಕಾರವು ಕೇಂದ್ರ ಮತ್ತು ರಾಜ್ಯಗಳಲ್ಲಿ ಸಂವಿಧಾನಬದ್ಧವಾಗಿ ವಿಭಜನೆಯಾಗಿದೆ. ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರವು ಹೆಚ್ಚು ಅಧಿಕಾರಗಳನ್ನು ಹೊಂದಿದೆ. ಅವುಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ಚಲಾಯಿಸುತ್ತದೆ.

**ಕೇಂದ್ರ ಸರ್ಕಾರ**

| ಶಾಸಕಾಂಗ | ಕಾರ್ಯಾಂಗ | ನ್ಯಾಯಾಂಗ |
|---|---|---|
| ಲೋಕಸಭೆ (ಕೆಳಮನೆ)<br>ರಾಜ್ಯಸಭೆ (ಮೇಲ್ಮನೆ) | ರಾಷ್ಟ್ರಾಧ್ಯಕ್ಷರು<br>ಉಪರಾಷ್ಟ್ರಾಧ್ಯಕ್ಷರು<br>ಪ್ರಧಾನಮಂತ್ರಿ<br>ಕೇಂದ್ರ ಮಂತ್ರಿಮಂಡಲ<br>ಅಟಾರ್ನಿ ಜನರಲ್ | ಸರ್ವೋಚ್ಚ ನ್ಯಾಯಾಲಯ<br>ಮತ್ತು<br>ಉಚ್ಚನ್ಯಾಯಾಲಯಗಳು |

## ಕೇಂದ್ರ ಶಾಸಕಾಂಗ

ಭಾರತವು ಸಂಸದೀಯ ಮಾದರಿಯ ಸರ್ಕಾರವನ್ನು ಹೊಂದಿದ್ದು, ಕೇಂದ್ರ ಶಾಸಕಾಂಗವನ್ನು ಸಂಸತ್ತು ಎಂದು ಕರೆಯಲಾಗಿದೆ. ನಮ್ಮ ಸಂವಿಧಾನದ 79ನೇ ವಿಧಿಯು ಸಂಸತ್ತಿನ ರಚನೆಗೆ ಅವಕಾಶ

@KTBS NOT TO BE REPUBLISHED

ಮಾಡಿಕೊಟ್ಟಿದೆ. ಸಂಸತ್ತು ದ್ವಿಸದನ ಪದ್ಧತಿಯನ್ನು ಹೊಂದಿದ್ದು, ಮೇಲ್ಮನೆಯನ್ನು ರಾಜ್ಯಸಭೆ ಎಂದು, ಕೆಳಮನೆಯನ್ನು ಲೋಕಸಭೆ ಎಂದು ಕರೆಯಲಾಗುತ್ತದೆ.

**ರಾಜ್ಯಸಭೆ**

ರಾಜ್ಯಸಭೆಯು ಒಟ್ಟು 250 ಸದಸ್ಯರನ್ನು ಒಳಗೊಂಡಿದೆ. 238 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳ ಸದಸ್ಯರಿಂದ ಆಯ್ಕೆಯಾಗುತ್ತಾರೆ. ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದ ಹನ್ನೆರಡು ಮಂದಿಯನ್ನು ರಾಷ್ಟ್ರಾಧ್ಯಕ್ಷರು ರಾಜ್ಯಸಭಾ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುತ್ತಾರೆ. ಇದನ್ನು ಹಿರಿಯರ ಸದನವೆಂದು ಕರೆಯುತ್ತಾರೆ.

**ಅಧಿಕಾರಾವಧಿ :–** ಲೋಕಸಭೆಯಂತೆ ರಾಜ್ಯಸಭೆಯನ್ನು ವಿಸರ್ಜಿಸಲಾಗುವುದಿಲ್ಲ. ಆದ್ದರಿಂದ ರಾಜ್ಯಸಭೆಯನ್ನು ಶಾಶ್ವತ ಸದನ ಎಂದು ಕರೆಯಲಾಗುತ್ತದೆ. ಸದಸ್ಯರ ಅಧಿಕಾರಾವಧಿ 6 ವರ್ಷ, ಅವರಲ್ಲಿ ಪ್ರತಿ 2 ವರ್ಷಕ್ಕೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುತ್ತಾರೆ. ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ರಾಜ್ಯಸಭೆಯ ಸಭಾಪತಿಗೆ ರಾಜೀನಾಮೆ ನೀಡಬಹುದು.

**ಸದಸ್ಯರಾಗಲು ಇರಬೇಕಾದ ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.
2) 30 ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
3) ಲಾಭದಾಯಕ ಹುದ್ದೆಯಲ್ಲಿರಬಾರದು.
4) ನ್ಯಾಯಾಂಗದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು.
5) ದಿವಾಳಿಯಾಗಿರಬಾರದು.
6) ಮಾನಸಿಕ ಅಸ್ವಸ್ಥತೆ ಹೊಂದಿರಬಾರದು.
7) ಕಾಲಕಾಲಕ್ಕೆ ಸಂಸತ್ತು ನಿಗದಿಪಡಿಸುವ ಅರ್ಹತೆಗಳನ್ನು ಹೊಂದಿರಬೇಕು.

**ಉಪರಾಷ್ಟ್ರಾಧ್ಯಕ್ಷರು:** ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಸದಸ್ಯರಲ್ಲೇ ಒಬ್ಬರನ್ನು ಉಪಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡುತ್ತಾರೆ. ರಾಜ್ಯ ಸಭೆಯ ಕಾರ್ಯಕಲಾಪಗಳು ನಡೆಯಬೇಕಾದರೆ ಅದರ ಒಟ್ಟು ಸದಸ್ಯರಲ್ಲಿ $\frac{1}{10}$ ಭಾಗದಷ್ಟು ಸದಸ್ಯರು ಹಾಜರಿರಬೇಕು. (ಕನಿಷ್ಠ 25 ಮಂದಿ ಹಾಜರಿರಬೇಕು) ಇದನ್ನು ಕೋರಂ ಎಂದು ಕರೆಯುತ್ತಾರೆ. ವರ್ಷದಲ್ಲಿ ಕನಿಷ್ಠ 2 ಬಾರಿಯಾದರೂ ಅಧಿವೇಶನ ಸೇರಬೇಕು. ಸದಸ್ಯರ ಕೋರಿಕೆಯ ಮೇರೆಗೆ ವಿಶೇಷ ಅಧಿವೇಶನ ಕರೆಯಬಹುದು.

**ಲೋಕಸಭೆ :**

ಲೋಕಸಭೆಯ ಸದಸ್ಯರು ಜನರಿಂದ ನೇರವಾಗಿ ಆಯ್ಕೆಯಾಗುವುದರಿಂದ ಇದನ್ನು ಜನತಾ ಸದನ ಎಂದು ಕರೆಯುತ್ತಾರೆ. ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 543 ಇದ್ದು, ಇವರನ್ನು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಮೂಲಕ ನೇರವಾಗಿ ಚುನಾಯಿಸಲಾಗುತ್ತದೆ. ಪರಿಶಿಷ್ಟ ಜಾತಿಯವರಿಗೆ 84 ಸ್ಥಾನಗಳು ಮತ್ತು ಪರಿಶಿಷ್ಟ ಪಂಗಡದವರಿಗೆ 47 ಸ್ಥಾನಗಳನ್ನು ಮೀಸಲಿಡಲಾಗಿದೆ.

> 2020ಕ್ಕಿಂತ ಮೊದಲು ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 545 ಇತ್ತು. ಇದರಲ್ಲಿ 543 ಮಂದಿ ಸದಸ್ಯರನ್ನು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಮೂಲಕ ಚುನಾಯಿಸಲಾಗುತ್ತಿತ್ತು. ರಾಷ್ಟ್ರಾಧ್ಯಕ್ಷರು ಆಂಗ್ಲೋ–ಇಂಡಿಯನ್ ಸಮುದಾಯದಿಂದ ಇಬ್ಬರನ್ನು ಲೋಕಸಭಾ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುತ್ತಿದ್ದರು ಆದರೆ 2020ರ 104ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ ಆಂಗ್ಲೋ–ಇಂಡಿಯನ್ ಸಮುದಾಯದ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಪದ್ಧತಿಯನ್ನು ಮುಂದುವರೆಸಲಾಗಿಲ್ಲ. ಆದ್ದರಿಂದ ಪ್ರಸ್ತುತ ಲೋಕಸಭಾ ಸದಸ್ಯರ ಒಟ್ಟು ಸಂಖ್ಯೆ 543 ಆಗಿದೆ.

NOT TO BE REPUBLISHED ©KTBS

ಸಂವಿಧಾನದ 106ನೇ ತಿದ್ದುಪಡಿ ಕಾಯಿದೆಯು (ನಾರಿಶಕ್ತಿ ವಂದನಾ ಅಧಿನಿಯಮ) ಜಾರಿಯಾದ ನಂತರ ಲೋಕಸಭೆಯ ಒಟ್ಟು ಸ್ಥಾನಗಳಲ್ಲಿ ಶೇ.33 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಬೇಕಾಗುತ್ತದೆ.

**ಅಧಿಕಾರಾವಧಿ :** ಲೋಕಸಭೆಯ ಅಧಿಕಾರಾವಧಿ 5 ವರ್ಷಗಳು. ಅವಧಿ ಮುಗಿಯುವುದಕ್ಕೆ ಮೊದಲೇ ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲದ ಸಲಹೆ ಮೇರೆಗೆ ರಾಷ್ಟ್ರಾಧ್ಯಕ್ಷರು ಲೋಕಸಭೆಯನ್ನು ವಿಸರ್ಜಿಸಬಹುದು. ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಮಯದಲ್ಲಿ ಅಧಿಕಾರ ಅವಧಿಯನ್ನು ಒಂದು ಬಾರಿಗೆ ಒಂದು ವರ್ಷದಂತೆ ಅನಿರ್ದಿಷ್ಟಾವಧಿಯವರೆಗೆ ವಿಸ್ತರಿಸಬಹುದು.

**ಸದಸ್ಯರಾಗಲು ಇರಬೇಕಾದ ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.
2) 25 ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
3) ಲಾಭದಾಯಕ ಹುದ್ದೆಯಲ್ಲಿರಬಾರದು.
4) ನ್ಯಾಯಾಂಗದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು.
5) ದಿವಾಳಿಯಾಗಿರಬಾರದು.
6) ಮಾನಸಿಕ ಅಸ್ವಸ್ಥತೆ ಹೊಂದಿರಬಾರದು.
7) ಕಾಲಕಾಲಕ್ಕೆ ಸಂಸತ್ತು ನಿಗದಿಪಡಿಸುವ ಅರ್ಹತೆಗಳನ್ನು ಹೊಂದಿರಬೇಕು.

**ಲೋಕಸಭಾಧ್ಯಕ್ಷರು :** ಲೋಕಸಭಾ ಸದಸ್ಯರಲ್ಲೇ ಒಬ್ಬರನ್ನು ಸಭಾಧ್ಯಕ್ಷ (ಸ್ಪೀಕರ್) ರನ್ನಾಗಿ ಮತ್ತೊಬ್ಬರನ್ನು ಉಪ ಸಭಾಧ್ಯಕ್ಷ (ಡೆಪ್ಯೂಟಿ ಸ್ಪೀಕರ್)ರನ್ನಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಸಭಾಧ್ಯಕ್ಷರಾಗಿ ಆಯ್ಕೆಯಾದ ನಂತರ ಅವರು ಸದನದಲ್ಲಿ ಪಕ್ಷಾತೀತವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಭೆಯ ಕಾರ್ಯಕಲಾಪಗಳ ಅಧ್ಯಕ್ಷತೆ ವಹಿಸಿ ಸದನದಲ್ಲಿ ಶಾಂತಿ ಮತ್ತು ಶಿಸ್ತನ್ನು ಕಾಪಾಡುತ್ತಾರೆ. ಸದನದಲ್ಲಿ ಚರ್ಚೆಗಳು, ಮತದಾನ ಹಾಗೂ ನಿರ್ಣಯಗಳನ್ನು ವಿಧಿ ವಿಧಾನಗಳ ಪ್ರಕಾರ ನಡೆಸಿಕೊಡುವ ಜವಾಬ್ದಾರಿ ಸಭಾಧ್ಯಕ್ಷರದ್ದಾಗಿರುತ್ತದೆ. ನಿಯಮಗಳ ಬಗ್ಗೆ ಸ್ಪಷ್ಟತೆ ಹಾಗೂ ನಿರ್ಣಯ (Ruling) ಕೊಡುವ ಅಧಿಕಾರವೂ ಇವರದ್ದೇ ಆಗಿರುತ್ತದೆ. ಸದನದಲ್ಲಿ ಎಲ್ಲರೂ (ಪ್ರಧಾನಮಂತ್ರಿಯನ್ನೊಳಗೊಂಡು) ಸಭಾಧ್ಯಕ್ಷರಿಗೆ ಗೌರವ ನೀಡುವುದು ಶಿಷ್ಟಾಚಾರ. ಮಸೂದೆಯ ಮೇಲೆ ಸಮ ಪ್ರಮಾಣದ ಮತಗಳು ಬಿದ್ದಾಗ ನಿರ್ಣಾಯಕ ಮತ ಚಲಾಯಿಸುತ್ತಾರೆ. ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಸಭಾಧ್ಯಕ್ಷರು ಕಾರ್ಯಕಲಾಪ ನಿರ್ವಹಿಸುತ್ತಾರೆ.

**ಚಟುವಟಿಕೆ**

ಶಾಲೆಯಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಆಯೋಜಿಸಿ ಇದರಲ್ಲಿ ಪ್ರಧಾನಮಂತ್ರಿ, ಸ್ಪೀಕರ್ ಮತ್ತು ವಿರೋಧ ಪಕ್ಷದ ನಾಯಕರಾಗಿ ಭಾಗವಹಿಸಿ ಅನುಭವವನ್ನು ಹಂಚಿಕೊಳ್ಳಿ.

**ವಿರೋಧ ಪಕ್ಷ :** ಸಂಬಂಧಪಟ್ಟ ಸದನದ (ಲೋಕಸಭೆ ಅಥವಾ ರಾಜ್ಯಸಭೆ) ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಶೇ.10 ರಷ್ಟು ಸ್ಥಾನಗಳನ್ನು ಪಡೆದ ರಾಜಕೀಯ ಪಕ್ಷವನ್ನು ವಿರೋಧ ಪಕ್ಷವೆಂದು ಕರೆಯಲಾಗುತ್ತದೆ.

**ವಿರೋಧ ಪಕ್ಷದ ನಾಯಕರ ಪಾತ್ರ ಮತ್ತು ಕಾರ್ಯ :**

* ಸರ್ಕಾರವು ಆಡಳಿತದಲ್ಲಿ ತಪ್ಪು ಎಸಗಿದರೆ ಅವುಗಳನ್ನು ಎತ್ತಿ ತೋರಿಸುವುದು.
* ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುವುದು.
* ಸರ್ಕಾರ, ಮಂತ್ರಿ ಮಂಡಲ ಮತ್ತು ಅಧಿಕಾರಿಗಳನ್ನು ಎಚ್ಚರಿಸುವುದು.
* ವಿರೋಧ ಪಕ್ಷದ ನಾಯಕರಿಗೆ ಗೌರವಾನ್ವಿತ ಸ್ಥಾನವಿದೆ.

**ಚಟುವಟಿಕೆ**

ಸಂಸದ್ ಟಿವಿ (Sansad TV) ಚಾನೆಲ್‌ನಲ್ಲಿ ಪ್ರಸಾರವಾಗುವ ಸಂಸತ್ತಿನ ಕಲಾಪದ ನೇರಪ್ರಸಾರವನ್ನು ವೀಕ್ಷಿಸಿ ಕೆಳಗಿನವುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

1) ಸಭಾಧ್ಯಕ್ಷರ ಪಾತ್ರ
2) ವಿರೋಧ ಪಕ್ಷದ ಪಾತ್ರ
3) ಆಡಳಿತ ಪಕ್ಷದ ನಾಯಕರ ಪಾತ್ರ

NOT TO BE REPUBLISHED © KTBS

**ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳು**

**ಶಾಸನೀಯ ಅಧಿಕಾರ ಮತ್ತು ಕಾರ್ಯಗಳು :–** ಸಂಸತ್ತು ಮೂಲಭೂತವಾಗಿ ಕಾನೂನು ಮಾಡುವ ಅಂಗವಾಗಿದೆ. ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನ ಮಾಡುವ ಅಧಿಕಾರ ಸಂಸತ್ತಿಗೆ ಇದೆ. ಉದಾಹರಣೆ – ಹಣಕಾಸು, ರಕ್ಷಣೆ, ಬಾಹ್ಯಾಕಾಶ, ದೂರಸಂಪರ್ಕ, ರೈಲ್ವೇ, ವಿದೇಶಾಂಗ ವ್ಯವಹಾರ, ಪರಮಾಣು ಶಕ್ತಿ ಇತ್ಯಾದಿ. ಸಾಮಾನ್ಯ ಮಸೂದೆಗಳನ್ನು ಲೋಕಸಭೆ ಅಥವಾ ರಾಜ್ಯಸಭೆಯಲ್ಲಿ ಮಂಡಿಸಬಹುದಾಗಿದೆ. ಆದರೆ ಮಸೂದೆ ಕಾಯಿದೆಯಾಗಬೇಕಾದರೆ ಚರ್ಚೆಗಳ ಮೂಲಕ ಉಭಯ ಸದನಗಳ ಅನುಮೋದನೆ ಪಡೆಯಬೇಕು. ಮಸೂದೆಯ ಪರ ಮತ್ತು ವಿರೋಧವಾಗಿ ಸಮಮತಗಳು ಬಂದಾಗ ಸಭಾಧ್ಯಕ್ಷರು (ಸ್ಪೀಕರ್) ತಮ್ಮ ನಿರ್ಣಾಯಕ ಮತ ಚಲಾಯಿಸುತ್ತಾರೆ. ಮಸೂದೆಯ ಬಗ್ಗೆ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯ ಮೂಡಿದರೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಜಂಟಿಸಭೆಯನ್ನು ಕರೆದು ಇತ್ಯರ್ಥಗೊಳಿಸಬಹುದು. ಉಭಯ ಸದನಗಳ ಒಪ್ಪಿಗೆ ದೊರೆತರೆ ಆ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಅನುಮೋದನೆಗಾಗಿ ಕಳುಹಿಸಿಕೊಡಲಾಗುತ್ತದೆ. ರಾಷ್ಟ್ರಾಧ್ಯಕ್ಷರ ಅನುಮೋದನೆಯ ನಂತರ ಮಸೂದೆಯು ಕಾಯಿದೆಯಾಗುತ್ತದೆ.

**ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :–** ಭಾರತ ಸಂಸದೀಯ ಪದ್ಧತಿಯ ಸರ್ಕಾರವಾಗಿದೆ. ಆದ್ದರಿಂದ ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿಮಂಡಲ ನೈಜ ಕಾರ್ಯಾಂಗವಾಗಿದೆ. ಕೇಂದ್ರ ಮಂತ್ರಿಮಂಡಲವು ಸಂಸತ್ತಿಗೆ ಜವಾಬ್ದಾರಿಯುತವಾಗಿದೆ. ಸಂಸತ್ತು ಮಂತ್ರಿಮಂಡಲವನ್ನು ಪ್ರಶ್ನಿಸುವ ಮೂಲಕ ಕಾರ್ಯಾಂಗದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ. ಲೋಕಸಭೆಯ ವಿಶ್ವಾಸವಿರುವವರೆಗೂ ಮಂತ್ರಿಮಂಡಲವು ಅಧಿಕಾರದಲ್ಲಿ ಮುಂದುವರೆಯುತ್ತದೆ. ಲೋಕಸಭೆಯ ವಿಶ್ವಾಸ ಕಳೆದುಕೊಂಡಾಗ ಮಂತ್ರಿಮಂಡಲವು ರಾಜೀನಾಮೆ ನೀಡಬೇಕಾಗುತ್ತದೆ. ಲೋಕಸಭೆಯು ಸರ್ಕಾರದ ನೀತಿ ಹಾಗೂ ಯೋಜನೆಗಳನ್ನು ಕುರಿತು ಅವಿಶ್ವಾಸ ವ್ಯಕ್ತಪಡಿಸಿದರೆ, ಕಾರ್ಯಾಂಗ (ಪ್ರಧಾನಿ ನೇತೃತ್ವದ ಮಂತ್ರಿಮಂಡಲ) ರಾಜೀನಾಮೆ ನೀಡಬೇಕಾಗುತ್ತದೆ.

**ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು :–** ಸಂಸತ್ತು ರಾಷ್ಟ್ರದ ಹಣಕಾಸಿನ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದೆ. ಸಂಸತ್ತಿನ ಅನುಮೋದನೆ ಇಲ್ಲದೆ ಸರ್ಕಾರವು ಯಾವುದೇ ತೆರಿಗೆಯನ್ನು ಸಂಗ್ರಹಿಸುವಂತಿಲ್ಲ ಮತ್ತು ಹಣವನ್ನು ಖರ್ಚು ಮಾಡುವಂತಿಲ್ಲ. ಹಣಕಾಸಿನ ಮಸೂದೆಯನ್ನು ಮೊದಲು ಲೋಕಸಭೆಯಲ್ಲಿಯೇ ಮಂಡಿಸಬೇಕು. ಹಣಕಾಸು ಮಸೂದೆಗೆ ಲೋಕಸಭೆಯ ಅನುಮೋದನೆ ಪಡೆದ ನಂತರ ರಾಜ್ಯಸಭೆಗೆ ಕಳುಹಿಸಲಾಗುತ್ತದೆ. ರಾಜ್ಯಸಭೆಯು ಈ ಮಸೂದೆಯನ್ನು 14 ದಿನಗಳ ಒಳಗಾಗಿ ತನ್ನ ಒಪ್ಪಿಗೆಯೊಂದಿಗೆ ಲೋಕಸಭೆಗೆ ಹಿಂದಿರುಗಿಸಬೇಕು, ತಪ್ಪಿದಲ್ಲಿ ಈ ಮಸೂದೆಗೆ ಉಭಯ ಸದನಗಳ ಅನುಮೋದನೆ ದೊರೆತಿದೆ ಎಂದು ಪರಿಗಣಿಸಿ ಅದನ್ನು ರಾಷ್ಟ್ರಾಧ್ಯಕ್ಷರ ಅನುಮೋದನೆಗೆ ಕಳುಹಿಸಲಾಗುತ್ತದೆ.

**ನ್ಯಾಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :–** ಸಂಸತ್ತು ನ್ಯಾಯಾಂಗೀಯ ಅಧಿಕಾರ ಮತ್ತು ಕಾರ್ಯಗಳನ್ನು ಹೊಂದಿದೆ. ಸಂಸತ್ತು ಮಹಾಭಿಯೋಗ ಪ್ರಕ್ರಿಯೆಯ ಮೂಲಕ ರಾಷ್ಟ್ರಾಧ್ಯಕ್ಷರನ್ನು ಪದಚ್ಯುತಿಗೊಳಿಸುವ ಅಧಿಕಾರ ಹೊಂದಿದೆ. ಸಂಸತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯಗಳ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವಂತೆ ರಾಷ್ಟ್ರಾಧ್ಯಕ್ಷರಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಹೊಂದಿದೆ.

**ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಮತ್ತು ಕಾರ್ಯಗಳು :–** ಭಾರತ ಸಂವಿಧಾನದ 368ನೇ ವಿಧಿಯನ್ವಯ ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗಿದೆ.ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಯಾವುದೇ ಸದನದಲ್ಲಿ ಮೊದಲು ಮಂಡಿಸಬಹುದು. ಆದರೆ ಸಂವಿಧಾನ ತಿದ್ದುಪಡಿ ಮಸೂದೆಗೆ ಸಂಸತ್ತಿನ ಉಭಯ ಸದನಗಳ ಪ್ರತ್ಯೇಕ ಅಂಗೀಕಾರ ಬೇಕೇಬೇಕು. ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಇನ್ನೊಂದು ಸದನ ತಿರಸ್ಕರಿಸಿದರೆ ಸಂವಿಧಾನದ ತಿದ್ದುಪಡಿ ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಸಂಸತ್ತು ಅಂಗೀಕರಿಸಿದ ಸಂವಿಧಾನ ತಿದ್ದುಪಡಿ ಮಸೂದೆಗೆ ಅರ್ಧದಷ್ಟು ರಾಜ್ಯಗಳ ವಿಧಾನಸಭೆಗಳ ಸಹಮತವೂ ಅವಶ್ಯಕವಾಗಿದೆ.

NOT TO BE REPUBLISHED ©KTBS

**ಇತರೆ ಅಧಿಕಾರ ಮತ್ತು ಕಾರ್ಯಗಳು :–**

1) ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ರಚನೆ ಮತ್ತು ವ್ಯಾಪ್ತಿಯ ಬಗ್ಗೆ ಕಾನೂನು ರೂಪಿಸುವುದು.
2) ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸುವುದು.
3) ಹೊಸ ರಾಜ್ಯಗಳ ರಚನೆ, ರಾಜ್ಯಗಳ ಹೆಸರು ಬದಲಾವಣೆ, ರಾಜ್ಯಗಳ ಗಡಿ ಬದಲಾವಣೆ.
4) ಕೇಂದ್ರ ಲೋಕಸೇವಾ ಆಯೋಗ, ಕೇಂದ್ರ ಹಣಕಾಸು ಆಯೋಗ, ಭಾರತ ಚುನಾವಣಾ ಆಯೋಗ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಮೊದಲಾದ ಆಯೋಗಗಳ ವರದಿಗಳ ಬಗ್ಗೆ ಚರ್ಚೆ ನಡೆಸುವುದು.
5) ರಾಷ್ಟ್ರೀಯ ತುರ್ತು ಪರಿಸ್ಥಿತಿ, ರಾಜ್ಯ ತುರ್ತು ಪರಿಸ್ಥಿತಿ ಮತ್ತು ಹಣಕಾಸಿನ ತುರ್ತು ಪರಿಸ್ಥಿತಿಯನ್ನು ಅನುಮೋದಿಸುವುದು.



**ನೂತನ ಸಂಸತ್ ಭವನ**

NOT TO BE REPUBLISHED

**ನಿಮಗಿದು ತಿಳಿದಿರಲಿ :**

## ನೂತನ ಸಂಸತ್ ಭವನ

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಚೈತನ್ಯದ ಸಂಕೇತ ನಮ್ಮ ಸಂಸತ್ ಭವನ. 1927 ರಲ್ಲಿ ಲೋಕಾರ್ಪಣೆಯಾದ ಭಾರತದ ಹಳೆಯ ಸಂಸತ್ ಭವನವು ದೇಶದ ಸ್ವಾತಂತ್ರ್ಯಾನಂತರದಿಂದ 2023 ರವರೆಗೆ ಸರಿಸುಮಾರು 75 ವರ್ಷಗಳ ಸಂಸದೀಯ ಚಟುವಟಿಕೆಗಳಿಗೆ ಸಾಕ್ಷಿಯಾಗಿದೆ.

ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಬೇರುಗಳು ಬಲವಾದಂತೆ ಸಂಸದೀಯ ಕಾರ್ಯ ಚಟುವಟಿಕೆಗಳು ಹಾಗೂ ಈ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚಾದಂತೆ ನೂತನ ಸಂಸತ್ ಭವನದ ಅವಶ್ಯಕತೆ ಉಂಟಾಯಿತು. ಈ ಹಿನ್ನೆಲೆಯಲ್ಲಿ ಸೆಂಟ್ರಲ್ ವಿಸ್ತಾಯೋಜನೆಯ ಭಾಗವಾಗಿ ನೂತನ ಸಂಸತ್ ಭವನವನ್ನು ನಿರ್ಮಿಸಿ 28–05–2023 ರಂದು ಲೋಕಾರ್ಪಣೆಗೊಳಿಸಲಾಯಿತು.

**ನೂತನ ಸಂಸತ್ ಭವನದ ವೈಶಿಷ್ಟ್ಯಗಳು**

1. ಸುಮಾರು 65,000 ಚ.ಮೀ. ಗಳಷ್ಟು ವಿಸ್ತೀರ್ಣವನ್ನು ಹೊಂದಿದೆ.
2. 888 ಆಸನಗಳ ಲೋಕಸಭಾ ಸಭಾಂಗಣ ಹಾಗೂ 384 ಆಸನಗಳ ರಾಜ್ಯಸಭಾ ಸಭಾಂಗಣವನ್ನು ಹೊಂದಿದೆ.
3. ಪರಿಸರ ಸ್ನೇಹಿ ಹಾಗೂ ದಿವ್ಯಾಂಗ ಸ್ನೇಹಿ ಕಟ್ಟಡವಾಗಿದೆ.
4. ಅತ್ಯಾಧುನಿಕ ಸೌಲಭ್ಯಗಳುಳ್ಳ ಸಭಾಂಗಣವನ್ನು ಹೊಂದಿದೆ.

## ಕೇಂದ್ರ ಕಾರ್ಯಾಂಗ

ಕೇಂದ್ರ ಶಾಸಕಾಂಗ ರೂಪಿಸುವ ಕಾಯಿದೆಗಳನ್ನು ಜಾರಿಗೊಳಿಸುವುದೇ ಕೇಂದ್ರ ಕಾರ್ಯಾಂಗ. ಇದು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಹಾಗೂ ನೀತಿಗಳನ್ನು ಜಾರಿಗೊಳಿಸುತ್ತದೆ. ಕೇಂದ್ರ ಕಾರ್ಯಾಂಗವು ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲ ಮತ್ತು ಅಟಾರ್ನಿ ಜನರಲ್‌ರವರನ್ನು ಒಳಗೊಂಡಿರುತ್ತದೆ. ರಾಷ್ಟ್ರಾಧ್ಯಕ್ಷರು ಕಾರ್ಯಾಂಗದ ನಾಮಮಾತ್ರ ಮುಖ್ಯಸ್ಥರಾದರೆ ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲ ನೈಜ ಕಾರ್ಯಾಂಗವಾಗಿದೆ.

## ರಾಷ್ಟ್ರಾಧ್ಯಕ್ಷರು

ನಮ್ಮ ಸಂವಿಧಾನದ 52 ನೇ ವಿಧಿಯು ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಭಾರತದ ರಾಷ್ಟ್ರಾಧ್ಯಕ್ಷರು ಸಂವಿಧಾನದ ಮುಖ್ಯಸ್ಥರು, ರಾಷ್ಟ್ರದ ಪ್ರಥಮ ಪ್ರಜೆ, ರಾಷ್ಟ್ರದ ಮುಖ್ಯಸ್ಥರು, ಕೇಂದ್ರ ಕಾರ್ಯಾಂಗದ ಮುಖ್ಯಸ್ಥರು ಹಾಗೂ ಮೂರು ಸೇನಾಪಡೆಗಳ (ಭೂಸೇನೆ, ವಾಯುಪಡೆ, ನೌಕಾಪಡೆ) ಮಹಾದಂಡನಾಯಕರೂ ಆಗಿದ್ದಾರೆ. ರಾಷ್ಟ್ರದ ಸಮಸ್ತ ಅಧಿಕಾರವೆಲ್ಲವೂ ಇವರಿಗೆ ಸೇರಿದ್ದು, ಸರ್ವೋನ್ನತ ಸ್ಥಾನವನ್ನು ಹೊಂದಿದ್ದಾರೆ. ಇಂತಹ ಸ್ಥಾನವನ್ನು ಅಲಂಕರಿಸುವವರು ಭಾರತದ ಸತ್ಪ್ರಜೆಯಾಗಿರಬೇಕು.

**ರಾಷ್ಟ್ರಾಧ್ಯಕ್ಷರ ಚುನಾವಣಾ ವಿಧಾನ :** ಸಂವಿಧಾನದ 54 ಮತ್ತು 55 ನೇ ವಿಧಿಯಲ್ಲಿ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸುವ ವಿಧಾನವನ್ನು ತಿಳಿಸಲಾಗಿದೆ. ರಾಷ್ಟ್ರಾಧ್ಯಕ್ಷರನ್ನು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ಎಲ್ಲಾ ರಾಜ್ಯಗಳ ಮತ್ತು ದೆಹಲಿ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳ ಚುನಾಯಿತ ಸದಸ್ಯರಿಂದ ಕೂಡಿದ ಮತದಾರ ವರ್ಗ ಚುನಾಯಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಇವರಿಗೆ ಪ್ರಮಾಣ ವಚನ ಬೋಧಿಸುತ್ತಾರೆ. ಇವರ ಅಧಿಕಾರಾವಧಿ 5 ವರ್ಷಗಳಾಗಿದ್ದು ಪುನರಾಯ್ಕೆಗೆ ಅರ್ಹರಾಗಿರುತ್ತಾರೆ. ಸಂವಿಧಾನವನ್ನು ಉಲ್ಲಂಘಿಸಿದಲ್ಲಿ ಮಹಾಭಿಯೋಗ ಪ್ರಕ್ರಿಯೆಯ ಮೂಲಕ ರಾಷ್ಟ್ರಾಧ್ಯಕ್ಷರನ್ನು ಪದಚ್ಯುತಗೊಳಿಸುವ ಅಧಿಕಾರ ಸಂಸತ್ತಿಗಿದೆ.

©KTBS NOT TO BE REPUBLISHED

> **ಮಹಾಭಿಯೋಗ :** ಸಂವಿಧಾನದ 61ನೇ ವಿಧಿಯು ರಾಷ್ಟ್ರಾಧ್ಯಕ್ಷರ ಪದಚ್ಯುತಿ ವಿಧಾನಕ್ಕೆ ಸಂಬಂಧಿಸಿದೆ. ಇವರನ್ನು ಸಂವಿಧಾನದ ಉಲ್ಲಂಘನೆಯ ಆರೋಪದ ಮೇಲೆ ಮಹಾಭಿಯೋಗ ಅಥವಾ ದೋಷಾರೋಪಣೆ ಪ್ರಕ್ರಿಯೆಯ ಮೂಲಕ ಪದಚ್ಯುತಿಗೊಳಿಸಬಹುದು. ಸಂವಿಧಾನವು ಸಂಸತ್ತಿಗೆ ಈ ಅಧಿಕಾರವನ್ನು ನೀಡಿದೆ. ಆರೋಪ ಪಟ್ಟಿಯನ್ನು ಸಿದ್ಧಪಡಿಸುವುದರ ಮೂಲಕ ಸಂಸತ್ತಿನ ಯಾವುದೇ ಸದನ ರಾಷ್ಟ್ರಾಧ್ಯಕ್ಷರ ಪದಚ್ಯುತಿಗೆ ಮುಂದಾಗಬಹುದು. ಆರೋಪ ಪಟ್ಟಿಯು ಅಂತಹ ಸದನದ ಒಟ್ಟು ಸದಸ್ಯರ ಪೈಕಿ 1/4 ರಷ್ಟು ಸದಸ್ಯರ ಸಹಿಯನ್ನು ಹೊಂದಿರಬೇಕು. ಆ ಸದನವು ಪದಚ್ಯುತಿ ನಿರ್ಣಯ ಮಂಡನೆಗೆ ಸಂಬಂಧಿಸಿದಂತೆ 14 ದಿನಗಳ ಮುಂಚಿತವಾಗಿ ರಾಷ್ಟ್ರಾಧ್ಯಕ್ಷರಿಗೆ ಒಂದು ಲಿಖಿತ ಸೂಚನೆ ನೀಡಬೇಕು. ನಂತರ ಆ ಸದನದ ಒಟ್ಟು ಸದಸ್ಯರಲ್ಲಿ 2/3 ರಷ್ಟು ಸದಸ್ಯರ ಬಹುಮತದಿಂದ ರಾಷ್ಟ್ರಾಧ್ಯಕ್ಷರ ಪದಚ್ಯುತಿ ನಿರ್ಣಯವನ್ನು ಅನುಮೋದಿಸಬೇಕು. ಇನ್ನೊಂದು ಸದನದಲ್ಲಿಯೂ ಸಹ ರಾಷ್ಟ್ರಾಧ್ಯಕ್ಷರ ಪದಚ್ಯುತಿ ನಿರ್ಣಯವು 2/3ರಷ್ಟು ಬಹುಮತದೊಂದಿಗೆ ಅನುಮೋದನೆಯಾದರೆ ರಾಷ್ಟ್ರಾಧ್ಯಕ್ಷರ ಪದಚ್ಯುತಿಯಾಗುತ್ತದೆ. ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಇದುವರೆಗೆ ರಾಷ್ಟ್ರಾಧ್ಯಕ್ಷರು ಪದಚ್ಯುತಿಯಾಗಿರುವ ನಿದರ್ಶನವಿಲ್ಲ.

**ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.
2) 35 ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
3) ಲೋಕಸಭಾ ಸದಸ್ಯರಾಗಲು ಇರಬೇಕಾದ ಅರ್ಹತೆಗಳನ್ನು ಹೊಂದಿರಬೇಕು.
4) ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು.



ರಾಷ್ಟ್ರಾಧ್ಯಕ್ಷರ ಭವನ – ನವದೆಹಲಿ

**ರಾಷ್ಟ್ರಾಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳು :**

**ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :** ರಾಷ್ಟ್ರದ ಎಲ್ಲಾ ಆಡಳಿತವು ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿಯೇ ನಡೆಯುತ್ತದೆ. ಪ್ರಧಾನಮಂತ್ರಿಯವರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ನಂತರ ಪ್ರಧಾನಿಯವರ ಸಲಹೆ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ. ಭಾರತದ ಉನ್ನತ ಹುದ್ದೆಗಳಾದ ಅಟಾರ್ನಿ ಜನರಲ್, ಮಹಾಲೇಖಪಾಲರು ಮತ್ತು ಲೆಕ್ಕ ನಿಯಂತ್ರಕರು (CAG-Controller and Auditor General), ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಉಚ್ಚನ್ಯಾಯಾಲಯಗಳ ನ್ಯಾಯಾಧೀಶರು, ಕೇಂದ್ರ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯಗಳ ರಾಜ್ಯಪಾಲರುಗಳು, ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇತರ ಚುನಾವಣಾ ಆಯುಕರು ಹಾಗೂ ರಕ್ಷಣಾ ಪಡೆಗಳ ಮುಖ್ಯಸ್ಥರು ಹಾಗೂ ವಿವಿಧ ರಾಷ್ಟ್ರಗಳಿಗೆ ರಾಯಭಾರಿಗಳನ್ನು ನೇಮಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದೆ. ಹೀಗೆ ನೇಮಕಗೊಂಡವರನ್ನು ಸಂವಿಧಾನಬದ್ಧವಾಗಿ ಪದಚ್ಯುತಗೊಳಿಸುವ ಅಧಿಕಾರವೂ ರಾಷ್ಟ್ರಾಧ್ಯಕ್ಷರಿಗಿದೆ.

**ಶಾಸನೀಯ ಅಧಿಕಾರ ಮತ್ತು ಕಾರ್ಯಗಳು :–** ರಾಷ್ಟ್ರಾಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯುವ, ಮುಂದೂಡುವ, ಸದನಗಳನ್ನು ಉದ್ದೇಶಿಸಿ ಹಾಗೂ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವ ಹಾಗೂ ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ ಹೊಂದಿದ್ದಾರೆ. ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಮಸೂದೆಗಳಿಗೆ ಒಪ್ಪಿಗೆ ನೀಡುವ, ಮರು ಪರಿಶೀಲನೆಗಾಗಿ ಸಂಸತ್ತಿಗೆ ಹಿಂದಿರುಗಿಸುವ ಹಾಗೂ ಮಸೂದೆಗೆ ಸಹಿ ಹಾಕದೆ ತಿರಸ್ಕರಿಸುವ ಅಧಿಕಾರ ಹೊಂದಿದ್ದಾರೆ. 2020 ಕ್ಕಿಂತ ಮುಂಚಿತವಾಗಿ ಲೋಕಸಭೆಗೆ ಇಬ್ಬರು ಆಂಗ್ಲೋ ಇಂಡಿಯನ್ನರನ್ನು ಲೋಕಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗಿತ್ತು. ಆದರೆ 2020ರಲ್ಲಿ ಜಾರಿಗೆ ಬಂದ 104ನೇ ಸಂವಿಧಾನ ತಿದ್ದುಪಡಿ ಕಾಯಿದೆಯು ಈ ನಾಮ ನಿರ್ದೇಶನವನ್ನು ಮುಂದುವರೆಸಿಲ್ಲ. ಕಲೆ, ವಿಜ್ಞಾನ, ಸಮಾಜಸೇವೆ, ಸಾಹಿತ್ಯ ಈ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ 12 ಜನರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಅಧಿಕಾರವೂ ರಾಷ್ಟ್ರಾಧ್ಯಕ್ಷರಿಗಿದೆ. ಇವರು ತಮಗಿರುವ ಅಧಿಕಾರಗಳನ್ನು ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲದ ಸಲಹೆಯಂತೆ ಚಲಾಯಿಸುತ್ತಾರೆ.

**ನ್ಯಾಯಿಕ ಅಧಿಕಾರ ಮತ್ತು ಕಾರ್ಯಗಳು :–** ಸರ್ವೋಚ್ಚ ನ್ಯಾಯಾಲಯ, ಉಚ್ಚನ್ಯಾಯಾಲಯಗಳು ಮತ್ತು ಸೇನಾ ನ್ಯಾಯಾಲಯಗಳು ಅಪರಾಧಿಗಳಿಗೆ ನೀಡಿದ ಶಿಕ್ಷೆಯನ್ನು ಕಡಿಮೆ ಮಾಡುವ, ಬದಲಿಸುವ, ಕ್ಷಮಾದಾನ ನೀಡುವ ಹಾಗೂ ಮರಣ ದಂಡನೆಯಂತಹ ಕಠಿಣ ಶಿಕ್ಷೆಯನ್ನು ರದ್ದುಪಡಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರಾಧ್ಯಕ್ಷರು ಕಾನೂನಾತ್ಮಕ, ಸಂವಿಧಾನಾತ್ಮಕ ಮತ್ತು ಸಾರ್ವಜನಿಕ ಮಹತ್ವ ಹೊಂದಿದ ವಿಷಯಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಬಹುದು.

NOT TO BE REPUBLISHED

# ನಮ್ಮ ರಾಷ್ಟ್ರಾಧ್ಯಕ್ಷರು


ಡಾ. ರಾಜೇಂದ್ರ ಪ್ರಸಾದ್
1950–1962


ಡಾ. ಎಸ್. ರಾಧಾಕೃಷ್ಣನ್
1962–1967


ಡಾ. ಜಾಕೀರ್ ಹುಸೇನ್
1967–1969


ಶ್ರೀ ವಿ.ವಿ. ಗಿರಿ
1969–1974


ಡಾ. ಫಕ್ರುದ್ದೀನ್ ಅಲಿ ಅಹಮದ್
1974–1977


ಶ್ರೀ ನೀಲಂ ಸಂಜೀವರೆಡ್ಡಿ
1977–1982


ಶ್ರೀ ಗಿಯಾನಿ ಜೈಲ್ ಸಿಂಗ್
1982–1987


ಶ್ರೀ ಆರ್. ವೆಂಕಟರಾಮನ್
1987–1992


ಡಾ. ಶಂಕರ್ ದಯಾಳ್ ಶರ್ಮ
1992–1997


ಡಾ. ಕೆ.ಆರ್. ನಾರಾಯಣನ್
1997–2002


ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
2002–2007


ಶ್ರೀಮತಿ ಪ್ರತಿಭಾದೇವಿ ಸಿಂಗ್
ಪಾಟೀಲ್, 2007–2012


ಶ್ರೀ ಪ್ರಣಬ್ ಮುಖರ್ಜಿ
2012–2017


ಶ್ರೀ ರಾಮ್‌ನಾಥ್ ಕೋವಿಂದ್
2017–2022


ಶ್ರೀಮತಿ ದ್ರೌಪದಿ ಮುರ್ಮು
2022–

@KTBS NOT TO BE REPUBLISHED

**ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು :–** ರಾಷ್ಟ್ರಾಧ್ಯಕ್ಷರ ಪೂರ್ವಾನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವಂತಿಲ್ಲ. ಕೇಂದ್ರಹಣಕಾಸು ಆಯೋಗದ ವರದಿ, ಮಹಾಲೇಖಪಾಲರು ಮತ್ತು ಲೆಕ್ಕ ನಿಯಂತ್ರಕರು ನೀಡಿದ ವರದಿಯನ್ನು ಸಂಸತ್ತಿನಲ್ಲಿ ಚರ್ಚಿಸುವಂತೆ ರಾಷ್ಟ್ರಾಧ್ಯಕ್ಷರು ಶಿಫಾರಸ್ಸು ಮಾಡುತ್ತಾರೆ. ಭಾರತದ ಸಂಚಿತ ನಿಧಿ ಮತ್ತು ತುರ್ತು ನಿಧಿ ಇವರ ನಿಯಂತ್ರಣದಲ್ಲಿರುತ್ತವೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೆ ಈ ನಿಧಿಯಿಂದ ವೇತನ ಬಿಡುಗಡೆ ಮಾಡಲಾಗುತ್ತದೆ. ಹಣಕಾಸು ಮಸೂದೆ ಕಾಯ್ದೆಯಾಗಬೇಕಾದರೆ ಅವರ ಒಪ್ಪಿಗೆ ಅವಶ್ಯಕ.

**ಸೇನಾ ಅಧಿಕಾರಗಳು ಮತ್ತು ಕಾರ್ಯಗಳು :** ರಾಷ್ಟ್ರಾಧ್ಯಕ್ಷರು ಸಮಸ್ತ ಸೇನಾ ಪಡೆಗಳ ಮಹಾದಂಡನಾಯಕರಾಗಿದ್ದು, ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಯ ಮುಖ್ಯಸ್ಥರನ್ನು ಕೇಂದ್ರ ಮಂತ್ರಿಮಂಡಲದ ಸಲಹೆ ಮೇರೆಗೆ ನೇಮಿಸುತ್ತಾರೆ. ಸಂಸತ್ತಿನ ಒಪ್ಪಿಗೆ ಮೇರೆಗೆ ಯುದ್ಧ ಮತ್ತು ಶಾಂತಿಯನ್ನು ಘೋಷಿಸುವ ಅಧಿಕಾರ ಇವರಿಗಿದೆ.

**ಚರ್ಚಿಸಿ**

ಕರ್ನಾಟಕದಲ್ಲಿ ರಾಜ್ಯ ತುರ್ತು ಪರಿಸ್ಥಿತಿ ಜಾರಿಗೆ ಬಂದ ಸಂದರ್ಭದ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ.

**ತುರ್ತುಪರಿಸ್ಥಿತಿಯ ಅಧಿಕಾರಗಳು ಮತ್ತು ಕಾರ್ಯಗಳು :** ನಮ್ಮ ಸಂವಿಧಾನದ 18ನೇ ಭಾಗದಲ್ಲಿ 3 ವಿಧದ ತುರ್ತು ಪರಿಸ್ಥಿತಿಗಳನ್ನು ವಿವರಿಸಲಾಗಿದೆ. ರಾಷ್ಟ್ರಾಧ್ಯಕ್ಷರು 3 ವಿವಿಧ ತುರ್ತುಪರಿಸ್ಥಿತಿಗಳನ್ನು ಘೋಷಿಸಬಹುದು.

(1) ರಾಷ್ಟ್ರೀಯ ತುರ್ತು ಪರಿಸ್ಥಿತಿ (352 ನೇ ವಿಧಿ)

(2) ರಾಜ್ಯ ತುರ್ತುಪರಿಸ್ಥಿತಿ (356 ನೇ ವಿಧಿ)

(3) ಹಣಕಾಸಿನ ತುರ್ತುಪರಿಸ್ಥಿತಿ (360 ನೇ ವಿಧಿ).

NOT TO BE REPUBLISHED © KTBS

**ನಿಮಗಿದು ತಿಳಿದಿರಲಿ :**

1) **ರಾಷ್ಟ್ರೀಯ ತುರ್ತುಪರಿಸ್ಥಿತಿ :** (352 ನೇ ವಿಧಿ) ಇಡೀ ದೇಶದ ಅಥವಾ ದೇಶದ ಯಾವುದೇ ಭಾಗದ ಭದ್ರತೆಗೆ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಸಶಸ್ತ್ರ ಬಂಡಾಯದಿಂದ ಧಕ್ಕೆ ಉಂಟಾದರೆ ಕೇಂದ್ರ ಸಚಿವ ಸಂಪುಟದ ಲಿಖಿತ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. ಉದಾಹರಣೆ : 1962, 1971 ಮತ್ತು 1975ರಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿತ್ತು.

2) **ರಾಜ್ಯ ತುರ್ತುಪರಿಸ್ಥಿತಿ :** (356 ನೇ ವಿಧಿ) ರಾಜ್ಯ ಸರ್ಕಾರಗಳು ಸಂವಿಧಾನದ ನಿಯಮಗಳಿಗೆ ಅನುಗುಣವಾಗಿ ಆಡಳಿತ ನಡೆಸದೇ ಇದ್ದಾಗ ರಾಜ್ಯವೊಂದರ ರಾಜ್ಯಪಾಲರ ವರದಿಯ ಆಧಾರದ ಮೇಲೆ ಅಥವಾ ವರದಿ ಇಲ್ಲದೆಯೇ 356ನೇ ವಿಧಿಯನ್ವಯ ರಾಷ್ಟ್ರಾಧ್ಯಕ್ಷರು ರಾಜ್ಯ ತುರ್ತುಪರಿಸ್ಥಿತಿ ಘೋಷಿಸಬಹುದು. ಕರ್ನಾಟಕದಲ್ಲಿ ಇದುವರೆಗೆ 6 ಬಾರಿ ರಾಜ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗಿದೆ. ರಾಜ್ಯ ತುರ್ತುಪರಿಸ್ಥಿತಿಯನ್ನು ಸಂವಿಧಾನಾತ್ಮಕ ತುರ್ತುಪರಿಸ್ಥಿತಿ ಅಥವಾ ರಾಷ್ಟ್ರಾಧ್ಯಕ್ಷರ ಆಡಳಿತ ಎಂತಲೂ ಕರೆಯಲಾಗುತ್ತದೆ.

3) **ಆರ್ಥಿಕ ತುರ್ತು ಪರಿಸ್ಥಿತಿ (ಹಣಕಾಸಿನ ತುರ್ತು ಪರಿಸ್ಥಿತಿ) :** (360ನೇ ವಿಧಿ) ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಅಸ್ಥಿರತೆ ಉಂಟಾಗಿದೆ ಎಂದು ಕಂಡುಬಂದರೆ ಕೇಂದ್ರ ಮಂತ್ರಿ ಮಂಡಲದ ಸಲಹೆಯ ಮೇರೆಗೆ 360 ನೇ ವಿಧಿಯನ್ವಯ ರಾಷ್ಟ್ರಾಧ್ಯಕ್ಷರು ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು. ಆದರೆ ಇದನ್ನು ಇದುವರೆಗೂ ಘೋಷಿಸಿಲ್ಲ.

**ವಿವೇಚನಾಧಿಕಾರಗಳು :–** ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆ ಇಲ್ಲದೆ ಕೆಲವೊಂದು ಅಧಿಕಾರಗಳನ್ನು ಚಲಾಯಿಸಬಹುದು. ಅವುಗಳನ್ನು ವಿವೇಚನಾಧಿಕಾರಗಳೆಂದು ಕರೆಯುತ್ತಾರೆ. ಅಂತಹ ಅಧಿಕಾರಗಳೆಂದರೆ

1) ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯದಿದ್ದಾಗ ಯಾವುದೇ ಪಕ್ಷದ ನಾಯಕನನ್ನು ಸರ್ಕಾರ ರಚಿಸುವಂತೆ ಆಮಂತ್ರಿಸುವ ಅಧಿಕಾರ.

2) ಸಂಸತ್ತು ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಕಳುಹಿಸಿದಾಗ ಅದನ್ನು ಮರುಪರಿಶೀಲನೆಗೆ ಹಿಂದಿರುಗಿಸುವ ಅಧಿಕಾರ.

## ಪ್ರಧಾನಮಂತ್ರಿ

ಸಂವಿಧಾನವು ರಾಷ್ಟ್ರಾಧ್ಯಕ್ಷರಿಗೆ ಆಡಳಿತದಲ್ಲಿ ನೆರವು ಮತ್ತು ಸಲಹೆ ನೀಡಲು ಪ್ರಧಾನಮಂತ್ರಿಯನ್ನು ಒಳಗೊಂಡ ಮಂತ್ರಿಮಂಡಲಕ್ಕೆ ಅವಕಾಶ ಕಲ್ಪಿಸಿದೆ. ಭಾರತದ ರಾಜಕೀಯ ವ್ಯವಸ್ಥೆಯ ಕೇಂದ್ರಬಿಂದುವಾದ ಪ್ರಧಾನಿಯವರು ರಾಷ್ಟ್ರದ ಸಮಗ್ರ ಆಡಳಿತವನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರಾಧ್ಯಕ್ಷರು ರಾಷ್ಟ್ರದ ಮುಖ್ಯಸ್ಥರಾಗಿದ್ದರೆ, ಪ್ರಧಾನಿಯು ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ಲೋಕಸಭೆಯ ವಿಶ್ವಾಸವಿರುವವರೆಗೂ ಇವರು ಅಧಿಕಾರದಲ್ಲಿ ಮುಂದುವರೆಯುತ್ತಾರೆ.

**ಪ್ರಧಾನಮಂತ್ರಿಯ ಅಧಿಕಾರ ಮತ್ತು ಕಾರ್ಯಗಳು**

**1. ಮಂತ್ರಿಗಳ ನೇಮಕ, ಖಾತೆಗಳ ಹಂಚಿಕೆ ಮತ್ತು ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ :–** ಮಂತ್ರಿಮಂಡಲದ ಮುಖ್ಯಸ್ಥರಾದ ಪ್ರಧಾನಮಂತ್ರಿಯವರು ವಿವಿಧ ಇಲಾಖೆಗಳಿಗೆ ಮಂತ್ರಿಗಳನ್ನು ನೇಮಕ ಮಾಡುವಂತೆ ರಾಷ್ಟ್ರಾಧ್ಯಕ್ಷರಿಗೆ ಶಿಫಾರಸ್ಸು ಮಾಡುತ್ತಾರೆ ಹಾಗೂ ಮಂತ್ರಿಗಳಿಗೆ ವಿವಿಧ ಖಾತೆಗಳನ್ನು ಹಂಚುವಂತೆ ಸಲಹೆ ನೀಡುತ್ತಾರೆ. ಮಂತ್ರಿಗಳನ್ನು ಮಂತ್ರಿಮಂಡಲದಿಂದ ವಜಾ ಮಾಡುವಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುವ ಅಧಿಕಾರ ಇವರಿಗೆ ಇದೆ.

**2. ಸರ್ಕಾರದ ಮುಖ್ಯಸ್ಥರು :** ಸರ್ಕಾರದ ಎಲ್ಲಾ ಆಗು–ಹೋಗುಗಳಿಗೆ ಇವರೇ ಜವಾಬ್ದಾರರಾಗಿದ್ದು, ವಿವಿಧ ಖಾತೆಗಳ ನಡುವೆ ಸಮನ್ವಯ ಸಾಧಿಸುವ ಕಾರ್ಯನಿರ್ವಹಿಸುತ್ತಾರೆ. ಅಭಿವೃದ್ಧಿ ಯೋಜನೆಗಳು, ರಕ್ಷಣಾ ಕಾರ್ಯತಂತ್ರಗಳು, ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ವಿಶೇಷ ಕಾಳಜಿ ವಹಿಸುತ್ತಾರೆ.

**3. ಸಚಿವ ಸಂಪುಟದ ನಾಯಕ :–** ಪ್ರಧಾನಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಸಭೆ ನಡೆಯುತ್ತದೆ. ಈ ಸಭೆಯಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಹತ್ವದ ವಿಷಯಗಳನ್ನು ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ. ಇವರು ರಾಷ್ಟ್ರಾಧ್ಯಕ್ಷರು ಮತ್ತು ಮಂತ್ರಿಮಂಡಲದ ನಡುವೆ ಸಂಪರ್ಕ ಸೇತುವೆಯಾಗಿದ್ದಾರೆ.

**4. ಲೋಕ ಸಭೆಯನ್ನು ವಿಸರ್ಜಿಸುವಂತೆ ಸಲಹೆ ನೀಡುವ ಅಧಿಕಾರ :–** ಲೋಕಸಭೆಯನ್ನು ವಿಸರ್ಜಿಸುವಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುವ ಅಧಿಕಾರ ಪ್ರಧಾಮಂತ್ರಿಯವರಿಗೆ ಇದೆ. ಸಾಮಾನ್ಯವಾಗಿ ಸಚಿವ ಸಹೋದ್ಯೋಗಿಗಳಿಂದ ಆಡಳಿತದಲ್ಲಿ ನಿರೀಕ್ಷಿತ ಸಹಕಾರ ದೊರೆಯದಿದ್ದಾಗ, ಮಂತ್ರಿಮಂಡಲದಲ್ಲಿ ತೀವ್ರ ಭಿನ್ನಾಭಿಪ್ರಾಯಗಳುಂಟಾದಾಗ ಹಾಗೂ ಮಂತ್ರಿಮಂಡಲವು ಲೋಕಸಭೆಯ ವಿಶ್ವಾಸವನ್ನು ಕಳೆದುಕೊಂಡಾಗ ಪ್ರಧಾನಿಯು ರಾಷ್ಟ್ರಾಧ್ಯಕ್ಷರಿಗೆ ಇಂತಹ ಸಲಹೆ ನೀಡುತ್ತಾರೆ.

**ಕೇಂದ್ರ ಮಂತ್ರಿಮಂಡಲ :**

ನಮ್ಮ ಸಂವಿಧಾನದ 74(1)ನೇ ವಿಧಿಯು ರಾಷ್ಟ್ರಾಧ್ಯಕ್ಷರಿಗೆ ನೆರವು ಮತ್ತು ಸಲಹೆಯನ್ನು ನೀಡಲು ಪ್ರಧಾನ ಮಂತ್ರಿಯ ನೇತೃತ್ವದ ಮಂತ್ರಿಮಂಡಲ ಇರಬೇಕೆಂದು ತಿಳಿಸುತ್ತದೆ. ಪ್ರಧಾನಿಯ ನೇತೃತ್ವದ ಕೇಂದ್ರ ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿದ್ದು, ರಾಷ್ಟ್ರದ ಸಮಸ್ತ ಆಡಳಿತವನ್ನು ನಿರ್ವಹಿಸುತ್ತದೆ. ಕೇಂದ್ರ ಮಂತ್ರಿಮಂಡಲವು ಸಾರ್ವಜನಿಕ ನೀತಿ ಹಾಗೂ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತದೆ. ಕೇಂದ್ರ ಮಂತ್ರಿ ಮಂಡಲವನ್ನು ಮೂರು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ

1. ಸಂಪುಟ ದರ್ಜೆ ಸಚಿವರು 2. ರಾಜ್ಯ ಸಚಿವರು 3. ಉಪ ಸಚಿವರು

NOT TO BE REPUBLISHED © KTBS

# ನಮ್ಮ ಪ್ರಧಾನ ಮಂತ್ರಿಗಳು


ಶ್ರೀ ಜವಾಹರ್ ಲಾಲ್ ನೆಹರು
1947–1964


ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ
1964–1966


ಶ್ರೀ ಗುಲ್ಜಾರಿ ಲಾಲ್ ನಂದಾ
1966


ಶ್ರೀಮತಿ ಇಂದಿರಾ ಗಾಂಧಿ
1966–77, 1980–84


ಶ್ರೀ ಮೊರಾರ್ಜಿ ದೇಸಾಯಿ
1977–1979


ಶ್ರೀ ಚರಣ್ ಸಿಂಗ್
1979–1980


ಶ್ರೀ ರಾಜೀವ್ ಗಾಂಧಿ
1984–89


ಶ್ರೀ ವಿ.ಪಿ. ಸಿಂಗ್
1989–1990


ಶ್ರೀ ಚಂದ್ರಶೇಖರ್
1990 ನವೆಂಬರ್–1991 ಜೂನ್


ಶ್ರೀ ಪಿ.ವಿ. ನರಸಿಂಹರಾವ್
1991–1996


ಶ್ರೀ ಎಚ್.ಡಿ. ದೇವೇಗೌಡ
1996 ಜೂನ್ – 1997 ಏಪ್ರಿಲ್


ಶ್ರೀ ಐ.ಕೆ. ಗುಜ್ರಾಲ್
1997 ಏಪ್ರಿಲ್ – 1998 ಮಾರ್ಚ್


ಶ್ರೀ ಅಟಲ್ ಬಿಹಾರಿ ವಾಜಪೇಯಿ
ಮೇ 18, 1996–31 ಮೇ 1996
19 ಮಾರ್ಚ್ 1998–2004


ಡಾ. ಮನಮೋಹನ್‌ಸಿಂಗ್
2004 – 2014


ಶ್ರೀ ನರೇಂದ್ರ ಮೋದಿ
2014 –

©KTBS NOT TO BE REPUBLISHED

ಸಂವಿಧಾನದ 91ನೇ ತಿದ್ದುಪಡಿ ಕಾಯಿದೆಯ ಪ್ರಕಾರ ಕೇಂದ್ರ ಮಂತ್ರಿಮಂಡಲದ ಗಾತ್ರವು ಪ್ರಧಾನಮಂತ್ರಿಯನ್ನೂ ಒಳಗೊಂಡು ಲೋಕಸಭಾ ಸದಸ್ಯರ ಒಟ್ಟು ಸಂಖ್ಯೆಯ ಶೇಕಡ 15 ರಷ್ಟನ್ನು ಮೀರುವಂತಿಲ್ಲ. ಈ ಮಂತ್ರಿಮಂಡಲವು ಎರಡು ಬಗೆಯ ಹೊಣೆಗಾರಿಕೆಗಳನ್ನು ಹೊಂದಿದೆ. ಪ್ರತಿಯೊಬ್ಬ ಮಂತ್ರಿಯು ತನ್ನ ಖಾತೆಯ ಆಗು-ಹೋಗುಗಳು, ಸಫಲತೆ-ವಿಫಲತೆಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಮತ್ತು ಮಂತ್ರಿ ಮಂಡಲವು ತನ್ನ ಆಡಳಿತ ನಿರ್ವಹಣೆಗೆ, ನೀತಿ ನಿರ್ಧಾರಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂಸತ್ತಿಗೆ (ಲೋಕಸಭೆ) ಸಾಮೂಹಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಆದುದರಿಂದ ಮಂತ್ರಿ ಮಂಡಲವು ಸಂಸತ್ತಿನ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿ ಮುಂದುವರೆಯುತ್ತದೆ. ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಲೋಕಸಭೆಯು ಮಂತ್ರಿ ಮಂಡಲವನ್ನು ಅಧಿಕಾರದಿಂದ ಕೆಳಗಿಳಿಸಬಹುದು.

**ನಿಮಗಿದು ತಿಳಿದಿರಲಿ :**

**ಅವಿಶ್ವಾಸ ಗೊತ್ತುವಳಿ :** ಮಂತ್ರಿ ಮಂಡಲವು ಲೋಕಸಭೆಯ ವಿಶ್ವಾಸವನ್ನು ಕಳೆದುಕೊಂಡರೆ ರಾಜೀನಾಮೆ ಕೊಡಬೇಕಾಗುತ್ತದೆ. ಇದನ್ನೇ ಅವಿಶ್ವಾಸ ಗೊತ್ತುವಳಿ ನಿರ್ಣಯ ಎಂದು ಕರೆಯಲಾಗುತ್ತದೆ.

@KTBS NOT TO BE REPUBLISHED

## ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹಾಗೂ ರಾಜಧಾನಿಗಳು

**ರಾಜ್ಯಗಳು**

1. ಆಂಧ್ರಪ್ರದೇಶ (ಅಮರಾವತಿ)
2. ಅರುಣಾಚಲ ಪ್ರದೇಶ (ಇಟಾನಗರ)
3. ಅಸ್ಸಾಂ (ದಿಸ್ಪುರ)
4. ಬಿಹಾರ (ಪಾಟ್ನಾ)
5. ಛತ್ತೀಸ್‌ಘಡ (ರಾಯಪುರ)
6. ಗೋವಾ (ಪಣಜಿ)
7. ಗುಜರಾತ್ (ಗಾಂಧೀನಗರ)
8. ಹರಿಯಾಣ (ಚಂಡೀಗಢ)
9. ಹಿಮಾಚಲ ಪ್ರದೇಶ (ಶಿಮ್ಲಾ)
10. ಜಾರ್ಖಂಡ್ (ರಾಂಚಿ)
11. ಕರ್ನಾಟಕ (ಬೆಂಗಳೂರು)
12. ಕೇರಳ (ತಿರುವನಂತಪುರ)
13. ಮಧ್ಯಪ್ರದೇಶ (ಭೂಪಾಲ್)
14. ಮಹಾರಾಷ್ಟ್ರ (ಮುಂಬೈ)
15. ಮಣಿಪುರ (ಇಂಫಾಲ್)
16. ಮೇಘಾಲಯ (ಶಿಲ್ಲಾಂಗ್)
17. ಮಿಜೋರಾಂ (ಐಜ್ವಾಲ್)
18. ನಾಗಾಲ್ಯಾಂಡ್ (ಕೊಹಿಮಾ)
19. ಒಡಿಶಾ (ಭುವನೇಶ್ವರ)
20. ಪಂಜಾಬ್ (ಚಂಡೀಗಢ)
21. ರಾಜಸ್ತಾನ (ಜೈಪುರ)
22. ಸಿಕ್ಕಿಂ (ಗ್ಯಾಂಗ್ಟಾಕ್)
23. ತಮಿಳುನಾಡು (ಚೆನ್ನೈ)
24. ತೆಲಂಗಾಣ (ಹೈದರಾಬಾದ್)
25. ತ್ರಿಪುರ (ಅಗರ್ತಲ)
26. ಉತ್ತರ ಪ್ರದೇಶ (ಲಖ್ನೋ)
27. ಉತ್ತರಾಖಂಡ (ಡೆಹರಾಡೂನ್)
28. ಪಶ್ಚಿಮ ಬಂಗಾಳ (ಕೋಲ್ಕತ್ತ)

**ಕೇಂದ್ರಾಡಳಿತ ಪ್ರದೇಶಗಳು**

1. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು (ಪೋರ್ಟ್ ಬ್ಲೇರ್/ಶ್ರೀವಿಜಯಪುರಂ)
2. ಚಂಡೀಗಡ (ಚಂಡೀಗಢ)
3. ದಾದ್ರಾ ಮತ್ತು ನಗರ ಹವೇಲಿ, ದಮನ್ ಮತ್ತು ದಿಯು (ದಮನ್)
4. ದೆಹಲಿ (ರಾಷ್ಟ್ರೀಯ ರಾಜಧಾನಿ ಪ್ರದೇಶ)
5. ಜಮ್ಮು ಮತ್ತು ಕಾಶ್ಮೀರ (ಶ್ರೀನಗರ-ಬೇಸಿಗೆಕಾಲ, ಜಮ್ಮು-ಚಳಿಗಾಲ)
6. ಲಡಾಖ್ (ಲೇಹ್)
7. ಲಕ್ಷದ್ವೀಪ (ಕವರತ್ತಿ)
8. ಪುದುಚೇರಿ (ಪುದುಚೇರಿ)

**ನಿಮಗಿದು ತಿಳಿದಿರಲಿ :**

ಬಾರಾರಿಸೈನ್ – ಉತ್ತರಾಖಂಡ ರಾಜ್ಯದ ಬೇಸಿಗೆ ರಾಜಧಾನಿಯಾಗಿದೆ.

ಧರ್ಮಶಾಲಾ – ಹಿಮಾಚಲ ಪ್ರದೇಶ ರಾಜ್ಯದ ಎರಡನೆಯ ರಾಜಧಾನಿಯಾಗಿದೆ.

ಅಟಾರ್ನಿ ಜನರಲ್ – ಭಾರತದ ಅತ್ಯುನ್ನತ ಕಾನೂನು ಸಲಹೆಗಾರರು. ಇವರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು __________ ಗಳ ಒಕ್ಕೂಟವಾಗಿದೆ.
2. ಕೇಂದ್ರ ಶಾಸಕಾಂಗವನ್ನು __________ ಎಂದು ಕರೆಯಲಾಗಿದೆ.
3. ರಾಜ್ಯಸಭೆಯ ಸಭಾಪತಿಗಳು __________ ರು ಆಗಿರುತ್ತಾರೆ.
4. ಲೋಕಸಭೆಯ ಸದಸ್ಯರಾಗಲು ________ ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
5. ಮೂರು ಸೇನಾಪಡೆಗಳ ಮಹಾ ದಂಡನಾಯಕರು __________
6. ಸಂವಿಧಾನದ __________ ಮತ್ತು __________ ನೇ ವಿಧಿಯಲ್ಲಿ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸುವ ವಿಧಾನವನ್ನು ಅಳವಡಿಸಲಾಗಿದೆ.
7. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು __________ ರು ನೇಮಿಸುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

8. ಸಂಸತ್ತಿನ ಎರಡು ಸದನಗಳನ್ನು ತಿಳಿಸಿ.
9. ರಾಜ್ಯಸಭೆಯ ರಚನೆಯನ್ನು ವಿವರಿಸಿ.
10. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು ?
11. ರಾಷ್ಟ್ರಾಧ್ಯಕ್ಷರ ಚುನಾವಣಾ ವಿಧಾನವನ್ನು ವಿವರಿಸಿ.
12. ಪ್ರಧಾನಮಂತ್ರಿಯ ಅಧಿಕಾರ ಮತ್ತು ಕಾರ್ಯಗಳನ್ನು ಪಟ್ಟಿ ಮಾಡಿ.
13. ಕೇಂದ್ರ ಮಂತ್ರಿಮಂಡಲದ ರಚನೆ ಮತ್ತು ಅದರ ಹೊಣೆಗಾರಿಕೆಯನ್ನು ವಿವರಿಸಿ.

**III. ಚಟುವಟಿಕೆಗಳು.**

1. ಭಾರತದ ಸಂಸತ್ತಿನಂತೆ ನಿಮ್ಮ ಶಾಲೆಯಲ್ಲಿ ಶಾಲಾ ಸಂಸತ್ತನ್ನು ಏರ್ಪಡಿಸಿ.
2. ನಿಮ್ಮ ಕ್ಷೇತ್ರದ ಸಂಸತ್ ಸದಸ್ಯರೊಂದಿಗೆ ಅವರ ಕಾರ್ಯಗಳ ಬಗ್ಗೆ ಚರ್ಚಿಸಿ.

**IV. ಯೋಜನೆ.**

1. ನೂತನ ಸಂಸತ್ ಭವನದ ಮಾದರಿಯನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿರಿ.

*****

NOT TO BE REPUBLISHED ©KTBS

U1I5J4

# ಅಧ್ಯಾಯ – 7

# ರಾಜ್ಯ ಸರ್ಕಾರ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಜ್ಯಶಾಸಕಾಂಗದ ಸ್ವರೂಪ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ರಚನೆ, ಅಧಿಕಾರ ಮತ್ತು ಕಾರ್ಯಗಳು.
- ರಾಜ್ಯ ಕಾರ್ಯಾಂಗದಲ್ಲಿ ರಾಜ್ಯಪಾಲರು, ಅಧಿಕಾರ ಮತ್ತು ಕಾರ್ಯಗಳು.
- ಮುಖ್ಯಮಂತ್ರಿಯ ನೇಮಕ, ಅಧಿಕಾರ ಮತ್ತು ಕಾರ್ಯಗಳು.



**ವಿಧಾನ ಸೌಧ – ಬೆಂಗಳೂರು**

© KTBS NOT TO BE REPUBLISHED

ಭಾರತವು 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಒಕ್ಕೂಟವಾಗಿದೆ. ಕೇಂದ್ರ ಸರ್ಕಾರದಂತೆಯೇ ರಾಜ್ಯಸರ್ಕಾರಗಳೂ ಕೂಡ ತಮ್ಮದೇ ಆದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಹೊಂದಿವೆ.



## ರಾಜ್ಯ ಶಾಸಕಾಂಗ

ರಾಜ್ಯಪಾಲರು ರಾಜ್ಯಶಾಸಕಾಂಗದ ಅವಿಭಾಜ್ಯ ಭಾಗವಾಗಿದ್ದಾರೆ. ಕೆಲವು ರಾಜ್ಯಗಳಲ್ಲಿ ದ್ವಿಸದನ ಶಾಸಕಾಂಗ ವ್ಯವಸ್ಥೆ ಇದ್ದರೆ, ಮತ್ತೆ ಕೆಲವು ರಾಜ್ಯಗಳಲ್ಲಿ ಏಕಸದನ ಶಾಸಕಾಂಗ ವ್ಯವಸ್ಥೆ ಇದೆ. ದ್ವಿಸದನ ಶಾಸಕಾಂಗ ವ್ಯವಸ್ಥೆ ಇರುವ ರಾಜ್ಯಗಳಲ್ಲಿ ಕೆಳಮನೆಯಾದ ವಿಧಾನಸಭೆ ಹಾಗೂ ಮೇಲ್ಮನೆಯಾದ ವಿಧಾನಪರಿಷತ್ತು ಎರಡೂ ಅಸ್ಥಿತ್ವದಲ್ಲಿವೆ. ಏಕಸದನ ಶಾಸಕಾಂಗ ವ್ಯವಸ್ಥೆ ಇರುವ ರಾಜ್ಯಗಳಲ್ಲಿ ಕೆಳಮನೆಯಾದ ವಿಧಾನಸಭೆ ಮಾತ್ರ ಅಸ್ತಿತ್ವದಲ್ಲಿದ್ದು ಮೇಲ್ಮನೆಯಾದ ವಿಧಾನ ಪರಿಷತ್ತು ಅಸ್ಥಿತ್ವದಲ್ಲಿರುವುದಿಲ್ಲ, ವಿಧಾನ ಸಭೆಯು ರಾಜ್ಯದ ಜನತೆಯನ್ನು ಪ್ರತಿನಿಧಿಸಿದರೆ, ವಿಧಾನ ಪರಿಷತ್ತು ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುತ್ತದೆ.

**ನಿಮಗಿದು ತಿಳಿದಿರಲಿ :–** ಆಂಧ್ರಪ್ರದೇಶ, ಬಿಹಾರ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಉತ್ತರಪ್ರದೇಶ ರಾಜ್ಯಗಳ ಶಾಸಕಾಂಗಗಳು ದ್ವಿಸದನ (ಎರಡು) ಶಾಸಕಾಂಗ ವ್ಯವಸ್ಥೆಯನ್ನು ಹೊಂದಿದ್ದರೆ, ಉಳಿದ ರಾಜ್ಯಗಳು ಏಕಸದನ ಶಾಸಕಾಂಗ ವ್ಯವಸ್ಥೆಯನ್ನು ಹೊಂದಿವೆ.

### ವಿಧಾನಸಭೆ

**ಚಟುವಟಿಕೆ**
ನಿಮ್ಮ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಭೇಟಿ ಮಾಡಿ, ಅವರ ಕಾರ್ಯಗಳ ಬಗ್ಗೆ ಸಂವಾದ ನಡೆಸಿ.

ವಿಧಾನಸಭೆಯು ರಾಜ್ಯ ಶಾಸಕಾಂಗದ ಕೆಳಮನೆಯಾಗಿದೆ. ವಿಧಾನಸಭಾ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖ್ಯೆಯನ್ನು ಆಧರಿಸಿರುತ್ತದೆ. ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 500 ಕ್ಕಿಂತ ಹೆಚ್ಚಾಗಿರಬಾರದು, 60 ಕ್ಕಿಂತ ಕಡಿಮೆ ಇರಬಾರದು. ಚಿಕ್ಕ ರಾಜ್ಯಗಳ ವಿಧಾನಸಭೆಗಳು ಕಡಿಮೆ ಸದಸ್ಯರನ್ನು ಹೊಂದಬಹುದು. ಉದಾಹರಣೆ : ಸಿಕ್ಕಿಂ ವಿಧಾನ ಸಭೆಯು 32 ಸದಸ್ಯರನ್ನು ಹೊಂದಿದೆ. ಕರ್ನಾಟದ ವಿಧಾನಸಭೆಯು ಪ್ರಸ್ತುತ 224 ಚುನಾಯಿತ ಸದಸ್ಯರನ್ನು ಹೊಂದಿದೆ. 15ನೇ ವಿಧಾನಸಭೆಯ ಅಂತ್ಯದವರೆಗೆ ಕರ್ನಾಟಕ ವಿಧಾನಸಭೆಯು ಒಟ್ಟು 225 ಸದಸ್ಯರನ್ನು ಹೊಂದಿತ್ತು. ಹಾಲಿ 16ನೇ ವಿಧಾನಸಭೆಯು 224 ಚುನಾಯಿತ ಸದಸ್ಯರನ್ನು ಮಾತ್ರ ಹೊಂದಿದೆ. 224 ಸದಸ್ಯರು ಜನರಿಂದ ನೇರವಾಗಿ ಚುನಾಯಿತರಾಗಿದ್ದಾರೆ. 2020ರವರೆಗೆ ರಾಜ್ಯಪಾಲರು ಆಂಗ್ಲೋ–ಇಂಡಿಯನ್ ಸಮುದಾಯದಿಂದ ಒಬ್ಬ ಸದಸ್ಯರನ್ನು ರಾಜ್ಯ ವಿಧಾನಸಭೆಗೆ ನಾಮನಿರ್ದೇಶನ ಮಾಡಲು ಅವಕಾಶವಿತ್ತು. ಆದರೆ 2020ರಲ್ಲಿ ಜಾರಿಗೆ ಬಂದ 104ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಪ್ರಕಾರ ಆಂಗ್ಲೋ–ಇಂಡಿಯನ್ ಸಮುದಾಯದಿಂದ ಒಬ್ಬ ಸದಸ್ಯರನ್ನು ರಾಜ್ಯ ವಿಧಾನಸಭೆಗೆ ನಾಮನಿರ್ದೇಶನ ಮಾಡುವ ಪದ್ಧತಿಯನ್ನು ಮುಂದುವರೆಸಲಾಗಿಲ್ಲ. ಆದ್ದರಿಂದ ಇನ್ನು ಮುಂದೆ ಕರ್ನಾಟಕ ವಿಧಾನಸಭೆಯು 224 ಮಂದಿ ಚುನಾಯಿತ ಸದಸ್ಯರನ್ನು ಮಾತ್ರ ಹೊಂದಿರುತ್ತದೆ. ಕರ್ನಾಟಕ ವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗೆ 36 ಸ್ಥಾನಗಳನ್ನು ಹಾಗೂ ಪರಿಶಿಷ್ಟ ಪಂಗಡಕ್ಕೆ 15 ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಸಂವಿಧಾನದ 106ನೇ ತಿದ್ದುಪಡಿ ಕಾಯಿದೆಯು (ನಾರಿಶಕ್ತಿ ವಂದನಾ ಅಧಿನಿಯಮ) ಜಾರಿಯಾದ ನಂತರ ವಿಧಾನಸಭೆಗಳ ಒಟ್ಟು ಸ್ಥಾನಗಳಲ್ಲಿ ಶೇ.33 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಬೇಕಾಗುತ್ತದೆ.

**ಸದಸ್ಯರಾಗಲು ಇರಬೇಕಾದ ಅರ್ಹತೆಗಳು :–**

(1) ಭಾರತದ ಪ್ರಜೆಯಾಗಿರಬೇಕು. (2) 25 ವರ್ಷ ವಯಸ್ಸು ಪೂರ್ಣಗೊಂಡಿರಬೇಕು. (3) ಸರ್ಕಾರದ ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು. (4) ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಗುರಿಯಾಗಿರಬಾರದು.

NOT TO BE REPUBLISHED ©KTBS

(5) ಮಾನಸಿಕ ಅಸ್ವಸ್ಥತೆ ಹೊಂದಿರಬಾರದು. (6) ದಿವಾಳಿಯಾಗಿರಬಾರದು. (7) ಸಂಸತ್ತು ಕಾಲಕಾಲಕ್ಕೆ ನಿರ್ಧರಿಸುವ ಇತರೆ ಅರ್ಹತೆಗಳನ್ನು ಹೊಂದಿರಬೇಕು.

**ಅಧಿಕಾರಾವಧಿ :** ವಿಧಾನಸಭೆಯ ಅಧಿಕಾರಾವಧಿ 5 ವರ್ಷಗಳು. ಅವಧಿಗೆ ಮುಂಚೆ ಮುಖ್ಯಮಂತ್ರಿಯ ನೇತೃತ್ವದ ಮಂತ್ರಿಮಂಡಲದ ಸಲಹೆಯ ಮೇರೆಗೆ ರಾಜ್ಯಪಾಲರು ವಿಧಾನ ಸಭೆಯನ್ನು ವಿಸರ್ಜಿಸಬಹುದು. ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಬೇಕು.

ವಿಧಾನಸಭೆ ಸದಸ್ಯರಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ, ಮತ್ತೊಬ್ಬರನ್ನು ಉಪಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು. ವಿಧಾನ ಸಭೆಯ ಕಾರ್ಯಕಲಾಪಗಳು ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುತ್ತವೆ. ಸದನದಲ್ಲಿ ಶಾಂತಿ, ಶಿಸ್ತನ್ನು ಕಾಪಾಡುವ, ಘನತೆಯನ್ನು ಹೆಚ್ಚಿಸುವ, ಕಾರ್ಯಕಲಾಪಗಳನ್ನು ಮುಂದೂಡುವ, ಸದಸ್ಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ, ಸದನದಲ್ಲಿ ಸಮಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವ ಕಾರ್ಯಗಳನ್ನು ಇವರು ನಿರ್ವಹಿಸುತ್ತಾರೆ.

**ಚಟುವಟಿಕೆ**

ವಿಧಾನಸಭೆಯ ಅಧಿವೇಶನ ಸಮಯದಲ್ಲಿ ಭೇಟಿ ನೀಡಿ ಕಲಾಪವನ್ನು ವೀಕ್ಷಿಸಿ, ಅಲ್ಲಿ ನಡೆಯುವ ಚರ್ಚೆಗಳ ಬಗ್ಗೆ ಲಘು ಟಿಪ್ಪಣಿ ತಯಾರಿಸಿ.

**ರಾಜ್ಯ ಶಾಸಕಾಂಗದ ಅಧಿಕಾರ ಮತ್ತು ಕಾರ್ಯಗಳು**

**ಶಾಸನೀಯ ಅಧಿಕಾರ ಮತ್ತು ಕಾರ್ಯಗಳು :** ಸಾಮಾನ್ಯ ಮಸೂದೆಯನ್ನು ವಿಧಾನ ಮಂಡಲದ ಯಾವ ಸದನದಲ್ಲಾದರೂ ಮಂಡಿಸಬಹುದು. ವಿಧಾನ ಸಭೆಯಿಂದ ಅನುಮೋದಿಸಲ್ಪಟ್ಟ ಮಸೂದೆಗಳನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ. ಆಗ ವಿಧಾನ ಪರಿಷತ್ತು ಮೂರು ತಿಂಗಳೊಳಗಾಗಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೆ ತನ್ನ ಅನುಮೋದನೆಯನ್ನು ನೀಡಿ, ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸತಕ್ಕದ್ದು. ಇಲ್ಲವಾದಲ್ಲಿ ವಿಧಾನಸಭೆಯು ಮಸೂದೆಯನ್ನು ಎರಡನೆಯ ಬಾರಿ ವಿಧಾನ ಪರಿಷತ್ತಿನ ಅಂಗೀಕಾರಕ್ಕಾಗಿ ಕಳುಹಿಸುತ್ತದೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ತು ಒಂದು ತಿಂಗಳೊಳಗಾಗಿ ತನ್ನ ಅನುಮೋದನೆಯೊಂದಿಗೆ ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸಬೇಕು. ಇಲ್ಲವಾದಲ್ಲಿ ಎರಡೂ ಸದನಗಳು ಒಪ್ಪಿಗೆ ನೀಡಿವೆಯೆಂದು ಘೋಷಿಸಿ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುವುದು. ಹೀಗೆ ವಿಧಾನ ಪರಿಷತ್ತು ಒಂದು ಸಾಮಾನ್ಯ ಮಸೂದೆಯನ್ನು ನಾಲ್ಕು ತಿಂಗಳ ಕಾಲ ತಡೆಹಿಡಿಯುವ ಅಧಿಕಾರವನ್ನು ಹೊರತುಪಡಿಸಿ ಬೇರಾವ ಅಧಿಕಾರವನ್ನೂ ಹೊಂದಿರುವುದಿಲ್ಲ.



**ಸುವರ್ಣ ವಿಧಾನಸೌಧ, ಬೆಳಗಾವಿ**

**ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು :** ಹಣಕಾಸಿನ ವಿಷಯದಲ್ಲಿ ವಿಧಾನ ಸಭೆಗೆ ವಿಧಾನ ಪರಿಷತ್ತಿಗಿಂತ ಹೆಚ್ಚು ಅಧಿಕಾರವಿದೆ. ಸಂವಿಧಾನದ ಪ್ರಕಾರ ಹಣಕಾಸು ಮಸೂದೆಯನ್ನು ವಿಧಾನಸಭೆಯಲ್ಲಿಯೇ ಮಂಡಿಸಬೇಕು. ವಿಧಾನಸಭೆಯು ಅನುಮೋದನೆ ನೀಡಿದ ಹಣಕಾಸು ಮಸೂದೆಯನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ, ಆಗ ವಿಧಾನ ಪರಿಷತ್ತು ಮಸೂದೆಯನ್ನು ಸ್ವೀಕರಿಸಿದ 14 ದಿನಗಳೊಳಗಾಗಿ ತನ್ನ ಒಪ್ಪಿಯೊಂದಿಗೆ ವಿಧಾನ ಸಭೆಗೆ ಹಿಂದಿರುಗಿಸಬೇಕು, ಇಲ್ಲವಾದಲ್ಲಿ ಈ ಮಸೂದೆಯನ್ನು ಉಭಯ ಸದನಗಳು ಅನುಮೋದಿಸಿದವು ಎಂದು ಘೋಷಿಸಿ ರಾಜ್ಯಪಾಲರ

© KTBS NOT TO BE REPUBLISHED

ಸಹಿಗಾಗಿ ಕಳುಹಿಸಲಾಗುತ್ತದೆ. ವಿಧಾನಪರಿಷತ್ತು ಹಣಕಾಸು ಮಸೂದೆಯನ್ನು 14 ದಿನಗಳ ಕಾಲ ತಡೆಹಿಡಿಯುವುದನ್ನು ಹೊರತುಪಡಿಸಿ ಹಣಕಾಸಿಗೆ ಸಂಬಂಧಿಸಿದ ಇನ್ನಾವುದೇ ಅಧಿಕಾರವನ್ನು ಹೊಂದಿಲ್ಲ ಎಂಬ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ.

**ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :** ರಾಜ್ಯ ಕಾರ್ಯಾಂಗ (ಮಂತ್ರಿಮಂಡಲ)ವು ವಿಧಾನಸಭೆಗೆ ಜವಾಬ್ದಾರಿಯಾಗಿರುತ್ತದೆ. ವಿಧಾನಸಭೆಯ ವಿಶ್ವಾಸವಿರುವವರೆಗೆ ಮಂತ್ರಿಮಂಡಲ ಅಧಿಕಾರದಲ್ಲಿ ಮುಂದುವರೆಯುತ್ತದೆ. ವಿಧಾನ ಸಭೆಯ ವಿಶ್ವಾಸ ಕಳೆದುಕೊಂಡಾಗ ಮಂತ್ರಿಮಂಡಲ ರಾಜೀನಾಮೆ ನೀಡಬೇಕಾಗುತ್ತದೆ. ಇಡೀ ಮಂತ್ರಿಮಂಡಲ ಸಾಮೂಹಿಕವಾಗಿ ವಿಧಾನಸಭೆಗೆ ಜವಾಬ್ದಾರಿಯಾಗಿರುತ್ತದೆ.

**ಚುನಾವಣಾ ಅಧಿಕಾರ ಮತ್ತು ಕಾರ್ಯಗಳು :** ರಾಷ್ಟ್ರಾಧ್ಯಕ್ಷರು, ರಾಜ್ಯಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು, ವಿಧಾನಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಅಧಿಕಾರ ವಿಧಾನಸಭೆಗೆ ಇದೆ.

**ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ :** ಕೆಲವೊಂದು ಸಂವಿಧಾನ ತಿದ್ದುಪಡಿ ಮಸೂದೆಗಳಿಗೆ ಅರ್ಧದಷ್ಟು ರಾಜ್ಯಗಳ ವಿಧಾನ ಸಭೆಗಳ ಅನುಮೋದನೆ ಅಗತ್ಯ. ಉದಾಹರಣೆಗೆ ಸರಕು ಮತ್ತು ಸೇವಾ ತೆರಿಗೆಗೆ (GST) ಸಂಬಂಧಿಸಿದ 122ನೇ ಸಂವಿಧಾನ ತಿದ್ದುಪಡಿ ಮಸೂದೆ 2016.

**ಇತರೆ ಅಧಿಕಾರ ಮತ್ತು ಕಾರ್ಯಗಳು :** ರಾಜ್ಯ ಲೋಕಸೇವಾ ಆಯೋಗದ ವರದಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವರದಿ, ರಾಜ್ಯ ಮಹಿಳಾ ಆಯೋಗದ ವರದಿ ಮತ್ತು ರಾಜ್ಯದ ಇತರೆ ಆಯೋಗಗಳ ವರದಿಗಳನ್ನು ವಿಧಾನ ಸಭೆಯಲ್ಲಿ ಚರ್ಚಿಸಲಾಗುತ್ತದೆ.

**ವಿಧಾನ ಪರಿಷತ್ತು :**

ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು ವಿಧಾನ ಪರಿಷತ್ತು ಎಂದು ಕರೆಯಲಾಗುತ್ತದೆ. ಇದರ ಸದಸ್ಯರ ಸಂಖ್ಯೆಯು ಆ ರಾಜ್ಯದ ವಿಧಾನ ಸಭಾ ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರುವಂತಿಲ್ಲ ಹಾಗೂ 40 ಸದಸ್ಯರಿಗಿಂತ ಕಡಿಮೆ ಇರುವಂತಿಲ್ಲ. ಉದಾಹರಣೆಗೆ : ತೆಲಂಗಾಣ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ 40 ಆಗಿದೆ. ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ 75. ಈ ಸದಸ್ಯರು 5 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ. ಅವುಗಳೆಂದರೆ ವಿಧಾನಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಕೆಲವರು ಚುನಾಯಿಸಲ್ಪಟ್ಟರೆ, ಕಲೆ, ವಿಜ್ಞಾನ, ಸಾಹಿತ್ಯ, ಸಮಾಜ ಸೇವೆ ಹಾಗೂ ಸಹಕಾರ ಚಳವಳಿ ಕ್ಷೇತ್ರಗಳಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ಕೆಲವರನ್ನು ನಾಮನಿರ್ದೇಶನ ಮಾಡುತ್ತಾರೆ. ವಿಧಾನ ಪರಿಷತ್ತಿನ ಅಧಿಕಾರಾವಧಿ 6 ವರ್ಷಗಳು. ಇದನ್ನು ಅವಧಿಗೆ ಮುನ್ನ ವಿಸರ್ಜಿಸುವಂತಿಲ್ಲ. ಆದ್ದರಿಂದ ವಿಧಾನ ಪರಿಷತ್ತನ್ನು ಶಾಶ್ವತ ಸದನ ಎನ್ನುತ್ತಾರೆ. ತಮ್ಮ ಅಧಿಕಾರಾವಧಿ ಪೂರ್ಣಗೊಂಡ $\frac{1}{3}$ ರಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ. ವಿಧಾನಪರಿಷತ್ತಿನ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಸಭಾಪತಿಯನ್ನಾಗಿ ಮತ್ತೊಬ್ಬರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡುತ್ತಾರೆ. ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತವೆ. ಸದನದಲ್ಲಿ ಶಾಂತಿ, ಶಿಸ್ತನ್ನು ಕಾಪಾಡುವ, ಘನತೆಯನ್ನು ಹೆಚ್ಚಿಸುವ, ಕಾರ್ಯಕಲಾಪಗಳನ್ನು ಮುಂದೂಡುವ, ಸದಸ್ಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ, ಸದನದಲ್ಲಿ ಸಮಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವ ಕಾರ್ಯಗಳನ್ನು ಇವರು ನಿರ್ವಹಿಸುತ್ತಾರೆ.

@KTBS NOT TO BE REPUBLISHED

**ಸದಸ್ಯರಿಗಿರಬೇಕಾದ ಅರ್ಹತೆಗಳು :** (1) ಭಾರತದ ಪ್ರಜೆಯಾಗಿರಬೇಕು. (2) 30 ವರ್ಷ ವಯಸ್ಸು ಪೂರ್ಣಗೊಂಡಿರಬೇಕು. (3) ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು. (4) ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಗುರಿಯಾಗಿರಬಾರದು. (5) ಮಾನಸಿಕ ಅಸ್ವಸ್ಥತೆ ಹೊಂದಿರಬಾರದು. (6) ದಿವಾಳಿಯಾಗಿರಬಾರದು. (7) ಸಂಸತ್ತು ಕಾಲಕಾಲಕ್ಕೆ ನಿರ್ಧರಿಸುವ ಇತರೆ ಅರ್ಹತೆಗಳನ್ನು ಹೊಂದಿರಬೇಕು.

**ಚಟುವಟಿಕೆ**

ನಿಮ್ಮ ವಾರ್ಡ್ ಸದಸ್ಯರಿಂದ ನಿಮ್ಮ ಕ್ಷೇತ್ರದ ಲೋಕಸಭಾ ಸದಸ್ಯರವರೆಗಿನ ವಿವಿಧ ಜನಪ್ರತಿನಿಧಿಗಳ ಹೆಸರುಗಳನ್ನು ಪಟ್ಟಿ ಮಾಡಿ.

**ಅಧಿಕಾರ ಮತ್ತು ಕಾರ್ಯಗಳು**

**ಶಾಸನೀಯ ಅಧಿಕಾರ ಮತ್ತು ಕಾರ್ಯಗಳು :** ವಿಧಾನ ಪರಿಷತ್ತು ಸಹ ಶಾಸನಗಳನ್ನು ರೂಪಿಸುವ ಅಧಿಕಾರ ಪಡೆದಿದೆ. ವಿಧಾನ ಸಭೆಯಿಂದ ಅನುಮೋದಿಸಲ್ಪಟ್ಟ ಮಸೂದೆಗಳನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ. ಆಗ ವಿಧಾನ ಪರಿಷತ್ತು ಮೂರು ತಿಂಗಳೊಳಗಾಗಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೆ ತನ್ನ ಅನುಮೋದನೆಯನ್ನು ನೀಡಿ, ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸತಕ್ಕದ್ದು. ಇಲ್ಲವಾದಲ್ಲಿ ವಿಧಾನಸಭೆಯು ಮಸೂದೆಯನ್ನು ಎರಡನೆಯ ಬಾರಿ ವಿಧಾನ ಪರಿಷತ್ತಿನ ಅಂಗೀಕಾರಕ್ಕಾಗಿ ಕಳುಹಿಸುತ್ತದೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ತು ಒಂದು ತಿಂಗಳೊಳಗಾಗಿ ತನ್ನ ಅನುಮೋದನೆಯೊಂದಿಗೆ ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸಬೇಕು. ಇಲ್ಲವಾದಲ್ಲಿ ಎರಡೂ ಸದನಗಳು ಒಪ್ಪಿಗೆ ನೀಡಿವೆಯೆಂದು ಘೋಷಿಸಿ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುವುದು.

**ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು :** ವಿಧಾನ ಪರಿಷತ್ತು ವಿಧಾನಸಭೆಗಿಂತ ಕಡಿಮೆ ಹಣಕಾಸಿನ ಅಧಿಕಾರಗಳನ್ನು ಹೊಂದಿದೆ. ಸಂವಿಧಾನದ ಪ್ರಕಾರ ಹಣಕಾಸು ಮಸೂದೆಯನ್ನು ವಿಧಾನಸಭೆಯಲ್ಲಿಯೇ ಮಂಡಿಸಬೇಕು. ವಿಧಾನಸಭೆಯು ಅನುಮೋದನೆ ನೀಡಿದ ಹಣಕಾಸು ಮಸೂದೆಯನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ, ಆಗ ವಿಧಾನ ಪರಿಷತ್ತು ಮಸೂದೆಯನ್ನು ಸ್ವೀಕರಿಸಿದ 14 ದಿನಗಳೊಳಗಾಗಿ ತನ್ನ ಒಪ್ಪಿಗೆಯೊಂದಿಗೆ ವಿಧಾನ ಸಭೆಗೆ ಹಿಂತಿರುಗಿಸಬೇಕು, ಇಲ್ಲವಾದಲ್ಲಿ ಈ ಮಸೂದೆಯನ್ನು ಉಭಯ ಸದನಗಳು ಅನುಮೋದಿಸಿದವು ಎಂದು ಘೋಷಿಸಿ ರಾಜ್ಯಪಾಲರ ಸಹಿಗಾಗಿ ಕಳುಹಿಸಲಾಗುತ್ತದೆ. ವಿಧಾನಪರಿಷತ್ತು ಹಣಕಾಸು ಮಸೂದೆಯನ್ನು 14 ದಿನಗಳ ಕಾಲ ತಡೆಹಿಡಿಯುವುದನ್ನು ಹೊರತುಪಡಿಸಿ ಹಣಕಾಸಿಗೆ ಸಂಬಂಧಿಸಿದ ಇನ್ಯಾವುದೇ ಅಧಿಕಾರವನ್ನು ಹೊಂದಿಲ್ಲ ಎಂಬ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ.

**ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :** ಇದು ಆಡಳಿತದ ಮೇಲೆ ಕಡಿಮೆ ನಿಯಂತ್ರಣ ಹೊಂದಿದೆ. ಸದಸ್ಯರು ಸಚಿವರುಗಳಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿ ಪಡೆಯಬಹುದು. ಉತ್ತರ ಸಮರ್ಪಕವಾಗಿಲ್ಲದಿದ್ದರೆ ಸಚಿವರ ರಾಜೀನಾಮೆಗೆ ಒತ್ತಾಯಿಸಬಹುದೇ ವಿನಃ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.

## ರಾಜ್ಯ ಕಾರ್ಯಾಂಗ

ರಾಜ್ಯ ಕಾರ್ಯಾಂಗವು ರಾಜ್ಯಪಾಲರು ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲ ಹಾಗೂ ಅಡ್ವೋಕೇಟ್ ಜನರಲ್ ಅವರನ್ನು ಒಳಗೊಂಡಿದೆ. ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾದರೆ, ಮುಖ್ಯಮಂತ್ರಿಯನ್ನು ಒಳಗೊಂಡ ಮಂತ್ರಿಮಂಡಲ ನೈಜ ಕಾರ್ಯಾಂಗವಾಗಿದೆ.

© KTBS NOT TO BE REPUBLISHED

**ರಾಜ್ಯಪಾಲರು**

ಕೇಂದ್ರ ಮಂತ್ರಿಮಂಡಲದ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಪ್ರತಿ ರಾಜ್ಯಕ್ಕೂ ಒಬ್ಬೊಬ್ಬರು ರಾಜ್ಯಪಾಲರಿರುತ್ತಾರೆ. ಆದರೆ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಬ್ಬರೇ ರಾಜ್ಯಪಾಲರನ್ನು ನೇಮಿಸಬಹುದು.

**ಅರ್ಹತೆ, ಅಧಿಕಾರಾವಧಿ, ವೇತನ ಮತ್ತು ಸವಲತ್ತುಗಳು :** (1) ಭಾರತದ ಪ್ರಜೆಯಾಗಿರಬೇಕು. (2) 35 ವರ್ಷ ವಯಸ್ಸು ಪೂರ್ಣಗೊಂಡಿರಬೇಕು. (3) ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು. (4) ಸಂಸತ್ತು ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು. ಸಂಸತ್ತು ಅಥವಾ ರಾಜ್ಯ ಶಾಸಕಾಂಗದ ಸದಸ್ಯತ್ವ ಹೊಂದಿದ್ದರೆ ರಾಜ್ಯಪಾಲರಾಗಿ ನೇಮಕವಾದ ನಂತರ ಸದಸ್ಯತ್ವ ತ್ಯಜಿಸಬೇಕು. ರಾಜ್ಯಪಾಲರ ಅಧಿಕಾರಾವಧಿ 5 ವರ್ಷಗಳು. ರಾಜ್ಯಪಾಲರು ಅವಧಿಗೆ ಮುನ್ನವೇ ರಾಷ್ಟ್ರಾಧ್ಯಕ್ಷರಿಗೆ ತಮ್ಮ ರಾಜೀನಾಮೆ ನೀಡಬಹುದು. ರಾಷ್ಟ್ರಾಧ್ಯಕ್ಷರು ರಾಜ್ಯಪಾಲರನ್ನು ಪದಚ್ಯುತಿಗೊಳಿಸಬಹುದು.ಇವರಿಗೆ ಸಂಸತ್ತು ನಿಗಧಿಪಡಿಸುವ ವೇತನ, ಭತ್ಯೆ, ಬಾಡಿಗೆ ರಹಿತ ಅಧಿಕೃತ ನಿವಾಸ ಲೋಕ ಭವನ (ರಾಜಭವನ) ವನ್ನು ನೀಡಲಾಗಿದೆ. ಅಧಿಕಾರಾವಧಿಯಲ್ಲಿ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವಂತಿಲ್ಲ.

**ಅಧಿಕಾರ ಮತ್ತು ಕಾರ್ಯಗಳು :** ಸಂವಿಧಾನಾತ್ಮಕವಾಗಿ ರಾಜ್ಯದ ಎಲ್ಲಾ ಅಧಿಕಾರಗಳು ರಾಜ್ಯಪಾಲರಿಗೆ ಸೇರಿವೆ. ಆದರೆ ವಾಸ್ತವಿಕವಾಗಿ ಮುಖ್ಯಮಂತ್ರಿಯನ್ನೊಳಗೊಂಡ ಮಂತ್ರಿಮಂಡಲ ಈ ಅಧಿಕಾರಗಳನ್ನು ಚಲಾಯಿಸುತ್ತದೆ. ಆದರೂ ರಾಜ್ಯಪಾಲರ ಅಧಿಕಾರ ಮತ್ತು ಕಾರ್ಯಗಳು ಈ ಕೆಳಕಂಡಂತಿವೆ.

**ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :** ರಾಜ್ಯ ಕಾರ್ಯಾಂಗದ ಮುಖ್ಯಸ್ಥರಾದ ರಾಜ್ಯಪಾಲರು ರಾಜ್ಯದ ಮುಖ್ಯಮಂತ್ರಿಯನ್ನು ಮತ್ತು ಅವರ ಸಲಹೆಯ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ. ಇವರು ರಾಜ್ಯ ಮಂತ್ರಿಮಂಡಲದ ಸಲಹೆಯ ಮೇರೆಗೆ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುತ್ತಾರೆ.

ಇವರು ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿದ್ದಾರೆ. ಇವರು ರಾಜ್ಯದ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳನ್ನು ನೇಮಕ ಮಾಡುತ್ತಾರೆ.

**ಶಾಸನೀಯ ಅಧಿಕಾರ ಮತ್ತು ಕಾರ್ಯಗಳು :** ವಿಧಾನ ಮಂಡಲದ ಅಧಿವೇಶನ ಕರೆಯುವ, ಮುಂದೂಡುವ ಮತ್ತು ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರವಿದೆ. ವಿಧಾನಪರಿಷತ್‌ಗೆ ಆರನೇ ಒಂದರಷ್ಟು ಸದಸ್ಯರನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಮಾಜಸೇವೆ ಹಾಗೂ ಸಹಕಾರ ಚಳವಳಿ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ನಾಮನಿರ್ದೇಶನ ಮಾಡುವ ಅಧಿಕಾರ ಹೊಂದಿದ್ದಾರೆ. ಶಾಸಕಾಂಗ ಅಂಗೀಕರಿಸಿದ ಮಸೂದೆಗೆ ತಮ್ಮ ಅಂಕಿತವನ್ನು ಹಾಕುವ ಅಥವಾ ರಾಜ್ಯಶಾಸಕಾಂಗಕ್ಕೆ ಮಸೂದೆಯನ್ನು ಮರು ಪರಿಶೀಲನೆಗಾಗಿ ಹಿಂದಿರುಗಿಸುವ ಅಥವಾ ತಿರಸ್ಕರಿಸುವ ಅಧಿಕಾರವಿದೆ. ಅವಶ್ಯವಿದ್ದಲ್ಲಿ ರಾಷ್ಟ್ರಾಧ್ಯಕ್ಷರ ಅಂಕಿತಕ್ಕೂ ಕಳುಹಿಸಬಹುದು.

**ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು :** ರಾಜ್ಯಪಾಲರ ಪೂರ್ವಾನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವಂತಿಲ್ಲ. ರಾಜ್ಯ ಹಣಕಾಸು ಆಯೋಗ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ರಚಿಸುವ ಅಧಿಕಾರ ಪಡೆದಿದ್ದಾರೆ. ರಾಜ್ಯದ ತುರ್ತು ನಿಧಿಯಿಂದ ಬರ, ಪ್ರವಾಹ, ಭೂಕಂಪದಂತಹ ಆಕಸ್ಮಿಕ ಘಟನೆಗಳನ್ನು ನಿಭಾಯಿಸಲು ಹಣ ಬಿಡುಗಡೆ ಮಾಡುವ ಅಧಿಕಾರವಿದೆ. ರಾಜ್ಯದ ಸಂಚಿತ ನಿಧಿಯು ಇವರ ನಿಯಂತ್ರಣದಲ್ಲಿದೆ.

NOT TO BE REPUBLISHED ©KTBS

**ನ್ಯಾಯಾಂಗೀಯ ಅಧಿಕಾರ ಮತ್ತು ಕಾರ್ಯಗಳು :** ಅಪರಾಧ ಮಾಡಿ ಉಚ್ಚನ್ಯಾಯಾಲಯಗಳಿಂದ ಶಿಕ್ಷೆಗೆ ಗುರಿಯಾದವರಿಗೆ ಕ್ಷಮಾದಾನ ನೀಡುವ, ಶಿಕ್ಷೆ ಕಡಿಮೆ ಮಾಡುವ, ಮುಂದೂಡುವ ಅಥವಾ ಶಿಕ್ಷೆಯನ್ನು ಬದಲಾಯಿಸುವ ಅಧಿಕಾರ ಇವರಿಗಿದೆ. ರಾಜ್ಯದ ಅಡ್ವೋಕೇಟ್ ಜನರಲ್ ಮತ್ತು ಜಿಲ್ಲಾ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರವಿದೆ.

**ವಿವೇಚನಾಧಿಕಾರಗಳು :** ಶಾಸಕಾಂಗ ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಸಹಿಗೆ ಕಾಯ್ದಿರಿಸುವ, ರಾಜ್ಯದಲ್ಲಿ ಸಂವಿಧಾನಿಕ ಬಿಕ್ಕಟ್ಟು ಅಥವಾ ವೈಫಲ್ಯತೆ ಉಂಟಾದಾಗ ರಾಷ್ಟ್ರಾಧ್ಯಕ್ಷರಿಗೆ ವರದಿ ಕಳುಹಿಸಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ವಿಧಿಸುವಂತೆ ಶಿಫಾರಸ್ಸು ಮಾಡುವ ಅಧಿಕಾರ ಹೊಂದಿದ್ದಾರೆ. ರಾಜ್ಯ ವಿಧಾನ ಸಭೆಯಲ್ಲಿ ವಿಶ್ವಾಸವನ್ನು ಕಳೆದುಕೊಂಡ ಮಂತ್ರಿಮಂಡಲವನ್ನು ವಜಾ ಮಾಡಬಹುದು.

> **ಚರ್ಚಿಸಿ**
>
> ರಾಜ್ಯದ ಆದೇಶಗಳನ್ನು ರಾಜ್ಯಪಾಲರ ಆಜ್ಞಾನುಸಾರ ಎಂದು, ರಾಷ್ಟ್ರದ ಆದೇಶಗಳನ್ನು ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ ಎಂದು ಹೊರಡಿಸುತ್ತಾರೆ. ಏಕೆ? ಶಿಕ್ಷಕರೊಂದಿಗೆ ಚರ್ಚಿಸಿ.

**ರಾಜ್ಯ ಮಂತ್ರಿಮಂಡಲ**

ನಮ್ಮ ಸಂವಿಧಾನವು ರಾಜ್ಯದಲ್ಲಿ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲಕ್ಕೆ ಅವಕಾಶ ಕಲ್ಪಿಸಿದೆ. ಮಂತ್ರಿಮಂಡಲವು ರಾಜ್ಯಪಾಲರಿಗೆ ಅವರ ಕಾರ್ಯನಿರ್ವಹಣೆಯಲ್ಲಿ ಸಲಹೆ ಮತ್ತು ನೆರವು ನೀಡುತ್ತದೆ ಹಾಗೂ ರಾಜ್ಯ ವಿಧಾನಸಭೆಗೆ ಜವಾಬ್ದಾರಿಯುತವಾಗಿರುತ್ತದೆ. ಈ ಮಂತ್ರಿಮಂಡಲವು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ (1) ಸರ್ಕಾರದ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುವುದು. (2) ರಾಜ್ಯದ ಆಯ-ವ್ಯಯ ಪಟ್ಟಿಯನ್ನು ತಯಾರಿಸಿ ಶಾಸನಸಭೆಯ ಮುಂದೆ ಮಂಡನೆಯಾಗುವಂತೆ ನೋಡಿಕೊಳ್ಳುವುದು. (3) ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಲೋಕಾಯುಕ್ತರು ಮುಂತಾದವರನ್ನು ನೇಮಕ ಮಾಡುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು. (4) ಪ್ರತಿಯೊಬ್ಬ ಮಂತ್ರಿಯೂ ತನ್ನ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತೆ ನೋಡಿಕೊಳ್ಳುವುದು (5) ವಿವಿಧ ಇಲಾಖೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಿ ಅವುಗಳ ನಡುವೆ ಸಮನ್ವಯ ತರುವುದು. ಹೀಗೆ ಮಂತ್ರಿಮಂಡಲ ರಾಜ್ಯದ ನೈಜ ಕಾರ್ಯಾಂಗವಾಗಿ ಕಾರ್ಯನಿರ್ವಹಿಸುತ್ತದೆ.

> **ಚಟುವಟಿಕೆ**
>
> ನಮ್ಮ ರಾಜ್ಯದ ಇದುವರೆಗಿನ ರಾಜ್ಯಪಾಲರುಗಳ ಹೆಸರು ಮತ್ತು ಅಧಿಕಾರಾವಧಿಯನ್ನು ತಿಳಿಸುವ ಪಟ್ಟಿ ತಯಾರಿಸಿ.

NOT TO BE REPUBLISHED © KTBS

**ಮುಖ್ಯಮಂತ್ರಿ :** ಮುಖ್ಯಮಂತ್ರಿಯು ರಾಜ್ಯ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ರಾಜ್ಯ ಸರ್ಕಾರದ ಯಶಸ್ಸು ಅಥವಾ ಅಪಯಶಸ್ಸು ಇವರ ವರ್ಚಸ್ಸನ್ನು ಆಧರಿಸಿದೆ. ರಾಜ್ಯದ ಸಮಸ್ತ ಅಧಿಕಾರವೆಲ್ಲವೂ ಇವರಿಗೆ ಸೇರಿದ್ದು, ಇವರು ಮಂತ್ರಿಮಂಡಲದ ಮತ್ತು ಶಾಸಕಾಂಗದಲ್ಲಿ ಬಹುಮತ ಪಡೆದ ಪಕ್ಷದ ನಾಯಕರಾಗಿದ್ದಾರೆ. ಮುಖ್ಯಮಂತ್ರಿಯಾಗುವವರು ರಾಜ್ಯ ಶಾಸಕಾಂಗದ ಯಾವುದಾದರೂ ಒಂದು ಸದನದ ಸದಸ್ಯತ್ವ ಹೊಂದಿರಬೇಕು. ಸದನದ ಸದಸ್ಯರಲ್ಲದವರೂ ಮುಖ್ಯಮಂತ್ರಿಗಳಾಗಬಹುದು. ಆದರೆ 6 ತಿಂಗಳ ಒಳಗಾಗಿ ಯಾವುದಾದರೂ ಒಂದು ಸದನದ ಸದಸ್ಯತ್ವ ಪಡೆಯಬೇಕು. ರಾಜ್ಯಪಾಲರು ನಾಮಮಾತ್ರ ಕಾರ್ಯಾಂಗವಾದರೆ ಮುಖ್ಯಮಂತ್ರಿಯ ನೇತೃತ್ವದ ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿದೆ.

**ಮುಖ್ಯಮಂತ್ರಿಯ ಅಧಿಕಾರ ಮತ್ತು ಕಾರ್ಯಗಳು**

1) ಮಂತ್ರಿಮಂಡಲದ ರಚನೆಗೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತಾರೆ.
2) ಸಚಿವರುಗಳಿಗೆ ಖಾತೆಗಳನ್ನು ಹಂಚುವಂತೆ ಮತ್ತು ಬದಲಾಯಿಸುವಂತೆ ಶಿಫಾರಸ್ಸು ಮಾಡುತ್ತಾರೆ.
3) ಸರ್ಕಾರಕ್ಕೆ ನಿಷ್ಠರಾಗಿರದ ಮಂತ್ರಿಗಳನ್ನು ವಜಾಮಾಡುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದು.

4) ಸರ್ಕಾರದ ಮುಖ್ಯಸ್ಥರಾಗಿದ್ದು, ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

5) ಸಚಿವ ಸಂಪುಟದ ಅಧ್ಯಕ್ಷತೆ ವಹಿಸುವ, ಸಭೆ ಕರೆಯುವ, ಮುಂದೂಡುವ ಅಧಿಕಾರ ಹೊಂದಿದ್ದಾರೆ.

6) ವಿವಿಧ ಇಲಾಖೆಗಳ ಕಾರ್ಯದಕ್ಷತೆಯನ್ನು ಪರಿಶೀಲಿಸಿ ಅವುಗಳ ನಡುವೆ ಸಮನ್ವಯ ಮೂಡಿಸುವ ಕಾರ್ಯ ನಿರ್ವಹಿಸುತ್ತಾರೆ.

7) ಅವಧಿಗೆ ಮುಂಚೆ ವಿಧಾನಸಭೆಯನ್ನು ವಿಸರ್ಜಿಸುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದು.

8) ರಾಜ್ಯಪಾಲರು ಮತ್ತು ಸಚಿವ ಸಂಪುಟದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ.

9) ರಾಜ್ಯಪಾಲರಿಗೆ ಸಲಹೆಗಾರನಂತಿದ್ದು, ವಿವಿಧ ಹುದ್ದೆಗಳ ನೇಮಕಾತಿಗಳಿಗೆ ಶಿಫಾರಸ್ಸನ್ನು ಮಾಡುತ್ತಾರೆ.

**ಕರ್ನಾಟಕದ ಮುಖ್ಯಮಂತ್ರಿಗಳ ಪಟ್ಟಿ ಹಾಗೂ ಅಧಿಕಾರಾವಧಿ**

| ಕ್ರ.ಸಂ. | ಹೆಸರು | ಆಳ್ವಿಕೆಯ ಕಾಲಾವಧಿ |
|---|---|---|
| 1. | ಶ್ರೀ ಕೆ. ಸಿ. ರೆಡ್ಡಿ | 25 ಅಕ್ಟೋಬರ್ 1947 – 30 ಮಾರ್ಚ್ 1952 |
| 2. | ಶ್ರೀ ಕೆಂಗಲ್ ಹನುಮಂತಯ್ಯ | 30 ಮಾರ್ಚ್ 1952 – 19 ಆಗಸ್ಟ್ 1956 |
| 3 | ಶ್ರೀ ಕಡಿದಾಳ್ ಮಂಜಪ್ಪ | 19 ಆಗಸ್ಟ್ 1956 – 31 ಅಕ್ಟೋಬರ್ 1956 |
| 4 | ಶ್ರೀ ಎಸ್. ನಿಜಲಿಂಗಪ್ಪ | 1 ನವೆಂಬರ್ 1956 – 16 ಮೇ 1958 |
| 5 | ಶ್ರೀ ಬಿ. ಡಿ. ಜತ್ತಿ | 16 ಮೇ 1958 – 9 ಮಾರ್ಚ್ 1962 |
| 6 | ಶ್ರೀ ಎಸ್. ಆರ್. ಕಂಠಿ | 14 ಮಾರ್ಚ್ 1962 – 20 ಜೂನ್ 1962 |
| 7 | ಶ್ರೀ ಎಸ್. ನಿಜಲಿಂಗಪ್ಪ | 21 ಜೂನ್ 1962 – 28 ಮೇ 1968 |
| 8 | ಶ್ರೀ ವೀರೇಂದ್ರ ಪಾಟೀಲ್ | 29 ಮೇ 1968 – 18 ಮಾರ್ಚ್ 1971 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 19 ಮಾರ್ಚ್ 1971 – 20 ಮಾರ್ಚ್ 1972 |
| 9 | ಶ್ರೀ ಡಿ. ದೇವರಾಜ ಅರಸು | 20 ಮಾರ್ಚ್ 1972 – 31 ಡಿಸೆಂಬರ್ 1977 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 31 ಡಿಸೆಂಬರ್ 1977 – 28 ಫೆಬ್ರವರಿ 1978 |
| 10 | ಶ್ರೀ ಡಿ. ದೇವರಾಜ ಅರಸು | 28 ಫೆಬ್ರವರಿ 1978 – 7 ಜನವರಿ 1980 |
| 11 | ಶ್ರೀ ಆರ್. ಗುಂಡೂರಾವ್ | 12 ಜನವರಿ 1980 – 6 ಜನವರಿ 1983 |
| 12 | ಶ್ರೀ ರಾಮಕೃಷ್ಣ ಹೆಗಡೆ | 10 ಜನವರಿ 1983 – 29 ಡಿಸೆಂಬರ್ 1984 |
| | | 8 ಮಾರ್ಚ್ 1985 – 13 ಫೆಬ್ರವರಿ 1986 |
| | | 16 ಫೆಬ್ರವರಿ 1986 – 10 ಆಗಸ್ಟ್ 1988 |

©KTBS NOT TO BE REPUBLISHED

| | | |
|---|---|---|
| 13 | ಶ್ರೀ ಎಸ್. ಆರ್. ಬೊಮ್ಮಾಯಿ | 13 ಆಗಸ್ಟ್ 1988 – 21 ಏಪ್ರಿಲ್ 1989 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 21 ಏಪ್ರಿಲ್ 1989 – 30 ನವೆಂಬರ್ 1989 |
| 14 | ಶ್ರೀ ವೀರೇಂದ್ರ ಪಾಟೀಲ್ | 30 ನವೆಂಬರ್ 1989 – 10 ಅಕ್ಟೋಬರ್ 1990 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 10 ಅಕ್ಟೋಬರ್ 1990 – 17 ಅಕ್ಟೋಬರ್ 1990 |
| 15 | ಶ್ರೀ ಎಸ್. ಬಂಗಾರಪ್ಪ | 17 ಅಕ್ಟೋಬರ್ 1990 – 19 ನವೆಂಬರ್ 1992 |
| 16 | ಶ್ರೀ ಎಂ. ವೀರಪ್ಪ ಮೊಯಿಲಿ | 19 ನವೆಂಬರ್ 1992 – 11 ಡಿಸೆಂಬರ್ 1994 |
| 17 | ಶ್ರೀ ಎಚ್. ಡಿ. ದೇವೇಗೌಡ | 11 ಡಿಸೆಂಬರ್ 1994 – 31 ಮೇ 1996 |
| 18 | ಶ್ರೀ ಜೆ. ಎಚ್. ಪಟೇಲ್ | 31 ಮೇ 1996 – 7 ಅಕ್ಟೋಬರ್ 1999 |
| 19 | ಶ್ರೀ ಎಸ್. ಎಂ. ಕೃಷ್ಣ | 11 ಅಕ್ಟೋಬರ್ 1999 – 28 ಮೇ 2004 |
| 20 | ಶ್ರೀ ಎನ್. ಧರ್ಮಸಿಂಗ್ | 28 ಮೇ 2004 – 2 ಫೆಬ್ರವರಿ 2006 |
| 21 | ಶ್ರೀ ಎಚ್. ಡಿ. ಕುಮಾರಸ್ವಾಮಿ | 3 ಫೆಬ್ರವರಿ 2006 – 8 ಅಕ್ಟೋಬರ್ 2007 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 8 ಅಕ್ಟೋಬರ್ 2007 – 12 ನವೆಂಬರ್ 2007 |
| 22 | ಶ್ರೀ ಬಿ. ಎಸ್. ಯಡಿಯೂರಪ್ಪ | 12 ನವೆಂಬರ್ 2007 – 19 ನವೆಂಬರ್ 2007 |
| | (ರಾಷ್ಟ್ರಾಧ್ಯಕ್ಷರ ಆಡಳಿತ) | 20 ನವೆಂಬರ್ 2007 – 29 ಮೇ 2008 |
| 23 | ಶ್ರೀ ಬಿ. ಎಸ್. ಯಡಿಯೂರಪ್ಪ | 30 ಮೇ 2008 – 4 ಆಗಸ್ಟ್ 2011 |
| 24 | ಶ್ರೀ ಡಿ. ವಿ. ಸದಾನಂದ ಗೌಡ | 5 ಆಗಸ್ಟ್ 2011 – 11 ಜುಲೈ 2012 |
| 25 | ಶ್ರೀ ಜಗದೀಶ್ ಶೆಟ್ಟರ್ | 12 ಜುಲೈ 2012 – 12 ಮೇ 2013 |
| 26 | ಶ್ರೀ ಸಿದ್ದರಾಮಯ್ಯ | 13 ಮೇ 2013 – 15 ಮೇ 2018 |
| 27 | ಶ್ರೀ ಬಿ. ಎಸ್. ಯಡಿಯೂರಪ್ಪ | 17 ಮೇ 2018 – 23 ಮೇ 2018 |
| 28 | ಶ್ರೀ ಎಚ್. ಡಿ. ಕುಮಾರಸ್ವಾಮಿ | 23 ಮೇ 2018 – 23 ಜುಲೈ 2019 |
| 29 | ಶ್ರೀ ಬಿ. ಎಸ್. ಯಡಿಯೂರಪ್ಪ | 26 ಜುಲೈ 2019 – 26 ಜುಲೈ 2021 |
| 30 | ಶ್ರೀ ಬಸವರಾಜ ಬೊಮ್ಮಾಯಿ | 27 ಜುಲೈ 2021 – 20 ಮೇ 2023 |
| 31 | ಶ್ರೀ ಸಿದ್ದರಾಮಯ್ಯ | 20 ಮೇ 2023 ರಿಂದ |

NOT TO BE REPUBLISHED ©KTBS

* ಅಡ್ವೋಕೇಟ್ ಜನರಲ್ – ರಾಜ್ಯದ ಅತ್ಯುನ್ನತ ಕಾನೂನು ಸಲಹೆಗಾರರು.
* ಕರ್ನಾಟಕ ರಾಜ್ಯ ಯೋಜನಾ ಮಂಡಳಿಯನ್ನು ಈಗ ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ (SITK - State Institute for Transformation of Karnataka) ಎಂದು ಮರುನಾಮಕರಣ ಮಾಡಲಾಗಿದೆ.

* ಕರ್ನಾಟಕ ಮುಖ್ಯಮಂತ್ರಿಗಳ ಪಟ್ಟಿ ಮತ್ತು ಅಧಿಕಾರಾವಧಿಯ ಮಾಹಿತಿಯನ್ನು ಕರ್ನಾಟಕ ಕೈಪಿಡಿಯಿಂದ ಹಾಗೂ www.kla.kar.nic.in ಜಾಲತಾಣದಿಂದ ಪಡೆಯಲಾಗಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು __________ ರಾಜ್ಯಗಳನ್ನು ಮತ್ತು __________ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ.
2. ಕರ್ನಾಟಕ ರಾಜ್ಯ ವಿಧಾನಪರಿಷತ್ __________ ಸದಸ್ಯರನ್ನು ಒಳಗೊಂಡಿದೆ.
3. ರಾಜ್ಯ ಮಂತ್ರಿಮಂಡಲವು __________ ಮತ್ತು __________ ಗಳನ್ನು ಒಳಗೊಂಡ ನೈಜ ಕಾರ್ಯಾಂಗವಾಗಿದೆ.
4. ರಾಜ್ಯಪಾಲರನ್ನು __________ ರು ನೇಮಿಸುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

5. ರಾಜ್ಯ ವಿಧಾನಸಭೆಯ ರಚನೆಯನ್ನು ತಿಳಿಸಿ.
6. ರಾಜ್ಯ ವಿಧಾನಪರಿಷತ್ತಿನ ಸದಸ್ಯರು ಯಾವ ಯಾವ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ ?
7. ರಾಜ್ಯಪಾಲರ ಅರ್ಹತೆ ಮತ್ತು ಅಧಿಕಾರಾವಧಿಯನ್ನು ವಿವರಿಸಿ.
8. ಮುಖ್ಯಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**III. ಚಟುವಟಿಕೆಗಳು.**

1. ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್‌ಗೆ ಭೇಟಿ ನೀಡಿ, ಕಲಾಪ ನಡೆಯುವುದನ್ನು ವೀಕ್ಷಿಸಿ ವರದಿ ತಯಾರಿಸಿ.
2. ರಾಜ್ಯ ಶಾಸಕಾಂಗದಂತೆ ನಿಮ್ಮ ಶಾಲೆಯಲ್ಲಿ ಶಾಲಾ ಸಂಸತ್ತನ್ನು ರಚಿಸಿಕೊಂಡು ಅದರ ಪ್ರಕ್ರಿಯೆಗಳನ್ನು ವೀಕ್ಷಿಸಿ ವರದಿ ತಯಾರಿಸಿ.

**IV. ಯೋಜನೆಗಳು.**

1. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ ಸದನದ ಕಲಾಪದ ಬಗ್ಗೆ ಸಂವಾದ ನಡೆಸಿರಿ.
2. ಇಲ್ಲಿಯವರೆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

*****

@KTBS NOT TO BE REPUBLISHED

# ಅಧ್ಯಾಯ – 8

# ನ್ಯಾಯಾಂಗ

M9Z7G2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಒಕ್ಕೂಟ ನ್ಯಾಯಾಂಗ ವ್ಯವಸ್ಥೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ಜವಾಬ್ಧಾರಿ ಮತ್ತು ಕಾರ್ಯಗಳು.
- ವಿವಿಧ ಹಂತದ ಅಧೀನ ನ್ಯಾಯಾಲಯಗಳ ಕಾರ್ಯಗಳು.
- ಜನತಾ ನ್ಯಾಯಾಲಯಗಳ ಸ್ವರೂಪ ಮತ್ತು ಜವಾಬ್ದಾರಿಗಳು.

ನಮ್ಮ ನ್ಯಾಯಾಂಗ ವ್ಯವಸ್ಥೆಯು ಹೆಚ್ಚು ಮಹತ್ವದ ಸ್ಥಾನ ಪಡೆದುಕೊಂಡಿದೆ. ಅಮೆರಿಕದಂತೆ ಕೇಂದ್ರ ಹಾಗೂ ಪ್ರಾಂತ್ಯಗಳಿಗೆ ಪ್ರತ್ಯೇಕ ನ್ಯಾಯಾಲಯಗಳಿರದೆ ಸಮಸ್ತ ರಾಷ್ಟ್ರಕ್ಕೆ ಒಂದೇ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿದೆ. ನಮ್ಮ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಸ್ವತಂತ್ರವಾಗಿದೆ. ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳು ಸರ್ವೋಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತವೆ. ಸಂವಿಧಾನ, ಶಾಸನಗಳು, ಸಂಪ್ರದಾಯ ಹಾಗೂ ಪೂರ್ವ ನಿದರ್ಶನಗಳು ನ್ಯಾಯ ನಿರ್ಣಯಗಳಿಗೆ ಆಧಾರಗಳು. ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವಾಗಿದೆ. ಇದರ ತೀರ್ಪು ಅಂತಿಮವಾದುದು.

@KTBS NOT TO BE REPUBLISHED

**ಸರ್ವೋಚ್ಚ ನ್ಯಾಯಾಲಯ**

ಸರ್ವೋಚ್ಚ ನ್ಯಾಯಾಲಯವು ಸಂಸತ್ತಿನ ಕಾಯ್ದೆಯ ಮೂಲಕ ಜನವರಿ 28, 1950 ರಂದು ಅಸ್ತಿತ್ವಕ್ಕೆ ಬಂದಿತು. ಇದು ನವದೆಹಲಿಯಲ್ಲಿದೆ. ಈ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಇತರೆ ನ್ಯಾಯಾಧೀಶರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಪ್ರಸ್ತುತ ಮುಖ್ಯ ನ್ಯಾಯಾಧೀಶರನ್ನೊಳಗೊಂಡು 34 ಮಂದಿ ನ್ಯಾಯಾಧೀಶರಿದ್ದಾರೆ.

**ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು :**

1. ಭಾರತದ ಪ್ರಜೆಯಾಗಿರಬೇಕು.
2. ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಯಾವುದೇ ಉಚ್ಚ ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು.
3. ರಾಷ್ಟ್ರಾಧ್ಯಕ್ಷರ ಅಭಿಪ್ರಾಯದಲ್ಲಿ ನ್ಯಾಯ ತಜ್ಞರಾಗಿರಬೇಕು.

**ನೇಮಕಾತಿ, ಅಧಿಕಾರಾವಧಿ ಮತ್ತು ಪದಚ್ಯುತಿ :** ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಹಾಗೂ ಇತರೆ ನ್ಯಾಯಾಧೀಶರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಹಾಲಿ ಮುಖ್ಯ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಲ್ಲಿ ಅತ್ಯಂತ ಹಿರಿಯ ನ್ಯಾಯಾಧೀಶರನ್ನು ಮುಂದಿನ ಮುಖ್ಯ ನ್ಯಾಯಾಧೀಶರ ಹುದ್ದೆಗೆ ಶಿಫಾರಸ್ಸು ಮಾಡುತ್ತಾರೆ. ಈ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ನೇಮಿಸುತ್ತಾರೆ. ಸರ್ವೋಚ್ಚ ನ್ಯಾಯಾಲಯದ ಇತರೆ ನ್ಯಾಯಾಧೀಶರನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಹಾಗೂ ನಾಲ್ಕು

ಜನ ಹಿರಿಯ ನ್ಯಾಯಮೂರ್ತಿಗಳನ್ನೊಳಗೊಂಡ ಕೊಲಿಜಿಯಂನ ಶಿಫಾರಸ್ಸಿನ ಮೇರೆಗೆ ಹಾಗೂ ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಇವರ ನಿವೃತ್ತಿ ವಯಸ್ಸು 65 ವರ್ಷಗಳು. ಆದರೆ ಅದಕ್ಕೂ ಮುಂಚೆಯೇ ಇವರು ರಾಷ್ಟ್ರಾಧ್ಯಕ್ಷರಿಗೆ ರಾಜೀನಾಮೆ ನೀಡಬಹುದು. ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಎರಡೂ ಸದನಗಳ ನಿರ್ದಿಷ್ಟ ಬಹುಮತದ ಶಿಫಾರಸ್ಸಿನಂತೆ ಇವರನ್ನು ಪದಚ್ಯುತಿಗೊಳಿಸಬಹುದು. ನಿವೃತ್ತಿಯಾದ ಅಥವಾ ಪದಚ್ಯುತಿಗೊಂಡ ನಂತರ ದೇಶದ ಯಾವುದೇ ನ್ಯಾಯಾಲಯದಲ್ಲಿ ಇವರು ವಕೀಲಿ ವೃತ್ತಿಯನ್ನು ಮುಂದುವರೆಸುವಂತಿಲ್ಲ. ಇವರ ವೇತನ, ಭತ್ಯೆಗಳನ್ನು ಸಂಸತ್ತು ಕಾನೂನು ಮಾಡುವುದರ ಮೂಲಕ ನಿರ್ಧರಿಸುತ್ತದೆ. ಇವರ ವೇತನ ಮತ್ತು ಭತ್ಯೆಗಳನ್ನು ಭಾರತದ ಸಂಚಿತನಿಧಿಯಿಂದ ಭರಿಸಲಾಗುತ್ತದೆ.



**ಸರ್ವೋಚ್ಚ ನ್ಯಾಯಾಲಯ – ನವದೆಹಲಿ**

**ಅಧಿಕಾರ ಮತ್ತು ಕಾರ್ಯಗಳು**

**1) ಮೂಲ ಅಧಿಕಾರ ವ್ಯಾಪ್ತಿ :–** ಕೇಂದ್ರ – ರಾಜ್ಯಗಳ ನಡುವೆ, ರಾಜ್ಯ – ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಇತ್ಯರ್ಥಪಡಿಸುವ ಮತ್ತು ಸಂವಿಧಾನವನ್ನು ಅರ್ಥೈಸುವ ಅಧಿಕಾರ ಸರ್ವೋಚ್ಚನ್ಯಾಯಾಲಯಕ್ಕಿದೆ.

**2) ಮೇಲ್ಮನವಿ ಅಧಿಕಾರ ವ್ಯಾಪ್ತಿ :–** ಕೆಳಹಂತದ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಕಕ್ಷಿದಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಇಂತಹ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ನಡೆಸಿ ತೀರ್ಪು ನೀಡುವ ಅಧಿಕಾರ ಈ ನ್ಯಾಯಾಲಯಕ್ಕಿದೆ.

**3) ಸಲಹಾ ಅಧಿಕಾರ ವ್ಯಾಪ್ತಿ :–** ಸಾರ್ವಜನಿಕ ಮಹತ್ವದ, ಸಾಂವಿಧಾನಿಕ ಮಹತ್ವದ ಮತ್ತು ಶಾಸನೀಯ ಮಹತ್ವದ ವಿಷಯಗಳ ಬಗ್ಗೆ ರಾಷ್ಟ್ರಾಧ್ಯಕ್ಷರು ಸಲಹೆ ಕೇಳಿದಾಗ ಸಲಹೆ ನೀಡುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿದೆ.

**4) ನ್ಯಾಯಿಕ ವಿಮರ್ಶೆಯ ಅಧಿಕಾರ :–** ಸರ್ವೋಚ್ಚ ನ್ಯಾಯಾಲಯವು ಶಾಸಕಾಂಗದಿಂದ ರೂಪಿಸಲ್ಪಟ್ಟ ಶಾಸನಗಳು ಮತ್ತು ಕಾರ್ಯಾಂಗದ ಆದೇಶಗಳು ಹಾಗೂ ನಿರ್ಧಾರಗಳು ಸಂವಿಧಾನ ಬದ್ಧವಾಗಿದ್ದಾವೆಯೇ ಅಥವಾ ಇಲ್ಲವೇ ಎಂಬುದನ್ನು ವಿಮರ್ಶಿಸುವ ಅಧಿಕಾರ ಹೊಂದಿದೆ. ಒಂದು ವೇಳೆ ಇವುಗಳು ಸಂವಿಧಾನವನ್ನು ಉಲ್ಲಂಘಿಸುವಂತಿದ್ದರೆ ಅವುಗಳನ್ನು ಸಂವಿಧಾನ ಬಾಹಿರ ಅಥವಾ

NOT TO BE REPUBLISHED

ಅಸಿಂಧು ಎಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸುತ್ತದೆ. ಇದನ್ನು ನ್ಯಾಯಿಕ ವಿಮರ್ಶೆ ಎಂದು ಕರೆಯಲಾಗುತ್ತದೆ.

**5) ಮೂಲಭೂತ ಹಕ್ಕುಗಳ ರಕ್ಷಣೆ :** ಭಾರತ ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ವಿಶೇಷ ಆಜ್ಞೆ (ರಿಟ್)ಗಳನ್ನು ನೀಡುವ ಮೂಲಕ ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು ಮೂಲಭೂತ ಹಕ್ಕುಗಳ ರಕ್ಷಕ ಎಂದು ಕರೆಯಲಾಗುತ್ತದೆ. ಡಾ. ಬಿ.ಆರ್. ಅಂಬೇಡ್ಕರ್‌ರವರು 32ನೇ ವಿಧಿಯನ್ನು ಸಂವಿಧಾನದ ಆತ್ಮ ಮತ್ತು ಹೃದಯ ಎಂದು ಪ್ರಶಂಸಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ 5 ವಿಧದ ವಿಶೇಷಾಜ್ಞೆ (ರಿಟ್)ಗಳನ್ನು ಹೊರಡಿಸುವ ಮೂಲಕ ಅವುಗಳನ್ನು ರಕ್ಷಿಸುತ್ತದೆ. ಅಂತಹ ವಿಶೇಷಾಜ್ಞೆ (ರಿಟ್)ಗಳೆಂದರೆ 1) ಬಂಧೀ ಪ್ರತ್ಯಕ್ಷೀಕರಣ (Habeas Corpus) 2) ಪರಮಾದೇಶ (Mandamus) 3) ಪ್ರತಿಬಂಧಕಾಜ್ಞೆ (Prohibition) 4) ಉತ್ಪ್ರೇಕ್ಷಣಾ ಲೇಖ (Certiorari) 5) ಅಧಿಕಾರ ಲೇಖ (Quo-Warranto).

ಈ ಮೇಲ್ಕಂಡ ಅಧಿಕಾರ ಮತ್ತು ಕಾರ್ಯಗಳನ್ನು ಗಮನಿಸಿದರೆ ಸರ್ವೋಚ್ಚನ್ಯಾಯಾಲಯವು ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿದುಬರುತ್ತದೆ. ಸರ್ವೋಚ್ಚ ನ್ಯಾಯಾಲಯವು ಸಂವಿಧಾನವನ್ನು ರಕ್ಷಿಸುತ್ತದೆ.

* ನ್ಯಾಯಮೂರ್ತಿ ಹರಿಲಾಲ್ ಜೆ ಕಾನಿಯಾರವರು ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಥಮ ಮುಖ್ಯ ನ್ಯಾಯಮೂರ್ತಿ.
* ನ್ಯಾಯಮೂರ್ತಿ ಧನಂಜಯ ಯಶವಂತ್ ಚಂದ್ರಚೂಡ್‌ರವರು ಭಾರತದ ಸರ್ವೋಚ್ಚ ನ್ಯಾಯಾಲಯದ 50ನೆಯ ಮುಖ್ಯ ನ್ಯಾಯಮೂರ್ತಿ.

**ಉಚ್ಚ ನ್ಯಾಯಾಲಯ :**

ಪ್ರತಿ ರಾಜ್ಯದಲ್ಲೂ ಒಂದು ಉಚ್ಚ ನ್ಯಾಯಾಲಯ ಇರಬೇಕೆಂದು ಸಂವಿಧಾನದಲ್ಲಿ ತಿಳಿಸಲಾಗಿದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚನ್ಯಾಯಾಲಯವಿರಬಹುದು. ಉಚ್ಚನ್ಯಾಯಾಲಯವು ಒಬ್ಬ ಮುಖ್ಯ ನ್ಯಾಯಾಧೀಶರು ಮತ್ತು ಇತರೆ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ನ್ಯಾಯಾಧೀಶರ ಸಂಖ್ಯೆ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.




**ಕರ್ನಾಟಕ ಉಚ್ಚ ನ್ಯಾಯಾಲಯ – ಬೆಂಗಳೂರು**

@KTBS NOT TO BE REPUBLISHED

**ನಿಮಗಿದು ತಿಳಿದಿರಲಿ :**

1) 1862 ರಲ್ಲಿ ಬ್ರಿಟೀಷರು ಭಾರತದಲ್ಲಿ ಮೊಟ್ಟಮೊದಲು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ 3 ಹೈಕೋರ್ಟ್ (ಉಚ್ಚನ್ಯಾಯಾಲಯ)ಗಳನ್ನು ಸ್ಥಾಪಿಸಿದರು. ಪ್ರಸ್ತುತ ಭಾರತದಲ್ಲಿ ಒಟ್ಟು 25 ಉಚ್ಚ ನ್ಯಾಯಾಲಯಗಳಿವೆ. ಕೊಲ್ಕತ್ತಾ ಹೈಕೋರ್ಟ್ ಭಾರತದ ಮೊಟ್ಟಮೊದಲ ಹೈಕೋರ್ಟ್ ಆಗಿದೆ.
2) ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಗೆ ಹಾಗೂ ಚಂಡೀಗಢ ಕೇಂದ್ರಾಡಳಿತ ಪ್ರದೇಶಕ್ಕೆ ಒಂದೇ ಹೈಕೋರ್ಟ್ ಇದೆ. ಅದು ಚಂಡೀಗಢದಲ್ಲಿದೆ. ಅದೇ ರೀತಿ ಅಸ್ಸಾಂ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಅರುಣಾಚಲ ಪ್ರದೇಶಗಳಿಗೆ ಅಸ್ಸಾಂನ ಗೌಹಾಟಿಯಲ್ಲಿ ಒಂದೇ ಹೈಕೋರ್ಟ್ ಇದೆ, ಅದೇ ಗೌಹಾಟಿ ಹೈಕೋರ್ಟ್.
3) ಕರ್ನಾಟಕ ಉಚ್ಚನ್ಯಾಯಾಲಯವು ಬೆಂಗಳೂರಿನಲ್ಲಿದೆ. ಇದು 1884ರಲ್ಲಿ ಸ್ಥಾಪನೆಯಾಯಿತು. 2008ರಲ್ಲಿ ಹುಬ್ಬಳ್ಳಿ–ಧಾರವಾಡ ಮತ್ತು ಕಲಬುರಗಿಯಲ್ಲಿ ಕರ್ನಾಟಕ ಹೈಕೋರ್ಟ್‌ನ ಸಂಚಾರಿ ಪೀಠಗಳನ್ನು ಸ್ಥಾಪಿಸಲಾಗಿತ್ತು. ಆದರೆ 2013ರಲ್ಲಿ ಈ ಎರಡೂ ಸಂಚಾರಿ ಪೀಠಗಳನ್ನು ಹೈಕೋರ್ಟ್‌ನ ಖಾಯಂ ಪೀಠಗಳಾಗಿ ಪರಿವರ್ತಿಸಲಾಯಿತು.

**ಅರ್ಹತೆಗಳು :** ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳೆಂದರೆ :

1) ಭಾರತದ ಪ್ರಜೆಯಾಗಿರಬೇಕು.
2) ಭಾರತದ ಯಾವುದಾದರೂ ಅಧೀನ ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಒಂದು ಅಥವಾ ಒಂದಕ್ಕಿಂತ ಹೆಚ್ಚು ಉಚ್ಚನ್ಯಾಯಾಲಯಗಳಲ್ಲಿ 10 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು.

**ನೇಮಕಾತಿ, ಅಧಿಕಾರಾವಧಿ ಮತ್ತು ಪದಚ್ಯುತಿ :** ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳನ್ನು ಸುಪ್ರಿಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹಾಗೂ ನಾಲ್ಕು ಜನ ಹಿರಿಯ ನ್ಯಾಯಾಧೀಶರನ್ನೊಳಗೊಂಡ ಕೊಲಿಜಿಯಂನ ಶಿಫಾರಸ್ಸಿನ ಮೇರೆಗೆ ಹಾಗೂ ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಹೈಕೋರ್ಟ್‌ನ ಇತರೆ ನ್ಯಾಯಾಧೀಶರನ್ನು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಹಾಗೂ ಇತರೆ ಇಬ್ಬರು ಹಿರಿಯ ನ್ಯಾಯಾಧೀಶರನ್ನೊಳಗೊಂಡ ಕೊಲಿಜಿಯಂನ ಶಿಫಾರಸ್ಸಿನ ಮೇರೆಗೆ ಹಾಗೂ ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಹಾಗೂ ನ್ಯಾಯಾಧೀಶರ ನಿವೃತ್ತಿಯ ವಯಸ್ಸು 62 ವರ್ಷ. ಅದಕ್ಕೂ ಮುಂಚೆಯೇ ಅವರು ರಾಷ್ಟ್ರಾಧ್ಯಕ್ಷರಿಗೆ ರಾಜೀನಾಮೆ ನೀಡಬಹುದು. ಅವರನ್ನು ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಎರಡೂ ಸದನಗಳ ನಿರ್ದಿಷ್ಟ ಬಹುಮತದ ಶಿಫಾರಸ್ಸಿನಂತೆ ಪದಚ್ಯುತಿಗೊಳಿಸಬಹುದು. ಇವರ ವೇತನ ಮತ್ತು ಭತ್ಯೆಗಳನ್ನು ಸಂಸತ್ತು ಕಾನೂನು ಮಾಡುವುದರ ಮೂಲಕ ನಿರ್ಧರಿಸುತ್ತದೆ. ಅವರ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಸಂಚಿತ ನಿಧಿಯಿಂದ ಭರಿಸಲಾಗುತ್ತದೆ.

**ಅಧಿಕಾರ ಮತ್ತು ಕಾರ್ಯಗಳು :** ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ರಾಜ್ಯಾದ್ಯಂತ ವಿಸ್ತರಿಸಿದೆ. ಅದು ನಿರ್ವಹಿಸುವ ಕಾರ್ಯಗಳು ಈ ಕೆಳಕಂಡಂತಿವೆ.

1) ವೈವಾಹಿಕ ಸಂಬಂಧಗಳು, ಮರಣ ಪತ್ರ ಹಾಗೂ ನ್ಯಾಯಾಂಗ ನಿಂದನೆ ಈ ವಿಷಯಗಳಿಗೆ ಸಂಬಂಧಿಸಿದ ವಿವಾದಗಳನ್ನು ಇತ್ಯರ್ಥಪಡಿಸುವ ಮೂಲ ಅಧಿಕಾರ ವ್ಯಾಪ್ತಿ.

NOT TO BE REPUBLISHED © KTBS

2) ಅಧೀನ ನ್ಯಾಯಾಲಯಗಳು ನೀಡಿದ ತೀರ್ಪುಗಳ ವಿರುದ್ಧ ಮೇಲ್ಮನವಿಗಳನ್ನು ಸ್ವೀಕರಿಸಿ ಇತ್ಯರ್ಥಪಡಿಸುವ ಮನವಿ ಅಧಿಕಾರ ವ್ಯಾಪ್ತಿ.

3) ಉಚ್ಚನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸುವಂತೆ, ಕೆಲವು ನಿಯಮಗಳನ್ನು ಅಧೀನ ನ್ಯಾಯಾಲಯಗಳು ಪಾಲಿಸುವಂತೆ ಮತ್ತು ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿಕೊಳ್ಳುವಂತೆ ನಿರ್ದೇಶನ ನೀಡಿ ಅವುಗಳ ಮೇಲ್ವಿಚಾರಣೆ ಮಾಡುವ ಅಧಿಕಾರ ಕಾರ್ಯವನ್ನು ಹೊಂದಿದೆ. ಇವುಗಳಲ್ಲದೆ ಸಿಬ್ಬಂದಿ ನೇಮಕ ಮತ್ತು ನಿಯಂತ್ರಣ, ಮೂಲಭೂತ ಹಕ್ಕುಗಳ ರಕ್ಷಣೆ, ವಿವಿಧ ರಿಟ್ ಅರ್ಜಿಗಳನ್ನು ಸ್ವೀಕರಿಸಿ ನ್ಯಾಯ ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

**ಅಧೀನ ನ್ಯಾಯಾಲಯಗಳು**

1948 ರಲ್ಲಿ ನಡೆದ ನ್ಯಾಯಾಲಯಗಳ ಸಮ್ಮೇಳನವು ಅಧೀನ ನ್ಯಾಯಾಲಯಗಳಿಗೆ ಸ್ವಾಯತ್ತತೆ ಇರಬೇಕೆಂದು ಬಲವಾಗಿ ಆಗ್ರಹಿಸಿತು. ಪರಿಣಾಮವಾಗಿ ಸಂವಿಧಾನದಲ್ಲಿ ಅಧೀನ ನ್ಯಾಯಾಲಯಗಳು, ಅವುಗಳ ರಚನೆ ಹಾಗೂ ಕಾರ್ಯವ್ಯಾಪ್ತಿಯನ್ನು ಅಳವಡಿಸಲಾಗಿದೆ. ಈ ನ್ಯಾಯಾಲಯಗಳು ರಾಜ್ಯದಿಂದ ರಾಜ್ಯಕ್ಕೆ ಸ್ವಲ್ಪ ಭಿನ್ನವಾಗಿದ್ದರೂ ಅವುಗಳ ಮುಖ್ಯ ಲಕ್ಷಣಗಳು ಸಾಮಾನ್ಯವಾಗಿ ಒಂದೇ ರೀತಿಯಲ್ಲಿವೆ. ನ್ಯಾಯಾಲಯಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

1) ನಾಗರಿಕ ನ್ಯಾಯಾಲಯಗಳು (ಸಿವಿಲ್ ಕೋರ್ಟ್‌ಗಳು)

2) ಅಪರಾಧ ನ್ಯಾಯಾಲಯಗಳು (ಕ್ರಿಮಿನಲ್ ಕೋರ್ಟ್‌ಗಳು)

**ನಾಗರಿಕ ನ್ಯಾಯಾಲಯ (Civil Court) :** ಇದು ಪ್ರತಿಯೊಂದು ಜಿಲ್ಲೆಯಲ್ಲೂ ಇದೆ, ಜಿಲ್ಲಾ ನ್ಯಾಯಾಧೀಶರು ಇದರ ಮುಖ್ಯ ನ್ಯಾಯಾಧೀಶರಾಗಿರುತ್ತಾರೆ. ಈ ನ್ಯಾಯಾಧೀಶರನ್ನು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶರೊಡನೆ ಸಮಾಲೋಚಿಸಿ ರಾಜ್ಯಪಾಲರು ನೇಮಿಸುತ್ತಾರೆ. ಈ ನ್ಯಾಯಾಧೀಶರು ರಾಷ್ಟ್ರದ ಅಥವಾ ರಾಜ್ಯದ ಯಾವುದೇ ನ್ಯಾಯಾಂಗ ಸೇವೆಯಲ್ಲಿ 7 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು. ಇತರೆ ನ್ಯಾಯಾಧೀಶರು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಿಸಲ್ಪಟ್ಟಿರುತ್ತಾರೆ.

ಈ ನ್ಯಾಯಾಲಯವು ನಾಗರಿಕ ವಿವಾದಗಳಾದ ಆಸ್ತಿ, ಭೂಮಿ, ಹಣಕಾಸು ವ್ಯವಹಾರ, ಮದುವೆ, ವಿವಾಹ ವಿಚ್ಛೇದನ ಹಾಗೂ ಇನ್ನಿತರೆ ಮೊಕದ್ದಮೆಗಳ ವಿವಾದ ಬಗೆಹರಿಸುತ್ತದೆ. ನಾಗರಿಕ ನ್ಯಾಯಾಲಯವು ಮೇಲ್ಮನವಿ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಕೆಳಹಂತದ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಮೇಲ್ಮನವಿ ಸ್ವೀಕರಿಸಿ ತೀರ್ಪುಗಳನ್ನು ಪರಿಶೀಲಿಸುವ ಅಧಿಕಾರ ಇದಕ್ಕಿದೆ. ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯಲ್ಲಿರುವ ಎಲ್ಲಾ ಸಿವಿಲ್ ನ್ಯಾಯಾಲಯಗಳ ಮೇಲೆ ನಿಯಂತ್ರಣ ಹೊಂದಿರುತ್ತಾರೆ.

ಈ ನ್ಯಾಯಾಲಯಗಳ ಅಡಿಯಲ್ಲಿ ಕೆಳಕಂಡ ಅಧೀನ ನ್ಯಾಯಾಲಯಗಳಿವೆ.

(1) ಅಧೀನ ನ್ಯಾಯಾಧೀಶರ ನ್ಯಾಯಾಲಯ (Court of Subordinate Judges)

(2) ಹೆಚ್ಚುವರಿ ಅಧೀನ ನ್ಯಾಯಾಧೀಶರ ನ್ಯಾಯಾಲಯ (Court of Additional Subordinate Judges)

(3) ಮುನ್ಸಿಫ್ ನ್ಯಾಯಾಲಯ (Court of Muncif )

(4) ಹೆಚ್ಚುವರಿ ಮುನ್ಸಿಫ್ ನ್ಯಾಯಾಲಯ. (Court of Additional Muncif)

NOT TO BE REPUBLISHED @KTBS

**ಅಪರಾಧ ನ್ಯಾಯಾಲಯ ಅಥವಾ ದಂಡಾಧಿಕಾರ ನ್ಯಾಯಾಲಯ (Criminal Court) :** ಅಪರಾಧ ನ್ಯಾಯಾಲಯವು ಏಪ್ರಿಲ್ 1, 1974 ರಂದು ಅಸ್ತಿತ್ವಕ್ಕೆ ಬಂದಿತು. ಇದನ್ನು ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯ ಎಂದೂ ಕರೆಯಲಾಗುತ್ತದೆ. ಇವು ರಾಜ್ಯ ಉಚ್ಚನ್ಯಾಯಾಲಯದ ನಿಯಂತ್ರಣದಲ್ಲಿರುತ್ತವೆ. ಅಪರಾಧ ನ್ಯಾಯಾಲಯಗಳಲ್ಲಿ ಜಿಲ್ಲಾ ಮಟ್ಟದ ಉನ್ನತ ನ್ಯಾಯಾಲಯವೆಂದರೆ ಸೆಷನ್ಸ್ ನ್ಯಾಯಾಲಯ. ಇದನ್ನು ಸತ್ರ ನ್ಯಾಯಾಲಯ ಎಂದೂ ಕರೆಯಲಾಗುತ್ತದೆ. ಜಿಲ್ಲಾ ನ್ಯಾಯಾಧೀಶರೇ ಇದರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಾರೆ. ಇದು ಕೊಲೆ, ದರೋಡೆ, ಡಕಾಯಿತಿ ಮುಂತಾದ ಅಪರಾಧಗಳಿಗೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ ನಡೆಸುತ್ತದೆ. ಈ ನ್ಯಾಯಾಲಯಕ್ಕೂ ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆ ನೀಡುವ ಅಧಿಕಾರವಿದೆ. ಆದರೆ ತಾನು ನೀಡುವ ಮರಣ ದಂಡನೆಯಂತಹ ಶಿಕ್ಷೆಯನ್ನು ಉಚ್ಚನ್ಯಾಯಾಲಯವು ದೃಢೀಕರಿಸಬೇಕಾಗುತ್ತದೆ. ಹಾಗೆಯೇ ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬಹುದು. ಈ ನ್ಯಾಯಾಲಯದ ಅಡಿಯಲ್ಲಿ ಇತರೆ ಅಪರಾಧ ನ್ಯಾಯಾಲಯಗಳಿವೆ.

**ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯಕ್ಕೆ ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆಯನ್ನು ವಿಧಿಸುವ ಅಧಿಕಾರವಿಲ್ಲ. ಆದರೆ ಕೇವಲ 7 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಧಿಕಾರ ಹೊಂದಿದೆ.

**ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಮೇಲ್ದರ್ಜೆ ಅಧಿಕಾರ ಹೊಂದಿದೆ. ಮೂರು ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಥವಾ 10,000/- ರೂ. ದಂಡ ವಿಧಿಸುವ ಅಥವಾ ಎರಡನ್ನೂ ವಿಧಿಸುವ ಅಧಿಕಾರ ಹೊಂದಿದೆ. ಅಲ್ಲದೆ ಇದರ ಕೆಳಗಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಮೇಲ್ಮನವಿಗಳನ್ನು ವಿಚಾರಣೆ ನಡೆಸುತ್ತದೆ.

> **ಚಟುವಟಿಕೆ**
>
> ನಿಮ್ಮ ಹತ್ತಿರದಲ್ಲಿರುವ ನ್ಯಾಯಾಲಯಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುವ ವಾದ-ಪ್ರತಿವಾದಗಳನ್ನು ವೀಕ್ಷಿಸಿ, ಶಿಕ್ಷಕರೊಂದಿಗೆ ಚರ್ಚಿಸಿ.

**ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯಕ್ಕೆ ಒಂದು ವರ್ಷದವರೆಗೆ ಶಿಕ್ಷೆ ವಿಧಿಸುವ ಮತ್ತು 5000/- ರೂ.ಗಳಿಗಿಂತ ಹೆಚ್ಚಿಲ್ಲದ ದಂಡ ವಿಧಿಸುವ ಅಥವಾ ಎರಡನ್ನೂ ವಿಧಿಸುವ ಅಧಿಕಾರವಿದೆ.

**ತೃತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಕಡಿಮೆ ಅಧಿಕಾರವನ್ನು ಹೊಂದಿದೆ. ಒಂದು ತಿಂಗಳ ಸೆರೆವಾಸ ಅಥವಾ 50/- ರೂ. ದಂಡ ಅಥವಾ ಎರಡನ್ನೂ ವಿಧಿಸುವ ಅಧಿಕಾರ ಇದಕ್ಕಿದೆ. ಆದರೆ ದ್ವಿತೀಯ ದರ್ಜೆ ಮತ್ತು ತೃತೀಯ ದರ್ಜೆ ನ್ಯಾಯಾಲಯಗಳಿಗೆ ಮೇಲ್ಮನವಿ ಸ್ವೀಕರಿಸುವ ಅಧಿಕಾರವಿಲ್ಲ.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು ಬೇರೆ ಬೇರೆಯಲ್ಲ, ಅವುಗಳು ಒಂದೇ ಆಗಿವೆ. ಆದ್ದರಿಂದಲೇ ಇವೆರಡೂ ನ್ಯಾಯಾಲಯಗಳಿಗೆ ಒಬ್ಬರೇ ನ್ಯಾಯಾಧೀಶರು ಇರುತ್ತರೆ. ಸಿವಿಲ್ ವಿವಾದಗಳ ವಿಚಾರಣೆ ನಡೆಸುವ ಸಂದರ್ಭದಲ್ಲಿ ಇದು ಜಿಲ್ಲಾ ನ್ಯಾಯಾಲಯವಾಗಿರುತ್ತದೆ. ಅಪರಾಧ ಮೊಕದ್ದಮೆಗಳ ವಿಚಾರಣೆ ನಡೆಸುವಾಗ ಸೆಷನ್ಸ್ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತದೆ.

## ಕಂದಾಯ ನ್ಯಾಯಾಲಯಗಳು (Revenue Courts)

ಪ್ರತಿಯೊಂದು ಜಿಲ್ಲೆಯು ಕಂದಾಯ ನ್ಯಾಯಾಲಯಗಳನ್ನು ಹೊಂದಿರುತ್ತದೆ. ಇವು ಭೂಕಂದಾಯಕ್ಕೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ, ಭೂ ದಾಖಲೆಗಳು, ಭೂ ಕಂದಾಯ ಮುಂತಾದವುಗಳ ವಿಚಾರಣೆ ನಡೆಸುತ್ತವೆ. ಕಂದಾಯ ನ್ಯಾಯಾಲಯವು ಈ ಕೆಳಕಂಡ ನ್ಯಾಯಾಲಯಗಳನ್ನು ಒಳಗೊಂಡಿದೆ.

© KTBS NOT TO BE REPUBLISHED

**ತಹಶೀಲ್ದಾರ್ ನ್ಯಾಯಾಲಯ :** ಕಂದಾಯ ನ್ಯಾಯಾಲಯಗಳಲ್ಲಿ ಅತಿ ಕೆಳಹಂತದ ನ್ಯಾಯಾಲಯವೆಂದರೆ ತಹಶೀಲ್ದಾರ್ ನ್ಯಾಯಾಲಯವಾಗಿದೆ. ತಹಶೀಲ್ದಾರರೇ ಇದರ ನ್ಯಾಯಾಧೀಶರಾಗಿರುತ್ತಾರೆ. ಈ ನ್ಯಾಯಾಲಯವನ್ನು ತಾಲ್ಲೂಕು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಎಂಬುದಾಗಿಯೂ ಕರೆಯುತ್ತಾರೆ.

**ಉಪವಿಭಾಗಾಧಿಕಾರಿಗಳ ನ್ಯಾಯಾಲಯ :** ತಹಶೀಲ್ದಾರ್ ನ್ಯಾಯಾಲಯಗಳ ನಿರ್ಣಯಗಳು ಮತ್ತು ತೀರ್ಪುಗಳ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯವು ಸ್ವೀಕರಿಸಿ ವಿಚಾರಣೆ ನಡೆಸುತ್ತದೆ. ಉಪವಿಭಾಗಾಧಿಕಾರಿ (Assistant Commissioner) ಈ ನ್ಯಾಯಾಲಯದ ನ್ಯಾಯಾಧೀಶರಾಗಿರುತ್ತಾರೆ.

**ಜಿಲ್ಲಾ ಕಂದಾಯ ನ್ಯಾಯಾಲಯ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಎಲ್ಲಾ ಜಿಲ್ಲೆಗಳಲ್ಲೂ ಇರುತ್ತದೆ. ತಹಶೀಲ್ದಾರ್ ಮತ್ತು ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಸಲ್ಲಿಸುವ ಮೇಲ್ಮನವಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುತ್ತದೆ. ಜಿಲ್ಲಾಧಿಕಾರಿಗಳು (Deputy Commissioner) ಈ ನ್ಯಾಯಾಲಯದ ನ್ಯಾಯಾಧೀಶರಾಗಿರುತ್ತಾರೆ.

**ನಿಮಗಿದು ತಿಳಿದಿರಲಿ :**

ಆಡಳಿತದ ದೃಷ್ಠಿಯಿಂದ ಕರ್ನಾಟಕವನ್ನು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

1) ಬೆಂಗಳೂರು 2) ಮೈಸೂರು
3) ಕಲಬುರಗಿ 4) ಬೆಳಗಾವಿ

**ಆಯುಕ್ತರ ನ್ಯಾಯಾಲಯ :–** ಆಯುಕ್ತರ ನ್ಯಾಯಾಲಯವು ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಕೊಡುವ ತೀರ್ಪಿನ ವಿರುದ್ಧ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ನಡೆಸಿ ಇತ್ಯರ್ಥಪಡಿಸುತ್ತವೆ. ಇದರ ನ್ಯಾಯಾಧೀಶರು ಪ್ರಾದೇಶಿಕ ಆಯುಕ್ತರಾಗಿರುತ್ತಾರೆ.

**ಕಂದಾಯ ಮಂಡಳಿ :** ಇದು ಕಂದಾಯ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಅತ್ಯುನ್ನತ ನ್ಯಾಯಾಲಯವಾಗಿದೆ. ಈ ನ್ಯಾಯಾಲಯವು ಅಧೀನ ಕಂದಾಯ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ನಡೆಸುವ ಅಧಿಕಾರವಿದೆ. ಕಂದಾಯ ಕಾರ್ಯದರ್ಶಿಗಳು ಇದರ ಮುಖ್ಯಸ್ಥರಾಗಿದ್ದು, ಈ ನ್ಯಾಯಾಲಯಗಳು ಉಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.

**ಜನತಾ ನ್ಯಾಯಾಲಯಗಳು (ಲೋಕ್ ಅದಾಲತ್)**

ಭಾರತದಲ್ಲಿ ನ್ಯಾಯ ವಿತರಣೆಯು ವಿಳಂಬವೂ ಹಾಗೂ ವೆಚ್ಚದಾಯಕವೂ (ದುಬಾರಿ) ಆಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಇತ್ಯರ್ಥಪಡಿಸಲು ಜನತಾ ನ್ಯಾಯಾಲಯಗಳು 1985 ರಲ್ಲಿ ಅಸ್ತಿತ್ವಕ್ಕೆ ಬಂದವು. ಇವು ಒಂದು ನಿರ್ದಿಷ್ಟ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ವ್ಯಕ್ತಿಗಳ ನಡುವಿನ ವಿವಾದಗಳನ್ನು ರಾಜಿ ಸಂಧಾನ ಮಾಡಿಸುವುದು ಅಥವಾ ಇತ್ಯರ್ಥ ಪಡಿಸುವ ಉದ್ದೇಶವನ್ನು ಹೊಂದಿವೆ.

ಸರ್ವೋಚ್ಚನ್ಯಾಯಾಲಯದ ಕೆಲವು ನ್ಯಾಯಾಧೀಶರು, ಸಾಮಾಜಿಕ ಕಾರ್ಯಕರ್ತರು ಮತ್ತು ಯುವ ಕಾನೂನು ಪದವೀಧರರು ಈ ನ್ಯಾಯಾಲಯಗಳ ಸ್ಥಾಪನೆಯ ರೂವಾರಿಗಳು. ರಾಜ್ಯ ಉಚ್ಚನ್ಯಾಯಾಲಯ ಮತ್ತು ಬೇರೆ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಮೊಕದ್ದಮೆಗಳನ್ನು ಈ ನ್ಯಾಯಾಲಯದ ಮೂಲಕ ಇತ್ಯರ್ಥಗೊಳಿಸಿಕೊಳ್ಳಬಹುದು. ಜನತಾ ನ್ಯಾಯಾಲಯಗಳು ಈ ಕೆಳಕಂಡ ಕಾರಣಗಳಿಂದ ಬಹಳಷ್ಟು ಜನಪ್ರಿಯವಾಗಿವೆ.

1) ರಾಜೀ ಸಂಧಾನಕ್ಕೆ ಹೆಚ್ಚು ಒತ್ತುಕೊಡುತ್ತವೆ.

2) ಇದು ಶೀಘ್ರ ಹಾಗೂ ಮಿತವ್ಯಯದ್ದಾಗಿರುತ್ತವೆ.

3) ಇತರೆ ನ್ಯಾಯಾಲಯಗಳ ಕಾರ್ಯದ ಹೊರೆ ಕಡಿಮೆ ಮಾಡುತ್ತವೆ.

© KTBS NOT TO BE REPUBLISHED

ಈ ನ್ಯಾಯಾಲಯಗಳು ಕೆಲವು ಪ್ರಕರಣಗಳಾದ ವಾಹನ ಅಪಘಾತಗಳು, ಭೂ ಸ್ವಾಧೀನ, ಬ್ಯಾಂಕಿಂಗ್‌ಗೆ ಸಂಬಂಧಿಸಿದ ಪ್ರಕರಣ, ವೈವಾಹಿಕ ಹಾಗೂ ಜೀವನಾಂಶ, ಕಾರ್ಮಿಕರ ಸಮಸ್ಯೆಗಳು ಇವೇ ಮೊದಲಾದ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತವೆ. ಈ ನ್ಯಾಯಾಲಯವು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವಾಸಮಿತಿಯಿಂದ ರಚಿತವಾದ ನ್ಯಾಯಾಲಯವಾಗಿದೆ. ಇದರಲ್ಲಿ ಇಬ್ಬರು ಸಂಧಾನಕಾರರಿರುತ್ತಾರೆ.

ಇಂತಹ ಲೋಕ್‌ಅದಾಲತ್ ನೀಡಿದ ತೀರ್ಪು ಅಂತಿಮವಾಗಿದ್ದು, ಅದರ ವಿರುದ್ಧ ಮೇಲ್ಮನವಿಗೆ ಅವಕಾಶವಿರುವುದಿಲ್ಲ. ಈ ತೀರ್ಪಿಗೆ ಎರಡೂ ಕಡೆಯವರು (ಕಕ್ಷಿದಾರರು) ಬದ್ಧರಾಗಿರಬೇಕಾಗುತ್ತದೆ. ಇದು ನೀಡಿದ ತೀರ್ಪು ಸಿವಿಲ್ ನ್ಯಾಯಾಲಯ ನೀಡಿದ ತೀರ್ಪಿನಷ್ಟೇ ಮಾನ್ಯತೆ ಪಡೆದಿರುತ್ತದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಸರ್ವೋಚ್ಚ ನ್ಯಾಯಾಲಯವು __________ ರಂದು ಅಸ್ತಿತ್ವಕ್ಕೆ ಬಂದಿತು.
2. ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ಹೊರಡಿಸಬಹುದಾದ ವಿಶೇಷ ಆಜ್ಞೆಗಳ ಸಂಖ್ಯೆ __________ .
3. ಅಪರಾಧ ನ್ಯಾಯಾಲಯವು __________ ರಂದು ಅಸ್ತಿತ್ವಕ್ಕೆ ಬಂದಿತು.
4. ಕಂದಾಯ ನ್ಯಾಯಾಲಯಗಳಲ್ಲಿ ಅತಿ ಕೆಳಹಂತದ ನ್ಯಾಯಾಲಯವೆಂದರೆ ______________ ನ್ಯಾಯಾಲಯ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

5. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕವಿಧಾನ ಮತ್ತು ಅವರ ಅರ್ಹತೆಗಳಾವುವು?
6. ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳಾವುವು?
7. ನಾಗರಿಕ ನ್ಯಾಯಾಲಯದ ಅಡಿಯಲ್ಲಿ ಇರುವ ಅಧೀನ ನ್ಯಾಯಾಲಯಗಳಾವುವು?
8. ಜನತಾ ನ್ಯಾಯಾಲಯ (ಲೋಕ್ ಅದಾಲತ್)ಗಳನ್ನು ಸ್ಥಾಪಿಸುವ ಉದ್ದೇಶಗಳೇನು? ಅವು ಯಾವಾಗ ಅಸ್ತಿತ್ವಕ್ಕೆ ಬಂದವು?

**III. ಚಟುವಟಿಕೆಗಳು.**

1. ನಿಮ್ಮ ಹತ್ತಿರದ ವಕೀಲರನ್ನು ಭೇಟಿ ಮಾಡಿ ಸರ್ವೋಚ್ಚ ನ್ಯಾಯಾಲಯದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಿರಿ.
2. ನಿಮಗೆ ಹತ್ತಿರವಿರುವ ನ್ಯಾಯಾಲಯಕ್ಕೆ ಭೇಟಿ ನೀಡಿ, ನ್ಯಾಯಾಲಯದ ಕಲಾಪವನ್ನು ವೀಕ್ಷಿಸಿ ಒಂದು ವರದಿ ತಯಾರಿಸಿ.

**IV. ಯೋಜನೆ.**

1. ಉಚ್ಚ ನ್ಯಾಯಾಲಯಗಳು ನೀಡುವ ತೀರ್ಪುಗಳಿಗೆ ಸಂಬಂಧಿಸಿದಂತೆ ದಿನಪತ್ರಿಕೆಗಳಲ್ಲಿ ಬರುವ ಪತ್ರಿಕಾ ವರದಿಗಳ ತುಣುಕುಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿ.

*****

©KTBS NOT TO BE REPUBLISHED

# ಸಮಾಜಶಾಸ್ತ್ರ

## ಅಧ್ಯಾಯ – 9

## ಕುಟುಂಬ

Q7K4C5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕುಟುಂಬದ ಅರ್ಥ.
- ಕುಟುಂಬದಲ್ಲಿರುವ ಸದಸ್ಯರ ಸಂಬಂಧಗಳು.
- ವ್ಯಕ್ತಿ ಬೆಳವಣಿಗೆಯ ಹಂತಗಳು.

### ಕುಟುಂಬ

ಕುಟುಂಬವು ಭಾರತದ ಪ್ರಾಚೀನ ಪಾರಂಪರಿಕ ವ್ಯವಸ್ಥೆಯಾಗಿದೆ. ತಾಯಿ–ತಂದೆ, ಮಕ್ಕಳು, ಮೊಮ್ಮಕ್ಕಳ ನಡುವೆ ಉಂಟಾಗುವ ಸಂಬಂಧಗಳ ವ್ಯವಸ್ಥೆಯನ್ನು ಕುಟುಂಬ ಎನ್ನುತ್ತೇವೆ. ಕುಟುಂಬವು ಸಮಾಜದ ಒಂದು ಘಟಕ. ಅದು ಒಂದು ಜೀವಕೋಶ. ಅದರಿಂದಲೇ ಸಮುದಾಯವು ಪ್ರಗತಿ ಹೊಂದಿ ರಾಷ್ಟ್ರವು ನಿರ್ಮಾಣಗೊಳ್ಳುತ್ತದೆ.

ಕುಟುಂಬವು ಭಾವನಾತ್ಮಕ ಆಧಾರದ ಮೇಲೆ ನಿಂತಿರುತ್ತದೆ. ಮಾತೃಪ್ರೇಮ, ಪಿತೃವಾತ್ಸಲ್ಯ, ಪತಿ–ಪತ್ನಿಯರ ಅನುರಾಗ, ಮಕ್ಕಳನ್ನು ಪಡೆದು ಪಾಲನೆ, ಪೋಷಣೆ ಮಾಡಬೇಕೆಂಬ ಅಭಿಲಾಷೆ ಮೊದಲಾದ ಭಾವನೆಗಳು ಕುಟುಂಬಕ್ಕೆ ಆಧಾರವಾಗಿರುತ್ತವೆ.

ಸಮಕಾಲೀನ ಭಾರತೀಯ ಕುಟುಂಬದಲ್ಲಿ ಹೆಚ್ಚಿನ ನಿರ್ಣಯ ತೆಗೆದುಕೊಳ್ಳುವ ಮೊದಲು ತಾಯಿ–ತಂದೆಯರು ತಮ್ಮ ಮಕ್ಕಳ ಜೊತೆ ಸಮಾಲೋಚಿಸುತ್ತಾರೆ. ವಸ್ತುವನ್ನು ಕೊಳ್ಳುವುದಾಗಲೀ, ಉಡುಗೊರೆ ನೀಡುವುದಾಗಲೀ, ಮಕ್ಕಳ ಶಿಸ್ತಿಗೆ ಸಂಬಂಧಿಸಿದ ವಿಷಯವಾಗಲೀ, ಕುಟುಂಬದ ಆಯ–ವ್ಯಯ ತೀರ್ಮಾನವಾಗಲು ತಾಯಿಯ ಪಾತ್ರ ಮುಖ್ಯವಾಗಿದೆ. ಹೆಚ್ಚಿನ ಅಧಿಕಾರಯುತ ಪಾತ್ರಗಳನ್ನು ನಿರ್ವಹಿಸುವಲ್ಲಿ ತಾಯಿಯು ಸಮಾನ ಸ್ಥಾನವನ್ನು ಹೊಂದಿದ್ದಾಳೆ.

### ಕುಟುಂಬದ ಲಕ್ಷಣಗಳು

ಕುಟುಂಬವು ಸಾರ್ವತ್ರಿಕ. ಎಲ್ಲ ಕಾಲಕ್ಕೂ, ಎಲ್ಲ ದೇಶಗಳಲ್ಲೂ ಕಂಡುಬರುವ ಸಾಮಾಜಿಕ ವ್ಯವಸ್ಥೆ. ಸಮಾಜದ ಎಲ್ಲ ವ್ಯವಸ್ಥೆಗೂ ಇದು ಕೇಂದ್ರವಾಗಿದೆ. ಕುಟುಂಬಗಳಿಂದಲೇ ನೆರೆಹೊರೆ, ಗ್ರಾಮ, ನಗರ, ರಾಷ್ಟ್ರ ನಿರ್ಮಾಣಗೊಂಡಿದೆ. ಕುಟುಂಬದ ಸದಸ್ಯರು ಬಾಲ್ಯಾವಸ್ಥೆಯಿಂದಲೇ ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಯುವುದಲ್ಲದೇ ಸಹಕಾರವನ್ನು ಮನಗಾಣುತ್ತಾರೆ. ಸಮಾಜದ ಸಂಪ್ರದಾಯ, ನೈತಿಕ ನಿಯಮಗಳು, ವರ್ತನೆಗಳನ್ನು ಕುಟುಂಬವು ನಿಯಂತ್ರಿಸುತ್ತದೆ. ಕುಟುಂಬವು ಸರ್ವವ್ಯಾಪಿ, ಶಾಶ್ವತ ಹಾಗೂ ಪರಂಪರಾಗತ ಘಟಕವಾಗಿದೆ ಎಂದು ಹೇಳಬಹುದು.

NOT TO BE REPUBLISHED ©KTBS

**ತಾಯಿ-ತಂದೆ, ಪತಿ-ಪತ್ನಿ ಹಾಗೂ ಮಕ್ಕಳು :** ವಿವಾಹವು ಸರ್ವಕಾಲಿಕ ಹಾಗೂ ಸರ್ವವ್ಯಾಪಿ ಮನ್ನಣೆ ಹೊಂದಿರುವುದರಿಂದ ಪವಿತ್ರವಾದ ಸಾಮಾಜಿಕ ಸಂಸ್ಥೆಯಾಗಿದೆ. ತಾಯಿ-ತಂದೆ, ಪತಿ-ಪತ್ನಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಸೃಷ್ಟಿಮಾಡುತ್ತದೆ. ಭಾರತದ ಪಾರಂಪರಿಕ ಆಚರಣೆಯಂತೆ ಪತ್ನಿ ಮತ್ತು ಮಕ್ಕಳನ್ನು ಸಾಕುವುದು ಹಾಗೂ ರಕ್ಷಿಸುವುದು ಪತಿಯ ಕರ್ತವ್ಯವಾಗಿರುತ್ತದೆ. ಮಕ್ಕಳ ಲಾಲನೆ-ಪಾಲನೆ ಹಾಗೂ ಶಿಕ್ಷಣ ನೀಡುವುದು ತಂದೆ-ತಾಯಿಯರ ಕರ್ತವ್ಯವಾಗಿರುತ್ತದೆ. ವಿಶೇಷವಾಗಿ ಭಾರತದಲ್ಲಿ ವೃದ್ಧ ತಾಯಿ-ತಂದೆಯರ ಆರೈಕೆ ಹಾಗೂ ಶುಶ್ರೂಷೆ, ಸಂರಕ್ಷಣೆ ಮಕ್ಕಳ ಕರ್ತವ್ಯ.

**ಬಾಲ್ಯ ಹಾಗೂ ಯೌವನ :** ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಬಾಲ್ಯ ಹಾಗೂ ಯೌವನವು ಮುಖ್ಯವಾಗಿದೆ. ಮಾತೃಭಾಷೆಯನ್ನು ಮಗುವು ಮೊದಲು ತಿಳಿಯುವುದಲ್ಲದೆ, ಅದರ ಸನಿಹದಿಂದ ಮೂಲ ಸಾಮಾಜಿಕ ವಿಚಾರಗಳನ್ನು ತಿಳಿಯುತ್ತದೆ. ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಬೆಳೆದ ಮಗುವು ಅದಕ್ಕೆ ಅನುಗುಣವಾದ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುತ್ತದೆ ಹಾಗೂ ಸಮವಯಸ್ಸಿನ ಮಕ್ಕಳೊಂದಿಗೆ ಸ್ನೇಹ ಸಂಬಂಧ ಬೆಳೆಯುತ್ತದೆ. ಎಲ್ಲರೊಂದಿಗೆ ಬೆರೆತು ಮುಂದಾಳತ್ವದ ಗುಣಗಳನ್ನು ರೂಢಿಸಿಕೊಳ್ಳುತ್ತದೆ. ಸಾಮಾಜಿಕ ವರ್ತನೆಗಳು, ಬೇಡಿಕೆಗಳು, ಕಟ್ಟಳೆಗಳು ಮಗುವಿನ ಮೇಲೆ ಪ್ರಭಾವ ಬೀರಿ ಸಾಮಾಜಿಕ ಸಂಬಂಧಗಳು ರೂಪುಗೊಳ್ಳುತ್ತವೆ. ಯೌವನದಲ್ಲಿ ಇದು ಮುಂದುವರೆದು ಸ್ನೇಹ, ಸ್ವಾತಂತ್ರ್ಯ, ಭದ್ರತೆ, ಅಂಗೀಕಾರ ಇವುಗಳಿಗಾಗಿ ಹಾತೊರೆಯುತ್ತಾರೆ. ಈ ವಯಸ್ಸಿನಲ್ಲಿ ಬೆಳೆಸಿಕೊಂಡ ವರ್ತನೆಗಳು ಹಾಗೂ ಅಭಿಪ್ರಾಯಗಳು ಪ್ರೌಢ ಹಾಗೂ ಮುಪ್ಪಿನ ಕಾಲದವರೆಗೂ ಮುಂದುವರೆಯುತ್ತವೆ.

NOT TO BE REPUBLISHED ©KTBS

**ಕುಟುಂಬ ಮತ್ತು ಪೀಳಿಗೆಗಳು / ತಲೆಮಾರುಗಳು :** ಕುಟುಂಬ ಹಲವಾರು ತಲೆಮಾರುಗಳ ಆಧಾರದ ಮೇಲೆ ನೆಲೆ ನಿಂತಿದೆ. ಹಲವು ತಲೆಮಾರುಗಳ ರಕ್ತ ಸಂಬಂಧಿಗಳನ್ನು ಕುಟುಂಬವು ಹೊಂದಿರುತ್ತದೆ. ಇದು ಎಲ್ಲಾ ಸಮಾಜಗಳಲ್ಲೂ ಕಂಡು ಬರುತ್ತದೆ. ಹಿರಿಯ ಪೋಷಕರು (Grand parents) ಒಂದನೇ ತಲೆಮಾರಿಗೆ ಸೇರಲ್ಪಟ್ಟರೆ. ಪೋಷಕರು (Parents) ಎರಡನೇ ತಲೆಮಾರಿಗೆ ಸೇರುತ್ತಾರೆ. ಮಕ್ಕಳು (Children) ಮೂರನೇ ತಲೆಮಾರಿಗೆ ಸೇರಲ್ಪಡುತ್ತಾರೆ. ಹೀಗೆ ತಲೆಮಾರುಗಳಿಂದ ಕೂಡಿದ ಸದಸ್ಯರ ಆಧಾರದ ಮೇಲೆ ಕುಟುಂಬಗಳನ್ನು ವಿಂಗಡಿಸಲಾಗುತ್ತದೆ.

I. ತಾಯಿ-ತಂದೆ ಹಾಗೂ ಮಕ್ಕಳಿಂದ ಕೂಡಿದ ಕುಟುಂಬ. ಇದನ್ನು ಕೇಂದ್ರ / ವಿಭಕ್ತ ಕುಟುಂಬ ಎನ್ನುತ್ತಾರೆ (ಕನಿಷ್ಠ ಎರಡು ತಲೆಮಾರು)

II. ತಾಯಿ-ತಂದೆ, ಮಕ್ಕಳು, ಮೊಮ್ಮಕ್ಕಳಿಂದ ಕೂಡಿದ ರಕ್ತ ಸಂಬಂಧಿಗಳ ಕುಟುಂಬಕ್ಕೆ ಅವಿಭಕ್ತ / ವಿಸ್ತೃತ ಕುಟುಂಬ ಎನ್ನುತ್ತಾರೆ (Joint Family) (ಕನಿಷ್ಠ ಮೂರು /ನಾಲ್ಕು ತಲೆಮಾರು)

**ಕುಟುಂಬದ ಪ್ರಕಾರಗಳು**

ಕುಟುಂಬದ ವಿವಿಧ ತತ್ವಗಳನ್ನು ಆಧರಿಸಿ ಕುಟುಂಬವನ್ನು ವರ್ಗೀಕರಿಸಲಾಗಿದೆ. ಅಧಿಕಾರದ ಆಧಾರದ ಮೇಲೆ – ಪಿತೃಪ್ರಧಾನ ಹಾಗೂ ಮಾತೃಪ್ರಧಾನ ಕುಟುಂಬ ಎಂದು ವರ್ಗೀಕರಿಸಬಹುದು. ಗಾತ್ರದ ಆಧಾರದ ಮೇಲೆ ವಿಭಕ್ತ ಹಾಗೂ ಅವಿಭಕ್ತ ಕುಟುಂಬ ಎಂಬ ಪ್ರಕಾರಗಳನ್ನು ಕಾಣಬಹುದು.

**1. ಪಿತೃಪ್ರಧಾನ ಕುಟುಂಬ :** ತಂದೆಯೇ ಒಡೆಯನಾಗಿರುವ ಹಾಗೂ ಅವನ ಹೆಸರಿನಲ್ಲಿಯೇ ಆಸ್ತಿಪಾಸ್ತಿಗಳ ವಹಿವಾಟು ನಡೆಯುವ ಕುಟುಂಬವನ್ನು ಪಿತೃಪ್ರಧಾನ ಕುಟುಂಬ ಎನ್ನುತ್ತೇವೆ. ಪಿತೃಪ್ರಧಾನ ಕುಟುಂಬಗಳು ಪ್ರಾಚೀನ ಭಾರತ, ಚೀನ ಹಾಗೂ ರೋಮನ್ ಸಾಮ್ರಾಜ್ಯದಲ್ಲಿ, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದು ಈಗಲೂ ಮುಂದುವರೆದುಕೊಂಡು ಬರುತ್ತಿವೆ.

**2. ಮಾತೃಪ್ರಧಾನ ಕುಟುಂಬ :** ತಾಯಿಯೇ ಒಡತಿಯಾಗಿರುವ ಹಾಗೂ ಆಕೆಯ ಹೆಸರಿನಲ್ಲಿಯೇ ಆಸ್ತಿ–ಪಾಸ್ತಿಗಳ ವಹಿವಾಟು ನಡೆಯುವ ಕುಟುಂಬವನ್ನು ಮಾತೃಪ್ರಧಾನ ಕುಟುಂಬ ಎನ್ನುತ್ತೇವೆ. ಭಾರತದ ಕೇರಳ ರಾಜ್ಯದ ಮಲಬಾರ್‌ನ ನಾಯರ್ ಹಾಗೂ ಈಶಾನ್ಯ ರಾಜ್ಯಗಳ ಕೆಲವು ಆದಿವಾಸಿ ಸಮುದಾಯಗಳಲ್ಲಿ ಈ ರೀತಿಯ ಕುಟುಂಬಗಳು ಕಂಡುಬರುತ್ತವೆ.

**3. ಆಧುನಿಕ ಕೇಂದ್ರ ಕುಟುಂಬ :** ಕುಟುಂಬದ ರಚನೆ ಮತ್ತು ಅದರಲ್ಲಿ ವಾಸಿಸುವ ಪೀಳಿಗೆಗಳ ಸಂಖ್ಯೆಯ ಆಧಾರದ ಮೇಲೆ ಕುಟುಂಬಗಳನ್ನು 'ಕೇಂದ್ರ ಕುಟುಂಬ' ಮತ್ತು 'ವಿಸ್ತೃತ ಕುಟುಂಬ' ಎಂಬುದಾಗಿ ವರ್ಗೀಕರಿಸುತ್ತೇವೆ. ತಂದೆ, ತಾಯಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ಸದಸ್ಯರಾಗಿರುವ ಕುಟುಂಬವನ್ನು **ಕೇಂದ್ರ ಕುಟುಂಬ** ಎನ್ನುತ್ತೇವೆ. ಕೇಂದ್ರ ಕುಟುಂಬವನ್ನು ಮೂಲ ಕುಟುಂಬ, ಪ್ರಾಥಮಿಕ ಕುಟುಂಬ, ವೈಯಕ್ತಿಕ ಕುಟುಂಬ, ವಿಭಕ್ತ ಕುಟುಂಬ ಎಂಬುದಾಗಿಯೂ ಕರೆಯುತ್ತೇವೆ. ಕೇಂದ್ರ ಕುಟುಂಬಗಳು ಆಧುನಿಕ ಸಮಾಜದಲ್ಲಿ ಅಧಿಕವಾಗಿ ಕಂಡುಬರುತ್ತಿವೆ. ವೈಯಕ್ತಿಕತೆ, ವೈಯಕ್ತಿಕ ಸುಖ, ಸ್ವಯಂತೃಪ್ತಿ, ಆಸ್ತಿಯ ಹಕ್ಕು, ಬದಲಾದ ಸಾಮಾಜಿಕ ಮೌಲ್ಯಗಳು, ಭೌಗೋಳಿಕ ಹಾಗೂ ಸಾಮಾಜಿಕ ಸಂರಚನೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭಿವೃದ್ಧಿ, ಕೈಗಾರಿಕೀಕರಣ, ನಗರೀಕರಣ, ಪ್ರಜಾಸತ್ತಾತ್ಮಕ ಹಾಗೂ ಸಮಾನತೆಯ ತತ್ವಗಳು, ಧಾರ್ಮಿಕ ಪ್ರಭಾವದ ಕುಗ್ಗುವಿಕೆ ಮತ್ತು ಲೌಕಿಕ ಮನೋಭಾವದ ವ್ಯಾಪಕ ಪ್ರಸಾರ, ಸ್ತ್ರೀ ಸ್ವಾತಂತ್ರ್ಯ– ಈ ಅಂಶಗಳು ಕೇಂದ್ರ ಕುಟುಂಬಗಳು ದಿನೇದಿನೇ ಹೆಚ್ಚಾಗಲು ಕಾರಣವಾಗಿವೆ.

@KTBS NOT TO BE REPUBLISHED

ಕೇಂದ್ರ ಕುಟುಂಬದಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ.

1. ಆಧುನಿಕತೆ
2. ಸಂಕೀರ್ಣತೆ
3. ಚಿಕ್ಕ ಗಾತ್ರ
4. ಸಡಿಲ ಸಾಮಾಜಿಕ ನಿಯಂತ್ರಣ
5. ಸದಸ್ಯರ ಹೆಚ್ಚಿನ ಸ್ವಾತಂತ್ರ್ಯ

**ನೀವೇ ಮಾಡಿ :**

ನಿಮ್ಮ ಮುತ್ತಾತನ ಕಾಲದಿಂದ ಇಂದಿನವರೆಗಿನ ವಂಶಾವಳಿಯನ್ನು ಕುಟುಂಬದ ಹಿರಿಯರೊಂದಿಗೆ ಚರ್ಚಿಸಿ ವಂಶಾವಳಿ ನಕ್ಷೆ ರಚಿಸಿ.

**ಅವಿಭಕ್ತ ಕುಟುಂಬ**

ಅವಿಭಕ್ತ ಕುಟುಂಬದಲ್ಲಿ ಪತಿ, ಪತ್ನಿ ಅವರ ಮಕ್ಕಳು, ಮೊಮ್ಮಕ್ಕಳು ಮರಿ ಮಕ್ಕಳು ಹೀಗೆ ಎರಡಕ್ಕಿಂತಲೂ ಹೆಚ್ಚು ತಲೆಮಾರಿನ ಜನರಿರುತ್ತಾರೆ. ಸಾಮಾನ್ಯವಾಗಿ ಒಂದೇ ಮನೆಯಲ್ಲಿ ವಾಸಿಸುವ, ಒಂದೇ ಕಡೆ ಮಾಡಿದ ಅಡುಗೆಯನ್ನು ಊಟಮಾಡುವ, ಸಮಾನವಾದ ಆಸ್ತಿ ಹೊಂದಿರುವ ಮತ್ತು ಸಾಮಾನ್ಯ ಕುಟುಂಬ ಪೂಜಾ ಪದ್ಧತಿಯನ್ನು ಹೊಂದಿರುವ ಮತ್ತು ನಿರ್ದಿಷ್ಟ ರಕ್ತಸಂಬಂಧಿಗಳಿಂದ ಪರಸ್ಪರ ಸಂಬಂಧಗಳಾಗಿರುವ ಜನರ ಗುಂಪು ಇದಾಗಿರುತ್ತದೆ.



ಅವಿಭಕ್ತ ಕುಟುಂಬ

**ಅವಿಭಕ್ತ ಕುಟುಂಬದ ಲಕ್ಷಣಗಳು :**

**ದೊಡ್ಡ ಗಾತ್ರ :** ರಕ್ತಸಂಬಂಧಿಗಳು ಒಂದೇ ಮನೆಯಲ್ಲಿ ನಿರಂತರವಾಗಿ ಒಟ್ಟಿಗೆ ವಾಸಿಸುತ್ತಾರೆ. ಕುಟುಂಬದ ಗಾತ್ರವು ದೊಡ್ಡದಾಗಿರುತ್ತದೆ.

**ಆಸ್ತಿ :** ಕುಟುಂಬದ ಸದಸ್ಯರೆಲ್ಲರೂ ಆಸ್ತಿಯ ಮಾಲೀಕತ್ವ ಹೊಂದಿರುತ್ತಾರೆ. ಇಂತಹ ಮಾಲೀಕತ್ವವು ಸಂಪಾದನೆ ಹಾಗೂ ಸಂಪತ್ತಿನ ಬಳಕೆಯು ಸಾಮರಸ್ಯತೆಯಿಂದ ನಡೆಯುತ್ತದೆ. ಅವಿಭಕ್ತ ಕುಟುಂಬವು ಸದಸ್ಯರ ಪರಸ್ಪರ ಸಹಕಾರದಿಂದ ನಡೆಯುತ್ತದೆ, ಅದರ ಯಜಮಾನ ಧರ್ಮದರ್ಶಿಯಾಗಿ ಕೆಲಸ ಮಾಡುತ್ತಾನೆ. ಸಹಸದಸ್ಯರ ಒಪ್ಪಿಗೆಯಿಂದ ಆಸ್ತಿಯ ಮಾರಾಟ/ ಪರಭಾರೆ ನಡೆಯುತ್ತದೆ.

**ಚಟುವಟಿಕೆ :**
ನಿಮ್ಮ ತಾತನ ಕಾಲದಲ್ಲಿ ಇದ್ದ ನಿಮ್ಮ ಅವಿಭಕ್ತ ಕುಟುಂಬದಲ್ಲಿನ ಸದಸ್ಯರ ಸಂಖ್ಯೆ (ಪುರುಷ–ಮಹಿಳೆ) ಹಾಗೂ ಅವರು ನಿರ್ವಹಿಸುತ್ತಿದ್ದ ಕಾರ್ಯ ಜವಾಬ್ದಾರಿಗಳ ಬಗ್ಗೆ ನಿಮ್ಮ ತಂದೆಯವರಿಂದ ಜೊತೆ ಮಾಹಿತಿ ಪಡೆಯಿರಿ.

**ವಾಸಸ್ಥಳ :** ಕುಟುಂಬದ ಸದಸ್ಯರು ಸಾಮಾನ್ಯವಾಗಿ ಒಂದೇ ಭಾವಣಿಯಲ್ಲಿ ವಾಸಿಸುತ್ತಾರೆ. ಒಬ್ಬ ಮಗ ತನ್ನ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕ ಕುಟುಂಬವನ್ನು ಹೊಂದಿದ್ದರೂ ಅವರು ಮೂಲ ಕುಟುಂಬದೊಂದಿಗೆ ಅದೇ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಆ ಹೊಸ ಕುಟುಂಬವನ್ನು ಅವಿಭಕ್ತ ಕುಟುಂಬದ ಶಾಖೆಯೆಂದೇ ಪರಿಗಣಿಸಲಾಗುತ್ತದೆ.

**ಅಡುಗೆಮನೆ :** ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಸಾಮಾನ್ಯವಾಗಿ ಒಂದೇ ಅಡುಗೆಮನೆಯಲ್ಲಿ ಆಹಾರ ಸಿದ್ದಪಡಿಸಿ ಸೇವಿಸುತ್ತಾರೆ.

***ಚಟುವಟಿಕೆ :***
*ಕೇಂದ್ರ ಕುಟುಂಬಗಳ ಹೆಚ್ಚಳದಿಂದಾಗಿ ಕುಟುಂಬದಲ್ಲಿ ಹಿರಿಯರ ಯೋಗ ಕ್ಷೇಮದ ಕಾಳಜಿಯಕೊರತೆಯಾಗಿದೆ. ಪರಿಣಾಮವಾಗಿ ವೃದ್ಧಾಶ್ರಮಗಳಲ್ಲಿ ಹಿರಿಯುರು ಅನಾಥ ಬದುಕನ್ನು ನಡೆಸಬೇಕಾಗಿದೆ. ಆದುದರಿಂದ ಅವಿಭಕ್ತ ಕುಟುಂಬದ ಆದರ್ಶಗಳನ್ನು ಪಾಲಿಸುವುದು ಸೂಕ್ತವಾಗಿದೆ. ಅವಿಭಕ್ತ ಕುಟುಂಬಗಳ ಆದರ್ಶಗಳನ್ನು ಪಟ್ಟಿ ಮಾಡಿ.*

© KTBS NOT TO BE REPUBLISHED

**ಧರ್ಮ :** ಸಾಮಾನ್ಯವಾಗಿ ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಒಂದೇ ಧರ್ಮವನ್ನು ನಂಬುತ್ತಾರೆ. ಏಕ ಪ್ರಕಾರವಾದ ದೇವರ ಪೂಜೆಯನ್ನು ಮಾಡುತ್ತಾರೆ. ಪ್ರಮುಖ ವಿಧಿಗಳು, ಆಚರಣೆಗಳು, ವ್ರತಗಳು ಮತ್ತು ನಿತ್ಯಪೂಜೆಗಳು ಕುಟುಂಬದ ದೈನಿಕ ಚಟುವಟಿಕೆಗಳ ಭಾಗವಾಗಿರುತ್ತವೆ.

**ಸ್ವಯಂಪೂರ್ಣತೆ :** ಅವಿಭಕ್ತ ಕುಟುಂಬವು ಬಹುಪಾಲು ಸ್ವಯಂ ಪೂರ್ಣ ಘಟಕವಾಗಿದೆ. ಅದು ತನ್ನ ಸದಸ್ಯರ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಅದು ಅವರ ಬಹುಪಾಲು ಅಗತ್ಯಗಳನ್ನು ಪೂರೈಸುತ್ತದೆ. ಎಲ್ಲ ಸದಸ್ಯರು ಕೆಲಸವನ್ನು ಹಂಚಿಕೊಳ್ಳುತ್ತಾರೆ. ಶ್ರಮ, ವಯಸ್ಸು ಮತ್ತು ಲಿಂಗವನ್ನು ಆಧರಿಸಿ ಕಾರ್ಯವಿಭಜನೆಯಾಗುತ್ತದೆ.

**ಅಧಿಕಾರದ ಸಂರಚನೆ :** ಅವಿಭಕ್ತ ಕುಟುಂಬದಲ್ಲಿ ಎಲ್ಲರಿಗಿಂತ ಹಿರಿಯ ಸದಸ್ಯನು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾನೆ. ಆತನು ಅಧಿಕಾರವನ್ನು ಹಸ್ತಾಂತರಿಸಿದರೂ ಅದು ಹಿರಿತನದ ತತ್ವವನ್ನೇ ಆಧರಿಸಿರುತ್ತದೆ.

@KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಸಮಾಜದ ಜೀವಕೋಶ __________ ಆಗಿದೆ.
2. ತಂದೆಯೇ ಕುಟುಂಬದ ಒಡೆಯನಾದರೆ ಆ ಕುಟುಂಬವನ್ನು __________ ಎನ್ನುತ್ತಾರೆ.
3. ಕೇರಳದ ಮಲಬಾರ್‌ನ ನಾಯರ್‌ಗಳಲ್ಲಿ ______ ಕುಟುಂಬಗಳ ವ್ಯವಸ್ಥೆ ಕಂಡುಬರುತ್ತದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

4. ಕುಟುಂಬವು ಸಮಾಜದ ಘಟಕ ಹೇಗೆ?
5. ಕುಟುಂಬದ ಪ್ರಕಾರಗಳನ್ನು ತಿಳಿಸಿ.
6. ಅವಿಭಕ್ತ ಕುಟುಂಬ ಎಂದರೇನು?
7. ಕೇಂದ್ರ ಕುಟುಂಬ ಎಂದರೇನು?
8. ಕುಟುಂಬದ ಲಕ್ಷಣಗಳೇನು?

9. ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಬಾಲ್ಯ ಹಾಗೂ ಯೌವನದ ಪಾತ್ರವನ್ನು ತಿಳಿಸಿ.

10. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ವಿವರಿಸಿ.

11. ವಿಭಕ್ತ ಕುಟುಂಬಗಳು ದಿನೇದಿನೇ ಹೆಚ್ಚಾಗಲು ಕಾರಣಗಳೇನು?

**III. ಚಟುವಟಿಕೆಗಳು.**

1. ವಿಭಕ್ತ – ಅವಿಭಕ್ತ ಕುಟುಂಬಗಳ ಅನುಕೂಲ–ಅನಾನುಕೂಲಗಳ ಬಗ್ಗೆ ಚರ್ಚೆ ನಡೆಸಿ.

2. ಆದಿವಾಸಿ ಸಮುದಾಯಗಳ ಕುಟುಂಬ ವ್ಯವಸ್ಥೆಯನ್ನು ತಿಳಿಯಲು ಆದಿವಾಸಿಗಳು ವಾಸಿಸುವ ಸ್ಥಳಗಳಿಗೆ ಭೇಟಿ ನೀಡಿ.

**IV. ಯೋಜನೆಗಳು.**

1. ಮಾತೃಪ್ರಧಾನ – ಪಿತೃಪ್ರಧಾನ ಕುಟುಂಬ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

@KTBS
NOT TO BE REPUBLISHED

*****

K9A6Z5

## ಅಧ್ಯಾಯ – 10

# ನಮ್ಮ ರಾಜ್ಯ – ಕರ್ನಾಟಕ – ಪ್ರಾಕೃತಿಕ ವಿಭಾಗಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ನಮ್ಮ ನಾಡಿನ ಹಿರಿಮೆ–ಗರಿಮೆ ಹಾಗೂ ಪರಂಪರೆಗಳ ಬಗ್ಗೆ.
- 'ಕರ್ನಾಟಕ' ಎಂಬ ಹೆಸರಿನ ಹಿನ್ನೆಲೆ ಹಾಗೂ ಕರ್ನಾಟಕ ರಾಜ್ಯ ರೂಪುಗೊಂಡ ಬಗೆ.
- ಕರ್ನಾಟಕದ ಭೌಗೋಳಿಕ ಸ್ಥಾನ, ವಿಸ್ತೀರ್ಣ, ಭೂ ಮತ್ತು ಜಲಮೇರೆಗಳು ಹಾಗೂ ನೆರೆಯ ರಾಜ್ಯಗಳು.
- ಕರ್ನಾಟಕದ ಪ್ರಾಕೃತಿಕ ಲಕ್ಷಣಗಳು.
- ಕರ್ನಾಟಕದ ಪ್ರಾಕೃತಿಕ ವಿಭಾಗಗಳು.
- ನಮ್ಮ ರಾಜ್ಯದ ಬೆಟ್ಟಗಳು, ಎತ್ತರವಾದ ಶಿಖರಗಳು.

NOT TO BE REPUBLISHED

ಹಿಂದಿನ ತರಗತಿಯಲ್ಲಿ ಪ್ರಾಕೃತಿಕ ಭೂಗೋಳಶಾಸ್ತ್ರವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈಗ ನಮ್ಮ ನಾಡು, ಕನ್ನಡನಾಡು, ಕರ್ನಾಟಕವನ್ನು ಕುರಿತ ಅಧ್ಯಯನಕ್ಕೆ ಅಡಿಯಿಡುತ್ತಿದ್ದೇವೆ. ಇದು ತನ್ನದೇ ಆದ ಹಿರಿಮೆ–ಗರಿಮೆ ಮತ್ತು ಪರಂಪರೆಯುಳ್ಳ ಭಾರತದ ರಾಜ್ಯಗಳಲ್ಲಿ ಒಂದು. ಉತ್ತಮ ಸನ್ನಿವೇಶ, ವೈವಿಧ್ಯ ಭೂಸ್ವರೂಪಗಳು, ಸಸ್ಯ ಮತ್ತು ಪ್ರಾಣಿವರ್ಗ, ವಿವಿಧ ಮಣ್ಣು, ನದಿಜಾಲ, ಖನಿಜ ಮತ್ತು ಜನಸಂಪತ್ತು ಮೊದಲಾದವುಗಳ ಸಮೃದ್ಧ ನಾಡು. ಸಾಹಿತ್ಯ, ಕಲೆ, ಸಂಸ್ಕೃತಿ, ಧಾರ್ಮಿಕ, ಆಧ್ಯಾತ್ಮಿಕ, ಐತಿಹಾಸಿಕ ಪ್ರಸಿದ್ಧ, ಪವಿತ್ರ ಮತ್ತು ಪುಣ್ಯಕ್ಷೇತ್ರಗಳನ್ನುಳ್ಳ ನಾಡು. ಪ್ರಕೃತಿ ಸೌಂದರ್ಯ ಮತ್ತು ವನ್ಯಜೀವಿಗಳ ಸಮೃದ್ಧಿ ಹಾಗೂ ವಿಶ್ವ ಪರಂಪರೆಯ ಸಾಲಿನಲ್ಲಿ ಪ್ರಸಿದ್ಧಿ ಪಡೆದ ಕೀರ್ತಿ ನಮ್ಮ ರಾಜ್ಯಕ್ಕಿದೆ.

**ಹೆಸರಿನ ಹಿನ್ನೆಲೆ :** ಕರ್ನಾಟಕ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಇದನ್ನು ಕರುನಾಡು (ಕರ್ + ನಾಡು – ಅಂದರೆ ಕಪ್ಪುಮಣ್ಣಿನ ನಾಡು) ಎಂದು ಕರೆಯುತ್ತಿದ್ದರು. ತಮಿಳಿನ 'ಶಿಲಪ್ಪದಿಕಾರಂ' ಪ್ರಾಚೀನ ಕೃತಿಯಲ್ಲಿ 'ಕರುನಾಟ್' ಎಂಬ ಶಬ್ದದಿಂದ ಕರ್ನಾಟಕ ಎಂದು ಕರೆದಿರುವುದು ತಿಳಿದುಬರುತ್ತದೆ. ಕರುನಾಟ್ ಎಂದರೆ ಉನ್ನತ ಅಥವಾ ಎತ್ತರದಲ್ಲಿರುವ ನಾಡು ಎಂದರ್ಥ. ಇದು ಹಿಂದೆ ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಹಬ್ಬಿತ್ತೆಂದು ನೃಪತುಂಗನ ಆಸ್ಥಾನಿಕ ಕವಿ ಶ್ರೀವಿಜಯನ ಅಲಂಕಾರ ಗ್ರಂಥ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಲಾಗಿದೆ. ಸಾ.ಶ. 1799ರ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಹಿಂದಿನ ರಾಜಾಡಳಿತ ರಾಜ್ಯವಾಗಿದ್ದ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು. 1956ರಲ್ಲಿ ರಾಜ್ಯಗಳ ಪುನರ್‌ವಿಂಗಡಣಾ ಅಧಿನಿಯಮದ ಅಡಿಯಲ್ಲಿ ಬಾಂಬೆ, ಹೈದರಾಬಾದ್, ಮದ್ರಾಸ್ ಹಾಗೂ ಕೊಡಗು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ಭಾಷೆ ಮಾತನಾಡುವ ಜನರನ್ನೊಳಗೊಂಡ ಪ್ರದೇಶಗಳನ್ನು ಒಟ್ಟುಗೂಡಿಸಿ ವಿಶಾಲ ಮೈಸೂರು ರಾಜ್ಯವನ್ನು 1956ರ ನವೆಂಬರ್ ಒಂದರಂದು ಅಸ್ತಿತ್ವಕ್ಕೆ ತರಲಾಯಿತು. ಇದರ ಸವಿನೆನಪಿಗಾಗಿ ಪ್ರತಿವರ್ಷ ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಕನ್ನಡಿಗರ ಅಭಿಲಾಷೆಯಂತೆ ನಮ್ಮ ರಾಜ್ಯವನ್ನು 'ಕರ್ನಾಟಕ' ಎಂದು 1973 ನವೆಂಬರ್ ಒಂದರಂದು ಮರುನಾಮಕರಣ ಮಾಡಲಾಯಿತು.

## ಭೌಗೋಳಿಕ ಸ್ಥಾನ

ಭಾರತದ 28 ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಇದು ಭಾರತದ ದಕ್ಷಿಣದಲ್ಲಿದ್ದು, ಪರ್ಯಾಯ ದ್ವೀಪದ ಪಶ್ಚಿಮ ಮಧ್ಯಭಾಗದಲ್ಲಿದೆ. ಇದು $11^0-31^1$ ಮತ್ತು $18^0-45^1$ ಉತ್ತರ ಅಕ್ಷಾಂಶಗಳು ಹಾಗೂ $74^0-12^1$ ಮತ್ತು $78^0-40^1$ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅತ್ಯಂತ ಉತ್ತರದ ತುದಿಯಾದ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಿಂದ ದಕ್ಷಿಣದ ತುದಿಯಾದ ಚಾಮರಾಜನಗರ ಜಿಲ್ಲೆಯವರೆಗೆ ಒಟ್ಟು 750 ಕಿ.ಮೀ. ಉದ್ದವಾಗಿದೆ. ಪಶ್ಚಿಮದಿಂದ ಪೂರ್ವಕ್ಕೆ 400 ಕಿ.ಮೀ.ಗಳಷ್ಟು ಅಗಲವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರವು ಅತ್ಯಂತ ಪಶ್ಚಿಮದಲ್ಲಿದ್ದು, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಪೂರ್ವ ತುದಿಯಲ್ಲಿದೆ. ಕರ್ನಾಟಕ ರಾಜ್ಯವು ಭೂ ಮತ್ತು ಜಲ ಮೇರೆಗಳೆರಡನ್ನೂ ಸಹ ಒಳಗೊಂಡಿರುವುದು. ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದ್ದು, ಉತ್ತರಕ್ಕೆ ಮಹಾರಾಷ್ಟ್ರ, ಪೂರ್ವಕ್ಕೆ ಆಂಧ್ರಪ್ರದೇಶ, ಈಶಾನ್ಯಕ್ಕೆ ತೆಲಂಗಾಣ, ದಕ್ಷಿಣ ಮತ್ತು ಆಗ್ನೇಯಕ್ಕೆ ತಮಿಳುನಾಡು, ನೈಋತ್ಯಕ್ಕೆ ಕೇರಳ, ವಾಯುವ್ಯಕ್ಕೆ ಗೋವಾ ರಾಜ್ಯಗಳು ಭೂ ಮೇರೆಗಳಾಗಿವೆ. ಆಕಾರದಲ್ಲಿ ಕರ್ನಾಟಕವು ಗೋಡಂಬಿಯನ್ನು ಹೋಲುತ್ತದೆ.




@KTBS NOT TO BE REPUBLISHED

## ವಿಸ್ತೀರ್ಣ

ಕರ್ನಾಟಕ ರಾಜ್ಯವು 1,91,791 ಚದರ ಕಿ.ಮೀ. ವಿಸ್ತಾರವಾಗಿದೆ. ವಿಸ್ತೀರ್ಣದಲ್ಲಿ ಭಾರತದ ಎಂಟನೆಯ ದೊಡ್ಡ ರಾಜ್ಯ ಹಾಗೂ 2011 ರ ಜನಗಣತಿಯ ಪ್ರಕಾರ 6,10,95,297 ಜನಸಂಖ್ಯೆಯುನ್ನು ಹೊಂದಿದ್ದು, ಜನಸಂಖ್ಯೆಯಲ್ಲಿ ಒಂಭತ್ತನೆಯ ಸ್ಥಾನವನ್ನು ಹೊಂದಿದೆ. ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಕರ್ನಾಟಕದ ವಿಸ್ತೀರ್ಣವು ಶೇ.5.83 ಭಾಗದಷ್ಟಿದೆ.

**ನಿಮಗಿದು ತಿಳಿದಿರಲಿ :**

ಸಂವಿಧಾನದ 371J ವಿಧಿಯ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ವಿಶೇಷ ಸ್ಥಾನಮಾನ ಪಡೆದಿರುವ ಕಲ್ಯಾಣ ಕರ್ನಾಟಕದ ಜಿಲ್ಲೆಗಳು-ಬೀದರ್, ರಾಯಚೂರು, ಕಲಬುರಗಿ, ಕೊಪ್ಪಳ, ಯಾದಗಿರಿ, ಬಳ್ಳಾರಿ, ವಿಜಯನಗರ.



NOT TO BE REPUBLISHED ©KTBS

**ಕರ್ನಾಟಕದ ಜಿಲ್ಲೆಗಳು ಮತ್ತು ಜಿಲ್ಲಾ ಕೇಂದ್ರಗಳು**

ಇಂದು ನಮ್ಮ ರಾಜ್ಯದಲ್ಲಿ 31 ಜಿಲ್ಲೆಗಳಿವೆ. ಈ ಜಿಲ್ಲೆಗಳಲ್ಲಿ ಒಟ್ಟು 239 ತಾಲ್ಲೂಕುಗಳು, 745 ಹೋಬಳಿಗಳು, 347 ಪಟ್ಟಣ–ನಗರಗಳು, 29483 ಹಳ್ಳಿಗಳಿವೆ. ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ಅತಿ ದೊಡ್ಡದು ಹಾಗೂ ಬೆಂಗಳೂರು ನಗರ ಅತಿ ಚಿಕ್ಕ ಜಿಲ್ಲೆಯಾಗಿದೆ. ಬೆಂಗಳೂರು ಕರ್ನಾಟಕದ ರಾಜಧಾನಿ. ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಕರ್ನಾಟಕವನ್ನು ನಾಲ್ಕು ಕಂದಾಯ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳು.

## ಪ್ರಾಕೃತಿಕ ವಿಭಾಗಗಳು

ಕರ್ನಾಟಕ ರಾಜ್ಯವು ಭಾರತದ ಪರ್ಯಾಯ ದ್ವೀಪದ ಒಂದು ಭಾಗವಾಗಿದ್ದು, ವೈವಿಧ್ಯಮಯ ಪ್ರಾಕೃತಿಕ ಲಕ್ಷಣಗಳನ್ನು ಹೊಂದಿದೆ. ಇದರ ದಕ್ಷಿಣ ಭಾಗವು ಏರು–ತಗ್ಗುಗಳುಳ್ಳ ಭೂಸ್ವರೂಪಗಳನ್ನು ಹೊಂದಿದ್ದರೆ ಉತ್ತರ ಭಾಗವು ವಿಶಾಲವಾದ ಬಯಲು ಸೀಮೆಯಾಗಿದೆ. ಕರಾವಳಿ ಮತ್ತು ಮಲೆನಾಡುಗಳಲ್ಲಿ ವಿರುದ್ಧ ಸ್ವರೂಪಗಳಿವೆ. ಪೂರ್ವದ ಕಡೆಗೆ ಸಾಧಾರಣ ಇಳಿಜಾರು ಮತ್ತು ಪಶ್ಚಿಮಕ್ಕೆ ಕಡಿದಾದ ಇಳಿಜಾರಾಗಿದೆ. ಅಲ್ಲಲ್ಲಿ ಬೆಟ್ಟಗಳ ಸಾಲುಗಳಿದ್ದು, ನಡುವೆ ಕಣಿವೆ ಕಂದರಗಳು ಕಂಡುಬರುವವು. ರಾಜ್ಯದ ಬಹಳಷ್ಟು ಭಾಗವು ಸಮುದ್ರಮಟ್ಟಕ್ಕೆ 450 ರಿಂದ 900 ಮೀಟರ್ ಎತ್ತರದಲ್ಲಿದೆ. ಕೆಲವು ಭಾಗಗಳಲ್ಲಿ 1800 ಮೀಟರ್‌ಗಳಿಗೂ ಹೆಚ್ಚು ಎತ್ತರದ ಭಾಗಗಳಿವೆ.

ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಕರ್ನಾಟಕವನ್ನು ಮೂರು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ: (1) ಕರಾವಳಿ ಮೈದಾನ (2) ಮಲೆನಾಡು (3) ಬಯಲು ಸೀಮೆ

### 1. ಕರಾವಳಿ ಮೈದಾನ

ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಫಲವಾಗಿ ಕರ್ನಾಟಕ ರಾಜ್ಯಕ್ಕೆ ಸಮುದ್ರ ತೀರ ಹಾಗೂ ಕರಾವಳಿ ಮೈದಾನ ಲಭ್ಯವಾಯಿತು. ಈ ಪ್ರಾಕೃತಿಕ ವಿಭಾಗವು ಅರಬ್ಬೀ ಸಮುದ್ರ ಮತ್ತು ಮಲೆನಾಡುಗಳ ಮಧ್ಯೆ ವಿಸ್ತರಿಸಿದೆ. ಇದು ದಕ್ಷಿಣದಲ್ಲಿ ಮಂಗಳೂರಿನಿಂದ ಉತ್ತರದಲ್ಲಿ ಕಾರವಾರದವರೆಗೆ 320 ಕಿ.ಮೀ. ಉದ್ದವಾಗಿದೆ ಹಾಗೂ 12 ರಿಂದ 64 ಕಿ.ಮೀ. ಅಗಲವಾಗಿದೆ. ದಕ್ಷಿಣದಲ್ಲಿ ಅಗಲವಾಗಿದ್ದು ಉತ್ತರದ ಕಡೆಗೆ ಕಿರಿದಾಗುತ್ತಾ ಕಡಿದಾದ ಇಳಿಜಾರಿನಿಂದ ಕೂಡಿದೆ. ಇದರ ಎತ್ತರ ಸಮುದ್ರ ಮಟ್ಟದಿಂದ 200 ಮೀಟರ್‌ಗಳನ್ನು ಮೀರುತ್ತದೆ. ಇದನ್ನು **'ಕೆನರಾ ಅಥವಾ ಕರ್ನಾಟಕ ಕರಾವಳಿ'** ಎಂದೇ ಕರೆಯುವರು. ಕಡಲ ಕೊರೆತದಿಂದ ರಚಿತವಾದ ಈ ಕರಾವಳಿಯ ಮೂಲಕ ಹಲವು ನದಿಗಳು ರಭಸದಿಂದ ಹರಿಯುತ್ತವೆ. ಅವು ಅಳಿವೆಗಳನ್ನು ನಿರ್ಮಿಸುತ್ತವೆ. ಆದರೆ ಅವು ವಿಶಾಲ ನದಿ ಮುಖಜ ಭೂಮಿಯನ್ನು ನಿರ್ಮಿಸಲಾರವು.

ಕರಾವಳಿಯ ಉದ್ದಕ್ಕೂ ಅನೇಕ ಬಂದರುಗಳಿವೆ. ಅವುಗಳಲ್ಲಿ **'ನವ ಮಂಗಳೂರು'** ಬಂದರು ಕರ್ನಾಟಕದ ಅತಿ ದೊಡ್ಡ ಬಂದರಾಗಿದೆ. ಭಟ್ಕಳ, ಮಲ್ಪೆ, ಕಾರವಾರ, ಕುಮಟ, ಬೇಲೆಕೇರಿ ಮತ್ತು ಹೊನ್ನಾವರಗಳು ಮೀನುಗಾರಿಕಾ ಬಂದರುಗಳು. ಇಲ್ಲಿನ ಅನೇಕ ಸುಂದರ ಸಮುದ್ರ ತೀರಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರ, ಉಳ್ಳಾಲ, ಪಣಂಬೂರು, ಉಡುಪಿ ಜಿಲ್ಲೆಯ ಮಲ್ಪೆ ಮತ್ತು ಮರವಂತೆ, ಉತ್ತರಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ ಸಮೀಪದ ಮುರ್ಡೇಶ್ವರ ಮತ್ತು ಗೋಕರ್ಣ ಸಮೀಪದ ಓಂ ಬೀಚ್ ಪ್ರಮುಖವಾಗಿವೆ. ಕರಾವಳಿಯ ಸಮೀಪ ಅನೇಕ ಸಣ್ಣ ಸಣ್ಣ ದ್ವೀಪಗಳಿವೆ. ಅವುಗಳಲ್ಲಿ ಮಲ್ಪೆ ಸಮೀಪದಲ್ಲಿರುವ ಸೇಂಟ್ ಮೇರೀಸ್ ದ್ವೀಪ (ಕೋಕೋನಟ್ ದ್ವೀಪ) ಕಾರವಾರ ಸಮೀಪದ ಅಂಜದ್ವೀಪ, ದೇವಗಡ, ಕಾಂಜಿಗುಡ್ಡ ದ್ವೀಪ ಮುಂತಾದುವು. ಕರಾವಳಿಯ ಜನರ ಮುಖ್ಯ ವೃತ್ತಿ ಮೀನುಗಾರಿಕೆ. ಜೊತೆಗೆ ಕೃಷಿಯೂ ಸಹ ಮತ್ತೊಂದು ಪ್ರಮುಖ ವೃತ್ತಿಯಾಗಿದೆ. ಇಲ್ಲಿ ಗೋಡಂಬಿ, ತೆಂಗು, ಅಡಿಕೆ, ಏಲಕ್ಕಿ, ಭತ್ತ ಮೊದಲಾದ ಬೆಳೆಗಳನ್ನು ಬೆಳೆಯುವರು. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಕರಾವಳಿಯ ಜಿಲ್ಲೆಗಳಾಗಿವೆ.

©KTBS NOT TO BE REPUBLISHED

## 2. ಮಲೆನಾಡು

ನಿಮಗಿದು ತಿಳಿದಿರಲಿ :

- ಕರ್ನಾಟಕದ ಹೆಬ್ಬಾಗಿಲು – ನವ ಮಂಗಳೂರು ಬಂದರು.
- ಸೇಂಟ್ ಮೇರೀಸ್ ದ್ವೀಪವನ್ನು ಸ್ಥಳೀಯವಾಗಿ 'ತೋನ್ಸೆಪಾರ್' ಎಂದು ಕರೆಯುವರು.
- ಮುರ್ಡೇಶ್ವರದ ಸಮೀಪ 'ನೇತ್ರಾಣಿ' ದ್ವೀಪವಿದೆ. ಇಲ್ಲಿ ಪಾರಿವಾಳಗಳು ಅಧಿಕವಾಗಿರುವುದರಿಂದ ಇದನ್ನು 'ಪಿಜನ್ ಐಲ್ಯಾಂಡ್' ಎಂದು ಕರೆಯುತ್ತಾರೆ.

ನಮ್ಮ ರಾಜ್ಯದ ಪಶ್ಚಿಮ ಘಟ್ಟಗಳ ಭಾಗವನ್ನು ಮಲೆನಾಡು ಅಥವಾ ಬೆಟ್ಟಗಳ ನಾಡು ಎನ್ನುವರು. ಇದನ್ನೇ **'ಸಹ್ಯಾದ್ರಿ ಬೆಟ್ಟ'**ಗಳೆಂತಲೂ ಕರೆಯುವರು. ಮಲೆನಾಡು ಉತ್ತರ ದಕ್ಷಿಣವಾಗಿ ಕರಾವಳಿಗೆ ಸಮಾನಾಂತರವಾಗಿ ಹಬ್ಬಿದೆ. ಪಶ್ಚಿಮ ಭಾಗವು ಕಡಿದಾದ ಇಳಿಜಾರನ್ನು ಹೊಂದಿದ್ದು, ಪೂರ್ವದ ಕಡೆಗೆ ಹೋದಂತೆ ನಿಧಾನವಾಗಿ ಹಂತ ಹಂತವಾಗಿ ಇಳಿಜಾರಾಗುತ್ತಾ ಹೋಗುತ್ತದೆ. ಆದ್ದರಿಂದಲೇ ಇದನ್ನು ಘಟ್ಟಗಳೆಂದು ಕರೆಯುತ್ತಾರೆ. ಇದರ ಉದ್ದ 650 ಕಿ.ಮೀ. ಅಗಲ 50–76 ಕಿ.ಮೀ.ಗಳು. ಸರಾಸರಿ ಎತ್ತರ ಸಮುದ್ರ ಮಟ್ಟದಿಂದ 900 ರಿಂದ 1500 ಮೀ.ಗಳು. ಇದು ಅರಬ್ಬೀ ಸಮುದ್ರದಿಂದ ಬೀಸುವ ಮಳೆ ಮಾರುತಗಳನ್ನು ತಡೆದು ವಾರ್ಷಿಕ 200 ಸೆಂ.ಮೀ.ಗಿಂತ ಹೆಚ್ಚು ಮಳೆ ಪಡೆಯುತ್ತದೆ. ಇಲ್ಲಿನ ಅತಿ ಎತ್ತರದ ಶಿಖರಗಳೆಂದರೆ ಮುಳ್ಳಯ್ಯನ ಗಿರಿ, ಕುದುರೆಮುಖ, ಕಲ್ಹತ್ತಗಿರಿ, ರುದ್ರಗಿರಿ, ದೇವೀರಮ್ಮನ ಬೆಟ್ಟ. ಇವು ಚಿಕ್ಕಮಗಳೂರು ಜಿಲ್ಲೆಯಲ್ಲಿವೆ. ಇದಲ್ಲದೆ ಬಲ್ಲಾಳರಾಯನದುರ್ಗ, ಮೆರ್ತಿಗುಡ್ಡ, ಪುಷ್ಪಗಿರಿ, ಕೊಡಚಾದ್ರಿ ಇವು ಪಶ್ಚಿಮ ಘಟ್ಟಗಳ ಇತರ ಉನ್ನತ ಶಿಖರಗಳಾಗಿವೆ. ಇವುಗಳಲ್ಲಿ ಮುಳ್ಳಯ್ಯನಗಿರಿ (1913 ಮೀ) ರಾಜ್ಯದಲ್ಲೇ ಎತ್ತರವಾದುದು.

**ಪರ್ವತ ಘಾಟಿಗಳು :**

ಕರ್ನಾಟಕದ ಪೂರ್ವದ ಮೈದಾನದಿಂದ ಪಶ್ಚಿಮ ಘಟ್ಟಗಳನ್ನು ದಾಟಿ ಕರಾವಳಿ ಮೈದಾನಕ್ಕೆ ಹೋಗುವ ಮಾರ್ಗವನ್ನು ಪರ್ವತ ಘಾಟಿ ಅಥವಾ ಘಟ್ಟ ಮಾರ್ಗಗಳೆನ್ನುವರು. ಪ್ರಮುಖ ಘಟ್ಟ ಮಾರ್ಗಗಳೆಂದರೆ :

1. **ಚಾರ್ಮಾಡಿ ಘಾಟಿ :** ಮಂಗಳೂರು ಮತ್ತು ಚಿಕ್ಕಮಗಳೂರುಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.
2. **ಶಿರಾಡಿ ಘಾಟಿ :** ಹಾಸನ – ಸಕಲೇಶಪುರ ಮತ್ತು ಮಂಗಳೂರು ನಡುವೆ ಸಂಪರ್ಕ ಕಲ್ಪಿಸುತ್ತದೆ.
3. **ಆಗುಂಬೆ ಘಾಟಿ :** ಶಿವಮೊಗ್ಗ ಮತ್ತು ಉಡುಪಿಯು ನಡುವೆ ಸಂಪರ್ಕ ಕಲ್ಪಿಸುತ್ತದೆ.
4. **ಹುಲಿಕಲ್ ಘಾಟಿ :** ಶಿವಮೊಗ್ಗ ಮತ್ತು ಕುಂದಾಪುರ ನಡುವೆ ಸಂಪರ್ಕ ಕಲ್ಪಿಸುತ್ತದೆ.




ಮಲೆನಾಡು ಅಧಿಕ ಮಳೆಯನ್ನು ಪಡೆಯುವುದರಿಂದ ನಿತ್ಯಹರಿದ್ವರ್ಣದ ಅರಣ್ಯಗಳಿಂದ ಕೂಡಿದ ಮನೋಹರ ತಾಣಗಳನ್ನು ಹೊಂದಿದೆ. ಇದು ಕರ್ನಾಟಕದ

© KTBS NOT TO BE REPUBLISHED

ಹಲವು ನದಿಗಳ ಉಗಮಸ್ಥಾನವಾಗಿದ್ದು, ಈ ನದಿಗಳು ಇಲ್ಲಿಂದ ಕಡಿದಾದ ಇಳಿಜಾರಿನಲ್ಲಿ ರಭಸದಿಂದ ಹರಿಯುತ್ತಾ ಅನೇಕ ಜಲಪಾತಗಳನ್ನು ನಿರ್ಮಿಸಿವೆ. ಅವುಗಳಲ್ಲಿ ಭಾರತದಲ್ಲೇ ಎತ್ತರವಾದ ಜೋಗ್ ಜಲಪಾತ (ಶರಾವತಿ ನದಿ) ಸೇರಿದಂತೆ ಉಂಚಳ್ಳಿ, ಮಾಗೋಡು, ಗೋಕಾಕ್, ಶಿವನಸಮುದ್ರ, ಅಬ್ಬಿ ಜಲಪಾತಗಳು ಪ್ರಮುಖವಾಗಿವೆ. ಜೊತೆಗೆ ಕಣಿವೆ ಮತ್ತು ಕಂದರಗಳನ್ನೂ ನಿರ್ಮಿಸಿವೆ. ಇಲ್ಲಿ ಕಾಫಿ, ಚಹ, ರಬ್ಬರ್ ಮತ್ತು ಸಾಂಬಾರ ಪದಾರ್ಥಗಳನ್ನು ಹೇರಳವಾಗಿ ಬೆಳೆಯಲಾಗುತ್ತದೆ. ಅಧಿಕ ಕಾಫಿ ಬೆಳೆಯುವುದರಿಂದ ಚಿಕ್ಕಮಗಳೂರನ್ನು **'ಕಾಫಿ ನಾಡು'** ಎನ್ನುವರು. ಕೊಡಗು ಜಿಲ್ಲೆಯಲ್ಲಿ ತಂಪಾದ ವಾತಾವರಣವಿರುವುದರಿಂದ **'ಕರ್ನಾಟಕದ ಕಾಶ್ಮೀರ'** ಎಂದು ಕರೆಯುವರು ಹಾಗೂ ಕಿತ್ತಳೆ ಹಣ್ಣನ್ನು ಹೆಚ್ಚಾಗಿ ಬೆಳೆಯುವುದರಿಂದ **'ಕಿತ್ತಳೆ ನಾಡು'** ಎಂದೂ ಕರೆಯುವರು. ಇಂದು ಮಲೆನಾಡು ಪ್ರದೇಶವನ್ನು **'ಜೀವವೈವಿಧ್ಯತಾ ವಲಯ'** ಎಂದು ಗುರುತಿಸಿ ರಕ್ಷಿಸಲಾಗುತ್ತಿದೆ. ಹಾಸನ, ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಮಲೆನಾಡು ಜಿಲ್ಲೆಗಳಾಗಿವೆ.

**ಚಟುವಟಿಕೆ**
ನಿಮ್ಮ ಜಿಲ್ಲೆ ಯಾವ ಪ್ರಾಕೃತಿಕ ವಿಭಾಗದಲ್ಲಿ ಬರುತ್ತದೆ ? ನಿಮ್ಮ ಜಿಲ್ಲೆಯ ನೆರೆ–ಹೊರೆ ಜಿಲ್ಲೆಗಳನ್ನು ಹೆಸರಿಸಿ ಮತ್ತು ಆ ಜಿಲ್ಲೆಗಳ ವಿಶೇಷ ಲಕ್ಷಣಗಳನ್ನು ಪಟ್ಟಿ ಮಾಡಿ.

### 3. ಬಯಲುಸೀಮೆ

ಮಲೆನಾಡಿನ ಪೂರ್ವದಿಕ್ಕಿನಲ್ಲಿ ವಿಶಾಲ ಮೈದಾನವಿದ್ದು, ಸರಾಸರಿ 450 ರಿಂದ 760 ಮೀ. ಎತ್ತರದಲ್ಲಿದೆ. ಇದು ಕೃಷ್ಣಾ, ತುಂಗಭದ್ರ ಮತ್ತು ಕಾವೇರಿ ಜಲಾನಯನ ಪ್ರದೇಶಗಳನ್ನು ಹೊಂದಿದ್ದು, ಇಲ್ಲಿ ಅನೇಕ ಕಡೆ ಬೆಟ್ಟಗುಡ್ಡಗಳ ಸಾಲುಗಳು ಕಂಡುಬರುತ್ತವೆ. ಇದು ಪೂರ್ವದ ಕಡೆಗೆ ಇಳಿಜಾರನ್ನು ಹೊಂದಿದೆ. ಉತ್ತರದಿಂದ ದಕ್ಷಿಣಕ್ಕೆ ಎತ್ತರ ಹೆಚ್ಚಾಗುತ್ತದೆ. ಇದನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ; (i) ಉತ್ತರದ ಬಯಲು ಸೀಮೆ (ii) ದಕ್ಷಿಣದ ಬಯಲು ಸೀಮೆ.

**(i) ಉತ್ತರದ ಬಯಲು ಸೀಮೆ :** ಇದು ಕಪ್ಪುಮಣ್ಣಿನಿಂದ ಕೂಡಿದ ಬಯಲು ಪ್ರದೇಶ ಮತ್ತು ವಿಸ್ತಾರವಾದ ಪ್ರಸ್ಥಭೂಮಿಯಾಗಿದೆ. ಸಮುದ್ರ ಮಟ್ಟದಿಂದ ಸರಾಸರಿ 365 ರಿಂದ 610 ಮೀ.ಗಳಷ್ಟು ಎತ್ತರವಾಗಿದೆ. ಅಲ್ಲಲ್ಲಿ ಬೆಟ್ಟಗುಡ್ಡಗಳು ಕಂಡುಬರುತ್ತವೆ. ಅವುಗಳಲ್ಲಿ ನರಗುಂದ ಬೆಟ್ಟ, ಪರಸಗಡ ಗುಡ್ಡ, ಗುರುಮಿಠ್ಕಲ್ ಬೆಟ್ಟ, ಇಳಕಲ್ ಗುಡ್ಡ ಪ್ರಮುಖವಾಗಿವೆ. ಸವದತ್ತಿ ಮತ್ತು ಬಾದಾಮಿಯ ಪೂರ್ವದಲ್ಲಿ ಸುಣ್ಣಕಲ್ಲಿನ ಕೆಲವು ಭಾಗಗಳು ಸ್ತರಭಂಗದಿಂದ ಕೂಡಿದ್ದು ಹೆಚ್ಚು ಏರಿಳಿತದ ಭೂಸ್ವರೂಪಕ್ಕೆ ಕಾರಣವಾಗಿವೆ. ಸುಮಾರು 52 ಮೀ. ಎತ್ತರದಿಂದ ಧುಮುಕುವ ಘಟಪ್ರಭಾ ನದಿಯ ಗೋಕಾಕ್ ಜಲಪಾತ ಇಲ್ಲಿ ಪ್ರಸಿದ್ಧವಾಗಿದೆ. ಇದಲ್ಲದೆ ಛಾಯಾ ಭಗವತಿ ಹಾಗೂ ಸೊಗಲ ಜಲಪಾತಗಳು ಉತ್ತರದ ಮೈದಾನದಲ್ಲಿವೆ. ಬೀದರ್, ವಿಜಯಪುರ, ಕಲಬುರಗಿ, ಯಾದಗಿರಿ, ಗದಗ, ಕೊಪ್ಪಳ, ರಾಯಚೂರು, ಬಳ್ಳಾರಿ, ಹಾವೇರಿ, ಬಾಗಲಕೋಟೆ ಜಿಲ್ಲೆಗಳು ಹಾಗೂ ಧಾರವಾಡ ಮತ್ತು ಬೆಳಗಾವಿಯ ಕೆಲಭಾಗಗಳು ಉತ್ತರದ ಮೈದಾನದಲ್ಲಿವೆ. ಬೇಸಿಗೆಯಲ್ಲಿ ಅಧಿಕ ಉಷ್ಣಾಂಶವಿರುವುದರಿಂದ ಇದನ್ನು **'ಬಿಸಿಲ ನಾಡು'** ಎನ್ನುವರು. ಒಣ ಬೇಸಾಯದ ಬೆಳೆಗಳಾದ ಜೋಳ, ಸಜ್ಜೆ, ಶೇಂಗಾ, ಹತ್ತಿ ಮತ್ತು ಬೇಳೆಕಾಳುಗಳನ್ನು ಬೆಳೆಯಲಾಗುತ್ತದೆ.


**ಮುಳ್ಳಯ್ಯನ ಗಿರಿ**


**ಏಕಶಿಲಾ ಬೆಟ್ಟ – ಮಧುಗಿರಿ**

(ii) **ದಕ್ಷಿಣದ ಬಯಲು ಸೀಮೆ :** ಇದು ಉತ್ತರದಲ್ಲಿ ತುಂಗಭದ್ರಾನದಿ ಪಾತ್ರದಿಂದ ದಕ್ಷಿಣದ ಚಾಮರಾಜನಗರ ಜಿಲ್ಲೆಯವರೆಗೂ ಹಬ್ಬಿದೆ. ಇದು ಬಹಳಷ್ಟು ಕೆಂಪು ಮಣ್ಣಿನಿಂದ ಕೂಡಿರುವ ಪ್ರಸ್ಥಭೂಮಿ. ಈ ಪ್ರದೇಶವು ಏರು ತಗ್ಗಿನಿಂದ ಕೂಡಿದ್ದು 900–975 ಮೀ. ಎತ್ತರವುಳ್ಳದ್ದು. ಉತ್ತರದ ಮೈದಾನಕ್ಕಿಂತ ಎತ್ತರವಾಗಿದ್ದು, ಪೂರ್ವದ ಕಡೆಗೆ ಇಳಿಜಾರಾಗಿದೆ. ಇದು ಅನೇಕ ಬೆಟ್ಟಗಳಿಂದ ಕೂಡಿದೆ. ಅವುಗಳೆಂದರೆ ಚಿತ್ರದುರ್ಗದ ಬೆಟ್ಟಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾರಾಯಣದುರ್ಗ, ಸಾವನದುರ್ಗ, ಶಿವಗಂಗೆ, ತುಮಕೂರು ಜಿಲ್ಲೆಯ ಮಧುಗಿರಿ ಬೆಟ್ಟ. ಇದು ಏಷ್ಯಾ ಖಂಡದಲ್ಲಿಯೇ ಅತಿದೊಡ್ಡ ಏಕಶಿಲಾ ಬೆಟ್ಟವಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮ, ಚನ್ನಕೇಶವ ಬೆಟ್ಟ ಹಾಗೂ ಸ್ಕಂದಗಿರಿ (ಹರಿಹರೇಶ್ವರ ಬೆಟ್ಟ), ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಬೆಟ್ಟ, ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ, ಮಲೈಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿಬೆಟ್ಟ, ಮೈಸೂರು ಜಿಲ್ಲೆಯ ಚಾಮುಂಡಿ ಬೆಟ್ಟ ಪ್ರಮುಖವಾದವು. ಈ ಪ್ರದೇಶವೂ ಮಳೆ ನೆರಳಿನ ಪ್ರದೇಶದ ಭಾಗವಾಗಿದೆ. ಕಾವೇರಿ, ಪಾಲಾರ್, ಪೆನ್ನಾರ್ ಇಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು. ರಾಗಿ, ಭತ್ತ, ಮೆಕ್ಕೆಜೋಳ, ಕಬ್ಬು, ಶೇಂಗಾ, ಹಿಪ್ಪುನೇರಳೆ, ತರಕಾರಿಗಳು, ಹಣ್ಣು, ಹೂವುಗಳು ಪ್ರಮುಖ ಬೆಳೆಗಳಾಗಿವೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳು ದಕ್ಷಿಣದ ಮೈದಾನದಲ್ಲಿವೆ.

> **ಚಟುವಟಿಕೆ**
>
> ನಿಮ್ಮ ಜಿಲ್ಲೆಯ ಪ್ರಾಕೃತಿಕ ವೈವಿಧ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.

© KTBS NOT TO BE REPUBLISHED

### ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಕನ್ನಡ ರಾಜ್ಯೋತ್ಸವವನ್ನು ................ ದಿನಾಂಕದಂದು ಆಚರಿಸುತ್ತೇವೆ.
2. ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ ................ .
3. ಕರ್ನಾಟಕದ ಪೂರ್ವಭಾಗದಲ್ಲಿ ................ ರಾಜ್ಯವಿದೆ.
4. ಕರ್ನಾಟಕದ ................ ಜಿಲ್ಲೆಯು ವಿಸ್ತೀರ್ಣದಲ್ಲಿ ದೊಡ್ಡದಾಗಿದೆ.
5. ಕರ್ನಾಟಕವು ಭಾರತದ ................ ಭಾಗದಲ್ಲಿದೆ.
6. ಮಲ್ಪೆ ಸಮೀಪದಲ್ಲಿ ................ ದ್ವೀಪವಿದೆ.
7. ಕರ್ನಾಟಕದ ಪಶ್ಚಿಮ ಘಟ್ಟಗಳ ಭಾಗವನ್ನು ................ ಬೆಟ್ಟಗಳೆಂದು ಕರೆಯುತ್ತಾರೆ.
8. ಆಗುಂಬೆ ಘಾಟಿಯು ................ ಮತ್ತು ................ ಸ್ಥಳಗಳನ್ನು ಸಂಪರ್ಕಿಸುತ್ತದೆ.
9. ಕರ್ನಾಟಕದ ಕಾಶ್ಮೀರ ಎಂದು ................ ಜಿಲ್ಲೆಯನ್ನು ಕರೆಯುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

10. ಕರ್ನಾಟಕದ ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆಯನ್ನು ಬರೆಯಿರಿ.
11. ನಮ್ಮ ನೆರೆ-ಹೊರೆ ರಾಜ್ಯಗಳನ್ನು ಹೆಸರಿಸಿ.
12. ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು ?

13. ಭಾರತದಲ್ಲಿ ಕರ್ನಾಟಕದ ಭೌಗೋಳಿಕ ಸ್ಥಾನವನ್ನು ತಿಳಿಸಿ.

14. ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿರಿ.

15. ಮಲೆನಾಡು ಪ್ರದೇಶದ ಲಕ್ಷಣಗಳನ್ನು ಕುರಿತು ಬರೆಯಿರಿ.

16. ಕರ್ನಾಟಕದ ಕರಾವಳಿ ಮೈದಾನದ ಬಗ್ಗೆ ಬರೆಯಿರಿ.

17. ದಕ್ಷಿಣದ ಬಯಲು ಸೀಮೆಯ ಪ್ರಮುಖ ಬೆಟ್ಟಗಳನ್ನು ಹೆಸರಿಸಿ.

18. ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವುವು ?

**III. ಹೊಂದಿಸಿ ಬರೆಯಿರಿ.**

| | ಅ | ಆ |
|---|---|---|
| i. | ಜೋಗ್ ಜಲಪಾತ | ಎ) ಮಂಗಳೂರು |
| ii. | ಓಂ ಬೀಚ್ | ಬಿ) ಉತ್ತರದ ಮೈದಾನ |
| iii. | ನಂದಿ ಗಿರಿಧಾಮ | ಸಿ) ಶರಾವತಿ ನದಿ |
| iv. | ಏಕಶಿಲಾ ಬೆಟ್ಟ | ಡಿ) ಗೋಕರ್ಣ |
| v. | ಬಿಸಿಲನಾಡು | ಇ) ಚಿಕ್ಕಬಳ್ಳಾಪುರ |
| | | ಎಫ್) ಮಧುಗಿರಿ ಬೆಟ್ಟ |

**IV. ಚಟುವಟಿಕೆಗಳು.**

1. ಕರ್ನಾಟಕದ ರೇಖಾನಕ್ಷೆಯನ್ನು ರಚಿಸಿ, ಜಿಲ್ಲೆಗಳನ್ನು ಗುರುತಿಸಿ, ಹೆಸರಿಸಿ ಹಾಗೂ ಅಕ್ಷಾಂಶ ಮತ್ತು ರೇಖಾಂಶಿಕ ಸ್ಥಾನವನ್ನು ತಿಳಿಸಿ.

2. ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ, ಹೆಸರಿಸಿ ಹಾಗೂ ಕರ್ನಾಟಕದ ಪ್ರಮುಖ ಜಲಪಾತಗಳ ಚಿತ್ರಗಳನ್ನು ಸಂಗ್ರಹಿಸಿರಿ.

**V. ಯೋಜನೆ.**

1. ನಿಮ್ಮ ಜಿಲ್ಲೆ ಅಥವಾ ನಗರದ ನಕ್ಷೆಯನ್ನು ತಯಾರಿಸಿ, ಅಕ್ಷಾಂಶ ಮತ್ತು ರೇಖಾಂಶಿಕ ಸ್ಥಾನ, ನೆರೆ-ಹೊರೆ ಜಿಲ್ಲೆ ಅಥವಾ ಇತರೆ ಪ್ರದೇಶಗಳನ್ನು ನಿಮ್ಮ ಶಿಕ್ಷಕರ ನೆರವಿನಿಂದ ಗುರುತಿಸಿ.

*****

@KTBS NOT TO BE REPUBLISHED

## ಅಧ್ಯಾಯ – 11

W4B8E7

# ಕರ್ನಾಟಕದ ಪ್ರಾಕೃತಿಕ ವೈವಿಧ್ಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದ ವಾಯುಗುಣದ ಪ್ರಮುಖ ಲಕ್ಷಣಗಳು.
- ಕರ್ನಾಟಕದ ಋತುಮಾನಗಳ ವಾಯುಗುಣದ ಪರಿಸ್ಥಿತಿ.
- ಕರ್ನಾಟಕದ ಋತುಕಾಲಿಕ ಮಳೆಯ ಹಂಚಿಕೆ ಮತ್ತು ಪರಿಣಾಮಗಳು.
- ಕರ್ನಾಟಕದಲ್ಲಿನ ಮಣ್ಣಿನ ವಿಧಗಳು ಹಾಗೂ ಹಂಚಿಕೆ.
- ಕರ್ನಾಟಕದ ಸ್ವಾಭಾವಿಕ ಸಸ್ಯವರ್ಗ, ವಿಧಗಳು, ಹಂಚಿಕೆ, ಪ್ರಾಣಿಸಂಪತ್ತು.

## ಕರ್ನಾಟಕದ ವಾಯುಗುಣ

ಕರ್ನಾಟಕದಲ್ಲಿ ಉಷ್ಣವಲಯದ ಮಾನ್ಸೂನ್ ವಾಯುಗುಣವಿದೆ. ಅತಿ ಶಾಖ ಮತ್ತು ತೇವಾಂಶವುಳ್ಳ ಬೇಸಿಗೆ ಹಾಗೂ ತಂಪಾದ ಮತ್ತು ಶುಷ್ಕ ಚಳಿಗಾಲ ಈ ವಾಯುಗುಣದ ಪ್ರಮುಖ ಲಕ್ಷಣ. ಆದರೂ ವಾಯುಗುಣದಲ್ಲಿ ವೈವಿಧ್ಯತೆ ಇದೆ. ಇದಕ್ಕೆ ಭೌಗೋಳಿಕ ಸ್ಥಾನ, ಸಮುದ್ರಸಾಮೀಪ್ಯ, ಭೂಸ್ವರೂಪ, ಸಸ್ಯವರ್ಗ ಹಾಗೂ ಮಾನ್ಸೂನ್ ಮಾರುತಗಳ ಪ್ರಭಾವವು ಮುಖ್ಯ ಕಾರಣ. ಹೀಗಾಗಿ ವಾರ್ಷಿಕ ಉಷ್ಣಾಂಶ ಮತ್ತು ಮಳೆಯ ಹಂಚಿಕೆ ರಾಜ್ಯಾದ್ಯಂತ ಒಂದೇ ರೀತಿಯಾಗಿರುವುದಿಲ್ಲ.

**ವಾಯುಗುಣದ ಋತುಗಳು :** ಭಾರತದಂತೆ ಕರ್ನಾಟಕದ ವಾರ್ಷಿಕ ವಾಯುಗುಣವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

1) ಬೇಸಿಗೆ ಕಾಲ (ಮಾರ್ಚ್–ಮೇ)
2) ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮುಂಗಾರು ಮಳೆಗಾಲ (ಜೂನ್–ಸೆಪ್ಟೆಂಬರ್)
3) ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ (ಅಕ್ಟೋಬರ್–ನವೆಂಬರ್)
4) ಚಳಿಗಾಲ (ಡಿಸೆಂಬರ್–ಫೆಬ್ರವರಿ)

1. **ಬೇಸಿಗೆ ಕಾಲ :** ಈ ಕಾಲದಲ್ಲಿ ವಾಯುಗುಣವು ಅತಿ ಶಾಖ, ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ. ಮಾರ್ಚ್ ತಿಂಗಳ ನಂತರ ರಾಜ್ಯಾದ್ಯಂತ ಉಷ್ಣಾಂಶವು ಏಕಪ್ರಕಾರವಾಗಿ ಹೆಚ್ಚಾಗುತ್ತಾ ಏಪ್ರಿಲ್–ಮೇ ತಿಂಗಳುಗಳಲ್ಲಿ ಅದು ಗರಿಷ್ಠ ಮಟ್ಟವನ್ನು ತಲುಪುವುದು. ರಾಯಚೂರಿನಲ್ಲಿ ಸಾಮಾನ್ಯವಾಗಿ ಪ್ರತಿವರ್ಷ $45.6^0$ ಸೆ. ಉಷ್ಣಾಂಶ ದಾಖಲಾಗುವುದರಿಂದ ಅದು ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು ಉಷ್ಣಾಂಶ ದಾಖಲಿಸುವ ಪ್ರದೇಶವಾಗಿದೆ. ಉತ್ತರ ಮೈದಾನದ ಇತರೆ ಜಿಲ್ಲೆಗಳಲ್ಲಿಯೂ ಉಷ್ಣಾಂಶ ಹೆಚ್ಚಾಗಿರುತ್ತದೆ. ಒಟ್ಟಿನಲ್ಲಿ ಈ ಅವಧಿಯಲ್ಲಿ ಇಡೀ ಕರ್ನಾಟಕವು ಅಧಿಕ ಶಾಖದಿಂದ ಕೂಡಿರುತ್ತದೆ. ಉತ್ತರದ ಮೈದಾನದಲ್ಲಿ ಆರ್ದ್ರತೆಯ ಪ್ರಮಾಣವು ದಕ್ಷಿಣದ ಮೈದಾನಕ್ಕಿಂತ ಕಡಿಮೆಯಿರುತ್ತದೆ. ಬೇಸಿಗೆಯಲ್ಲಿ ಅಧಿಕ ಬಾಷ್ಪೀಭವನದಿಂದ ಮಳೆ ಮೋಡಗಳು ನಿರ್ಮಾಣವಾಗಿ ಗುಡುಗು, ಮಿಂಚು, ಸಿಡಿಲುಗಳ

© KTBS NOT TO BE REPUBLISHED

ಅಬ್ಬರದೊಂದಿಗೆ ಪರಿಸರಣ ವಿಧದ ಮಳೆಯಾಗುವುದು. ಕೆಲವೆಡೆ ಆಲಿಕಲ್ಲುಗಳು ಬೀಳುವುದುಂಟು. ಇದು ಸಾಮಾನ್ಯವಾಗಿ ಅಪರಾಹ್ನ ಸಮಯದಲ್ಲಿ ಅಲ್ಪಾವಧಿಯವರೆಗೆ ಸಂಭವಿಸುತ್ತದೆ. ಇದು ಕಾಫಿ ಗಿಡಗಳು ಹೂ ಬಿಡಲು ನೆರವಾಗುವುದರಿಂದ ಇದನ್ನು **'ಕಾಫಿ ಹೂ ಮಳೆ'** ಎಂತಲೂ ಹಾಗೂ ಮಾವು ಫಸಲಿಗೆ ನೆರವಾಗುವುದರಿಂದ ಇದನ್ನು **'ಮಾವಿನ ಹೊಯ್ಲು'** ಎಂತಲೂ ಕರೆಯುತ್ತಾರೆ. ಈ ಕಾಲದಲ್ಲಿ ರಾಜ್ಯದ ವಾರ್ಷಿಕ ಒಟ್ಟು ಮಳೆಯಲ್ಲಿ ಸುಮಾರು ಶೇಕಡ 7 ರಷ್ಟು ಮಳೆ ಬೀಳುತ್ತದೆ.

**2. ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮುಂಗಾರು ಮಳೆಗಾಲ** : ಇದನ್ನು 'ನೈಋತ್ಯ ಮಾನ್ಸೂನ್ ಮಾರುತಗಳ ಕಾಲ' ಎಂತಲೂ ಕರೆಯುತ್ತಾರೆ. ಅರಬ್ಬೀ ಸಮುದ್ರದ ಮೇಲಿಂದ ಬೀಸುವ ತೇವಾಂಶಭರಿತ ಮಾರುತಗಳನ್ನು ಪಶ್ಚಿಮ ಘಟ್ಟಗಳು ತಡೆದು ಅಧಿಕ ಮಳೆ ಸುರಿಸುತ್ತವೆ. ಪಶ್ಚಿಮ ಘಟ್ಟಗಳ ಪೂರ್ವದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಪೂರ್ವದ ಮೈದಾನವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ. ಶಿವಮೊಗ್ಗ ಜಿಲ್ಲೆಯ ಆಗುಂಬೆ ಕರ್ನಾಟಕದಲ್ಲಿಯೇ ಅಧಿಕ ಮಳೆ ಬೀಳುವ ಸ್ಥಳವಾಗಿದೆ. ಇದನ್ನು ದಕ್ಷಿಣ ಭಾರತದ ಚಿರಾಪುಂಜಿ ಎನ್ನುವರು. ಭಾಗಮಂಡಲ ಮತ್ತು ಹುಲಿಕಲ್‌ಗಳು ಇತರ ಅಧಿಕ ಮಳೆ ಪಡೆಯುವ ಸ್ಥಳಗಳಾಗಿವೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಕರ್ನಾಟಕದಲ್ಲಿಯೇ ಅತಿ ಕಡಿಮೆ ಮಳೆ ಬೀಳುವ ಸ್ಥಳ. ಈ ಅವಧಿಯಲ್ಲಿ ರಾಜ್ಯಾದ್ಯಂತ ಉಷ್ಣಾಂಶ ಹೆಚ್ಚು, ಜೊತೆಗೆ ತೇವಾಂಶವೂ ಹೆಚ್ಚಾಗಿರುತ್ತದೆ. ಮೋಡ ಕವಿದ ಪರಿಸ್ಥಿತಿ ಕಂಡುಬರುವುದು. ಈ ಋತುಮಾನದಲ್ಲಿ ರಾಜ್ಯದ ವಾರ್ಷಿಕ ಒಟ್ಟು ಮಳೆಯಲ್ಲಿ ಸುಮಾರು ಶೇಕಡ 80 ರಷ್ಟು ಮಳೆಯಾಗುತ್ತದೆ. ರಾಜ್ಯದ ಮುಂಗಾರು ಬೆಳೆಗಳ ಬೇಸಾಯಕ್ಕೆ ಈ ಕಾಲ ನೆರವಾಗುವುದು.




NOT TO BE REPUBLISHED

**3. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ** : ಇದನ್ನು 'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ' ಎಂತಲೂ ಕರೆಯುತ್ತಾರೆ. ಉತ್ತರ ಭಾರತದಲ್ಲಿ ಉಷ್ಣಾಂಶವು ಕಡಿಮೆಯಾಗಿ ಒತ್ತಡ ಹೆಚ್ಚಾಗುವುದರಿಂದ ನೈಋತ್ಯ ಮಾನ್ಸೂನ್ ಮಾರುತಗಳು ಈಶಾನ್ಯದಿಂದ ನೈಋತ್ಯಕ್ಕೆ

ಬೀಸುತ್ತ ನಿರ್ಗಮಿಸುತ್ತವೆ. ಭೂಭಾಗದಿಂದ ಬೀಸುವ ಈ ಮಾರುತಗಳು ಮಳೆ ತರುವುದಿಲ್ಲ. ಆದರೆ ಬಂಗಾಳ ಕೊಲ್ಲಿಯಿಂದ ಬೀಸುವಾಗ ದಕ್ಷಿಣ ಮೈದಾನದ ಜಿಲ್ಲೆಗಳಿಗೆ ಸ್ವಲ್ಪ ಮಳೆ ಬೀಳುತ್ತದೆ. ಬಂಗಾಳ ಕೊಲ್ಲಿಯಲ್ಲಾಗುವ ಚಂಡಮಾರುತಗಳ ಪ್ರಭಾವದಿಂದಲೂ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಮಳೆಯಾಗುತ್ತದೆ. ಈ ಋತುಮಾನದಲ್ಲಿ ರಾಜ್ಯದ ವಾರ್ಷಿಕ ಒಟ್ಟು ಮಳೆಯಲ್ಲಿ ಸುಮಾರು ಶೇ. 12 ರಷ್ಟು ಮಳೆಯಾಗುತ್ತದೆ. ಈ ಅವಧಿಯಲ್ಲಿ ಹವಾಮಾನದ ಸ್ಥಿತಿಯು ಅನಿಶ್ಚಿತವಾಗಿರುತ್ತದೆ.

**4. ಚಳಿಗಾಲ :** ಈ ಕಾಲದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ, ಮಳೆಯೂ ಕಡಿಮೆ ಹಾಗೂ ತಿಳಿಯಾದ ಆಕಾಶವುಳ್ಳ ಹವಾಗುಣವಿರುತ್ತದೆ. ಸರಾಸರಿ ಉಷ್ಣಾಂಶ $25^0$ ರಿಂದ $27^0$ ಸೆಲ್ಸಿಯಸ್. ಜನವರಿ ಅತಿ ಕಡಿಮೆ ಉಷ್ಣಾಂಶ ದಾಖಲಾಗುವ ತಿಂಗಳು. ಇದನ್ನು 'ಕರ್ನಾಟಕದ ಪ್ರವಾಸ ಮಾಸ' ಎನ್ನುವರು. ಕರ್ನಾಟಕದಲ್ಲಿ ಬೀದರ್ ಅತಿ ಕಡಿಮೆ ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ. ಉತ್ತರದ ಜಿಲ್ಲೆಗಳಲ್ಲಿ ಕಡಿಮೆ ಉಷ್ಣಾಂಶವಿರುತ್ತದೆ. ಉದಾ : ವಿಜಯಪುರ, ಕಲಬುರಗಿ ಮತ್ತು ಬೀದರ್. ಚಳಿಗಾಲದಲ್ಲಿ ಮಳೆಯ ಹಂಚಿಕೆ ಅತಿ ಕಡಿಮೆ. ಅಂದರೆ ರಾಜ್ಯದ ವಾರ್ಷಿಕ ಒಟ್ಟು ಮಳೆಯಲ್ಲಿ ಶೇ.1 ರಷ್ಟು ಮಳೆಯಾಗುತ್ತದೆ. ಒಮ್ಮೊಮ್ಮೆ ಪ್ರಾತಃಕಾಲದಲ್ಲಿ ಕಾವಳ ಕಂಡುಬರುವುದು.

> **ಚಟುವಟಿಕೆ**
>
> ಬೇಸಿಗೆಕಾಲ, ಚಳಿಗಾಲ ಮತ್ತು ಮಳೆಗಾಲದಲ್ಲಿ ನೀವು ಇಷ್ಟಪಡುವ ಕಾಲ ಯಾವುದು ? ಏಕೆ ಎಂಬ ಬಗ್ಗೆ ಕಾರಣಕೊಡಿ.

**ಮಳೆಯ ಹಂಚಿಕೆ :** ಮಲೆನಾಡು ಮತ್ತು ಕರಾವಳಿ ಭಾಗಗಳು ಅಧಿಕ ಮಳೆ ಪಡೆಯುವ ಪ್ರದೇಶಗಳಾಗಿವೆ. ಪೂರ್ವಭಾಗದ ಮೈದಾನಗಳು ಕಡಿಮೆ ಮಳೆ ಪಡೆಯುವ ಪ್ರದೇಶಗಳು. ಅಕಾಲಿಕ ಮತ್ತು ಅಸಮಾನ ಮಳೆಯ ಹಂಚಿಕೆಯಿಂದ ರಾಜ್ಯದಲ್ಲಿ ಆಗಾಗ್ಗೆ ಬರಗಾಲ ಮತ್ತು ಪ್ರವಾಹಗಳು ಸಂಭವಿಸುತ್ತವೆ.

## ಕರ್ನಾಟಕದ ಮಣ್ಣುಗಳು

ಭೂಮಿಯ ಮೇಲಿನ ತೆಳುವಾದ ಪದರವೇ ಮಣ್ಣು. ಕೃಷಿ ಅಭಿವೃದ್ಧಿಗೆ ಫಲವತ್ತಾದ ಮಣ್ಣು ಅತ್ಯಗತ್ಯ. ಕರ್ನಾಟಕದಲ್ಲಿ ವಿವಿಧ ಪ್ರಕಾರದ ಮಣ್ಣುಗಳಿವೆ. ಅವುಗಳನ್ನು ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿದೆ. 1) ಕೆಂಪು ಮಣ್ಣು 2) ಕಪ್ಪು ಮಣ್ಣು 3) ಜಂಬಿಟ್ಟಿಗೆ ಮಣ್ಣು 4) ಕರಾವಳಿಯ ಮೆಕ್ಕಲು ಮಣ್ಣು.

**1. ಕೆಂಪು ಮಣ್ಣು :** ಇದು ಗ್ರಾನೈಟ್, ನೀಸ್ ಶಿಲಾದ್ರವ್ಯಗಳಿಂದ ರೂಪುಗೊಂಡಿದ್ದು, ಕಬ್ಬಿಣದ ಆಕ್ಸೈಡ್ ಇರುವುದರಿಂದ ಈ ಮಣ್ಣು ಕೆಂಪಾಗಿರುತ್ತದೆ. ಈ ಮಣ್ಣಿನಲ್ಲಿ ಹೆಚ್ಚು ಸುಣ್ಣ ಮತ್ತು ಉಪ್ಪಿನಾಂಶವಿದ್ದು, ಸಾವಯವ ಅಂಶ ಕಡಿಮೆ. ಹೆಚ್ಚು ಹಗುರ, ತೆಳು ಪದರವುಳ್ಳ ಈ ಮಣ್ಣು ಅಷ್ಟೊಂದು ಫಲವತ್ತಾದುದಲ್ಲ. ತೇವಾಂಶ ಉಳಿಸಿಕೊಳ್ಳುವ ಸಾಮರ್ಥ್ಯ ಕಡಿಮೆ. ಈ ಮಣ್ಣಿನಲ್ಲಿ ತೃಣಧಾನ್ಯಗಳಾದ ರಾಗಿ, ನವಣೆ, ಸಜ್ಜೆ, ಜೋಳ, ಹಾರಕ ಹಾಗೂ ತಂಬಾಕು, ದ್ವಿದಳ ಧಾನ್ಯಗಳು, ನೆಲಗಡಲೆಗಳಂತಹ ಮಳೆ ಆಶ್ರಿತ ಬೆಳೆಗಳನ್ನು ಬೆಳೆಯಬಹುದು. ನೀರಾವರಿ ಸೌಲಭ್ಯವಿರುವ ಕಡೆ ಭತ್ತ, ಕಬ್ಬು, ಆಲೂಗಡ್ಡೆ, ತರಕಾರಿಗಳು, ಬಾಳೆ, ತೆಂಗು, ಅಡಿಕೆ ಇತ್ಯಾದಿ ಬೆಳೆಯಲು ಯೋಗ್ಯವಾಗಿದೆ. ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.

**2. ಕಪ್ಪು ಮಣ್ಣು :** ಇದು ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದಾಗಿದ್ದು, ಇದರಲ್ಲಿ ಹೆಚ್ಚು ಮೆಗ್ನೀಷಿಯಂ, ಅಲ್ಯೂಮಿನಿಯಂ ಮತ್ತು ಕಬ್ಬಿಣಗಳ ಆಕ್ಸೈಡ್‌ಗಳಿರುತ್ತವೆ. ಹೀಗಾಗಿ ಇದರ ಬಣ್ಣ ಕಪ್ಪು. ಇದನ್ನು 'ಎರೆಮಣ್ಣು' ಅಥವಾ 'ಕಪ್ಪು ಹತ್ತಿ ಮಣ್ಣು' (Black cotton soil) ಎಂದೂ ಕರೆಯುವರು. ಇದಕ್ಕೆ ಹೆಚ್ಚು ದಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿದೆ. ಈ ಮಣ್ಣಿನಲ್ಲಿ ಹತ್ತಿ, ಜೋಳ, ಸೂರ್ಯಕಾಂತಿ,

NOT TO BE REPUBLISHED ©KTBS

ಮೆಣಸಿನಕಾಯಿ, ಮೆಕ್ಕೆಜೋಳ, ಬೇಳೆಕಾಳು, ಕಬ್ಬು, ಈರುಳ್ಳಿ ಮತ್ತು ಭತ್ತವನ್ನು ಬೆಳೆಯಲಾಗುತ್ತದೆ. ಈ ಮಣ್ಣು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಧಾರವಾಡ, ಗದಗ, ಬಳ್ಳಾರಿ, ಕೊಪ್ಪಳ, ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಪ್ಪು ಮಣ್ಣಿನ ಹಂಚಿಕೆಯಾಗಿದೆ.




**3. ಜಂಬಿಟ್ಟಿಗೆ ಮಣ್ಣು :** ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಭಾಗಗಳಲ್ಲಿ ಈ ವಿಧದ ಮಣ್ಣು ಕಂಡುಬರುತ್ತದೆ. ನೀರಿನಲ್ಲಿ ಕರಗುವ ಸುಣ್ಣ ಮತ್ತು ಸಿಲಿಕೇಟ್‌ಗಳು ಮಳೆ ನೀರಿನಲ್ಲಿ ಕರಗಿ ತಳದ ಮಣ್ಣಿನ ಸ್ತರಗಳಿಗೆ ಸಾಗಿಸಲ್ಪಡುತ್ತವೆ. ಕರಗದಂತಹ ಕಬ್ಬಿಣ ಮತ್ತು ಅಲ್ಯೂಮಿನಿಯಂಗಳು ಮೇಲ್ಪದರದಲ್ಲಿ ಉಳಿಯುತ್ತವೆ. ಇದು ಮಳೆಗಾಲದಲ್ಲಿ ಮೃದುವಾಗಿ, ಬೇಸಿಗೆಯಲ್ಲಿ ಒಣಗಿ ಗಟ್ಟಿಯಾಗಿ ಲ್ಯಾಟರೈಟ್ ಶಿಲೆಯಾಗುತ್ತದೆ. ಅದನ್ನು ಕಟ್ಟಡಗಳ ನಿರ್ಮಾಣಕ್ಕೆ ಉಪಯೋಗಿಸಲಾಗುವುದು. ಈ ಮಣ್ಣಿನಲ್ಲಿ ಗೋಡಂಬಿ, ಕಾಫಿ, ಚಹ, ಏಲಕ್ಕಿ, ಮೆಣಸು, ರಬ್ಬರ್, ತೆಂಗು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಹಂಚಿಕೆಯಾಗಿದೆ.

**4. ಕರಾವಳಿಯ ಮೆಕ್ಕಲು ಮಣ್ಣು :** ನದಿ, ಸಮುದ್ರದ ಅಲೆಗಳಿಂದ ಸಾಗಿಸಲ್ಪಟ್ಟ ಮಣ್ಣು ಸಮುದ್ರ ತೀರದಲ್ಲಿ ಸಂಗ್ರಹವಾಗಿ ನಿರ್ಮಾಣವಾಗಿದೆ. ಹೀಗಾಗಿ ರಾಜ್ಯದ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಈ ಮಣ್ಣು ಕಂಡುಬರುತ್ತದೆ. ಇದರಲ್ಲಿ ಮರಳು ಮತ್ತು ಜೇಡಿ ಮಿಶ್ರಣವಾಗಿರುವುದರ ಜೊತೆಗೆ ಕೊಳೆತ ಜೈವಿಕಾಂಶಗಳು ಸಮೃದ್ಧವಾಗಿರುತ್ತವೆ. ಭತ್ತ, ಗೋಡಂಬಿ, ತೆಂಗು, ಅಡಿಕೆ, ಬಾಳೆ ಮುಂತಾದ ಬೆಳೆಗಳ ಸಾಗುವಳಿಗೆ ಇದು ಸೂಕ್ತ.

@KTBS NOT TO BE REPUBLISHED

## ಸ್ವಾಭಾವಿಕ ಸಸ್ಯವರ್ಗ

ಪ್ರಕೃತಿದತ್ತವಾಗಿ ಬೆಳೆಯುವ ವಿವಿಧ ಸಸ್ಯ ಸಮುದಾಯವನ್ನು 'ಸ್ವಾಭಾವಿಕ ಸಸ್ಯವರ್ಗ' ಎನ್ನುವರು. ಕರ್ನಾಟಕವು ವೈವಿಧ್ಯಮಯವಾದ ಮತ್ತು ಸಮೃದ್ಧ ಸಸ್ಯ ಸಂಪನ್ಮೂಲವನ್ನು ಹೊಂದಿದೆ. ಪರಿಸರ ಸಮತೋಲನ ಕಾಪಾಡುವುದರಲ್ಲಿ ಸಸ್ಯವರ್ಗವು ಪ್ರಮುಖ ಪಾತ್ರವಹಿಸುತ್ತದೆ. ಸಸ್ಯವರ್ಗವು ಮರಮುಟ್ಟು, ಕೈಗಾರಿಕೆಗಳಿಗೆ ಕಚ್ಚಾ ವಸ್ತು, ಉರುವಲು, ಗಿಡಮೂಲಿಕೆಗಳು, ಜೇನು, ಬಿದಿರು, ಬೆತ್ತ ಮುಂತಾದವುಗಳನ್ನು

ಒದಗಿಸುತ್ತದೆ. ಈ ಕಾಡುಗಳು ಪ್ರಾಣಿ–ಪಕ್ಷಿಗಳ ವಾಸಸ್ಥಾನವಾಗಿದ್ದು ಆನೆ, ಹುಲಿ, ಸಿಂಹ, ಚಿರತೆ, ಕಾಡುಕೋಣ, ಜಿಂಕೆ, ನವಿಲು ಮುಂತಾದ ಪ್ರಾಣಿ–ಪಕ್ಷಿಗಳು ಕರ್ನಾಟಕದ ಅರಣ್ಯಗಳಲ್ಲಿ ವಾಸವಾಗಿವೆ. ಮನರಂಜನಾ ಮತ್ತು ಪ್ರವಾಸಿಕೇಂದ್ರಗಳನ್ನು ಸೃಷ್ಟಿಸುತ್ತವೆ. ಪರಿಸರ ಮಾಲಿನ್ಯವನ್ನು ನಿಯಂತ್ರಿಸುತ್ತವೆ. ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಶ್ರೀಗಂಧದ ಮರಗಳು ಬೆಳೆಯುತ್ತವೆ. ಇದರಿಂದ ಸುಗಂಧ ದ್ರವ್ಯ, ಕುಸುರಿ ಕೆಲಸದ ಕುಶಲ ವಸ್ತುಗಳು, ಸಾಬೂನು, ಔಷಧಿಗಳನ್ನು ತಯಾರಿಸಲಾಗುವುದು. ಇವು ವಿಶ್ವವಿಖ್ಯಾತವಾಗಿದ್ದು, ದೇಶೀಯ ಅಪಾರವಾದ ಬೇಡಿಕೆ ಪೂರೈಸುವುದಲ್ಲದೆ ವಿದೇಶಗಳಿಗೂ ರಫ್ತು ಮಾಡಲಾಗುತ್ತದೆ. ಆದ್ದರಿಂದ ಕರ್ನಾಟಕವು 'ಶ್ರೀಗಂಧದ ನಾಡು' ಎಂದೇ ಪ್ರಸಿದ್ಧಿ ಪಡೆದಿದೆ.

### ಸಸ್ಯವರ್ಗದ ವಿಧಗಳು

ಮಳೆಯ ಪ್ರಮಾಣ, ಭೂಸ್ವರೂಪ ಹಾಗೂ ಮಣ್ಣಿನ ಲಕ್ಷಣಗಳನ್ನಾಧರಿಸಿ ಕರ್ನಾಟಕದ ಸ್ವಾಭಾವಿಕ ಸಸ್ಯವರ್ಗವನ್ನು ವಿಂಗಡಿಸಲಾಗಿದೆ. ಅವುಗಳೆಂದರೆ ; 1) ನಿತ್ಯ ಹರಿದ್ವರ್ಣದ ಕಾಡುಗಳು 2) ಎಲೆ ಉದುರಿಸುವ ಸಸ್ಯವರ್ಗ 3) ಮಿಶ್ರ ಬಗೆಯ ಕಾಡುಗಳು 4) ಕುರುಚಲು ಸಸ್ಯವರ್ಗ ಮತ್ತು ಹುಲ್ಲುಗಾವಲು.




**1. ನಿತ್ಯಹರಿದ್ವರ್ಣದ ಕಾಡುಗಳು :** ಸುಮಾರು 250 ಸೆಂ.ಮೀ. ಗಳಿಗೂ ಅಧಿಕ ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಈ ಕಾಡುಗಳು ಬೆಳೆಯುತ್ತವೆ. ಅಧಿಕ ಮಳೆ ಮತ್ತು ಅಧಿಕ ಉಷ್ಣಾಂಶಗಳಿಂದ ಇಲ್ಲಿ ಮರಗಳು ಎತ್ತರವಾಗಿ ಹಾಗೂ ದಟ್ಟವಾಗಿ ಬೆಳೆಯುತ್ತವೆ. ಈ ಕಾಡುಗಳು ದುರ್ಗಮವಾಗಿದ್ದು, ಕೆಲವು ಕಡೆ ಸೂರ್ಯನ ಕಿರಣಗಳು ನೆಲಕ್ಕೆ ತಲುಪುವುದಿಲ್ಲ. ಇಲ್ಲಿ ಪ್ರಮುಖವಾಗಿ ಬೀಟೆ, ತೇಗ, ಮತ್ತಿ, ನಂದಿ, ದೂಪ, ಹೊನ್ನೆ, ಹೆಬ್ಬಲಸು ಮುಂತಾದ ಎತ್ತರದ ಮರಗಳು ಬೆಳೆಯುತ್ತವೆ. ಮರಗಳ ಅಡಿಯಲ್ಲಿ ದಟ್ಟ ಪೊದೆ ಸಸ್ಯಗಳು ಬೆಳೆಯುತ್ತವೆ. ಅನೇಕ ರೀತಿಯ ಸಾಂಬಾರ ಪದಾರ್ಥಗಳು, ಲವಂಗ, ಏಲಕ್ಕಿ, ದಾಲ್ಚಿನ್ನಿ, ಔಷಧಿ ಸಸ್ಯಗಳು ಹೇರಳವಾಗಿ ಬೆಳೆಯುತ್ತವೆ. ಇಂತಹ ಕಾಡುಗಳು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಂಡುಬರುತ್ತವೆ.

**2. ಎಲೆ ಉದುರಿಸುವ ಸಸ್ಯವರ್ಗ :** ಚಳಿಗಾಲದ ತರುವಾಯ ತೇವಾಂಶದ ಕೊರತೆಯಿಂದಾಗಿ ಮರಗಳ ಎಲೆಗಳು ಉದುರುತ್ತವೆ ಮತ್ತೆ ವಸಂತ ಋತುವಿನಲ್ಲಿ ಚಿಗುರುತ್ತವೆ. ಇವುಗಳನ್ನು 'ಎಲೆ ಉದುರಿಸುವ ಸಸ್ಯವರ್ಗ' ಎನ್ನುವರು. ವಾರ್ಷಿಕ 60–120 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ

© KTBS
NOT TO BE REPUBLISHED

ಇಂತಹ ಸಸ್ಯವರ್ಗವಿದೆ. ಇಂತಹ ಕಾಡುಗಳು ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳ ಪೂರ್ವಭಾಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರದ ದಕ್ಷಿಣ ಭಾಗಗಳು, ಮಂಡ್ಯ, ಬೆಂಗಳೂರು ದಕ್ಷಿಣ (ರಾಮನಗರ) ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ಬೇವು, ಮಾವು, ಹಲಸು, ಮುತ್ತುಗ, ಬಾಗೆ, ಆಲ, ಶ್ರೀಗಂಧ ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಇವು ದಟ್ಟವಾಗಿ ಬೆಳೆಯುವುದಿಲ್ಲ.

**3. ಮಿಶ್ರ ಬಗೆಯ ಕಾಡುಗಳು :** ನಿತ್ಯಹರಿದ್ವರ್ಣ ಮತ್ತು ಅಗಲ ಎಲೆಗಳನ್ನುಳ್ಳ ಎಲೆ ಉದುರಿಸುವ ಪ್ರಕಾರದ ಮರಗಳು ಬೆಳೆಯುವ ಸಸ್ಯವರ್ಗವೇ ಮಿಶ್ರ ಬಗೆಯ ಕಾಡುಗಳು. ವಾರ್ಷಿಕ 120–150 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಇಂತಹ ಸಸ್ಯವರ್ಗ ಕಂಡುಬರುತ್ತದೆ. ಇಂತಹ ಕಾಡುಗಳು ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಕೆಲವು ಭಾಗಗಳು, ಕೊಡಗಿನ ಪೂರ್ವಭಾಗ ಹಾಗೂ ಚಿಕ್ಕಮಗಳೂರು, ಹಾಸನ ಮತ್ತು ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ನಂದಿ, ದಿಂಡಗ, ಶ್ರೀಗಂಧ, ಹಲಸು ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಈ ಮರಗಳು ವಾಣಿಜ್ಯ ಮೌಲ್ಯವನ್ನು ಹೊಂದಿದೆ.

**4. ಕುರುಚಲು ಸಸ್ಯವರ್ಗ ಮತ್ತು ಹುಲ್ಲುಗಾವಲು :** ಕರ್ನಾಟಕದಲ್ಲಿ 60 ಸೆಂ.ಮೀ.ಗಿಂತ ಕಡಿಮೆ ವಾರ್ಷಿಕ ಮಳೆ ಬೀಳುವ ಪ್ರದೇಶಗಳಲ್ಲಿ ಇಂತಹ ಸಸ್ಯವರ್ಗ ಹಂಚಿಕೆಯಾಗಿದೆ. ಮಳೆಯ ಕೊರತೆ ಮತ್ತು ಒಣಹವೆಯಿಂದಾಗಿ ಕುರುಚಲು ಗಿಡ ಮತ್ತು ಮುಳ್ಳಿನ ಗಿಡಗಳು ಬೆಳೆಯುತ್ತವೆ. ಉದಾ : ಕಳ್ಳಿ, ಕತ್ತಾಳಿ, ಕರಿಜಾಲಿ, ಬೇಲ, ಈಚಲು, ಹಂಚಿ ಮತ್ತು ಕುಂತಿ ಹುಲ್ಲು ಇತ್ಯಾದಿ. ಅಲ್ಲಲ್ಲಿ ಆಲ, ಬೇವು, ಅರಳಿ, ಮುತ್ತುಗದಂತಹ ಮರಗಳು ಬೆಳೆಯುತ್ತವೆ. ಇಂತಹ ಸಸ್ಯವರ್ಗವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಬಳ್ಳಾರಿ, ಚಿತ್ರದುರ್ಗ ಇತ್ಯಾದಿ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ.

ಕರಾವಳಿಯಂಚಿನಲ್ಲಿರುವ ನದಿ ಮುಖಜಭೂಮಿ, ಅಳಿವೆಗಳು ಹಾಗೂ ಮರಳು ದಂಡೆಗಳ ಭಾಗಗಳಲ್ಲಿ ಬಿಳಿಲುಗಳಿಂದ ಕೂಡಿರುವ ಸಸ್ಯಗಳಿವೆ. ಇವು ಉಪ್ಪು ನೀರಿನಲ್ಲಿ ಬೆಳೆಯುವ ವಿಶಿಷ್ಟವಾದ ಸಾಮರ್ಥ್ಯವನ್ನು ಹೊಂದಿವೆ. ಇದನ್ನೇ 'ಮ್ಯಾಂಗ್ರೋವ್ ಸಸ್ಯ'ಗಳೆನ್ನುವರು. ಕರ್ನಾಟಕದಲ್ಲಿ ಇವುಗಳ ಹಂಚಿಕೆ ಅತ್ಯಲ್ಪ.

ಸುಮಾರು 1400 ಮೀ. ಗಿಂತ ಹೆಚ್ಚು ಎತ್ತರವುಳ್ಳ ಭಾಗದಲ್ಲಿ ತಂಪಾದ ವಾಯುಗುಣವಿರುವ ಕುದುರೆಮುಖ, ಬಾಬಾಬುಡನ್‌ಗಿರಿ (ಇನಾಮ್ ದತ್ತಾತ್ರೇಯ ಪೀಠ), ಬಿಳಿಗಿರಿರಂಗನಬೆಟ್ಟ, ಕೊಡಗಿನ ಬ್ರಹ್ಮಗಿರಿ ಸರಣಿಗಳ ಇಳಿಜಾರುಗಳು ಹುಲ್ಲುಗಾವಲಿನಿಂದ ಕೂಡಿವೆ. ಇವುಗಳ ತಗ್ಗಾದ ಕಣಿವೆಗಳು ಝರಿ, ತೊರೆಗಳಿಂದ ಕೂಡಿದ ಭಾಗಗಳಲ್ಲಿ ವಿಶಿಷ್ಟವಾದ 'ಶೋಲಾ ಕಾಡುಗಳು' ಬೆಳೆಯುತ್ತವೆ.

**ನಿಮಗಿದು ತಿಳಿದಿರಲಿ :**

- ಬೆಂಗಳೂರು ಸಮೀಪ ರಾಮೋಹಳ್ಳಿಯಲ್ಲಿ ಅತಿದೊಡ್ಡ ಆಲದ ಮರವಿದೆ.
- ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಟಿ. ವೆಂಕಟಾಪುರದ ಬಳಿ ಅತಿದೊಡ್ಡ ಬೇವಿನ ಮರವಿದೆ.
- ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನಲ್ಲಿ ಬೃಹತ್ ಹುಣಸೆ ಮರವಿದೆ.

**ಅರಣ್ಯಗಳ ಹಂಚಿಕೆ**

ಎಲ್ಲಾ ವಿಧದ ಅರಣ್ಯಗಳು ಒಳಗೊಂಡಂತೆ, ಕರ್ನಾಟಕದಲ್ಲಿ ದಾಖಲಾದ ಅರಣ್ಯ ಪ್ರದೇಶ 40649.30 ಚ.ಕಿ.ಮೀ.ಗಳು. ಇದು ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಶೇ.21.19 ಭಾಗದಷ್ಟಾಯಿತು. ಭಾರತದಲ್ಲಿ ಸಮೃದ್ಧ ಅರಣ್ಯಗಳನ್ನುಳ್ಳ ರಾಜ್ಯಗಳಲ್ಲಿ ಕರ್ನಾಟಕವು ಏಳನೆಯ ಸ್ಥಾನದಲ್ಲಿದೆ. ಉತ್ತರ ಕನ್ನಡ ಹೆಚ್ಚು ಅರಣ್ಯ ಪ್ರದೇಶವನ್ನೊಳಗೊಂಡ ಜಿಲ್ಲೆ. ತರುವಾಯ ಶಿವಮೊಗ್ಗ ಮತ್ತು ಚಾಮರಾಜನಗರ ಜಿಲ್ಲೆಗಳು ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿವೆ. ವಿಜಯಪುರ ಅತಿ ಕಡಿಮೆ ಅರಣ್ಯವುಳ್ಳ ಜಿಲ್ಲೆಯಾಗಿದೆ.

©KTBS NOT TO BE REPUBLISHED

## ಪ್ರಾಣಿ ಸಂಪತ್ತು




ಪ್ರಮುಖ ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಧಾಮಗಳು

ಸಸ್ಯರಾಶಿ ಮತ್ತು ವೃಕ್ಷರಾಶಿಗಳಷ್ಟೇ ವನ್ಯಜೀವಿ ಸಂಪತ್ತು ಸಹ ಕರ್ನಾಟಕ ರಾಜ್ಯದಲ್ಲಿದೆ. ಇದಕ್ಕೆ ಸಮೃದ್ಧ ಅರಣ್ಯ ಕ್ಷೇತ್ರವೇ ಪ್ರಮುಖ ಕಾರಣ. ಪ್ರಪಂಚದಲ್ಲಿ ಗುರುತಿಸಲ್ಪಟ್ಟ ಜೀವವೈವಿಧ್ಯ ಬಿಸಿ ತಾಣ (Hot spots) ಗಳಲ್ಲಿ ರಾಜ್ಯದ ಸಹ್ಯಾದ್ರಿ ಸರಣಿಯೂ ಸೇರಿದೆ. ಇದು ವಿಶ್ವ ಪಾರಂಪರಿಕ ಪ್ರದೇಶವೆಂದು ಘೋಷಿಸಲ್ಪಟ್ಟಿದೆ. ಭಾರತದ ಒಟ್ಟು ಆನೆಗಳಲ್ಲಿ ಶೇ.25 ಮತ್ತು ಹುಲಿಗಳಲ್ಲಿ ಶೇ.18 ಭಾಗ ನಮ್ಮ ಕರ್ನಾಟಕದಲ್ಲಿವೆ. ಅಲ್ಲದೆ ಚಿರತೆ, ಕಾಡುಹಂದಿ, ಕಾಡೆಮ್ಮೆ, ಕಡವೆ, ಜಿಂಕೆ, ಕರಡಿ, ಮುಳ್ಳು ಹಂದಿ ಮೊದಲಾದ ಪ್ರಾಣಿಗಳಿವೆ. ಜೊತೆಗೆ ವಿವಿಧ ಪ್ರಭೇದದ ಹಾವು ಮತ್ತು ವರ್ಣಮಯ ಪಕ್ಷಿಗಳೂ ಸಹ ಕಂಡುಬರುತ್ತವೆ.

ಪಶ್ಚಿಮ ಘಟ್ಟಗಳ ಮಧ್ಯಭಾಗವಾದ ಕರ್ನಾಟಕದ ಮಲೆನಾಡು ಭಾಗವು ಮಾತ್ರ ತನ್ನ ನೈಸರ್ಗಿಕ ಜೈವಿಕ ಪಾರಂಪರಿಕತೆಯನ್ನು ಉಳಿಸಿಕೊಂಡಿದೆ. ಹೀಗಾಗಿ ಈ ಭಾಗದಲ್ಲಿ ವನ್ಯಪ್ರಾಣಿ ಸಂಕುಲ ಹೆಚ್ಚಾಗಿ ಕಂಡುಬರುವುದು. ವನ್ಯಪ್ರಾಣಿಗಳ ನೆಲೆಯನ್ನೊಳಗೊಂಡ ರಾಜ್ಯದ ಪ್ರಮುಖ ಅರಣ್ಯ ಪ್ರದೇಶಗಳೆಂದರೆ; ಉತ್ತರ ಕನ್ನಡವನ್ನೊಳಗೊಂಡ ಕರಾವಳಿಯ ಭಾಗ ಹಾಗೂ ಮತ್ತು ಬೆಳಗಾವಿಯ ಕೆಲವು ಭಾಗಗಳು ಸಹ್ಯಾದ್ರಿ–ಮಲೆನಾಡಿನ ಬೆಟ್ಟಗಳ ಸಾಲು. ಉದಾ: ಇನಾಮ್ ದತ್ತಾತ್ರೇಯ ಪೀಠ (ಬಾಬಬುಡನ್‌ಗಿರಿ) ಸರಣಿ, ಬಿಳಿಗಿರಿರಂಗನಬೆಟ್ಟ, ಮಲೈಮಹದೇಶ್ವರ ಬೆಟ್ಟ, ಹಿಮವದ್‌ಗೋಪಾಲಸ್ವಾಮಿ ಬೆಟ್ಟ ಮುಂತಾದವುಗಳನ್ನುಳ್ಳ ದಕ್ಷಿಣ ಮೈದಾನ. ರಾಣೆಬೆನ್ನೂರು ಉತ್ತರ ಮೈದಾನದ ಪ್ರಮುಖ ವನ್ಯಜೀವಿಧಾಮ. ಇಂದು ಕರ್ನಾಟಕದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು, 7 ಪಕ್ಷಿಧಾಮಗಳು ಮತ್ತು ಸುಮಾರು 36 ವನ್ಯಜೀವಿಧಾಮಗಳಿವೆ.

**ನಿಮಗಿದು ತಿಳಿದಿರಲಿ :**

- ಕರ್ನಾಟಕದಲ್ಲಿ ಐದು ಹುಲಿ ಸಂರಕ್ಷಣಾ ವಲಯಗಳಿವೆ (Tiger Reserves).
  ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನಬೆಟ್ಟ, ಭದ್ರಾ ಮತ್ತು ಕಾಳಿ ಹುಲಿ ಸಂರಕ್ಷಣಾ ವಲಯ.
- ಕರ್ನಾಟಕದ ಪ್ರಸಿದ್ಧ ಪಕ್ಷಿಧಾಮ – ರಂಗನತಿಟ್ಟು. ಇದು ರಾಮ್‌ಸಾರ್ ತಾಣಗಳ ಪಟ್ಟಿಗೆ ಸೇರಿದ ಕರ್ನಾಟಕದ ಮೊದಲ ತಾಣವಾಗಿದೆ.

@KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಬೇಸಿಗೆ ಕಾಲವು ................ ತಿಂಗಳಿನಿಂದ ................ ತಿಂಗಳವರೆಗೆ ಇರುತ್ತದೆ.
2. ಅತಿ ಹೆಚ್ಚು ಮಳೆ ಬೀಳುವ ಋತುಮಾನ ................ ಆಗಿದೆ.
3. ಉತ್ತರ ಕರ್ನಾಟಕದಲ್ಲಿ ................ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.
4. ಸದಾಹಸಿರಿನಿಂದ ಕೂಡಿರುವ ಅರಣ್ಯಗಳು ವಾರ್ಷಿಕ ................ ಸೆಂ.ಮೀ. ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿವೆ.
5. ಅತಿ ಹೆಚ್ಚು ಅರಣ್ಯ ಪ್ರದೇಶವು ................ ಜಿಲ್ಲೆಯಲ್ಲಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

6. ಕರ್ನಾಟಕದ ನಾಲ್ಕು ಋತುಮಾನಗಳಾವುವು ?
7. ಕರ್ನಾಟಕದಲ್ಲಿನ ಮಳೆಗಾಲವನ್ನು ಕುರಿತು ಬರೆಯಿರಿ.
8. ಕರ್ನಾಟಕದಲ್ಲಿನ ಮಣ್ಣಿನ ವಿಧಗಳನ್ನು ತಿಳಿಸಿ.
9. ಕರ್ನಾಟಕದ ವಿವಿಧ ಸ್ವಾಭಾವಿಕ ಸಸ್ಯವರ್ಗಗಳನ್ನು ತಿಳಿಸಿ.
10. ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?
11. ಕರ್ನಾಟಕದ ಅರಣ್ಯಗಳಲ್ಲಿರುವ ಪ್ರಮುಖ ವನ್ಯಪ್ರಾಣಿಗಳನ್ನು ಹೆಸರಿಸಿ.

**III. ಹೊಂದಿಸಿ ಬರೆಯಿರಿ.**

| | ಅ | ಆ |
|---|---|---|
| i. | ಆದಿಚುಂಚನಗಿರಿ | ಎ) ಪಕ್ಷಿಧಾಮ |
| ii. | ಮಂಡಗದ್ದೆ | ಬಿ) ರಾಷ್ಟ್ರೀಯ ಉದ್ಯಾನವನ |
| iii. | ನಾಗರಹೊಳೆ | ಸಿ) ಎಲೆ ಉದುರಿಸುವ ಕಾಡು |
| iv. | ಶ್ರೀಗಂಧದ ಮರ | ಡಿ) ನವಿಲುಧಾಮ |
| | | ಇ) ಕೆಂಪುಮಣ್ಣು |

**IV. ಚಟುವಟಿಕೆ.**

1. ಕರ್ನಾಟಕದಲ್ಲಿನ ವನ್ಯಜೀವಿಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಸಿದ್ಧಪಡಿಸಿ ಮತ್ತು ಪಕ್ಷಿಧಾಮಗಳು ಹಾಗೂ ವನ್ಯಜೀವಿಧಾಮಗಳನ್ನು ಪಟ್ಟಿಮಾಡಿ.

**V. ಯೋಜನೆ.**

1. ನಿಮ್ಮ ಜಿಲ್ಲೆಯಲ್ಲಿ ಕಂಡುಬರುವ ಸ್ವಾಭಾವಿಕ ಸಸ್ಯವರ್ಗಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸಿ ವಿವರ ಬರೆಯಿರಿ.

*****

©KTBS NOT TO BE REPUBLISHED

# ಅಧ್ಯಾಯ – 12

# ಕರ್ನಾಟಕದ ಜಲಸಂಪನ್ಮೂಲಗಳು

X5W1P1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದ ಪ್ರಮುಖ ನದಿಗಳು.
- ಕರ್ನಾಟಕದ ನೀರಾವರಿಯ ವಿಧಗಳು.
- ಜಲವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು.
- ಕರ್ನಾಟಕದ ಪ್ರಮುಖ ಅಣೆಕಟ್ಟುಗಳು.

## ಕರ್ನಾಟಕದ ನದಿಗಳು

ಜಲ ಸಂಪನ್ಮೂಲಗಳಲ್ಲಿ ನದಿಗಳಿಗೆ ಮಹತ್ವದ ಸ್ಥಾನವಿದೆ. ಕರ್ನಾಟಕದ ನದಿ ಜಾಲಗಳನ್ನು ಮುಖ್ಯವಾಗಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು.




**ನಿಮಗಿದು ತಿಳಿದಿರಲಿ :**

ಕಾವೇರಿ ನದಿಯು ತನ್ನ ಪಾತ್ರದಲ್ಲಿ ಮೂರು ಜಲಪಾತಗಳನ್ನು ನಿರ್ಮಿಸಿದೆ. ಅವುಗಳೆಂದರೆ : 1) ಚುಂಚನಕಟ್ಟೆ 2) ಗಗನಚುಕ್ಕಿ ಮತ್ತು ಭರಚುಕ್ಕಿ 3) ಹೊಗೇನ್‌ಕಲ್ ಹಾಗೂ ಮೂರು ದ್ವೀಪಗಳನ್ನು ನಿರ್ಮಿಸಿದೆ. ಅವುಗಳೆಂದರೆ 1) ಶ್ರೀರಂಗಪಟ್ಟಣ 2) ಶಿವನಸಮುದ್ರ 3) ಶ್ರೀರಂಗಂ

**ನಿಮಗಿದು ಗೊತ್ತೆ ?**

- ಕೂಡಲ ಸಂಗಮದಲ್ಲಿ ಮಲಪ್ರಭಾ ನದಿಯು ಕೃಷ್ಣಾ ನದಿಯನ್ನು ಸೇರುತ್ತದೆ.
- ಕೂಡಲಿ–ತುಂಗ ಮತ್ತು ಭದ್ರಾ ನದಿಗಳು ಸಂಧಿಸುವ ಸ್ಥಳ.
- ಕೃಷ್ಣರಾಜ ಸಾಗರದ ಬಳಿ ಹೇಮಾವತಿ ನದಿಯು ಕಾವೇರಿ ನದಿಯನ್ನು ಸೇರುತ್ತದೆ.

NOT TO BE REPUBLISHED @KTBS

> **ನಿಮಗಿದು ತಿಳಿದಿರಲಿ :**
>
> ಪೆನ್ನಾರ್ ನದಿಗೆ ಮತ್ತೊಂದು ಹೆಸರು ಪಿನಾಕಿನಿ.
>
> ತಮಿಳುನಾಡಿನಲ್ಲಿ ದಕ್ಷಿಣ ಪೆನ್ನಾರ್ ನದಿಯನ್ನು (ದಕ್ಷಿಣ ಪಿನಾಕಿನಿ) ಪೊನ್ನೈಯಾರ್ ಎಂದು ಕರೆಯುತ್ತಾರೆ.

**1. ಪೂರ್ವಾಭಿಮುಖವಾಗಿ ಹರಿಯುವ ನದಿಗಳು :** ಕೃಷ್ಣಾ, ಕಾವೇರಿ, ಪೆನ್ನಾರ್ ಮತ್ತು ಪಾಲಾರ್ ನದಿಗಳು ಪೂರ್ವಾಭಿಮುಖವಾಗಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುವ ಪ್ರಮುಖ ನದಿಗಳು.

ಕೃಷ್ಣಾ ನದಿ ದಕ್ಷಿಣ ಭಾರತದ ಎರಡನೇ ಮುಖ್ಯ ನದಿ. ಇದು ಮಹಾರಾಷ್ಟ್ರದ ಮಹಾಬಲೇಶ್ವರ ಎಂಬಲ್ಲಿ ಉಗಮ ಹೊಂದಿ 1392 ಕಿ.ಮೀ. ದೂರ ಪೂರ್ವದೆಡೆಗೆ ಹರಿದು ಬಂಗಾಳ ಕೊಲ್ಲಿ ಸೇರುತ್ತದೆ. ಆದರೆ ಇದು ಕರ್ನಾಟಕದಲ್ಲಿ 480 ಕಿ.ಮೀ. ದೂರ ಹರಿಯುವುದು. ಭೀಮ, ಕೊಯ್ನಾ, ತುಂಗಭದ್ರ, ಘಟಪ್ರಭ ಮತ್ತು ಮಲಪ್ರಭ ಇದರ ಉಪನದಿಗಳಾಗಿವೆ. ಕೃಷ್ಣಾ ನದಿ ಉತ್ತರ ಕರ್ನಾಟಕದಲ್ಲಿ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆಗೆ ಅನುಕೂಲಕರವಾಗಿದೆ.

ಕಾವೇರಿಯು ಕರ್ನಾಟಕದ ಅತಿ ಪ್ರಮುಖ ನದಿ. ದಕ್ಷಿಣ ಗಂಗೆ ಎಂದೇ ಪ್ರಸಿದ್ಧಿ. ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಉಗಮ ಹೊಂದಿ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಪೂರ್ವಾಭಿಮುಖವಾಗಿ 804 ಕಿ.ಮೀ. ದೂರ ಹರಿದು ಬಂಗಾಳ ಕೊಲ್ಲಿಗೆ ಸೇರುವುದು. ಕರ್ನಾಟಕದಲ್ಲಿ 380 ಕಿ.ಮೀ. ದೂರ ಹರಿಯುತ್ತದೆ. ಈ ನದಿಗೆ ಹಲವು ಉಪನದಿಗಳು ಸೇರುತ್ತವೆ. ಉದಾ : ಹೇಮಾವತಿ, ಹಾರಂಗಿ, ಲೋಕಪಾವನಿ, ಅರ್ಕಾವತಿ, ಶಿಂಷಾ, ಲಕ್ಷ್ಮಣತೀರ್ಥ, ಕಪಿಲೆ, ಸುವರ್ಣಾವತಿ ಮತ್ತು ಭವಾನಿ. ಕೃಷಿ, ವಿದ್ಯುತ್ ಉತ್ಪಾದನೆ, ಕುಡಿಯುವ ನೀರು ಪೂರೈಕೆಗೆ ಈ ನದಿಯು ಬಹು ಉಪಯುಕ್ತವಾಗಿದೆ.

ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ ಮತ್ತು ಪಾಲಾರ್ ನದಿಗಳು ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹರಿದು ಅನಂತರ ಆಂಧ್ರಪ್ರದೇಶ ಮತ್ತು ತಮಿಳುನಾಡನ್ನು ಪ್ರವೇಶಿಸುವವು.

**2. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು :** ಅನೇಕ ನದಿಗಳು ಮಲೆನಾಡಿನಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಉದಾ : ಶರಾವತಿ, ಕಾಳಿ, ಗಂಗಾವಳಿ (ಬೇಡ್ತಿ), ನೇತ್ರಾವತಿ, ವಾರಾಹಿ, ಅಘನಾಶಿನಿ ಇತ್ಯಾದಿ. ಇವು ಕಡಿದಾದ ಇಳಿಜಾರಿನಲ್ಲಿ ಹರಿಯುತ್ತಾ ಜಲಪಾತಗಳನ್ನು ಸೃಷ್ಟಿಸುತ್ತವೆ. ಜಲವಿದ್ಯುತ್ ಉತ್ಪಾದನೆಗೆ ನೆರವಾಗುತ್ತವೆ. ಶರಾವತಿ ನದಿ ನಿರ್ಮಿತ ಜೋಗ್ ಜಲಪಾತ ಜಗತ್ಪ್ರಸಿದ್ಧವಾದುದು. ಇದು ಭಾರತದ ಅತಿ ಎತ್ತರದ ಜಲಪಾತವಾಗಿದೆ (ಸುಮಾರು 253 ಮೀ.). ರಾಜ್ಯದ ಇತರೆ ಪ್ರಮುಖ ಜಲಪಾತಗಳೆಂದರೆ ಗೋಕಾಕ್ (ಘಟಪ್ರಭ), ಬಂಡಾಜೆ (ನೇತ್ರಾವತಿ), ಉಂಚಳ್ಳಿ (ಅಘನಾಶಿನಿ), ಛಾಯಾ ಭಗವತಿ (ದೋಣಿ ನದಿ), ಚುಂಚನಕಟ್ಟೆ, ಶಿಂಷಾ, ಗಗನಚುಕ್ಕಿ, ಭರಚುಕ್ಕಿ (ಕಾವೇರಿ), ಮಾಗೋಡು ಜಲಪಾತ (ಬೇಡ್ತಿ) ಇತ್ಯಾದಿ.

## ಕರ್ನಾಟಕದ ನೀರಾವರಿ

> **ನಿಮಗಿದು ತಿಳಿದಿರಲಿ :**
>
> **ಕರ್ನಾಟಕದ ಪ್ರಮುಖ ದೊಡ್ಡ ಕೆರೆಗಳು**
>
> ಮುದಗದಕೆರೆ (ಕಡೂರು), ತೊಣ್ಣೂರುಕೆರೆ (ಪಾಂಡವಪುರ), ಹೈರಿಗೆಕೆರೆ (ಹುಣಸೂರು), ರಾಮಸಮುದ್ರಕೆರೆ (ಚಿಕ್ಕಬಳ್ಳಾಪುರ), ಅಮಾನಿ ಬೈರಸಾಗರಕೆರೆ (ಗುಡಿಬಂಡೆ), ಕಳ್ಳಂಬೆಳ್ಳಕೆರೆ (ಶಿರಾ), ಬೈರಮಂಗಲಕೆರೆ (ಬಿಡದಿ) ಇತ್ಯಾದಿ.

ಕೃಷಿಗಾಗಿ ಕೃತಕವಾಗಿ ನೀರು ಪೂರೈಸುವುದೇ ನೀರಾವರಿ. ಅಕಾಲಿಕ ಮತ್ತು ಅಸಮಾನ ಮಳೆಯ ಹಂಚಿಕೆ ಹಾಗೂ ಕೃಷಿ ಪ್ರಗತಿಗಾಗಿ ನೀರಾವರಿ ಅತ್ಯಾವಶ್ಯಕ. ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ವಿವಿಧ ನೀರಾವರಿ ಮೂಲಗಳಿಂದ ವ್ಯವಸಾಯ ಮಾಡುವುದು ರೂಢಿಯಲ್ಲಿದೆ. ಪ್ರಮುಖ ನೀರಾವರಿ ಮೂಲಗಳೆಂದರೆ ಬಾವಿ, ಕಾಲುವೆ ಮತ್ತು ಕೆರೆ. ಹಿಂದೆ ಹಳ್ಳಿಗಳಲ್ಲಿ ಬಾವಿಗಳನ್ನು

@KTBS NOT TO BE REPUBLISHED

ನಿರ್ಮಿಸಿ ಅವುಗಳ ನೀರನ್ನು ನೀರಾವರಿಗೆ ಅನಂತರ ಬಳಸಲಾಗುತ್ತಿತ್ತು. ಕಾಲುವೆಗಳನ್ನು ನಿರ್ಮಿಸಿ ನದಿಗಳಿಂದ ನೀರನ್ನು ವ್ಯವಸಾಯಕ್ಕೆ ಬಳಸುವುದು ರೂಢಿಗೆ ಬಂದಿತು. ದೊಡ್ಡ ದೊಡ್ಡ ಕೆರೆಗಳು ಈಗಲೂ ಇವೆ. ಉದಾ : ದಾವಣಗೆರೆ ಜಿಲ್ಲೆಯ ಶಾಂತಿಸಾಗರ. ಹನ್ನೊಂದನೆಯ ಶತಮಾನದಲ್ಲಿ ತೋಡಿದ ಕಲಬುರಗಿ ಜಿಲ್ಲೆಯ ಬಾವಿಗಳು, ವಿಜಯನಗರದ ಅರಸರ ಕಾಲದ ತುಂಗಭದ್ರ ಕಾಲುವೆಗಳು, ಮೈಸೂರು ಅರಸರು ನಿರ್ಮಿಸಿದ ವಾಣಿವಿಲಾಸ ಸಾಗರ ಮತ್ತು ಕೃಷ್ಣರಾಜಸಾಗರ ಅಣೆಕಟ್ಟು ಮೊದಲಾದವು ಕರ್ನಾಟಕದ ನೀರಾವರಿ ಬೆಳವಣಿಗೆಯ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿವೆ. ಇಂದು ರಾಜ್ಯದಲ್ಲಿ ನದಿಗಳ ನೀರು ಮತ್ತು ಅಂತರ್ಜಲ ಸಂಪತ್ತು ಎರಡನ್ನೂ ನೀರಾವರಿಗೆ ಉಪಯೋಗಿಸಿ ಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಸಾಗುವಳಿ ಭೂಮಿಯ ಶೇ.41 ಭಾಗವು ನೀರಾವರಿ ಸೌಲಭ್ಯ ಹೊಂದಿದೆ. ಭಾರತದ ನೀರಾವರಿ ಕ್ಷೇತ್ರದಲ್ಲಿ ಕರ್ನಾಟಕದ ಸ್ಥಾನ 9ನೆಯದಾಗಿದೆ.




ನೀರಾವರಿ ಕ್ಷೇತ್ರದ ಶೇಕಡಾವಾರು ಪ್ರಮಾಣ

**ನಿಮಗಿದು ತಿಳಿದಿರಲಿ :**

ಕರ್ನಾಟಕದ ಮೊಟ್ಟಮೊದಲ ದೊಡ್ಡ ಜಲಾಶಯವಾದ ವಾಣಿವಿಲಾಸಸಾಗರವನ್ನು 1907 ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ನಿರ್ಮಿಸಲಾಯಿತು. ಇದನ್ನು 'ಮಾರಿಕಣಿವೆ ಜಲಾಶಯ' ಎಂದು ಸಹ ಕರೆಯುವರು.

ರಾಯಚೂರು ಜಿಲ್ಲೆಯು ರಾಜ್ಯದಲ್ಲೇ ಅತಿ ಹೆಚ್ಚು ಕಾಲುವೆ ನೀರಾವರಿ ಹೊಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಕೆರೆ ನೀರಾವರಿ ಪ್ರದೇಶವಿದೆ. ಬೆಳಗಾವಿ ಜಿಲ್ಲೆಯು ರಾಜ್ಯದಲ್ಲಿ ಹೆಚ್ಚು ಬಾವಿ ನೀರಾವರಿ ಸೌಲಭ್ಯವನ್ನು ಹೊಂದಿದೆ. ಇತ್ತೀಚೆಗೆ ಕೊಳವೆ ಬಾವಿಗಳ ಪ್ರಮಾಣ ಹೆಚ್ಚಾಗಿದೆ. ಜಿಲ್ಲಾವಾರು ನೀರಾವರಿ ಪ್ರದೇಶವನ್ನು ತೆಗೆದುಕೊಂಡರೆ ಬೆಳಗಾವಿ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಪ್ರತಿಯಾಗಿ ಕೊಡಗು ಜಿಲ್ಲೆ ಕೊನೆಯ ಸ್ಥಾನದಲ್ಲಿದೆ.

ರಾಜ್ಯದ ಪ್ರಮುಖ ಕಾಲುವೆ ನೀರಾವರಿ ಯೋಜನೆಗಳೆಂದರೆ, ಕೃಷ್ಣರಾಜಸಾಗರ, ತುಂಗಭದ್ರಾ ಹೇಮಾವತಿ, ಕಬಿನಿ, ಹಾರಂಗಿ, ವಾಣಿವಿಲಾಸ ಸಾಗರ (ಮಾರಿಕಣಿವೆ), ಕೃಷ್ಣಾ ಮೇಲ್ದಂಡೆ, ಆಲಮಟ್ಟಿ, ನಾರಾಯಣಪುರ, ಮಲಪ್ರಭಾ, ಕಾರಂಜಾ, ಬೆಣ್ಣೆತೊರೆ, ಹಿಪ್ಪರಗಿ ಬ್ಯಾರೇಜ್, ಭದ್ರಾ ಯೋಜನೆ ಮೊದಲಾದವು.

**ಜಲವಿದ್ಯುಚ್ಛಕ್ತಿ**

ಭಾರತದಲ್ಲಿ ಮೊಟ್ಟಮೊದಲಿಗೆ ಜಲವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ಯಶಸ್ಸು ಪಡೆದ ಹಿರಿಮೆ ಕರ್ನಾಟಕಕ್ಕೆ ಸಲ್ಲುತ್ತದೆ. ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳು ಲಭ್ಯವಿಲ್ಲದ ನಮ್ಮ ರಾಜ್ಯದಲ್ಲಿ ಜಲಶಕ್ತಿ ತಯಾರಿಕೆಗೆ ಅಪಾರವಾದ ಅವಕಾಶವಿದೆ. ಸರ್ವತ್ರ ಮತ್ತು ಹೆಚ್ಚು ಶಕ್ತಿ ಪೂರೈಸುವಂತಹ ಈ ಸಂಪತ್ತನ್ನು ಸಮೃದ್ಧವಾಗಿ ನೀಡುವ ನದಿ ಕಣಿವೆಗಳು ಕರ್ನಾಟಕದಲ್ಲಿವೆ. ಪೂರ್ವಕ್ಕೆ ಹರಿಯುವ ನದಿಗಳಿಗಿಂತ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ಜಲಶಕ್ತಿ ಸಾಮರ್ಥ್ಯ ಹೆಚ್ಚು.

ಕರ್ನಾಟಕದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರವು 1902ರಲ್ಲಿ ಶಿವನಸಮುದ್ರದ ಬಳಿ ಆರಂಭವಾಯಿತು. ಕೋಲಾರದ ಚಿನ್ನದ ಗಣಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಈ ವಿದ್ಯುದಾಗಾರವು ಆರಂಭವಾಯಿತು. ಇದು ಕಾವೇರಿ ನದಿಗೆ ನಿರ್ಮಿಸಿದ ಯೋಜನೆ. ಇದಕ್ಕೆ ಸಮೀಪದಲ್ಲೇ ರಾಜ್ಯದ ಎರಡನೆಯ ಜಲವಿದ್ಯುತ್ ಯೋಜನೆಯನ್ನು 1940ರಲ್ಲಿ ಕಾವೇರಿ ನದಿ ನೀರನ್ನು ಬಳಸಿಕೊಂಡು ಶಿಂಷಾ ಎಂಬಲ್ಲಿ ಸ್ಥಾಪಿಸಲಾಯಿತು. ಇದೇ ಶಿಂಷಾ ಜಲವಿದ್ಯುತ್ ಯೋಜನೆ.

© KTBS NOT TO BE REPUBLISHED

ಹೆಚ್ಚಾದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಶರಾವತಿ ನದಿಯ ಜೋಗ್ ಜಲಪಾತದ ಬಳಿ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆ (1947) ಸ್ಥಾಪನೆಯಾಯಿತು. ತರುವಾಯ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಇನ್ನೂ ಹಲವು ಜಲವಿದ್ಯುಚ್ಛಕ್ತಿ ಯೋಜನೆಗಳು ಅಭಿವೃದ್ಧಿಗೊಂಡವು. ಪರಿಣಾಮವಾಗಿ ಕರ್ನಾಟಕವು ಜಲವಿದ್ಯುತ್ ಉತ್ಪಾದನೆಯಲ್ಲಿ ಭಾರತದಲ್ಲಿಯೇ ಮುಂಚೂಣಿಯಲ್ಲಿದೆ.




©KTBS NOT TO BE REPUBLISHED

**ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ಯೋಜನೆಗಳು :** ಶಿವನಸಮುದ್ರ, ಶಿಂಷಾ (ಕಾವೇರಿ ನದಿ), ಶರಾವತಿ, ಲಿಂಗನಮಕ್ಕಿ, ಮಹಾತ್ಮ ಗಾಂಧಿ, ಗೇರುಸೊಪ್ಪ (ಶರಾವತಿ ನದಿ), ಸೂಪಾ, ನಾಗಝರಿ, ಕದ್ರಾ ಮತ್ತು ಕೊಡಸಳ್ಳಿ (ಕಾಳಿನದಿ), ವಾರಾಹಿ, (ವಾರಾಹಿ ನದಿ), ಮಾರಿಕಣಿವೆ (ವೇದಾವತಿ ನದಿ), ಭದ್ರಾ, ತುಂಗಭದ್ರ (ತುಂಗಭದ್ರಾ ನದಿ), ಘಟಪ್ರಭಾ (ಘಟಪ್ರಭಾ ನದಿ), ಆಲಮಟ್ಟಿ (ಕೃಷ್ಣಾ ನದಿ).

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಕಾವೇರಿ ನದಿಯು ಕೊಡಗು ಜಿಲ್ಲೆಯ ............... ಎಂಬಲ್ಲಿ ಉಗಮ ಹೊಂದುತ್ತದೆ.
2. ಪ್ರಸಿದ್ಧ ಜೋಗ್ ಜಲಪಾತ ............... ನದಿಯಿಂದ ಸೃಷ್ಟಿಯಾಗಿದೆ.
3. ಕರ್ನಾಟಕದಲ್ಲಿ ಅತಿ ಹೆಚ್ಚು ಕಾಲುವೆ ನೀರಾವರಿ ಹೊಂದಿರುವ ಜಿಲ್ಲೆ ...............

4. ಕರ್ನಾಟಕದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ................

5. ಆಲಮಟ್ಟಿ ಅಣೆಕಟ್ಟೆಯನ್ನು ................ ನದಿಗೆ ನಿರ್ಮಿಸಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

6. ಕರ್ನಾಟಕದ ಪ್ರಮುಖ ನದಿಗಳನ್ನು ಹೆಸರಿಸಿ.
7. ಕೃಷ್ಣಾನದಿಯನ್ನು ಕುರಿತು ಟಿಪ್ಪಣಿ ಬರೆಯಿರಿ.
8. ಕಾವೇರಿ ನದಿಯ ಉಪನದಿಗಳಾವುವು ?
9. ಕರ್ನಾಟಕದ ನೀರಾವರಿಯ ಮೂಲಗಳನ್ನು ತಿಳಿಸಿ.
10. ನಮ್ಮ ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.

**III. ಹೊಂದಿಸಿ ಬರೆಯಿರಿ.**

| | ಅ | | ಆ |
|---|---|---|---|
| i. | ಲಿಂಗನಮಕ್ಕಿ ಅಣ್ಣೆಕಟ್ಟು | ಎ) | ಘಟಪ್ರಭಾ ನದಿ |
| ii. | ಗಗನಚುಕ್ಕಿ, ಭರಚುಕ್ಕಿ ಜಲಪಾತ | ಬಿ) | ಬೇಡ್ತಿ ನದಿ |
| iii. | ವಾಣಿ ವಿಲಾಸ ಸಾಗರ | ಸಿ) | ಕಾಳಿ ನದಿ |
| iv. | ಗೋಕಾಕ್ ಜಲಪಾತ | ಡಿ) | ಕಾವೇರಿ ನದಿ |
| v. | ಮಾಗೋಡು ಜಲಪಾತ | ಇ) | ಶರಾವತಿ ನದಿ |
| | | ಎಫ್) | ಮಾರಿಕಣಿವೆ |

**IV. ಚಟುವಟಿಕೆ.**

1. ಕರ್ನಾಟಕದಲ್ಲಿನ ನದಿಗಳು ಮತ್ತು ಅವುಗಳ ಉಪನದಿಗಳನ್ನು ಪಟ್ಟಿ ಮಾಡಿರಿ.

**V. ಯೋಜನೆಗಳು.**

1. ನಮ್ಮ ರಾಜ್ಯದ ಅಣೆಕಟ್ಟುಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.
2. ನಿಮ್ಮ ವಾಸಸ್ಥಳಕ್ಕೆ ಸಮೀಪದ ಕೆರೆ, ಕಾಲುವೆ, ಹೊಳೆ, ನದಿ, ಕಡಲ ತೀರ ಇಲ್ಲಿಗೆ ಭೇಟಿನೀಡಿ ಅವುಗಳ ಮಹತ್ವವನ್ನು ಕುರಿತು ಚರ್ಚಿಸಿ.
3. ನದಿಗಳು ರಾಜ್ಯಗಳ ನಡುವೆ ಹೇಗೆ ಸಾಮರಸ್ಯವನ್ನು ಬೆಳೆಸುತ್ತವೆ ಎಂಬುದನ್ನು ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ.

*****

@KTBS NOT TO BE REPUBLISHED

ಅಧ್ಯಾಯ – 13

# ಕರ್ನಾಟಕದ ಭೂ ಸಂಪತ್ತು

N6V3V8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**
- ಕರ್ನಾಟಕದ ಭೂ ಬಳಕೆಯ ವಿಧಗಳು.
- ವ್ಯವಸಾಯದ ಪ್ರಾಮುಖ್ಯತೆ, ವಿಧಗಳು.
- ಕರ್ನಾಟಕದ ಪ್ರಮುಖ ಬೆಳೆಗಳ ಹಂಚಿಕೆ ಮತ್ತು ಉತ್ಪಾದನೆ.

ಕರ್ನಾಟಕ ರಾಜ್ಯವು ಭೌಗೋಳಿಕವಾಗಿ ಉತ್ತಮ ಸ್ಥಾನದಲ್ಲಿದೆ. ಅದು ವೈವಿಧ್ಯ ಭೂಸ್ವರೂಪಗಳು, ಮಣ್ಣು, ವನಸ್ಪತಿ, ಖನಿಜಗಳು, ನದಿ ಮತ್ತು ಅಂತರ್ಜಲ ಸಂಪತ್ತು ಇತ್ಯಾದಿಗಳನ್ನೊಳಗೊಂಡಿದೆ. ಇಂತಹ ಪ್ರಮುಖವಾದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂಮಿ ಅಮೂಲ್ಯವಾದುದು. ಅದರ ಸದುಪಯೋಗ ರಾಜ್ಯದ ಪ್ರಗತಿಗೆ ಸೂಚಕವಾಗುತ್ತದೆ.

**ಭೂ ಬಳಕೆ**

ಭೂಮಿಯನ್ನು (ನೆಲ) ವಿವಿಧ ಉದ್ದೇಶಗಳಿಗೆ ಬಳಸುವುದನ್ನು 'ಭೂ ಬಳಕೆ' ಎನ್ನುವರು. ಇದರಲ್ಲಿ ಸಾಗುವಳಿ ಭೂಮಿ, ಅರಣ್ಯಪ್ರದೇಶ, ಬೀಳುಭೂಮಿ, ಕೃಷಿಯೇತರ ವಸತಿ, ರಸ್ತೆ, ರೈಲುಮಾರ್ಗ, ಅಣೆಕಟ್ಟು, ಕಾಲುವೆ ಮುಂತಾದವುಗಳ ನಿರ್ಮಾಣ ಮೊದಲಾದವು ಸೇರುವವು. ಭೂಮಿಯ ಸಮರ್ಪಕ ಮತ್ತು ಸೂಕ್ತ ಬಳಕೆ ಆರ್ಥಿಕಾಭಿವೃದ್ಧಿಯ ತಳಹದಿ ಇದ್ದಂತೆ.

ಕರ್ನಾಟಕ ರಾಜ್ಯವು ಒಟ್ಟು 19.05 ಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶವನ್ನು ಹೊಂದಿದ್ದು, ಅದು ಈ ಕೆಳಕಂಡ ಪ್ರಮುಖ ಉದ್ದೇಶಗಳಿಗೆ ಬಳಕೆಯಾಗುತ್ತದೆ.

**ಕರ್ನಾಟಕದ ಭೂ ಬಳಕೆಯ ಮಾದರಿಗಳು**




**ವಿವಿಧ ಭೂ ಬಳಕೆಯ ಶೇಕಡ ಪ್ರಮಾಣ**

1. **ನಿವ್ವಳ ಸಾಗುವಳಿ ಭೂಮಿ :** ಒಟ್ಟು ಸಾಗುವಳಿಗೆ ಬಳಕೆಯಾದ ಭೂಮಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯಾಗಿಲ್ಲ. ಕಲಬುರಗಿ ಜಿಲ್ಲೆಯು ರಾಜ್ಯದಲ್ಲೇ ಅತಿ ಹೆಚ್ಚು ಸಾಗುವಳಿ ಭೂಮಿಯನ್ನು ಹೊಂದಿದೆ. ಅನಂತರದ ಸ್ಥಾನಗಳಲ್ಲಿ ಬೆಳಗಾವಿ, ವಿಜಯಪುರ, ತುಮಕೂರು, ರಾಯಚೂರು, ಬಾಗಲಕೋಟೆ, ಬಳ್ಳಾರಿ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು ಬರುತ್ತವೆ. ತೀವ್ರ ನಗರೀಕರಣದಿಂದ ಬೆಂಗಳೂರು ನಗರ ಜಿಲ್ಲೆ ಕನಿಷ್ಠ ಸಾಗುವಳಿ ಭೂಮಿಯನ್ನು ಹೊಂದಿದೆ. ಉತ್ತರಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ ಸಾಗುವಳಿ ಭೂಮಿ ಕಡಿಮೆ ಪ್ರಮಾಣದಲ್ಲಿದೆ.

NOT TO BE REPUBLISHED ©KTBS

**2. ಅರಣ್ಯ ಪ್ರದೇಶ :** ಉತ್ತರ ಕನ್ನಡ ಜಿಲ್ಲೆಯು ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಬೆಳಗಾವಿ, ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ ಜಿಲ್ಲೆಗಳಲ್ಲಿಯೂ ಅರಣ್ಯ ಪ್ರದೇಶ ಹೆಚ್ಚಾಗಿ ಕಂಡುಬರುತ್ತದೆ. ವಿಜಯಪುರ ಜಿಲ್ಲೆಯು ಅತಿ ಕನಿಷ್ಠ ಅರಣ್ಯ ಪ್ರದೇಶವನ್ನು ಹೊಂದಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಯಚೂರು, ಬೀದರ್ ಮತ್ತು ಗದಗ ಜಿಲ್ಲೆಗಳಲ್ಲಿ ಕಡಿಮೆ ಅರಣ್ಯ ಪ್ರದೇಶವಿದೆ.

**3. ಸಾಗುವಳಿಗೆ ಲಭ್ಯವಿಲ್ಲದ ಭೂಮಿ :** ಇದು ವ್ಯವಸಾಯಕ್ಕೆ ಬದಲು ಇನ್ನಿತರ ಹಲವು ಉದ್ದೇಶಗಳಿಗೆ ಭೂಬಳಕೆಯಾಗುವುದನ್ನು ಒಳಗೊಂಡಿದೆ. ರೈಲು ಮಾರ್ಗ, ರಸ್ತೆ, ವಸತಿ, ಕೈಗಾರಿಕೆ, ನೀರಾವರಿ ಯೋಜನೆಗಳು ಇವುಗಳಲ್ಲಿ ಮುಖ್ಯವಾದವುಗಳು. ಇತ್ತೀಚೆಗೆ ಅಭಿವೃದ್ಧಿಗಾಗಿ ಇಂತಹ ಭೂ ಬಳಕೆ ಹೆಚ್ಚಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆಯು ಸಾಗುವಳಿಗೆ ಲಭ್ಯವಿಲ್ಲದ ಭೂಮಿಯನ್ನು ಹೆಚ್ಚಾಗಿ ಹೊಂದಿದೆ. ಶಿವಮೊಗ್ಗ, ತುಮಕೂರು, ಬೆಳಗಾವಿ, ಬಳ್ಳಾರಿ, ಮೈಸೂರು, ದಕ್ಷಿಣ ಕನ್ನಡ ಜಿಲ್ಲೆಗಳೂ ಸಹ ಸಾಗುವಳಿಗೆ ಲಭ್ಯವಿಲ್ಲದ ಭೂಮಿಯನ್ನು ಹೆಚ್ಚಾಗಿ ಹೊಂದಿವೆ. ಆದರೆ ಇದು ಬೀದರ್ ಜಿಲ್ಲೆಯಲ್ಲಿ ಅತಿ ಕಡಿಮೆ ಇದ್ದು, ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಪ್ರಮಾಣದಲ್ಲಿದೆ.

**4. ಸಾಗುವಳಿ ಮಾಡದ ಇತರೆ ಭೂಮಿ :** ಇದರಲ್ಲಿ ಖಾಯಂ ಗೋಮಾಳ, ವೃಕ್ಷ ಮತ್ತು ತೋಪುಗಳು ಸೇರುತ್ತವೆ. ಶಿವಮೊಗ್ಗ, ತುಮಕೂರು, ಕೋಲಾರ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಕಂಡುಬರುತ್ತವೆ. ಗದಗ, ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕನಿಷ್ಠ. ಇಂತಹ ಭೂಮಿಯನ್ನು ಸುಧಾರಿಸಿ ಕೃಷಿಗಾಗಿ ಬಳಕೆ ಮಾಡಬಹುದು.

**5. ಬೀಳು ಭೂಮಿ :** ಎರಡು ಅಥವಾ ಮೂರು ವರ್ಷಗಳಿಗಿಂತ ಹೆಚ್ಚು ಅವಧಿಯವರೆಗೆ ನಿರಂತರವಾಗಿ ಸಾಗುವಳಿಯಾಗದ ಭೂಮಿಯನ್ನು ಬೀಳು ಭೂಮಿಯೆನ್ನುವರು. ಕಲಬುರಗಿ ಜಿಲ್ಲೆ ಅಧಿಕ ಬೀಳು ಭೂಮಿಯನ್ನು ಹೊಂದಿದೆ. ರಾಯಚೂರು, ಬೆಳಗಾವಿ, ವಿಜಯಪುರ (ಬಿಜಾಪುರ), ಕೊಪ್ಪಳ, ತುಮಕೂರು ಜಿಲ್ಲೆಗಳು ನಂತರದ ಸ್ಥಾನಗಳಲ್ಲಿವೆ. ದಕ್ಷಿಣಕನ್ನಡ, ಚಿಕ್ಕಮಗಳೂರು, ಕೊಡಗು, ಮೈಸೂರು, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೀಳು ಭೂಮಿ ಕಡಿಮೆ ಇದ್ದರೂ ಇಲ್ಲಿಯೂ ಅದರ ವಿಸ್ತಾರ ಹೆಚ್ಚಾಗುತ್ತಿದೆ. ಇಂತಹ ಭೂಮಿಯನ್ನು ಸುಧಾರಣೆ ಮಾಡಿಕೊಳ್ಳಲು ಹಾಗೂ ವ್ಯವಸಾಯಕ್ಕೆ ಬಳಸಿಕೊಳ್ಳಲು ಸಾಧ್ಯವಿದೆ.

©KTBS NOT TO BE REPUBLISHED

## ವ್ಯವಸಾಯ

ಭೂಮಿಯನ್ನು ಉಳುಮೆಮಾಡಿ ಬೆಳೆ ಬೆಳೆಯುವುದನ್ನು ವ್ಯವಸಾಯ ಎನ್ನುವರು. ಅಲ್ಲದೆ ಪಶುಪಾಲನೆ, ಕೋಳಿ ಸಾಕಣೆ, ಜೇನು ಸಾಕಣೆ, ಮೀನುಗಾರಿಕೆ ಹಾಗೂ ರೇಷ್ಮೆ ಕೃಷಿಯೂ ವ್ಯವಸಾಯಕ್ಕೆ ಸೇರಿದೆ. ಕರ್ನಾಟಕದ ಶೇ.61.33 ಭಾಗದಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ಅವರು ವ್ಯವಸಾಯವನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ.

**ಪ್ರಾಮುಖ್ಯತೆ :** ಕರ್ನಾಟಕದ ಪುರಾತನ ಮೂಲವೃತ್ತಿಗಳಲ್ಲಿ ವ್ಯವಸಾಯವೂ ಒಂದು. ಇದು ಮುಖ್ಯ ಜೀವನಾಧಾರಿತ ವೃತ್ತಿ. ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು. ಆರ್ಥಿಕಾಭಿವೃದ್ಧಿಯು ವ್ಯವಸಾಯವನ್ನಾಧರಿಸಿದೆ. ಜೀವನ ನಡೆಸಲು ಉದ್ಯೋಗವನ್ನು ನೀಡಿದೆ. ಜನರಿಗೆ ಆಹಾರ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ. ರಾಜ್ಯದ ಆದಾಯದ ಮೂಲವಾಗಿದೆ. ವಿದೇಶಿ ವಿನಿಮಯ ಗಳಿಸಿಕೊಡುತ್ತದೆ. ಕಾಫಿ, ರೇಷ್ಮೆ, ಸಾಂಬಾರ ಪದಾರ್ಥಗಳು, ತಂಬಾಕು, ಹತ್ತಿ ಮುಂತಾದುವು ರಫ್ತಾಗುವ ಕೃಷಿ ಉತ್ಪನ್ನಗಳು. ತೃತೀಯ ವೃತ್ತಿಗಳಾದ ಸಾರಿಗೆ, ಬ್ಯಾಂಕಿಂಗ್ ವ್ಯವಸ್ಥೆ, ವಿಮೆ ಇತ್ಯಾದಿಗಳ

ಪ್ರಗತಿಗೂ ಇದು ಪೂರಕವಾಗುತ್ತದೆ. ಇದು ರಾಜ್ಯದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ವ್ಯವಸಾಯದ ವಿಧಗಳು :** ಕರ್ನಾಟಕ ರಾಜ್ಯದಲ್ಲಿ ಭೂ ಹಿಡುವಳಿಯ ಜೊತೆಗೆ, ಫಲವತ್ತತೆ, ನೀರಿನ ಲಭ್ಯತೆ, ಮಳೆಯ ಪ್ರಮಾಣ, ವಾಯುಗುಣ, ಭೂಸ್ವರೂಪ, ಮಾರುಕಟ್ಟೆ ಇವುಗಳಿಗನುಗುಣವಾಗಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ. ಇವುಗಳನ್ನನುಸರಿಸಿ ವ್ಯವಸಾಯದ ವಿಧಗಳನ್ನು ವಿಂಗಡಿಸಲಾಗಿದೆ. ಜೀವನಾಧಾರ ಬೇಸಾಯ, ನೀರಾವರಿ ಬೇಸಾಯ, ಒಣ ಬೇಸಾಯ, ಮಿಶ್ರ ಬೇಸಾಯ, ಸ್ಥಳಾಂತರ ಬೇಸಾಯ, ವಾಣಿಜ್ಯ ಬೇಸಾಯ, ನೆಡುತೋಪು ಬೇಸಾಯ ಇತ್ಯಾದಿ.

ಕಾಲುವೆ, ಕೆರೆ, ಬಾವಿ ಮೂಲಗಳಿಂದ ನೀರನ್ನು ಬಳಕೆ ಮಾಡಿ ಸಾಗುವಳಿ ಮಾಡುವ ಕೃಷಿ ಪದ್ಧತಿಗೆ 'ನೀರಾವರಿ ಬೇಸಾಯ' ವೆನ್ನುವರು. ಭತ್ತ, ಕಬ್ಬು ನೀರಾವರಿ ಬೇಸಾಯದ ಪ್ರಮುಖ ಬೆಳೆಗಳು. ಮಳೆ ಆಶ್ರಿತ ಬೆಳೆಗಳ ಸಾಗುವಳಿಗೆ ಒಣ ಅಥವಾ ಶುಷ್ಕ ಬೇಸಾಯ ಎನ್ನುವರು. ಉದಾಹರಣೆ : ರಾಗಿ, ಜೋಳ, ಎಣ್ಣೆಕಾಳುಗಳು ಇತ್ಯಾದಿ.

ವಿಶಾಲವಾದ ಸಾಗುವಳಿ ಭೂಮಿಯಲ್ಲಿ ಹಣ ಗಳಿಕೆಗಾಗಿ ಕೆಲವೇ ಬಹುವಾರ್ಷಿಕ ಬೆಳೆಗಳನ್ನು ಸಾಗುವಳಿ ಮಾಡುವುದೇ 'ನೆಡುತೋಪು ಬೇಸಾಯ' (ಪ್ಲಾಂಟೇಷನ್). ಉದಾ : ಕಾಫಿ, ಚಹ, ರಬ್ಬರ್, ಕೋಕೋ ಇತ್ಯಾದಿ. ಸ್ವದೇಶಿ ಉಪಯೋಗಕ್ಕಲ್ಲದೆ ವಿದೇಶಿ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ಮಾಡುವ ಬೆಳೆಗಳ ಸಾಗುವಳಿಯೇ 'ವಾಣಿಜ್ಯ ಬೇಸಾಯ'. ಉದಾ : ತಂಬಾಕು, ಹತ್ತಿ, ಸೆಣಬು ಇತ್ಯಾದಿ. ಮಾರಾಟಕ್ಕಲ್ಲದೆ, ರೈತರ ಜೀವನೋಪಾಯಕ್ಕಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ 'ಜೀವನಾಧಾರ ಬೇಸಾಯ' ಎನ್ನುವರು. ಇದು ಪುರಾತನ ಮಾದರಿ ಬೇಸಾಯ.

ಇತ್ತೀಚಿನ ದಿನಗಳಲ್ಲಿ ಮಿಶ್ರ ಬೇಸಾಯ ಹೆಚ್ಚು ಪ್ರಚಲಿತಗೊಳ್ಳುತ್ತಿದೆ. ಬೆಳೆ ಬೆಳೆಯುವುದರ ಜೊತೆಯಲ್ಲೇ ಪಶು ಸಂಗೋಪನೆ, ರೇಷ್ಮೆ ಕೃಷಿ, ಕುರಿಸಾಕಣೆ, ಕೋಳಿಸಾಕಣೆ, ಜೇನುಸಾಕಣೆ, ಮೀನುಗಾರಿಕೆ ಮುಂತಾದ ಉಪ ಕಸುಬುಗಳನ್ನು ನಿರ್ವಹಿಸುವುದನ್ನು ಮಿಶ್ರ ಬೇಸಾಯ ಎನ್ನುತ್ತಾರೆ.

NOT TO BE REPUBLISHED ©KTBS

### ಕರ್ನಾಟಕದ ಪ್ರಮುಖ ಬೆಳೆಗಳು

ಈ ಮೊದಲಿಗೆ ವಿವರಿಸಿದಂತೆ ವ್ಯವಸಾಯದ ವಿವಿಧ ಪದ್ಧತಿಗಳಂತೆ ಕರ್ನಾಟಕದ ಬೆಳೆ ಪ್ರಕಾರಗಳಲ್ಲಿ ವೈವಿಧ್ಯತೆಯಿದೆ. ಇದಕ್ಕೆ ವಿವಿಧ ಭೂಸ್ವರೂಪಗಳು, ವಾಯುಗುಣದ ಪರಿಸ್ಥಿತಿ, ಮಣ್ಣಿನ ಪ್ರಕಾರ, ನೀರಾವರಿ ಪೂರೈಕೆ, ಕೃಷಿಕರ ಸಂಪ್ರದಾಯ ಮತ್ತು ಮನೋಭಾವನೆ, ಕೃಷಿ ಉತ್ಪನ್ನಗಳಿಗಿರುವ ಮಾರುಕಟ್ಟೆ ಮೊದಲಾದವು ಕಾರಣವಾಗಿವೆ.

ಕರ್ನಾಟಕದ ಬೆಳೆಗಳನ್ನು ಈ ರೀತಿ ವಿಂಗಡಿಸಬಹುದು. ಆಹಾರ ಬೆಳೆಗಳು – ಭತ್ತ, ರಾಗಿ, ಮೆಕ್ಕೆ ಜೋಳ, ಜೋಳ, ದ್ವಿದಳ ಧಾನ್ಯ, ತೃಣ ಧಾನ್ಯಗಳು ಇತ್ಯಾದಿ. ವಾಣಿಜ್ಯ ಬೆಳೆಗಳು – ಹತ್ತಿ, ತಂಬಾಕು, ಕಬ್ಬು, ಹಿಪ್ಪುನೇರಳೆ ಇತ್ಯಾದಿ. ಎಣ್ಣೆಕಾಳು ಬೆಳೆಗಳು – ಶೇಂಗ, ಎಳ್ಳು, ಹುಚ್ಚೆಳ್ಳು, ಕುಸುಬೆ, ಸೂರ್ಯಕಾಂತಿ ಇತ್ಯಾದಿ. ನೆಡುತೋಪು ಬೆಳೆಗಳು - ಕಾಫಿ, ತೆಂಗು, ಅಡಿಕೆ, ರಬ್ಬರ್, ಬಾಳೆ ಇತ್ಯಾದಿ. ಅಲ್ಲದೆ ಕರ್ನಾಟಕದಲ್ಲಿ ವಿವಿಧ ತೋಟಗಾರಿಕೆ ಮತ್ತು ಪುಷ್ಪ ಬೆಳೆಗಳನ್ನೂ ಸಹ ಬೆಳೆಯಲಾಗುವುದು.

**ಬೆಳೆಗಳ ವೈಶಿಷ್ಟ್ಯ**

| | | |
|---|---|---|
| ನಂಜನಗೂಡು | – | ರಸಬಾಳೆ |
| ಬ್ಯಾಡಗಿ | – | ಮೆಣಸಿನಕಾಯಿ |
| ತಿಪಟೂರು | – | ತೆಂಗಿನಕಾಯಿ |
| ಮೈಸೂರು | – | ವೀಳ್ಯದೆಲೆ |
| ಬೆಂಗಳೂರು | – | ನೀಲಿದ್ರಾಕ್ಷಿ |
| ದೇವನಹಳ್ಳಿ | – | ಚಕ್ಕೋತ |
| ಈರನಗೆರೆ | – | ಬದನೆಕಾಯಿ |
| ನಿಪ್ಪಾಣಿ | – | ಹೊಗೆಸೊಪ್ಪು |
| ಕಮಲಾಪುರ | – | ಕೆಂಪುಬಾಳೆ |

ಈ ಮುಂದೆ ಕರ್ನಾಟಕದ ಪ್ರಮುಖ ಬೆಳೆಗಳ ಸಂಕ್ಷಿಪ್ತ ವಿವರಣೆ ತಿಳಿಯೋಣ.

**ಆಹಾರದ ಬೆಳೆಗಳು**

**1. ಭತ್ತ :** ಇದು ಕರ್ನಾಟಕದ ಅತ್ಯಂತ ಪ್ರಮುಖ ಆಹಾರದ ಬೆಳೆ. ರಾಜ್ಯದ ಜನರು ಅಕ್ಕಿಯನ್ನು ಮುಖ್ಯ ಆಹಾರವಾಗಿ ಬಳಸುವರು. ಒಟ್ಟು ಸಾಗುವಳಿ ಪ್ರದೇಶದಲ್ಲಿ ಸುಮಾರು ಶೇ. 28.2 ಭಾಗದಲ್ಲಿ ಭತ್ತ ಬೆಳೆಯಲಾಗುತ್ತದೆ. ನೀರಾವರಿ, ರಾಸಾಯನಿಕ ಗೊಬ್ಬರ ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಬಳಕೆಯಿಂದ ಭತ್ತದ ಇಳುವರಿಯಲ್ಲಿ ಇತ್ತೀಚೆಗೆ ಸುಧಾರಣೆಯಾಗಿದೆ.

> **ನಿಮಗಿದು ತಿಳಿದಿರಲಿ :**
>
> ಭತ್ತವು ಹುಲ್ಲಿನ ವರ್ಗದ ಸಸ್ಯ. ಇದರ ವೈಜ್ಞಾನಿಕ ಹೆಸರು ಒರೈಸಾ ಸಟೈವಾ.

ಭತ್ತವು ಉಷ್ಣವಲಯದ ಬೆಳೆ. ಇದರ ಬೇಸಾಯಕ್ಕೆ ಹೆಚ್ಚು ಮಳೆ ಮತ್ತು ಉಷ್ಣಾಂಶವಿರಬೇಕು. ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಅಗತ್ಯ. ಭತ್ತದ ಬೆಳೆಗೆ ಸಮತಟ್ಟಾದ ಭೂಮಿ ಇರಬೇಕು. ಉದಾ: ಮೈದಾನ ಪ್ರದೇಶ, ಫಲವತ್ತಾದ ಜೇಡಿಮಿಶ್ರಿತ ಮಣ್ಣು ಹಾಗೂ ಮೆಕ್ಕಲು ಮಣ್ಣು ಈ ಬೆಳೆಗೆ ಬಹು ಸೂಕ್ತ. ಹಸಿರೆಲೆ ಗೊಬ್ಬರ, ಸೊಪ್ಪು, ಅಧಿಕ ಸಂಖ್ಯೆಯ ಕಾರ್ಮಿಕರೂ ಸಹ ಭತ್ತದ ಬೇಸಾಯಕ್ಕೆ ಅಗತ್ಯ. ಸುಮಾರು ಶೇ.70 ಭಾಗದಷ್ಟು ಫಸಲನ್ನು ಜೂನ್–ಆಗಸ್ಟ್ ತಿಂಗಳುಗಳಲ್ಲಿ ನಾಟಿ ಮಾಡಿ ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಕಟಾವು ಮಾಡಲಾಗುವುದು. ಇದನ್ನು 'ಕಾರುಬೆಳೆ' (ಖಾರಿಫ್) ಎನ್ನುವರು. ಬೇಸಿಗೆಯಲ್ಲೂ ನೀರಾವರಿ ಸೌಲಭ್ಯ ದೊರೆಯುವ ಪ್ರದೇಶಗಳಲ್ಲಿ ಭತ್ತ ಬೆಳೆಯುವರು. (ಫೆಬ್ರವರಿ–ಜೂನ್). ಇದನ್ನು 'ಹೈನುಬೆಳೆ' (ರಬಿ) ಎನ್ನುವರು. ಭತ್ತವನ್ನು ಮಲೆನಾಡಿನಲ್ಲಿ ಚೆಲ್ಲುವ ವಿಧಾನ ಮತ್ತು ಮೈದಾನಗಳಲ್ಲಿ ನಾಟಿ ಮಾಡುವ ವಿಧಾನಗಳಿಂದ ಬೆಳೆಯಲಾಗುವುದು.




**ಭತ್ತ ಬೆಳೆಯುವ ಪ್ರದೇಶಗಳು :** ಭತ್ತವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಬೆಳೆಯಲಾಗುತ್ತದೆ. ಕೃಷ್ಣಾ–ತುಂಗಭದ್ರಾ ಕಣಿವೆ, ಕಾವೇರಿ ನದಿಕಣಿವೆ ಹಾಗೂ ಕರಾವಳಿ ಜಿಲ್ಲೆಗಳು ಭತ್ತದ ಉತ್ಪಾದನೆಗೆ ಹೆಸರಾಗಿವೆ. ರಾಯಚೂರು ಜಿಲ್ಲೆ ಭತ್ತದ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಅನಂತರ ಬಳ್ಳಾರಿ, ದಾವಣಗೆರೆ, ಮೈಸೂರು, ಶಿವಮೊಗ್ಗ, ಮಂಡ್ಯ, ಕೊಪ್ಪಳ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳು ಪ್ರಮುಖವಾದವು. ರಾಜ್ಯದ ಇತರೆ ಪ್ರಮುಖ ಭತ್ತ ಬೆಳೆಯುವ ಪ್ರದೇಶಗಳೆಂದರೆ ತುಮಕೂರು,

© KTBS Not to be republished

ಹಾಸನ, ಚಿಕ್ಕಮಗಳೂರು, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳು. ನೀರಾವರಿಯಲ್ಲಿ ಬೆಳೆಯುವ ಭತ್ತವು ಉತ್ತಮ ಗುಣಮಟ್ಟದ್ದಾಗಿರುತ್ತದೆ ಹಾಗೂ ಇಳುವರಿಯೂ ಹೆಚ್ಚಾಗಿರುತ್ತದೆ.

**ನಿಮಗಿದು ತಿಳಿದಿರಲಿ :**

*ಕಲಬುರಗಿ ಜಿಲ್ಲೆಯನ್ನು ತೊಗರಿಯ ಕಣಜ ಎಂದು ಕರೆಯುತ್ತಾರೆ.*

**2. ಜೋಳ :** ಭತ್ತದ ನಂತರ ಜೋಳವು ಕರ್ನಾಟಕದ ಎರಡನೆಯ ಪ್ರಮುಖ ಆಹಾರದ ಬೆಳೆಯಾಗಿದೆ. ಈ ಮೊದಲು ಭತ್ತ ಬೆಳೆಯುವ ಪ್ರದೇಶಕ್ಕಿಂತ ಜೋಳ ಬೆಳೆಯುವ ಕ್ಷೇತ್ರ ಹೆಚ್ಚಾಗಿತ್ತು. ಇತ್ತೀಚೆಗೆ ಜೋಳ ಬೆಳೆಯುವ ಪ್ರದೇಶವು ಕಡಿಮೆಯಾಗಿದೆ. ಒಟ್ಟು ಸಾಗುವಳಿ ಭೂಮಿಯಲ್ಲಿ ಸುಮಾರು ಶೇ.26 ಭಾಗವು ಜೋಳದ ಬೆಳೆಗೆ ಬಳಕೆಯಾಗುತ್ತಿದೆ. ಭಾರತದಲ್ಲೇ ಕರ್ನಾಟಕವು ಜೋಳದ ಉತ್ಪಾದನೆಯಲ್ಲಿ ಎರಡನೆಯ ಸ್ಥಾನದಲ್ಲಿದೆ. ಮಹಾರಾಷ್ಟ್ರ ಪ್ರಥಮ ಸ್ಥಾನದಲ್ಲಿದೆ. ಜೋಳವು ಉತ್ತರ ಕರ್ನಾಟಕದ ಜನರ ಪ್ರಮುಖ ಆಹಾರ ಧಾನ್ಯವಾಗಿದೆ. ಇದನ್ನು ಹೆಚ್ಚಾಗಿ ರೊಟ್ಟಿ ತಯಾರಿಸಲು ಬಳಸುವರು. ಜೋಳದ ದಂಟನ್ನು ದನಕರುಗಳ ಮೇವಿಗಾಗಿ ಬಳಸುತ್ತಾರೆ.




*** ಮೆಕ್ಕೆಜೋಳ :** ಜಾಗತಿಕವಾಗಿ 'ಧಾನ್ಯಗಳ ರಾಣಿ' ಎಂದೇ ಹೆಸರಾಗಿರುವ ಮೆಕ್ಕೆಜೋಳವು ದಕ್ಷಿಣ ಕರ್ನಾಟಕದ ಪ್ರಮುಖ ಆಹಾರದ ಬೆಳೆಯಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಬೆಳೆಯುವ ಮೆಕ್ಕೆಜೋಳವನ್ನು ಪ್ರಧಾನವಾಗಿ ಮಾನವರ ಆಹಾರಕ್ಕಾಗಿ ಹಾಗೂ ಜಾನುವಾರುಗಳ ಮೇವಿಗಾಗಿ ಬೆಳೆಯುತ್ತಾರೆ.

ಜೋಳ ಮತ್ತು ಮೆಕ್ಕೆಜೋಳ ಹುಲ್ಲು ಜಾತಿಗೆ ಸೇರಿದ ಸಸ್ಯವರ್ಗಗಳಾಗಿವೆ. ಇವು ಉಷ್ಣವಲಯದ ಬೆಳೆಗಳಾಗಿದ್ದು, ಇವುಗಳ ಬೇಸಾಯಕ್ಕೆ ಸಾಧಾರಣ ಮಳೆ, ಒಣ ಹವೆ, ಕಪ್ಪು, ಕೆಂಪು ಮತ್ತು ಮೆಕ್ಕಲು ಮಿಶ್ರಿತ ಮಣ್ಣು ಇದ್ದರೆ ಸಾಕು. ಇವುಗಳನ್ನು ಹೆಚ್ಚಾಗಿ ಮಳೆ ಆಶ್ರಯದಲ್ಲಿ ಬೆಳೆಯಲಾಗುತ್ತದೆ.

**ಬೆಳೆಯುವ ಪ್ರದೇಶಗಳು :** ವಿಜಯಪುರ, ಕಲಬುರಗಿ, ಬಾಗಲಕೋಟೆ, ರಾಯಚೂರು, ಬೆಳಗಾವಿ, ಬೀದರ್, ಬಳ್ಳಾರಿ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಜೋಳವನ್ನು ಹೆಚ್ಚಾಗಿ ಬೆಳೆಯಲಾಗುವುದು. ವಿಜಯಪುರ ಜಿಲ್ಲೆಯು ಜೋಳದ ಉತ್ಪಾದನೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಚಾಮರಾಜನಗರ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮೆಕ್ಕೆಜೋಳವನ್ನು ಹೆಚ್ಚಾಗಿ ಬೆಳೆಯಲಾಗುವುದು.

@KTBS NOT TO BE REPUBLISHED

**3. ರಾಗಿ :** ಇದು ಉತ್ತಮ ಪೋಷಕಾಂಶ ಗಳನ್ನು ಹೊಂದಿರುವ ಆಹಾರ ಧಾನ್ಯವಾಗಿದೆ. ರಾಗಿಯಿಂದ ಮುದ್ದೆ, ಗಂಜಿ, ರೊಟ್ಟಿ, ಹುರಿಹಿಟ್ಟು, ಮಾಲ್ಟ್, ದೋಸೆ ಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸಿ ಬಳಸಲಾಗುತ್ತದೆ. ಕರ್ನಾಟಕದಲ್ಲಿ ಭತ್ತ ಮತ್ತು ಜೋಳಗಳ ನಂತರ ಮೂರನೆಯ ಮುಖ್ಯ ಆಹಾರ ಧಾನ್ಯವಾಗಿದೆ. ರಾಗಿಹುಲ್ಲು ದನಕರುಗಳ ಮೇವಿಗಾಗಿ ಬಳಸಲಾಗುತ್ತದೆ. ರಾಗಿ ಹೆಚ್ಚು ಕಾಲ ಸಂಗ್ರಹಿಸಬಹುದಾದ ಧಾನ್ಯ.

ಇದು ಉಷ್ಣವಲಯದ ಬೆಳೆ. ಅಧಿಕ ಉಷ್ಣಾಂಶ, ಸಾಧಾರಣ ಮಳೆ, ಕೆಂಪು ಮಣ್ಣು, ಮೆಕ್ಕಲು ಮಿಶ್ರಿತ ಮಣ್ಣು ಯೋಗ್ಯವಾಗಿರುತ್ತದೆ. ಇದು ಬರ ನಿಭಾಯಿಸಬಹುದಾದ ಗುಣವನ್ನು ಹೊಂದಿದೆ. ಕೆಲವು ಕಡೆ ನೀರಾವರಿ ಆಶ್ರಯದಲ್ಲೂ ರಾಗಿಯನ್ನು ಬೆಳೆಯಲಾಗುವುದು. ರಾಗಿ ನಾಟಿ ಮಾಡುವುದು, ಕಳೆ ಕೀಳುವುದು, ಕೊಯ್ಲು, ಒಕ್ಕಣೆ ಇತ್ಯಾದಿಗಳಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿರಬೇಕು. ಇದು ಪ್ರಮುಖ ಮುಂಗಾರು ಬೆಳೆ. ಬೇಸಿಗೆಯಲ್ಲೂ ಇದನ್ನು ನೀರಾವರಿ ಸಹಾಯದಿಂದ ಬೆಳೆಯಬಹುದು.




@KTBS NOT TO BE REPUBLISHED

**ಬೆಳೆಯುವ ಪ್ರದೇಶಗಳು :** ರಾಗಿಯ ಉತ್ಪಾದನೆಯಲ್ಲಿ ಭಾರತದಲ್ಲೇ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ರಾಗಿಯ ಬಳಕೆಯು ಇತ್ತೀಚೆಗೆ ಹೆಚ್ಚಾಗುತ್ತಿದ್ದು, ರಾಗಿಗೆ ಅಧಿಕ ಬೇಡಿಕೆ ಸೃಷ್ಟಿಯಾಗುತ್ತಿದೆ. ಇದರ ಪರಿಣಾಮವಾಗಿ ರಾಗಿ ಬೆಳೆಯುವ ಕ್ಷೇತ್ರವೂ ಹೆಚ್ಚಾಗುತ್ತಿದೆ. ಒಟ್ಟು ಸಾಗುವಳಿ ಭೂಮಿಯಲ್ಲಿ ಸುಮಾರು 14% ಭಾಗದಲ್ಲಿ ರಾಗಿ ಬೆಳೆಯಲಾಗುತ್ತದೆ. ದಕ್ಷಿಣದ ಮೈದಾನದ ಜಿಲ್ಲೆಗಳಲ್ಲಿ ರಾಗಿ ಬೆಳೆಯುವ ಪ್ರದೇಶಗಳು ಕೇಂದ್ರೀಕೃತವಾಗಿವೆ. ಇದು ಹಳೆಯ ಮೈಸೂರು ಪ್ರಾಂತ್ಯದ ಸಾಂಪ್ರದಾಯಿಕ ಬೆಳೆ. ಉತ್ತರ ಕರ್ನಾಟಕದಲ್ಲಿ ಜೋಳದ ಪ್ರಾಧಾನ್ಯತೆಯಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ರಾಗಿಯೇ ಪ್ರಧಾನ ಆಹಾರ ಧಾನ್ಯವಾಗಿದೆ. ಕರ್ನಾಟಕದಲ್ಲಿ ತುಮಕೂರು ಜಿಲ್ಲೆಯು ರಾಗಿಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ ಅನಂತರದ ಸ್ಥಾನಗಳಲ್ಲಿ ಬೆಂಗಳೂರು ದಕ್ಷಿಣ (ರಾಮನಗರ), ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲೆಗಳಿವೆ.

**ವಾಣಿಜ್ಯ ಬೆಳೆಗಳು**

**1. ಕಬ್ಬು :** ಇದು ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಬೆಳೆಯಾಗಿದೆ. ಕರ್ನಾಟಕವು ಕಬ್ಬು ಉತ್ಪಾದನೆಯಲ್ಲಿ ಭಾರತದಲ್ಲಿ ನಾಲ್ಕನೆಯ ಸ್ಥಾನದಲ್ಲಿರುವ ರಾಜ್ಯವಾಗಿದೆ. ಇದು ಉಷ್ಣವಲಯದ ಬೆಳೆ. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆಯಾಗುವ ಅಥವಾ ನೀರಾವರಿ ಪೂರೈಕೆಯಿರುವ ಭಾಗಗಳಲ್ಲಿ ಬೆಳೆಯಲಾಗುತ್ತದೆ. ಕಬ್ಬಿನ ಬೇಸಾಯಕ್ಕೆ ಮರಳು ಮಿಶ್ರಿತ ಮೆಕ್ಕಲು ಮಣ್ಣು, ಕೆಂಪು ಮಣ್ಣು ಉತ್ತಮವಾಗಿರುತ್ತದೆ. ಕಬ್ಬನ್ನು ಕಟಾವು ಮಾಡಿದ ಕೂಡಲೆ ಉಪಯೋಗಿಸಲು ಕಾರ್ಖಾನೆಗಳಿಗೆ ಸಾಗಿಸಬೇಕಾಗಿರುವುದರಿಂದ ಉತ್ತಮ ಸಾರಿಗೆ ಸೌಲಭ್ಯವಿರಬೇಕು.

ಇದೂ ಸಹ ಹುಲ್ಲು ಜಾತಿಗೆ ಸೇರಿದ ಸಸ್ಯ. ಇದು ಸುಮಾರು ಮೂರು ಮೀಟರ್ ಎತ್ತರದವರೆಗೆ ಬೆಳೆಯುತ್ತದೆ. ಇದರಲ್ಲಿ ಸಕ್ಕರೆಯ ಅಂಶವಿದ್ದು ಬೆಲ್ಲ ಮತ್ತು ಸಕ್ಕರೆ ತಯಾರಿಸಲು ಬಳಸಲಾಗುವುದು. ಇದು ಬಹುವಾರ್ಷಿಕ ಬೆಳೆಯಾಗಿರುವುದರಿಂದ ನೀರಾವರಿ ಸೌಲಭ್ಯ ಅಗತ್ಯ.

**ಬೆಳೆಯುವ ಪ್ರದೇಶಗಳು :** ಬೆಳಗಾವಿ ಜಿಲ್ಲೆಯು ರಾಜ್ಯದಲ್ಲಿಯೇ ಅತಿ ಹೆಚ್ಚು ಕಬ್ಬು ಉತ್ಪಾದಿಸುವ ಜಿಲ್ಲೆಯಾಗಿದೆ. ಆಲಮಟ್ಟಿ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆದಿರುವ ಬಾಗಲಕೋಟೆಯು ಎರಡನೇ ಸ್ಥಾನ ಪಡೆದಿದೆ. ಮಂಡ್ಯ, ಮೈಸೂರು, ವಿಜಯಪುರ, ಬೀದರ್, ಬಳ್ಳಾರಿ, ಶಿವಮೊಗ್ಗ, ದಾವಣಗೆರೆ, ಹಾಸನ, ಕೊಪ್ಪಳ, ಹಾವೇರಿ ಕಬ್ಬು ಬೆಳೆಯುವ ಇತರ ಜಿಲ್ಲೆಗಳು. ಸ್ವಾತಂತ್ರ್ಯ ಪೂರ್ವದಿಂದಲೂ ಕಬ್ಬು ಬೆಳೆಯುವಲ್ಲಿ ಮಂಡ್ಯಜಿಲ್ಲೆಯು ಹೆಸರುವಾಸಿಯಾಗಿದೆ.

> **ಚಟುವಟಿಕೆ**
> ನಿಮ್ಮ ಜಿಲ್ಲೆಯಲ್ಲಿ ಬೆಳೆಯುವ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳ ಪಟ್ಟಿ ಮಾಡಿರಿ.

©KTBS NOT TO BE REPUBLISHED

**2. ಹತ್ತಿ :** ಹತ್ತಿಯು ನಾರಿನ ಬೆಳೆ. ಹತ್ತಿ ಬಟ್ಟೆ ಕೈಗಾರಿಕೆಯ ಕಚ್ಚಾವಸ್ತು. ಜೊತೆಗೆ ಜಮಖಾನ, ಹಗ್ಗ, ಹಾಸಿಗೆ, ದಿಂಬುಗಳ ತಯಾರಿಕೆಗೂ ಬಳಸಲಾಗುವುದು. ಇದರ ಬೀಜದಿಂದ ಖಾದ್ಯ ತೈಲ ಉತ್ಪಾದಿಸುವರು. ಇದರ ಹಿಂಡಿಯನ್ನು ದನಕರುಗಳ ಆಹಾರವಾಗಿ ಬಳಸಲಾಗುತ್ತದೆ.

ಇದು ಉಷ್ಣವಲಯ ಮತ್ತು ಉಪ ಉಷ್ಣವಲಯಗಳ ವಾಣಿಜ್ಯ ಬೆಳೆ. ಸಾಧಾರಣ ಮಳೆ, ಹೆಚ್ಚು ಉಷ್ಣಾಂಶ ಹಾಗೂ ಕಪ್ಪು ಮಣ್ಣು ಹತ್ತಿ ಬೆಳೆಗೆ ಸೂಕ್ತ. ನಮ್ಮ ರಾಜ್ಯದಲ್ಲಿ ಬಹಳ ವರ್ಷಗಳಿಂದಲೂ ಹತ್ತಿಯ ಬಳಕೆ ರೂಢಿಯಲ್ಲಿದೆ. ಉದ್ದ, ಮಧ್ಯಮ ಮತ್ತು ತುಂಡು ಎಳೆಯ ಹತ್ತಿಯ ವಿಧಗಳಿವೆ. ಆದರೆ ಕರ್ನಾಟಕದಲ್ಲಿ ಹೆಚ್ಚಾಗಿ ಮಧ್ಯಮ ಮತ್ತು ತುಂಡು ಎಳೆಯ ಹತ್ತಿಯನ್ನು ಬೆಳೆಯಲಾಗುತ್ತದೆ. ಹತ್ತಿಯನ್ನು ಕರ್ನಾಟಕದಲ್ಲಿ ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಇದನ್ನು ಮಳೆ ಆಶ್ರಯದಲ್ಲಿ ಬೆಳೆಯುವುದೇ ಹೆಚ್ಚು. ನೀರಾವರಿ ಸಹಾಯದಿಂದಲೂ ಹತ್ತಿ ಬೆಳೆಯಲಾಗುವುದು.

**ಬೆಳೆಯುವ ಪ್ರದೇಶಗಳು :** ರಾಜ್ಯದಲ್ಲಿ ಹತ್ತಿ ಉತ್ಪಾದಿಸುವ ಪ್ರಮುಖ ಜಿಲ್ಲೆಗಳೆಂದರೆ : ಹಾವೇರಿ, ಧಾರವಾಡ, ಗದಗ, ಮೈಸೂರು, ಬಳ್ಳಾರಿ, ರಾಯಚೂರು, ಕಲಬುರಗಿ, ಬೆಳಗಾವಿ, ದಾವಣಗೆರೆ, ಚಿತ್ರದುರ್ಗ, ಕೊಪ್ಪಳ ಮತ್ತು ವಿಜಯಪುರ. ಹಾವೇರಿ ಜಿಲ್ಲೆ ಹತ್ತಿ ಉತ್ಪಾದನೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆ ಎರಡನೇ ಸ್ಥಾನದಲ್ಲಿದೆ.

ಹತ್ತಿ ಕೃಷಿಯಲ್ಲಿ ಕೀಟ ಮತ್ತು ರೋಗ ನಿಯಂತ್ರಣವು ದೊಡ್ಡ ಸಮಸ್ಯೆಯಾಗಿದೆ. ರೋಗ ನಿರೋಧಕ ಮತ್ತು ಸುಧಾರಿತ ತಳಿಗಳನ್ನು ಕೃಷಿ ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಇಳುವರಿ ಮತ್ತು ಉತ್ಪಾದನೆಗಳಲ್ಲಿ ಸುಧಾರಣೆ ಕಂಡುಬಂದಿದೆ.

**3. ತಂಬಾಕು (ಹೊಗೆಸೊಪ್ಪು) :** ಇದು ನಿಕೋಷಿಯಾನ ವರ್ಗಕ್ಕೆ ಸೇರಿದ ಸಸ್ಯವಾಗಿದೆ. ಇದರಲ್ಲಿ 'ನಿಕೋಟಿನ್' ಎಂಬ ಮಾದಕ ವಸ್ತುವಿದೆ. ತಂಬಾಕನ್ನು ಧೂಮಪಾನ, ಅಂದರೆ ಬೀಡಿ, ಸಿಗರೇಟು, ಸಿಗಾರ್, ನಶ್ಯ ಇತ್ಯಾದಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಪೋರ್ಚುಗೀಸರು 17 ನೇ ಶತಮಾನದಲ್ಲಿ ತಂಬಾಕನ್ನು ಭಾರತಕ್ಕೆ ಪರಿಚಯಿಸಿದರು. ಅನಂತರ ಕರ್ನಾಟಕದಲ್ಲಿ ಬೆಳೆಯಲು ಪ್ರಾರಂಭಿಸಲಾಯಿತು. ಈಗ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದೆ. ಇದನ್ನು ಸಾಧಾರಣ ಮಳೆ ಮತ್ತು ಹೆಚ್ಚು ಉಷ್ಣಾಂಶವುಳ್ಳ ಮರಳು ಮಿಶ್ರಿತ ಮಣ್ಣಿನ ಪ್ರದೇಶಗಳಲ್ಲಿ ಬೆಳೆಯಬಹುದು.

ಕರ್ನಾಟಕದಲ್ಲಿ ಬೀಡಿ ತಯಾರಿಕೆಗೆ ಮತ್ತು ಜಗಿಯಲು ಬಳಸುವಂತಹ ವರ್ಜೀನಿಯಾ ಪ್ರಭೇಧದ ತಂಬಾಕನ್ನು ಬೆಳೆಯಲಾಗುತ್ತದೆ. ವರ್ಜೀನಿಯಾ ತಂಬಾಕು ಉತ್ತಮ ದರ್ಜೆಯದ್ದಾಗಿದ್ದು, ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಬೇಡಿಕೆ ಗಳಿಸಿದೆ. ಇದರಿಂದ ವಿದೇಶಿ ವಿನಿಮಯದ ಗಳಿಕೆ ಮತ್ತು ಅಬಕಾರಿ ರೂಪದಲ್ಲಿ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಆದಾಯ ದೊರೆಯುವುದು.

**ಬೆಳೆಯುವ ಪ್ರದೇಶಗಳು :** ಕರ್ನಾಟಕವು ಭಾರತದ ಪ್ರಮುಖ ತಂಬಾಕು ಉತ್ಪಾದಿಸುವ ರಾಜ್ಯಗಳಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಮೈಸೂರು ಜಿಲ್ಲೆಯು ತಂಬಾಕು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಹಾಸನ, ಶಿವಮೊಗ್ಗ, ಕೊಡಗು, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ರಾಯಚೂರು, ದಾವಣಗೆರೆ, ತುಮಕೂರು, ಗದಗ ಜಿಲ್ಲೆಗಳಲ್ಲಿಯೂ ತಂಬಾಕಿನ ಬೇಸಾಯ ಹಂಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯ 'ನಿಪ್ಪಾಣಿ' ಯು ದೇಶದಲ್ಲಿ ಬೀಡಿ ತಯಾರಿಕಾ ತಂಬಾಕು ಮಾರುಕಟ್ಟೆಗೆ ಅತ್ಯಂತ ಪ್ರಸಿದ್ಧವಾದುದು. ಕರ್ನಾಟಕದಲ್ಲಿ ಬೆಳೆಯುವ ತಂಬಾಕು ವಿಶ್ವದರ್ಜೆಯದಾಗಿದ್ದು, ಉತ್ಪಾದನೆಯ ಬಹುಪಾಲು ರಫ್ತಾಗುವುದು.

> **ಚಟುವಟಿಕೆ**
> ಶಾಲೆಗೆ ರೈತರನ್ನು ಆಹ್ವಾನಿಸಿ ಅವರು ಬೆಳೆಯುವ ಬೆಳೆಗಳ ಪದ್ಧತಿ, ಅವುಗಳ ಮಾರಾಟದ ಬಗ್ಗೆ ಸಂವಾದ ನಡೆಸಿ.

**4. ಕಾಫಿ (Coffee) :** ಕಾಫಿಯು ಕರ್ನಾಟಕದ ಪ್ರಸಿದ್ಧ ನೆಡುತೋಟದ ಹಾಗೂ ಪಾನೀಯ ಬೆಳೆ. ಕರ್ನಾಟಕವು ಭಾರತದಲ್ಲೇ ಕಾಫಿಯ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. 1670 ರ ಸುಮಾರಿಗೆ ಬಾಬಾಬುಡನ್ ಎಂಬ ಮುಸ್ಲಿಂ ಸೂಫಿ ಸಂತನು ಚಿಕ್ಕಮಗಳೂರಿನ ಬೆಟ್ಟಗಳ ಸಾಲಿನಲ್ಲಿ ಕಾಫಿ ಸಸಿಗಳನ್ನು ಬೆಳೆಸಿದನು. ಆದ್ದರಿಂದ ಆ ಬೆಟ್ಟಗಳನ್ನು ಬಾಬಾಬುಡನ್‌ಗಿರಿ (ಇನಾಮ್ ದತ್ತಾತ್ರೇಯ ಪೀಠ) ಎನ್ನುವರು. ಆದರೆ ಕ್ರಮಬದ್ಧವಾದ ಕಾಫಿ ಬೇಸಾಯವು 1826 ರಲ್ಲಿ ಪ್ರಾರಂಭವಾಗಿ ಇಂದು ಕರ್ನಾಟಕದಲ್ಲಿ ವಿಸ್ತಾರವಾದ ಕಾಫಿ ತೋಟಗಳು ಕಂಡುಬರುತ್ತವೆ.

> **ಚಟುವಟಿಕೆ**
> ಸಾವಯವ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ.

ಕರ್ನಾಟಕವು ಅರೇಬಿಕ ಕಾಫಿ ಹಾಗೂ ರೊಬುಸ್ಟ ಕಾಫಿ ಎಂಬ ಎರಡು ಪ್ರಭೇದದ ಕಾಫಿಯನ್ನು ಉತ್ಪಾದಿಸುತ್ತಿದೆ. ಇದರಲ್ಲಿ ಅರೇಬಿಕ ಶ್ರೇಷ್ಠ ದರ್ಜೆಯದಾಗಿದ್ದು ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆದಿದೆ. ಕಾಫಿಯು ಉಷ್ಣವಲಯದ ಅಧಿಕ ಮಳೆ ಪಡೆಯುವ ಬೆಟ್ಟಗಳ ಇಳಿಜಾರುಗಳಲ್ಲಿ ಬೆಳೆಯುವ ಬೆಳೆ. ಜೇಡಿಮಿಶ್ರಿತ ಮಣ್ಣು ಈ ಬೆಳೆಗೆ ಸೂಕ್ತ. ಕಾಫಿ ಗಿಡಕ್ಕೆ ಸೂರ್ಯನ ನೇರ ಕಿರಣಗಳು ಬೀಳದಂತೆ ನೆರಳಿನ ಮರಗಳನ್ನು ಬೆಳೆಸಬೇಕು. ಮಳೆಯ ನೀರು ಹರಿದು ಹೋಗುವಂತಿರಬೇಕು. ಈ ಎಲ್ಲಾ ಅಂಶಗಳಿರುವ ಕರ್ನಾಟಕದ ಮಲೆನಾಡಿನಲ್ಲಿ ಕಾಫಿ ಬೆಳೆಯಲಾಗುತ್ತದೆ.

**ಬೆಳೆಯುವ ಪ್ರದೇಶಗಳು :** ದೇಶದ ಕಾಫಿಯ ಉತ್ಪಾದನೆಯಲ್ಲಿ ಸುಮಾರು ಶೇ.70 ಭಾಗವನ್ನು ಕರ್ನಾಟಕವೇ ಉತ್ಪಾದಿಸುತ್ತಿದೆ. ಕೊಡಗು ಜಿಲ್ಲೆಯು ಕಾಫಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಚಿಕ್ಕಮಗಳೂರು ಮತ್ತು ಹಾಸನ ಕಾಫಿ ಬೆಳೆಯುವ ಇತರೆ ಪ್ರಮುಖ ಜಿಲ್ಲೆಗಳಾಗಿವೆ. ಶಿವಮೊಗ್ಗ, ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಾಫಿ ಬೆಳೆಯಲಾಗುತ್ತದೆ.

NOT TO BE REPUBLISHED © KTBS

ಕರ್ನಾಟಕದಲ್ಲಿ ಬೆಳೆಯುವ ಕಾಫಿ ಅತ್ಯುತ್ತಮವಾಗಿದ್ದು, ರುಚಿ ಮತ್ತು ಆಹ್ಲಾದತೆಗೆ ಹೆಚ್ಚು ಹೆಸರುವಾಸಿಯಾಗಿದೆ. ಇದರಿಂದಾಗಿ ದೇಶ ವಿದೇಶಗಳಲ್ಲಿ ಕಾಫಿಯು ಉತ್ತಮವಾದ ಮಾರುಕಟ್ಟೆ ಹೊಂದಿದೆ. ಇದರಿಂದ ಕರ್ನಾಟಕವು 'ಕಾಫಿಯ ನಾಡು' ಎಂದೇ ಪ್ರಸಿದ್ಧವಾಗಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು ................ ಎನ್ನುವರು.
2. ಅತಿ ಹೆಚ್ಚು ಸಾಗುವಳಿ ಭೂಮಿಯನ್ನು ................ ಜಿಲ್ಲೆಯು ಹೊಂದಿದೆ.
3. ಕರ್ನಾಟಕದಲ್ಲಿ ಅತಿ ಹೆಚ್ಚು ಕಬ್ಬು ಉತ್ಪಾದಿಸುವ ಜಿಲ್ಲೆ ................
4. ತಂಬಾಕಿನಲ್ಲಿ ................ ಎಂಬ ಮಾದಕವಸ್ತುವಿರುತ್ತದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

5. ಕರ್ನಾಟಕದ ಭೂ ಬಳಕೆಯ ಮಾದರಿಗಳನ್ನು ತಿಳಿಸಿ.
6. ಕರ್ನಾಟಕದಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.
7. ನೀರಾವರಿ ಬೇಸಾಯ ಎಂದರೇನು ? ನೀರಾವರಿ ಬೆಳೆಗಳನ್ನು ಹೆಸರಿಸಿ.
8. ಮಿಶ್ರ ಬೇಸಾಯದ ಮುಖ್ಯ ಲಕ್ಷಣಗಳನ್ನು ತಿಳಿಸಿ.
9. ಮೆಕ್ಕೆಜೋಳವನ್ನು ಕುರಿತು ಟಿಪ್ಪಣಿ ಬರೆಯಿರಿ.

**III. ಹೊಂದಿಸಿ ಬರೆಯಿರಿ.**

| | ಅ | | ಆ |
|---|---|---|---|
| i. | ಕಾಫಿ | ಎ) | ವಿಜಯಪುರ |
| ii. | ಹತ್ತಿ | ಬಿ) | ತುಮಕೂರು |
| iii. | ಭತ್ತ | ಸಿ) | ಬೆಳಗಾವಿ |
| iv. | ರಾಗಿ | ಡಿ) | ರಾಯಚೂರು |
| v. | ಜೋಳ | ಇ) | ಹಾವೇರಿ |
| | | ಎಫ್) | ಕೊಡಗು |

**IV. ಚಟುವಟಿಕೆಗಳು.**

1. ಕರ್ನಾಟಕದಲ್ಲಿ ಬೆಳೆಯುವ ವಿವಿಧ ಆಹಾರ ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿರಿ.
2. ಜೋಳ, ರಾಗಿ ಮತ್ತು ಇತರೆ ಬೆಳೆಗಳನ್ನು ಬೆಳೆಯುವ ಪ್ರದೇಶಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ.

**V. ಯೋಜನೆ.**

1. ನೀವು ವಾಸಿಸುವ ಸುತ್ತ-ಮುತ್ತ ಸಾಗುವಳಿ ಮಾಡುವ ಬೆಳೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ ಹಾಗೂ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ.

*****

NOT TO BE REPUBLISHED @KTBS

# ಅರ್ಥಶಾಸ್ತ್ರ

## ಅಧ್ಯಾಯ – 14

# ಆರ್ಥಿಕ ರಚನೆ

Z8P4J4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಪುರಾತನ ಮತ್ತು ಸಾಂಪ್ರದಾಯಿಕ ಅರ್ಥ ವ್ಯವಸ್ಥೆಯ ಲಕ್ಷಣಗಳು ಮತ್ತು ಬದಲಾವಣೆಯ ಸ್ವರೂಪ.
- ವರಮಾನ ಮತ್ತು ಉದ್ಯೋಗದ ಮೂಲ.
- ಸ್ಥಿರಾತ್ಮಕ ಮತ್ತು ಚಲನಾತ್ಮಕ ಆರ್ಥಿಕತೆಯ ಲಕ್ಷಣಗಳು.
- ಸ್ವಾವಲಂಬಿ ಆರ್ಥಿಕತೆಯಲ್ಲಿ ಭಾರತದ ಮುನ್ನಡೆ.

**ರಚನಾತ್ಮಕ ಬದಲಾವಣೆ (Structural Transformation)**

ನಾವು ಹಿಂದಿನ ತರಗತಿಯಲ್ಲಿ ಆರ್ಥಿಕ ಚಟುವಟಿಕೆಗಳ ಬಗ್ಗೆ ತಿಳಿದಿದ್ದೇವೆ. ಆರ್ಥಿಕ ಚಟುವಟಿಕೆಗಳನ್ನು ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ಎಂದು ವರ್ಗೀಕರಿಸಲಾಗಿದೆ. ಅರ್ಥವ್ಯವಸ್ಥೆಯಲ್ಲಿನ ಈ ಮೂರು ವಲಯಗಳಲ್ಲಿನ ಉತ್ಪಾದನೆಯ ಮತ್ತು ಉದ್ಯೋಗದ ಸ್ವರೂಪ, ಆದಾಯದ ಮಟ್ಟ, ತಂತ್ರಜ್ಞಾನದ ಬಳಕೆ ಮತ್ತು ಜೀವನ ವಿಧಾನಗಳಲ್ಲಾಗುತ್ತಿರುವ ಬದಲಾವಣೆಗಳನ್ನು ಆರ್ಥಿಕ ರಚನೆ ಎನ್ನುವರು.

ಸಾಮಾನ್ಯವಾಗಿ ಪ್ರತಿಯೊಂದು ಅರ್ಥವ್ಯವಸ್ಥೆಯ ಆರ್ಥಿಕ ರಚನೆಯು ನಿರಂತರವಾಗಿ ಬದಲಾವಣೆಗೊಳಪಡುತ್ತಿರುತ್ತದೆ. ಉತ್ಪಾದನಾ ಚಟುವಟಿಕೆಯಲ್ಲಿ ಬಳಸಲ್ಪಡುವ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳ ದಕ್ಷತೆ ಉತ್ಪಾದನೆಯನ್ನು ಉತ್ತಮಗೊಳಿಸುತ್ತದೆ. ಉತ್ಪಾದನಾಂಗಗಳಲ್ಲಿ ನವೀನ ತಂತ್ರಜ್ಞಾನ ಬಳಕೆಯಾದಂತೆ ಉದ್ಯೋಗದ ಸ್ವರೂಪ ಮತ್ತು ಉತ್ಪಾದನಾ ಪ್ರಮಾಣದಲ್ಲಿ ಬದಲಾವಣೆಯಾಗುತ್ತದೆ.

ಪುರಾತನ ಭಾರತದ ಅರ್ಥವ್ಯವಸ್ಥೆಯು, ಜಗತ್ತಿನ ಇತರೆ ಪ್ರಾಚೀನ ಅರ್ಥವ್ಯವಸ್ಥೆಗಳಂತೆ ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿತ್ತು. ದೇಶದ ಬಹುತೇಕ ಜನ ಕೃಷಿಯನ್ನು ಅವಲಂಬಿಸಿದ್ದರು. ಆಗ ಕೃಷಿಯು ಜೀವನಾದಾರ ಬೇಸಾಯವಾಗಿತ್ತು. ಜೀವನಾದಾರ ಕೃಷಿಯಲ್ಲಿ ತಮಗೆ ಅಗತ್ಯಕ್ಕೆ ತಕ್ಕ ಆಹಾರವನ್ನಷ್ಟೇ ಬೆಳೆಯುತ್ತಿದ್ದರು. ಜನರ ಬಯಕೆಗಳು ಕಡಿಮೆಯಿದ್ದು, ಅವರ ಬದುಕು ಸರಳವಾಗಿತ್ತು. ಹಾಗಾಗಿ ಶ್ರಮವಿಭಜನೆ ಅಷ್ಟಾಗಿ ಬಳಕೆಯಿರಲಿಲ್ಲ, ವಸ್ತು ವಿನಿಮಯ ಪದ್ಧತಿ ಬಳಕೆಯಲ್ಲಿತ್ತು. ಕೃಷಿಯು ವಾಣಿಜ್ಯೀಕರಣಗೊಂಡಂತೆ ಪುರಾತನ ಅರ್ಥವ್ಯವಸ್ಥೆಗಳು ಆಧುನಿಕತೆಯತ್ತ ಪರಿವರ್ತನೆಗೊಳ್ಳಲಾರಂಭಿಸಿದವು. ಕೃಷಿಕರು ಕೇವಲ ಸ್ವಂತ ಅನುಭೋಗಕ್ಕಾಗಿ ಬೆಳೆಯುವುದಕ್ಕೆ ಬದಲಾಗಿ ಮಾರುಕಟ್ಟೆಗಳಿಗಾಗಿ ಬೆಳೆಗಳನ್ನು ಬೆಳೆಯಲು ಮುಂದಾದರು. ಸಾಂಪ್ರದಾಯಿಕ ಆಹಾರ ಧಾನ್ಯಗಳಾದ ರಾಗಿ, ಭತ್ತ, ಜೋಳ, ಗೋಧಿಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ತೆಂಗು, ಹತ್ತಿ, ಕಬ್ಬು, ಸೆಣಬು, ಕಡಲೆಕಾಯಿ ಹಾಗೂ ಸಾಂಬಾರ ಪದಾರ್ಥಗಳನ್ನು ಬೆಳೆಯುವುದು ಹೆಚ್ಚು ಲಾಭದಾಯಕವೆನಿಸಿತು. ಇವುಗಳಲ್ಲಿ ಹತ್ತಿ, ಕಬ್ಬು ಹಾಗೂ ಇತರೆ ವಾಣಿಜ್ಯ ಬೆಳೆಗಳನ್ನು ಕೃಷಿ ಆಧಾರಿತ ಕೈಗಾರಿಕೆಯಲ್ಲಿ ಬಳಸಲು ಪ್ರಾರಂಭಿಸಿದ್ದರಿಂದ, ಹಲವು ಉದ್ಯಮಗಳು ಬೆಳೆಯಲು ಸಹಾಯಕವಾಯಿತು.

© KTBS NOT TO BE REPUBLISHED

17 ಮತ್ತು 18ನೇ ಶತಮಾನದಲ್ಲಿ ಬ್ರಿಟನ್ನಿನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯು ಕ್ರಮೇಣ ಬೇರೆ ಬೇರೆ ಭಾಗಗಳಿಗೆ ವ್ಯಾಪಿಸಿತು. ಕೈಗಾರಿಕಾ ಕ್ರಾಂತಿಯು ಸಮಾಜದಲ್ಲಿ ಬಂಡವಾಳವರ್ಗ ಎಂಬ ಹೊಸ ವರ್ಗದ ಉದಯಕ್ಕೆ ದಾರಿ ಮಾಡಿಕೊಟ್ಟಿತು. ಭೂಮಾಲೀಕರಾಗಿದ್ದ ಊಳಿಗಮಾನ್ಯ ಒಡೆಯರು ತಮ್ಮಲ್ಲಿದ್ದ ಹಣವನ್ನು ಕೈಗಾರಿಕೆಗಳಲ್ಲಿ ಬಂಡವಾಳವಾಗಿ ಹೂಡಲು ಮುಂದಾಗಿ ಬಂಡವಾಳಗಾರರೆನಿಸಿಕೊಂಡರು. ನವೀನ ಸಂಶೋಧನೆಗಳನ್ನು ಬಳಸಿಕೊಂಡು, ಅಗಾಧ ಲಾಭದಿಂದ ಪುಳಕಿತಗೊಂಡ ಇವರು ವಿವಿಧ ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿದರು. ಕ್ರಮೇಣ ನವೀನ ತಂತ್ರಜ್ಞಾನವು ಕೃಷಿಯನ್ನು ಒಳಗೊಂಡಂತೆ ಎಲ್ಲಾ ವಲಯಗಳಲ್ಲಿ ಬಳಕೆಗೆ ಬರತೊಡಗಿತು. ಇದರಿಂದ ಉತ್ಪಾದನೆ, ಉದ್ಯೋಗಾವಕಾಶಗಳು ಮತ್ತು ಆದಾಯ ಹೆಚ್ಚಾಗಿ ಜನರ ಬದುಕು ಉತ್ತಮಗೊಳ್ಳತೊಡಗಿತು. ಹೀಗೆ ಪುರಾತನ ಅರ್ಥವ್ಯವಸ್ಥೆಗಳು ಆಧುನಿಕ ಅರ್ಥವ್ಯವಸ್ಥೆಗಳಾಗಿ ಮಾರ್ಪಡುತ್ತಿವೆ. ಈ ಪ್ರಕ್ರಿಯೆಯಲ್ಲಿ ಕೆಲವು ಅರ್ಥವ್ಯವಸ್ಥೆಗಳು ಇತರೆ ಅರ್ಥವ್ಯವಸ್ಥೆಗಳಿಗಿಂತ ಮುಂದಿವೆ. ಹಾಗಾಗಿ ವಿಶ್ವದ ವಿವಿಧ ಆರ್ಥಿಕತೆಗಳು ಬೇರೆ ಬೇರೆ ಹಂತಗಳಲ್ಲಿ ಮುನ್ನಡೆಯುತ್ತಿವೆ.

**ನೀವು ತಿಳಿಯಬಹುದು :**

ನಮ್ಮ ಊರಿನಲ್ಲಿ ಹಿಂದೆ ಇದ್ದಂತಹ ಜನಸಂಖ್ಯೆ ಮತ್ತು ಇಂದು ಇರುವ ಜನಸಂಖ್ಯೆ ಹಾಗೂ ನಿಮ್ಮೂರಿನ ಕೃಷಿ ಕ್ಷೇತ್ರದಲ್ಲಾಗಿರುವ ಬದಲಾವಣೆ ಬಗ್ಗೆ.

ಭಾರತದ ಕೃಷಿಯಲ್ಲಿಯೂ ಆಧುನಿಕ ಕೃಷಿಪದ್ಧತಿಯನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಲಾಯಿತು. ಅದರ ಭಾಗವಾಗಿ ಅಧಿಕ ಇಳುವರಿಯ ಬೀಜಗಳು, ಯಾಂತ್ರಿಕ ಬೇಸಾಯ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ ಹೆಚ್ಚಾಯಿತು. ಇದಲ್ಲದೆ ಕೃಷಿ ವಿಧಾನದಲ್ಲೂ ಉತ್ಪಾದನೆ ಮತ್ತು ಬೇಸಾಯಗಳಲ್ಲಿ ಹಲವಾರು ಆವಿಷ್ಕಾರಗಳಾಗಿ ಅನೇಕ ಬದಲಾಣೆಗಳಾದವು. ತಳಿ ತಂತ್ರಜ್ಞಾನ, ನೀರಾವರಿ ಬಳಕೆಯಲ್ಲಿ ತಂತ್ರಜ್ಞಾನದ ಅಳವಡಿಕೆ ಮುಂತಾದ ಕ್ರಮಗಳಿಂದಾಗಿ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳಕ್ಕೆ ಕಾರಣವಾಯಿತು. ಅತಿಯಾದ ರಾಸಾಯನಿಕಗೊಬ್ಬರ, ಕ್ರಿಮಿನಾಶಕಗಳ ಬಳಕೆ ಹಾಗೂ ಮುಂತಾದ ಕ್ರಮಗಳಿಂದಾಗಿ ಪರಿಸರವು ಗಮನಾರ್ಹವಾಗಿ ಮಾಲಿನ್ಯಗೊಂಡಿತು. ಭೂ ಸವಕಳಿಯ ಹೆಚ್ಚಳದಿಂದ ಫಲವತ್ತಾದ ಭೂಮಿ ನಾಶವಾಯಿತು. ಯಥೇಚ್ಛವಾಗಿ ನೀರು ಬಳಸಿದ್ದರಿಂದ, ಅಂತರ್ಜಲ ಪುನಃಭರ್ತಿ ಮಾಡದ್ದರಿಂದ ಅಂತರ್ಜಲ ಕುಸಿತವಾಯಿತು. ಅತಿ ಹೆಚ್ಚಿನ ಕ್ರಿಮಿನಾಶಕಗಳ ಬಳಕೆಯಿಂದಾಗಿ ಕೆಲವುಕಡೆ ನೀರಿನ ಮೂಲಗಳು ಕಲುಷಿತವಾಯಿತು. ಇದೆಲ್ಲದರ ಪರಿಣಾಮ ಸುಸ್ಥಿರ ಕೃಷಿ ಅಭಿವೃದ್ಧಿಗಾಗಿ ಸಾವಯವ ಕೃಷಿ ಹಾಗು ನೈಸರ್ಗಿಕ ಕೃಷಿ ಮತ್ತೆ ಪ್ರಾಮುಖ್ಯತೆ ಪಡೆಯಲಾರಂಭಿಸಿದೆ.

ಇದೆಲ್ಲದರ ಪರಿಣಾಮವಾಗಿ ಭಾರತದ ಆರ್ಥಿಕ ರಚನೆಯಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ, ಮೊದಲಿಗಿಂತಲೂ ಜೀವನೋಪಾಯಕ್ಕೆ ಕೃಷಿಯ ಅವಲಂಬನೆ ಕಡಿಮೆಯಾಗಿದ್ದರೂ ಈಗಲೂ ಅತಿ ಹೆಚ್ಚು ಜನ ಕೃಷಿ ಅವಲಂಬಿತರಾಗಿದ್ದಾರೆ. ಆದರೆ ರಾಷ್ಟ್ರಿಯ ಆದಾಯಕ್ಕೆ ಅದರ ಕೊಡುಗೆ ಗಮನಾರ್ಹವಾಗಿ ಕಡಿಮೆಯಾಗುತ್ತಿದೆ. ಪ್ರಸ್ತುತದಲ್ಲಿ ಸೇವಾವಲಯವು ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುತ್ತಿದೆ. ಇದು ಕೃಷಿಯ ನಂತರ ಹೆಚ್ಚಿನ ಉದ್ಯೋಗವನ್ನು ನೀಡುತ್ತಿದೆ. ಕೈಗಾರಿಕೆ ಕ್ಷೇತ್ರವು ಕ್ರಮೇಣ ಅಭಿವೃದ್ಧಿಯಾಗುತ್ತಿದ್ದು, ಸೇವಾವಲಯದ ನಂತರ ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುತ್ತಿದೆ.

**ಆದಾಯದ ಮೂಲಗಳು (Sources of Income)**

ಸರಳ ಅರ್ಥವ್ಯವಸ್ಥೆಯಲ್ಲಿ ಆದಾಯದ ಮೂಲವು ಎರಡು ಮೂಲಗಳಿಂದ ಲಭ್ಯವಾಗುತ್ತದೆ. ಅವುಗಳೆಂದರೆ 1) ಗೃಹ ಘಟಕ 2) ಉದ್ಯಮ ಘಟಕ. ಇವು ಪರಸ್ಪರ ವಿನಿಮಯದ ಮೂಲಕ ಆದಾಯವನ್ನು ಸೃಷ್ಟಿಸುತ್ತವೆ.

© KTBS NOT TO BE REPUBLISHED

ಸರಳ ಅರ್ಥವ್ಯವಸ್ಥೆಯಲ್ಲಿ ಗೃಹ ಘಟಕಗಳು ಮತ್ತು ಉದ್ಯಮ ಘಟಕಗಳ ನಡುವಿನ ಪರಸ್ಪರ ಅವಲಂಬನೆಯನ್ನು ಮತ್ತು ಆದಾಯದ ಹರಿವನ್ನು ಕೆಳಗಿನ ರೇಖಾಚಿತ್ರದಲ್ಲಿ ಗಮನಿಸಿ.




NOT TO BE REPUBLISHED @KTBS

ಗೃಹ ಘಟಕಗಳು ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳ ಮಾಲೀಕತ್ವ ಹೊಂದಿದ್ದು, ಅವುಗಳನ್ನು ಉದ್ಯಮ ಘಟಕಗಳಿಗೆ ಪೂರೈಸುತ್ತವೆ. ಉದ್ಯಮ ಘಟಕಗಳು ಇದಕ್ಕೆ ಪ್ರತಿಫಲವಾಗಿ ಭೂಮಿಗೆ ಗೇಣಿ, ಶ್ರಮಕ್ಕೆ ಕೂಲಿ, ಬಂಡವಾಳಕ್ಕೆ ಬಡ್ಡಿ ಹಾಗೂ ಸಂಘಟನೆಗೆ ಲಾಭವನ್ನು ನೀಡುತ್ತವೆ. ಗೇಣಿ, ಕೂಲಿ, ಬಡ್ಡಿ ಮತ್ತು ಲಾಭ ಗೃಹ ಘಟಕಗಳ ಆದಾಯವಾಗಿವೆ.

ಉದ್ಯಮ ಘಟಕಗಳು ಉತ್ಪಾದನಾಂಗಗಳನ್ನು ಬಳಸಿಕೊಂಡು ಸರಕು-ಸೇವೆಗಳನ್ನು ಉತ್ಪಾದಿಸಿ, ಗೃಹ ಘಟಕಗಳಿಗೆ ಮಾರಾಟ ಮಾಡುತ್ತವೆ. ಇವುಗಳಿಗೆ ಗೃಹಘಟಕಗಳು ಸಂದಾಯ ಮಾಡುವ ಹಣವು ಉದ್ಯಮ ಘಟಕಗಳ ಆದಾಯವಾಗಿದೆ.

ಆಧುನಿಕ ರಾಷ್ಟ್ರಗಳು ಕಲ್ಯಾಣ ರಾಜ್ಯಗಳಾಗಿವೆ. ಆದುದರಿಂದ ಸರ್ಕಾರಗಳು ಜನರ ಕಲ್ಯಾಣಕ್ಕಾಗಿ ಆದಾಯವನ್ನು ಸಂಗ್ರಹಿಸಲು ಗೃಹ ಹಾಗೂ ಉದ್ಯಮ ಘಟಕಗಳ ಮೇಲೆ ತೆರಿಗೆಯನ್ನು ವಿಧಿಸುತ್ತವೆ. ಇದಕ್ಕೆ ಪ್ರತಿಯಾಗಿ ಗೃಹ ಘಟಕಗಳಿಗೆ ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ, ಕುಡಿಯುವ ನೀರು ಮುಂತಾದ ಸೇವೆಗಳು ಹಾಗೂ ರಕ್ಷಣೆಯನ್ನು ಒದಗಿಸುತ್ತವೆ. ಅದೇ ರೀತಿಯಲ್ಲಿ ಸರ್ಕಾರವು ಉದ್ಯಮಘಟಕಗಳಿಗೆ ಸಾರಿಗೆ-ಸಂಪರ್ಕ, ಸಂವಹನ, ರಕ್ಷಣೆ ಮತ್ತು ವಿದ್ಯುತ್ ಮುಂತಾದ ಸೇವೆಗಳನ್ನು ಒದಗಿಸುತ್ತದೆ. ಇದನ್ನು ಮುಂದಿನ ರೇಖಾಚಿತ್ರದಲ್ಲಿ ಗಮನಿಸೋಣ.




©KTBS NOT TO BE REPUBLISHED

**ಉದ್ಯೋಗದ ಮೂಲಗಳು (Sources of Employment)**

ವ್ಯಕ್ತಿಗಳು ತಮ್ಮ ಜೀವನ ನಿರ್ವಹಣೆಗಾಗಿ ಅರ್ಥವ್ಯವಸ್ಥೆಯ ವಿವಿಧ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳಲ್ಲಿ ದುಡಿಯುತ್ತಾರೆ. ಕಾಲಕ್ರಮೇಣ ಕೃಷಿ ಪ್ರಧಾನ ರಾಷ್ಟ್ರಗಳು ಕೈಗಾರಿಕೆ ಹಾಗೂ ಸೇವಾ ವಲಯ ಪ್ರಧಾನ ರಾಷ್ಟ್ರಗಳಾಗುತ್ತಿವೆ. ಭಾರತದ ಅರ್ಥವ್ಯವಸ್ಥೆಯು ಅಭಿವೃದ್ಧಿ ಹೊಂದಿದಂತೆ, ಕೃಷಿಯಲ್ಲಿಯೂ ಆಧುನಿಕ ತಂತ್ರಜ್ಞಾನ ಅಳವಡಿಕೆಯಿಂದ ಅನೇಕ ಬದಲಾಣೆಗಳಾದವು. ತಂತ್ರಜ್ಞಾನದ ಅಳವಡಿಕೆ ಹಾಗೂ ಕೌಶಲ್ಯ ಸಹಿತ ಕೃಷಿಯಿಂದಾಗಿ ಕೃಷಿಯಲ್ಲಿ ದುಡಿಮೆ ಶಕ್ತಿ (Surplus Labour Force) ಹೆಚ್ಚಾಗಿ ಮರೆಮಾಚಿದ ನಿರುದ್ಯೋಗ ಹೆಚ್ಚಾಯಿತು.

ಆ ವೇಳೆಗೆ ಭಾರತದಲ್ಲಿ ಕೈಗಾರಿಕೆ ಮತ್ತು ಸೇವಾ ವಲಯಗಳು ವಿಸ್ತರಣೆಗೊಳ್ಳತೊಡಗಿದ್ದವು. ಆಗ ದುಡಿಮೆ ಶಕ್ತಿಯು (work force) ಕೃಷಿಯಿಂದ ಕೈಗಾರಿಕೆ ಮತ್ತು ಸೇವಾ ವಲಯಗಳಿಗೆ ವರ್ಗಾವಣೆಯಾಗತೊಡಗಿತು. ಆದರೆ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿನ ಬಹುತೇಕ ಉದ್ಯೋಗಗಳಿಗೆ ಕೌಶಲ್ಯಸಹಿತ ಮಾನವ ಶಕ್ತಿಯ ಅಗತ್ಯವಿತ್ತು, ಕೃಷಿಯಿಂದ ವರ್ಗಾವಣೆಗೊಳ್ಳ ಬಯಸಿದ ಕೌಶಲ್ಯರಹಿತ ದುಡಿಮೆ ಶಕ್ತಿಗೆ ಇದು ಪ್ರಮುಖ ಅಡಚಣೆಯಾಯಿತು ಕೌಶಲ್ಯರಹಿತ ಕೃಷಿ ಕಾರ್ಮಿಕರಿಗೆ ಕೈಗಾರಿಕೆ ಮತ್ತು ಸೇವಾವಲಯಗಳಲ್ಲಿ ಉದ್ಯೋಗಗಳು ದೊರೆಯದಾದವು. ಅವರಲ್ಲಿ ಕೆಲವರು ತರಬೇತಿಯಿಂದ ಅಗತ್ಯ ಕೌಶಲ್ಯಗಳನ್ನು ಪಡೆದು ಉದ್ಯೋಗ ದೊರಕಿಸಿಕೊಂಡರಾದರೂ, ಬಹುತೇಕರು ಕೃಷಿಯನ್ನೇ ಅವಲಂಬಿಸಿದರು. ಕೆಲವು ರೈತ ಕುಟುಂಬಗಳು ಕೃಷಿ ನೈಪುಣ್ಯತೆಯಿಂದ ಉತ್ತಮ ಇಳುವರಿಯನ್ನು ಪಡೆದು, ಇತರರಿಗೂ ಮಾದರಿಯಾಗಿ ದೇಶದ ಅಭಿವೃದ್ಧಿಯಲ್ಲೂ ಪಾತ್ರವಹಿಸಿದ್ದಾರೆ. ಒಟ್ಟಾರೆಯಾಗಿ ಭಾರತದಲ್ಲಿ ಒಟ್ಟು ದೇಶೀಯ ಉತ್ಪನ್ನ (Gross Domestic Product) ಕ್ಕೆ ಕೃಷಿವಲಯದ ಕೊಡುಗೆ ಕಡಿಮೆಯಾಗುತ್ತಿದ್ದರೂ, ಕೃಷಿಯ ಮೇಲೆ ಅವಲಂಬಿತರಾಗಿರುವ ಶ್ರಮಿಕರ ಪ್ರಮಾಣ ಹೆಚ್ಚಾಗಿಯೇ ಇದೆ. ಸರ್ಕಾರವು ಕೌಶಲ್ಯರಹಿತ ಕೃಷಿ ಕಾರ್ಮಿಕರಿಗೆ ಅಗತ್ಯ ಕೌಶಲ್ಯಗಳನ್ನು ರೂಢಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿದೆ.

## ಸ್ಥಿರಾತ್ಮಕ ಮತ್ತು ಚಲನಾತ್ಮಕ ಅರ್ಥವ್ಯವಸ್ಥೆ

ಸ್ಥಿರಾತ್ಮಕ (Static) ಎಂಬ ಪದವು ಗ್ರೀಕ್‌ನ ಸ್ಟಾಟಿಕೆ (Statike) ಎಂಬ ಪದದಿಂದ ಬಂದಿದೆ. ಸ್ಟಾಟಿಕೆ ಎಂದರೆ ಸ್ಥಿರವಾಗಿ ನಿಲ್ಲು ಎಂದರ್ಥ. ಅರ್ಥಶಾಸ್ತ್ರದಲ್ಲಿ ಇದು ಯಾವುದೇ ಬದಲಾವಣೆಗಳಿಲ್ಲದ ಸನ್ನಿವೇಶವನ್ನು ಸೂಚಿಸುತ್ತದೆ. ಸ್ಥಿರಾತ್ಮಕ ಅರ್ಥವ್ಯವಸ್ಥೆಯು ಕಾಲಾತೀತ ಅರ್ಥವ್ಯವಸ್ಥೆಯಾಗಿದ್ದು, ಅಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಅರ್ಥವ್ಯವಸ್ಥೆಯ ಮೂಲಾಂಶಗಳಾದ ಜನಸಂಖ್ಯಾ ಪ್ರಮಾಣ, ಬಂಡವಾಳದ ಪೂರೈಕೆ, ಉತ್ಪಾದನಾ ವಿಧಾನ, ವ್ಯವಹಾರ ಸಂಘಟನೆಗಳ ಸ್ವರೂಪ, ಜನರ ಬಯಕೆಗಳು ಬದಲಾಗದೆ ಸ್ಥಿರವಾಗಿರುತ್ತವೆ. ಹಾಗಾಗಿ ಆರ್ಥಿಕ ಬೆಳವಣಿಗೆಯು ಕುಂಠಿತವಾಗಿರುತ್ತದೆ.

ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದ ಅರ್ಥವ್ಯವಸ್ಥೆಯು ಒಂದು ಸ್ಥಿರಾತ್ಮಕ ಅರ್ಥವ್ಯವಸ್ಥೆಯಾಗಿತ್ತು. ಬ್ರಿಟಿಷರ ದೀರ್ಘಕಾಲದ ಆರ್ಥಿಕ ಶೋಷಣೆಯ ಪರಿಣಾಮವಾಗಿ ಭಾರತವು ಬಡರಾಷ್ಟ್ರವಾಗಿ ಮಾರ್ಪಟ್ಟಿತ್ತು. ಪೌಷ್ಠಿಕ ಆಹಾರದ ಕೊರತೆ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆಯಿಂದಾಗಿ ಮರಣ ಪ್ರಮಾಣದ ದರ ಹೆಚ್ಚಿತು. ಬಡತನದಿಂದಾಗಿ ಬಂಡವಾಳದ ಕೊರತೆ ಅಗಾಧವಾಗಿತ್ತು. ಕೃಷಿ ಮತ್ತು ಕೈಗಾರಿಕೆಯಲ್ಲಿ ಅನೇಕ ಪುರಾತನ ಉತ್ಪಾದನಾ ವಿಧಾನಗಳು ಇನ್ನೂ ಬಳಕೆಯಲ್ಲಿದ್ದವು. ಆದುದರಿಂದ ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಅರ್ಥವ್ಯವಸ್ಥೆಯು ಸ್ಥಿರವಾಗಿತ್ತು.

ಚಲನಾತ್ಮಕ ಎಂಬ ಪದವು ಗ್ರೀಕಿನ 'dynamikos' ಎಂಬ ಪದದಿಂದ ಬಂದಿದೆ, ಇದರ ಅರ್ಥ ಶಕ್ತಿಶಾಲಿಯಾದ ಬದಲಾವಣೆ ಇಲ್ಲವೇ ನಿರಂತರ ಬದಲಾವಣೆಯನ್ನು ಸೂಚಿಸುತ್ತದೆ. ಚಲನಾತ್ಮಕ ಅರ್ಥಶಾಸ್ತ್ರವು ಅರ್ಥವ್ಯವಸ್ಥೆಯಲ್ಲಿನ ಬದಲಾವಣೆಗಳ ಅಧ್ಯಯನವನ್ನು ಸೂಚಿಸುತ್ತದೆ. ಇದು ಕಾಲದಿಂದ ಕಾಲಕ್ಕೆ ಅರ್ಥವ್ಯವಸ್ಥೆಯಲ್ಲಾಗುವ ಬದಲಾವಣೆಯ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತದೆ. ಚಲನಾತ್ಮಕ ಅರ್ಥವ್ಯವಸ್ಥೆಯಲ್ಲಿ ಕಾಲದಿಂದ ಕಾಲಕ್ಕೆ ಜನಸಂಖ್ಯಾ ಪ್ರಮಾಣ, ಬಂಡವಾಳದ ಪೂರೈಕೆ, ಉತ್ಪಾದನಾ ವಿಧಾನ, ವ್ಯವಹಾರ ಸಂಘಟನೆಗಳ ಸ್ವರೂಪ, ಜನರ ಬಯಕೆಗಳು ನಿರಂತರವಾಗಿ ಬದಲಾಗುತ್ತಿರುತ್ತವೆ. ಆರ್ಥಿಕ ಬೆಳವಣಿಗೆಯು ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಬದಲಾಗುತ್ತಿರುತ್ತದೆ. ಇದರಿಂದಾಗಿ ಅರ್ಥವ್ಯವಸ್ಥೆಯು ಆಧುನಿಕತೆಯತ್ತ ಪರಿವರ್ತನೆಗೊಳ್ಳುತ್ತಿದೆ. ನವೀನ ತಂತ್ರಜ್ಞಾನದ ಬಳಕೆಯಿಂದ ಉತ್ಪಾದನಾ ವಿಧಾನ ಮತ್ತು ಉತ್ಪಾದನಾ ಪ್ರಮಾಣದಲ್ಲಿ ಬದಲಾವಣೆಯಾಗುತ್ತದೆ. ಅದರಿಂದಾಗಿ ಜನರ ಜೀವನಶೈಲಿ ಬದಲಾಗುತ್ತಿದೆ.

ಸ್ವಾತಂತ್ರ್ಯಾನಂತರ ಭಾರತದ ಅರ್ಥವ್ಯವಸ್ಥೆಯು ಚಲನಾತ್ಮಕ ಅರ್ಥವ್ಯವಸ್ಥೆಯಾಗಿ ಮಾರ್ಪಟ್ಟಿದೆ. ಆರೋಗ್ಯ ಸೌಲಭ್ಯಗಳ ವಿಸ್ತರಣೆಯಿಂದಾಗಿ ಮರಣ ಪ್ರಮಾಣ ಕಡಿಮೆಯಾಗಿ ಜೀವನಾಯುಷ್ಯ ಹೆಚ್ಚಾಗಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲಾಗುತ್ತಿದೆ. ನವೀನ ತಂತ್ರಜ್ಞಾನಗಳ ಬಳಕೆಯಿಂದ ಕೃಷಿ ಮತ್ತು ಕೈಗಾರಿಕಾ ವಲಯದಲ್ಲಿ ಉತ್ಪಾದನಾ ವಿಧಾನಗಳು ವೇಗವಾಗಿ ಬದಲಾಗುತ್ತಿವೆ. ಇದರಿಂದ ಉತ್ಪಾದನೆಯು ಹೆಚ್ಚುತ್ತಿದೆ. ಜನರ ಬದುಕು ಬದಲಾಗುತ್ತಿದ್ದು, ಅವರ ಅಗತ್ಯಗಳೂ ಬದಲಾಗುತ್ತಿವೆ. 1991 ರಿಂದೀಚೆಗೆ ಜಾರಿಗೆ ಬಂದಿರುವ ಹೊಸ ಆರ್ಥಿಕ ನೀತಿಯಿಂದಾಗಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ಬದಲಾವಣೆಯ ವೇಗವನ್ನು ಹೆಚ್ಚಿಸಿವೆ. ಇದರಿಂದಾಗಿ ಅರ್ಥವ್ಯವಸ್ಥೆಯ ರಚನೆಯಲ್ಲಿ ಬದಲಾವಣೆಗಳಾಗುತ್ತಿವೆ. ಕೃಷಿಯ ಮೇಲೆ ಇದು ನಕಾರಾತ್ಮಕ ಪರಿಣಾಮವನ್ನು ಉಂಟು ಮಾಡಿದ್ದರೆ, ಸೇವಾ ವಲಯದ ಮೇಲೆ ಇದು ಸಕಾರಾತ್ಮಕ ಪರಿಣಾಮವನ್ನು ಉಂಟುಮಾಡಿದೆ, ಕೈಗಾರಿಕಾ ಕ್ಷೇತ್ರ ಕ್ರಮೇಣ ಬೆಳೆಯತೊಡಗಿದೆ. ಸರ್ಕಾರ ಹೊಸ ಆರ್ಥಿಕ ನೀತಿಯಿಂದಾಗಿ ತೊಂದರೆಗೊಳಗಾದ ಜನರಿಗೆ 'ರಕ್ಷಣೆ ಬಲೆ' (Safety Net)ಯನ್ನು ರೂಪಿಸಲು ಶ್ರಮಿಸುತ್ತಿದೆ. ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ (Inclusive Growth) ಗಾಗಿ ಸರ್ಕಾರ ಶ್ರಮಿಸುತ್ತಿದೆ.

© KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ರಚನಾತ್ಮಕ ಬದಲಾವಣೆ ................ ಚಟುವಟಿಕೆಗೆ ಸಂಬಂಧವಾಗಿದೆ.

2) ಪುರಾತನ ಆರ್ಥಿಕತೆಯಲ್ಲಿ ................ ಪ್ರಧಾನವಾಗಿತ್ತು.

3) ಸರಳ ಆರ್ಥಿಕತೆಯಲ್ಲಿ ................ ವಲಯಗಳು ಇರುತ್ತವೆ.

4) ಸ್ಥಿರಾತ್ಮಕ ಅರ್ಥಶಾಸ್ತ್ರ ................ ಪದದಿಂದ ಬಂದಿದೆ.

5) ಕೈಗಾರಿಕಾ ಕ್ರಾಂತಿ ಮೊದಲಿಗೆ ................ ದೇಶದಲ್ಲಿ ನಡೆಯಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

6) ರಚನಾತ್ಮಕ ಬದಲಾವಣೆ ಎಂದರೇನು ?

7) ಪುರಾತನ ಅರ್ಥ ವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿ.

8) ಬಂಡವಾಳವರ್ಗ ಹೇಗೆ ಉದಯವಾಯಿತು ?

9) ಆದಾಯದ ಮೂಲಗಳು ಯಾವುವು ?

10) ಉದ್ಯೋಗದ ಮೂಲಗಳು ಯಾವುವು ?

11) ಸ್ಥಿರಾತ್ಮಕ ಮತ್ತು ಚಲನಾತ್ಮಕ ಅರ್ಥಶಾಸ್ತ್ರದ ವ್ಯತ್ಯಾಸವನ್ನು ವಿವರಿಸಿ.

NOT TO BE REPUBLISHED ©KTBS

**III. ಚಟುವಟಿಕೆ.**

1) ನಿಮ್ಮ ಗ್ರಾಮದಲ್ಲಿನ ಕೃಷಿಕರು ಸುಮಾರು 20 ವರ್ಷಗಳ ಹಿಂದೆ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬುದನ್ನು ನಿಮ್ಮ ಪಾಲಕರಿಂದ ಕೇಳಿ ತಿಳಿದು ಪಟ್ಟಿ ಮಾಡಿ. ಈಗ ನಿಮ್ಮ ಗ್ರಾಮದಲ್ಲಿ ಯಾವ ಬೆಳೆಗಳನ್ನು ಬೆಳೆಯುತ್ತಿದ್ದಾರೆಂಬುದನ್ನು ಹೋಲಿಕೆ ಮಾಡಿರಿ. 20 ವರ್ಷಗಳ ಅವಧಿಯಲ್ಲಿ ನಿಮ್ಮ ಗ್ರಾಮದ ಬೆಳೆಗಳಲ್ಲಾಗಿರುವ ಬದಲಾವಣೆಗಳನ್ನು ಗುರುತಿಸಿ. ಈ ಬಗ್ಗೆ ಒಂದು ಸಂಕ್ಷಿಪ್ತ ಪ್ರಬಂಧ ಬರೆಯಿರಿ.

**IV. ಯೋಜನೆ.**

1) ಸರ್ಕಾರದೊಂದಿಗಿನ ಆದಾಯದ ವೃತ್ತಾಕಾರದ ಹರಿವಿನ ಚಿತ್ರ ಬಿಡಿಸಿ ವಿವರಿಸಿ.

*****

ಅಧ್ಯಾಯ – 15

G1C2U5

# ಭಾರತೀಯ ಅರ್ಥವ್ಯವಸ್ಥೆಯ ವಲಯಗಳು

**ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದ ಆರ್ಥಿಕತೆಯ ಮುಖ್ಯ ವಲಯಗಳು.
- ಪ್ರಾಥಮಿಕ ವಲಯದ ಅರ್ಥ ಮತ್ತು ಪ್ರಾಮುಖ್ಯತೆ.
- ತಯಾರಿಕಾ ವಲಯದ ವರ್ಗೀಕರಣ ಮತ್ತು ಪ್ರಾಮುಖ್ಯತೆ.
- ಸಾರ್ವಜನಿಕ ಮತ್ತು ಖಾಸಗಿ ವಲಯದ ಪಾತ್ರ.
- ತೃತೀಯ ವಲಯದ ಪ್ರಾಮುಖ್ಯತೆ.
- ಕರ್ನಾಟಕದ ಅರ್ಥವ್ಯವಸ್ಥೆ.

ನೀವು ಈಗಾಗಲೇ ತಿಳಿದಂತೆ ಆರ್ಥಿಕ ಚಟುವಟಿಕೆಗಳ ಆಧಾರದ ಮೇಲೆ ಭಾರತೀಯ ಅರ್ಥವ್ಯವಸ್ಥೆಯನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1. **ಪ್ರಾಥಮಿಕ ವಲಯ :** ಕೃಷಿ, ಪಶುಪಾಲನೆ, ಅರಣ್ಯಗಳು, ಮೀನುಗಾರಿಕೆ ಮತ್ತು ಗಣಿಗಾರಿಕೆ ಮುಂತಾದುವುಗಳು.
2. **ದ್ವಿತೀಯ ವಲಯ :** ವಿವಿಧ ಕೈಗಾರಿಕೆಗಳು, ಕಟ್ಟಡ ನಿರ್ಮಾಣ, ವಿದ್ಯುತ್ ಉತ್ಪಾದನೆ ಮುಂತಾದುವುಗಳು.
3. **ತೃತೀಯ ವಲಯ :** ಶಿಕ್ಷಣ, ಸಾರಿಗೆ, ಸಂಪರ್ಕ, ಉಗ್ರಾಣಗಳು, ಪ್ರವಾಸೋದ್ಯಮ, ಹೋಟೆಲ್ ಮತ್ತು ರೆಸ್ಟೋರೆಂಟ್, ವಿಮೆ, ರಿಯಲ್ ಎಸ್ಟೇಟ್, ವ್ಯವಹಾರಿ ಸೇವೆಗಳು, ಸಾರ್ವಜನಿಕ ಆಡಳಿತ ಮುಂತಾದವುಗಳು.

**ಪ್ರಾಥಮಿಕ ವಲಯ (Primary Sector) :**

ಪ್ರಾಥಮಿಕ ವಲಯವು ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಾದ ರೇಷ್ಮೆಸಾಗಣಿಕೆ, ತೋಟಗಾರಿಕೆ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಪುಷ್ಪಕೃಷಿ ಮುಂತಾದುವುಗಳನ್ನು ಒಳಗೊಂಡಿದೆ. ಇವು ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುತ್ತವೆ.

**ಕೃಷಿ ವಲಯದ ಮಹತ್ವ :** ಭಾರತದಲ್ಲಿ ಕೃಷಿಯು ಒಂದು ಪ್ರಮುಖ ಉದ್ಯೋಗವಾಗಿದೆ. ಇಂದಿಗೂ ಇದು ನಮ್ಮ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿದೆ.

1) ಹೆಚ್ಚಿನ ಜನರು ಈಗಲೂ ತಮ್ಮ ಜೀವನ ನಿರ್ವಹಣೆಗಾಗಿ, ನೇರವಾಗಿ ಮತ್ತು ಪರೋಕ್ಷವಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ.
2) ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ.
3) ಜನರಿಗೆ ಆಹಾರ ಮತ್ತು ಪ್ರಾಣಿಗಳಿಗೆ ಮೇವನ್ನು ಒದಗಿಸುತ್ತದೆ.
4) ರೈತರ ಉಳಿತಾಯದ ಮೂಲಕ ಕೃಷಿಯು ಬಂಡವಾಳ ಸಂಗ್ರಹಕ್ಕೆ ಸಹಕರಿಸುತ್ತದೆ.

©KTBS NOT TO BE REPUBLISHED

ಕೃಷಿಯು ಒಂದು ಮುಖ್ಯ ಉದ್ಯೋಗವಾಗಿದ್ದರೂ ಸಹ, ಕೃಷಿಕರ ಸ್ಥಿತಿಗತಿ ಇನ್ನೂ ತೃಪ್ತಿಕರವಾಗಿಲ್ಲ. ಅದಕ್ಕೆ ಕಾರಣಗಳೆಂದರೆ,

1) ಬಹುತೇಕ ಕೃಷಿಕರು ಸಣ್ಣ ಮತ್ತು ಅತಿಸಣ್ಣ ರೈತರಾಗಿದ್ದಾರೆ.
2) ಕೃಷಿಯು ಸಾಗುವಳಿ ಭೂಮಿಯು ಬಹುದೊಡ್ಡ ಭಾಗ ಮಳೆಯಾಶ್ರಿತವಾಗಿದೆ.
3) ಕೃಷಿವಲಯದಲ್ಲಿ ಉತ್ಪಾದಕತೆಯು ಬಹಳ ಕಡಿಮೆಯಿದೆ.
4) ಬಹುತೇಕ ಕೃಷಿಕರು ಆಧುನಿಕ ಕೃಷಿ ಉಪಕರಣಗಳು ಮತ್ತು ಹೊಸ ಉತ್ಪಾದನಾ ತಂತ್ರಗಳ ಅಳವಡಿಕೆಯಲ್ಲಿ ಹಿಂದುಳಿದಿದ್ದಾರೆ.
5) ಮಧ್ಯವರ್ತಿಗಳ ಉಪಟಳದಿಂದಾಗಿ ಕೃಷಿಕರು ತಮ್ಮ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಪಡೆಯುತ್ತಿಲ್ಲ.



ಕೃಷಿ

**ಚಟುವಟಿಕೆ**

1) ನಿಮ್ಮ ಊರಿನಲ್ಲಿನ ಒಬ್ಬ ಕೃಷಿಕರನ್ನು ಸಂದರ್ಶಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ಎ) ಈ ವರ್ಷದಲ್ಲಿ ಅವರು ಬೆಳೆದ ಬೆಳೆಗಳು ಯಾವುವು ?

ಬಿ) ಈ ಬೆಳೆಗಳ ಉತ್ಪನ್ನದ ನಂತರ ಮಾರಾಟ ಮಾಡುವ ವ್ಯವಸ್ಥೆ ಹೇಗಿದೆ?

ಸರ್ಕಾರವು ದೇಶದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಕೃಷಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ.

©KTBS NOT TO BE REPUBLISHED

### ದ್ವಿತೀಯ ವಲಯ (Secondary Sector)

ದ್ವಿತೀಯ ವಲಯವನ್ನು ತಯಾರಿಕಾ ವಲಯವೆಂತಲೂ ಕರೆಯುತ್ತಾರೆ. ಇಲ್ಲಿ ಕಚ್ಚಾ ವಸ್ತುಗಳನ್ನು ಸಿದ್ಧಪಡಿಸಿದ ಉತ್ಪನ್ನಗಳನ್ನಾಗಿ ಪರಿವರ್ತಿಸಲಾಗುತ್ತದೆ. ಕೈಗಾರಿಕೆಗಳನ್ನು ಮೂರು ವಿಧಗಳಲ್ಲಿ ವರ್ಗೀಕರಿಸಬಹುದಾಗಿದೆ. ಅವುಗಳೆಂದರೆ,

ಅ) ಕೃಷಿ ಆಧಾರಿತ ಕೈಗಾರಿಕೆಗಳು.

ಬ) ಅರಣ್ಯ ಆಧಾರಿತ ಕೈಗಾರಿಕೆಗಳು.

ಕ) ಖನಿಜ ಆಧಾರಿತ ಕೈಗಾರಿಕೆಗಳು.

**ಚಟುವಟಿಕೆ**

ಇತ್ತೀಚೆಗೆ ಕೃಷಿ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದಂತೆ ಆಗುತ್ತಿರುವ ಬೆಳವಣಿಗೆಗಳನ್ನು ತಿಳಿಯಿರಿ.

ಕೈಗಾರಿಕೆಗಳ ಒಡೆತನದ ಆಧಾರದ ಮೇಲೆ ಅವುಗಳನ್ನು ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ ಸಾರ್ವಜನಿಕ ವಲಯದ ಕೈಗಾರಿಕೆಗಳು ಮತ್ತು ಖಾಸಗಿವಲಯದ ಕೈಗಾರಿಕೆಗಳು. ಸಾರ್ವಜನಿಕ ವಲಯದ ಕೈಗಾರಿಕೆಗಳು ಸರ್ಕಾರದ ಅಥವಾ ಸಾರ್ವಜನಿಕರ ಒಡೆತನದಲ್ಲಿರುತ್ತವೆ. ಇವುಗಳನ್ನು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು (CPSE) ಮತ್ತು ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು (SPSE) ಎಂದು ವರ್ಗೀಕರಿಸಲಾಗಿದೆ. ಖಾಸಗಿ ವಲಯದ ಕೈಗಾರಿಕೆಗಳು ಖಾಸಗಿ ವ್ಯಕ್ತಿಗಳ ಒಡೆತನದಲ್ಲಿರುತ್ತವೆ. ಇವುಗಳಲ್ಲಿ

ಬಹು ರಾಷ್ಟ್ರೀಯ ನಿಗಮಗಳು ಮತ್ತು ಇತರೆ ಖಾಸಗೀ ಕೈಗಾರಿಕೆಗಳು ಸೇರಿವೆ.

ಬಂಡವಾಳ ಹೂಡಿಕೆ ಮತ್ತು ಯಂತ್ರೋಪಕರಣಗಳ ಆಧಾರದ ಮೇಲೆ ಕೈಗಾರಿಕೆಗಳನ್ನು ದೊಡ್ಡ ಪ್ರಮಾಣದ ಕೈಗಾರಿಕೆಗಳು ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು(MSME's) ಎಂದು ವರ್ಗೀಕರಿಸಬಹುದಾಗಿದೆ.


ಕೈಗಾರಿಕೆ

**ಭಾರತದಲ್ಲಿ ಸಾರ್ವಜನಿಕ ವಲಯ :** ಸ್ವಾತಂತ್ರ್ಯಪೂರ್ವದ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಜನರ ಆರ್ಥಿಕ ಚಟುವಟಿಕೆಗಳಲ್ಲಿ ಸಾರ್ವಜನಿಕ ವಲಯದ ಭಾಗವಹಿಸುವಿಕೆಯು ಬಹುತೇಕ ಇರಲಿಲ್ಲ. ಆಗ ಸರ್ಕಾರದ ನಿಯಂತ್ರಣ ಮತ್ತು ನಿರ್ವಹಣೆಯಲ್ಲಿದ್ದ ವ್ಯವಹಾರಿ ಸಂಘಟನೆಗಳೆಂದರೆ : ರೈಲು ಸಾರಿಗೆ, ಬಂದರು ಟ್ರಸ್ಟ್, ಅಂಚೆ ಮತ್ತು ತಂತಿ, ವಿಮಾನಯಾನ ಮತ್ತು ರಕ್ಷಣಾ ಕಾರ್ಖಾನೆಗಳು ಮಾತ್ರ.

ಸ್ವತಂತ್ರ ಭಾರತದಲ್ಲಿ 1956 ರ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿದ ನಂತರ, ಸಾರ್ವಜನಿಕ ವಲಯದ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ವಿಸ್ತರಣೆಯಾದವು. ಸಾರ್ವಜನಿಕ ವಲಯದ ಉದ್ಯಮ(PSU)ಗಳು ಪ್ರಸ್ತುತ ಅವುಗಳ ಕಾರ್ಯಾಚರಣೆಯ ಪ್ರಮಾಣ, ವ್ಯಾಪಕತೆ, ತಾಂತ್ರಿಕ ಪರಿಣತಿ ಮತ್ತು ಉದ್ಯೋಗ ನಿರ್ಮಾಣದಲ್ಲಿ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿವೆ. ಭಾರತದಲ್ಲಿನ ಪ್ರಮುಖ ಸಾರ್ವಜನಿಕ ವಲಯದ ಉದ್ಯಮಗಳೆಂದರೆ, BEL, BHEL, ಹಿಂದೂಸ್ಥಾನ್ ಹಡಗು ನಿರ್ಮಾಣ ಕೇಂದ್ರ ಮುಂತಾದವು.

**ಖಾಸಗಿ ವಲಯ :** ಖಾಸಗಿ ವಲಯವು ಎಲ್ಲ ವಿಧದ ವೈಯಕ್ತಿಕ ಮತ್ತು ಖಾಸಗಿ ಕಂಪನಿಗಳಿಗೆ ಸಂಬಂಧಿತವಾಗಿದೆ. ಈ ವಲಯದಲ್ಲಿ ಉತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದ ವಿವಿಧ ಉತ್ಪಾದನಾಂಗಗಳು ವೈಯಕ್ತಿಕ ಅಥವಾ ಖಾಸಗೀ ಕಂಪನಿಗಳ ಮಾಲೀಕತ್ವ ಮತ್ತು ನಿರ್ವಹಣೆಗೆ ಒಳಪಟ್ಟಿರುತ್ತವೆ. ಉದಾ : ಟಾಟಾ, ಬಿರ್ಲಾ, ಜಿಂದಾಲ್, ಮಹೀಂದ್ರ, ಅಂಬಾನಿ, ಕಿರ್ಲೋಸ್ಕರ್ ಇತ್ಯಾದಿ.

**ಬಹುರಾಷ್ಟ್ರೀಯ ನಿಗಮಗಳು (MNC's) :** ಮೂಲರಾಷ್ಟ್ರದಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ದೇಶಗಳಲ್ಲಿ ಉದ್ಯಮಗಳನ್ನು ಹೊಂದಿ ಆರ್ಥಿಕ ವ್ಯವಹಾರವನ್ನು ನಡೆಸುತ್ತಿರುವ ಉದ್ಯಮಗಳನ್ನು ಬಹುರಾಷ್ಟ್ರೀಯ ನಿಗಮಗಳು (MNC) ಎಂದು ಕರೆಯಲಾಗುತ್ತಿದೆ. ಭಾರತದಲ್ಲಿ ಆರ್ಥಿಕ ಸುಧಾರಣೆಗಳ ಜಾರಿಯ ನಂತರ ಬಹಳಷ್ಟು ಬಹುರಾಷ್ಟ್ರೀಯ ನಿಗಮಗಳು ತಮ್ಮ ಉದ್ಯಮ ಘಟಕಗಳನ್ನು ಸ್ಥಾಪಿಸಿವೆ. ಉದಾ : ಸೋನಿ (ಜಪಾನ್) ಸ್ಯಾಮ್ ಸಂಗ್ (ದ. ಕೊರಿಯ), ಹಿಂದುಸ್ಥಾನ್ ಯೂನಿ ಲಿವರ್ (UK) ಇತ್ಯಾದಿ.

1991 ರ ನೂತನ ಆರ್ಥಿಕ ಸುಧಾರಣೆಗಳ ನಂತರ ಭಾರತ ಸರ್ಕಾರವು ಹಲವು ರೀತಿಯ ಮೂಲ ಸೌಕರ್ಯ ಯೋಜನೆಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು (Public Private Partnership) ಅಸ್ತಿತ್ವಕ್ಕೆ ತಂದಿದೆ. 1991 ರ ನೂತನ ಆರ್ಥಿಕ ಸುಧಾರಣೆಗಳ ನಂತರ ಖಾಸಗಿಕರಣವು ಹೆಚ್ಚು ಮಹತ್ವ ಪಡೆದಿದೆ.

@KTBS NOT TO BE REPUBLISHED

**ಕೈಗಾರಿಕಾ ವಲಯದ ಮಹತ್ವ :** ಕೈಗಾರಿಕಾ ವಲಯವು ಅರ್ಥವ್ಯವಸ್ಥೆಯನ್ನು ಬಲಪಡಿಸುತ್ತದೆ. ಆರ್ಥಿಕಾಭಿವೃದ್ಧಿಯಲ್ಲಿ ಈ ವಲಯದ ಮಹತ್ವವನ್ನು ಈ ಕೆಳಗಿನ ಅಂಶಗಳು ತಿಳಿಸುತ್ತವೆ :

1. ರಾಷ್ಟ್ರಕ್ಕೆ ಹೆಚ್ಚಿನ ಆದಾಯವನ್ನು ತರುತ್ತದೆ.
2. ಜನರಿಗೆ ಉದ್ಯೋಗವನ್ನು ಒದಗಿಸುತ್ತದೆ.
3. ಕೈಗಾರಿಕಾಭಿವೃದ್ಧಿಯಿಂದ ಜನರ ಜೀವನಮಟ್ಟವು ಹೆಚ್ಚುತ್ತದೆ.
4. ಟ್ರಾಕ್ಟರುಗಳು, ಕೃಷಿ ಯಂತ್ರೋಪಕರಣಗಳು, ಗೊಬ್ಬರ ಮುಂತಾದುವುಗಳನ್ನು ಒದಗಿಸುವ ಮೂಲಕ ಕೃಷಿಯ ಆಧುನೀಕರಣಕ್ಕೆ ಸಹಕರಿಸುತ್ತದೆ.
5. ಜನರನ್ನು ನಗರ ಮತ್ತು ಪಟ್ಟಣಗಳಿಗೆ ಹಂಚುವ ಮೂಲಕ ಕೃಷಿ ಭೂಮಿಯ ಮೇಲಿನ ಒತ್ತಡವನ್ನು ಕಡಿಮೆಗೊಳಿಸುತ್ತದೆ.
6. ಹೆಚ್ಚಿನ ವಿದೇಶಿ ವಿನಿಮಯವನ್ನು ಗಳಿಸಲು ಸಹಾಯಕವಾಗಿದೆ.
7. ಕೈಗಾರಿಕಾ ಪ್ರದೇಶಗಳು ವ್ಯಾಪಾರ, ಶಿಕ್ಷಣ, ಸಾರಿಗೆ, ಬ್ಯಾಂಕಿಂಗ್ ಮುಂತಾದುವುಗಳ ಕೇಂದ್ರಗಳಾಗಿಯೂ ಅಭಿವೃದ್ಧಿಹೊಂದುತ್ತವೆ.

**ತೃತೀಯ ವಲಯ (Tertiary Sector)**

ತೃತೀಯ ವಲಯವನ್ನು ಸೇವಾ ವಲಯವೆಂತಲೂ ಕರೆಯಲಾಗುತ್ತದೆ. ಸದ್ಯದಲ್ಲಿ ಪ್ರಪಂಚದ ಅರ್ಥವ್ಯವಸ್ಥೆಯು ಸೇವಾವಲಯದಿಂದ ಆಳಲ್ಪಡುತ್ತಿದೆ. ಬ್ಯಾಂಕಿಂಗ್, ವಿಮೆ, ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ, ಆರೋಗ್ಯ, ಶಿಕ್ಷಣ ಮತ್ತು ತರಬೇತಿ ಮುಂತಾದುವು ಸೇವಾ ವಲಯದ ಪ್ರಮುಖ ಘಟಕಗಳಾಗಿವೆ.

**ಬ್ಯಾಂಕುಗಳು :** ಸಾರ್ವಜನಿಕರಿಂದ ವಿವಿಧ ರೀತಿಯ ಠೇವಣಿಗಳ ಮೂಲಕ ಹಣವನ್ನು ಸ್ವೀಕರಿಸುವ ಹಣಕಾಸು ಸಂಸ್ಥೆಗಳೇ ಬ್ಯಾಂಕುಗಳು. ಇವು ಹಣಕಾಸಿನ ಅಗತ್ಯವಿರುವವರಿಗೆ ಸಾಲವನ್ನು ಸಹ ನೀಡುತ್ತವೆ. ಬ್ಯಾಂಕುಗಳು ಉಳಿತಾಯಗಾರರು ಮತ್ತು ಹೂಡಿಕೆದಾರರ ನಡುವಿನ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತವೆ.

**ವಿಮೆ :** ವಿಮೆಯು ಹಣಕಾಸು ನಷ್ಟದ ವಿರುದ್ಧದ ಒಂದು ರಕ್ಷಣೆಯ ಮಾರ್ಗವಾಗಿದೆ. ಇದು ಮಾನವನ ಜೀವನಕ್ಕೆ ಆಪತ್ತು ಮತ್ತು ಆಸ್ತಿಗಳ ವಿನಾಶಕ್ಕೆ ಕಾರಣವಾಗುವ ಆಕಸ್ಮಿಕ ಘಟನೆಗಳ ವಿರುದ್ಧ ರಕ್ಷಣೆ ಒದಗಿಸುತ್ತದೆ. ಉದಾ : ಮರಣ, ಅಪಘಾತಗಳ ಕಾರಣದಿಂದಾದ ಅಶಕ್ತತೆ, ವೃದ್ಧಾಪ್ಯ, ಅನಾರೋಗ್ಯ, ಕಳವು, ಬೆಂಕಿ ಅಪಘಾತ, ಭೂಕಂಪ, ಕಡಲ್ಗಳ್ಳತನ ಇತ್ಯಾದಿ. ವಿಮೆಯಲ್ಲಿ ಎರಡು ವಿಧಗಳಿದ್ದು, ಅವುಗಳೆಂದರೆ ಸಾಮಾನ್ಯ ವಿಮೆ ಮತ್ತು ಜೀವ ವಿಮೆ.

**ಸಾರಿಗೆ :** ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ಒಂದು ವ್ಯವಸ್ಥೆಗೆ ಸಾರಿಗೆ ಎನ್ನುತ್ತೇವೆ. ಇದರಲ್ಲಿ ಭೂಸಾರಿಗೆ, ಜಲಸಾರಿಗೆ ಮತ್ತು ವಾಯುಸಾರಿಗೆ ಎಂಬ ವಿವಿಧ ಪ್ರಕಾರಗಳಿವೆ. ಅವು ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಸಾರಿಗೆಯು ಸರಕು–ಸೇವೆಗಳಿಗೆ ವ್ಯಾಪಕ ಮಾರುಕಟ್ಟೆಯನ್ನು ಒದಗಿಸಿ ಕೊಡುತ್ತದೆ.

© KTBS NOT TO BE REPUBLISHED

**ಸಂಪರ್ಕ :** ಸಂಪರ್ಕವು ವಿಚಾರಗಳು, ಭಾವನೆಗಳು ಮತ್ತು ಮಾಹಿತಿಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ಮತ್ತು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿನಿಮಯ ಮಾಡುವ ವ್ಯವಸ್ಥೆಯಾಗಿದೆ. ಅಂಚೆ ಸೇವೆಗಳು, ದೂರಸಂಪರ್ಕ, ಫ್ಯಾಕ್ಸ್, ಇ–ಮೇಲ್, ವೃತ್ತಪತ್ರಿಕೆಗಳು, ಅಂತರ್ಜಾಲ ಮುಂತಾದುವು ಪ್ರಪಂಚದ ಮೂಲೆ ಮೂಲೆಗಳಲ್ಲಿರುವ ಜನರನ್ನು ಸಂಪರ್ಕಿಸಲು ಸಹಾಯಕವಾಗಿವೆ.



ಸಾರಿಗೆ

**ಆರೋಗ್ಯ :** 'ಆರೋಗ್ಯವೇ ಭಾಗ್ಯ' ಮತ್ತು 'ಸದೃಢವಾದ ಶರೀರದಲ್ಲಿ ಸಧೃಡವಾದ ಮನಸ್ಸಿರುತ್ತದೆ' ಎಂಬ ಹೇಳಿಕೆಗಳು ಪ್ರತಿಯೊಬ್ಬನ ಜೀವನದಲ್ಲಿ ಆರೋಗ್ಯದ ಮಹತ್ವವನ್ನು ತಿಳಿಸಿಕೊಡುತ್ತವೆ. ವಿಶ್ವ ಆರೋಗ್ಯ ಸಂಘಟನೆ(WHO) ಪ್ರಕಾರ 'ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಬೌದ್ಧಿಕ ಅಸ್ವಸ್ಥತೆಯಿಂದ ಮುಕ್ತವಾಗಿರುವವನು ಆರೋಗ್ಯವಂತನೆನಿಸುತ್ತಾನೆ'.




ಭಾರತದಲ್ಲಿ ಆರೋಗ್ಯ ಸುರಕ್ಷತೆಯು ಸುಧಾರಿಸುತ್ತಿದೆ. ಮರಣ ದರವು ಪ್ರತಿ ಸಾವಿರಕ್ಕೆ 7.2 ಶಿಶು ಮರಣ ದರವು ಪ್ರತಿ ಸಾವಿರಕ್ಕೆ 47 ಮತ್ತು ಮಕ್ಕಳ ಮರಣ ದರವು ಪ್ರತಿ ಸಾವಿರಕ್ಕೆ 15ಕ್ಕೆ ಇಳಿಕೆಯಾಗಿವೆ. 2011 ರಲ್ಲಿ ಸರಾಸರಿ ನಿರೀಕ್ಷಿತ ಜೀವಿತಾವಧಿಯು 66.9 ವರ್ಷಗಳಿಗೆ ಹೆಚ್ಚಿದೆ. ವೈದ್ಯಕೀಯ ಜಾಗೃತಿ ಕಾರ್ಯಕ್ರಮಗಳು ಜೀವನಾಶಕ ರೋಗಗಳಾದ ಕ್ಷಯ, ಕಾಲರಾ, ಮಲೇರಿಯಾ ಮುಂತಾದುವುಗಳನ್ನು ನಿಯಂತ್ರಿಸುವಲ್ಲಿ ಸಹಾಯಕವಾಗಿವೆ. ಸರ್ಕಾರದ ದೃಢ ಸಂಕಲ್ಪದಿಂದಾಗಿ ಪೋಲಿಯೋವನ್ನು ಭಾರತದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ.

NOT TO BE REPUBLISHED ©KTBS

**ಶಿಕ್ಷಣ :** Education ಎಂಬ ಪದವು educare (ಎಜುಕೇರ್) ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಇದರ ಅರ್ಥ 'ಬೆಳಕಿನೆಡೆಗೆ ಸಾಗಿಸು' ಎಂದಿದೆ. ರಾಷ್ಟ್ರಪಿತ ಗಾಂಧೀಜಿಯವರ ಪ್ರಕಾರ "ಶಿಕ್ಷಣವು ಮಗುವಿನ ವ್ಯಕ್ತಿತ್ವದಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ತರುತ್ತದೆ"

ಸರ್ಕಾರವು ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕಾಗಿ 1988 ರಲ್ಲಿ "ರಾಷ್ಟ್ರೀಯ ಸಾಕ್ಷರತಾ ಮಿಷನ್", 2001 ರಲ್ಲಿ 'ಸರ್ವಶಿಕ್ಷಾ ಅಭಿಯಾನ'(SSA), 1995 ರಲ್ಲಿ 'ಮಧ್ಯಾಹ್ನದ ಬಿಸಿಯೂಟ ಯೋಜನೆ'ಯನ್ನು ಜಾರಿಗೆ ತಂದಿದೆ. ನಮ್ಮ ದೇಶದಲ್ಲಿ ಮಾಧ್ಯಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ಮಾರ್ಚ್ 2009 ರಲ್ಲಿ 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ'(RMSA) ಮತ್ತು ಸೆಪ್ಟೆಂಬರ್ 2009 ರಲ್ಲಿ 'ಸಾಕ್ಷರ ಭಾರತ' ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.

| ರಾಷ್ಟ್ರೀಯ ಆದಾಯಕ್ಕೆ ವಿವಿಧ ವಲಯಗಳ ಕೊಡುಗೆ | | | | |
|---|---|---|---|---|
| **ವಲಯಗಳು** | **1950–51** (%) | **1990– 91** (%) | **2000–01** (%) | **2011–12** (%) |
| 1. ಪ್ರಾಥಮಿಕ ವಲಯ | 59 | 35 | 27 | 14 |
| 2. ದ್ವಿತೀಯ ವಲಯ | 13 | 24 | 25 | 27 |
| 3. ತೃತೀಯ ವಲಯ | 28 | 41 | 48 | 59 |

ಈ ಮೇಲಿನ ಅಂಕಿ ಅಂಶಗಳಿಂದ ಮೂರು ವಲಯಗಳು ರಾಷ್ಟ್ರೀಯ ಆದಾಯಕ್ಕೆ ನೀಡಿರುವ ಕೊಡುಗೆಯನ್ನು ಮತ್ತು ತೃತೀಯ ವಲಯವು ತನ್ನ ವಿವಿಧ ಘಟಕಗಳ ಮೂಲಕ ನೀಡಿರುವ ಕೊಡುಗೆಯನ್ನು ತಿಳಿಯಬಹುದು.

**ಕರ್ನಾಟಕದ ಅರ್ಥವ್ಯವಸ್ಥೆ (Karnataka Economy)**

ಕರ್ನಾಟಕವು 1,91,791 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ಇದು ಭೌಗೋಳಿಕವಾಗಿ ಭಾರತದ 8ನೇ ದೊಡ್ಡ ರಾಜ್ಯವಾಗಿದೆ. ಆಡಳಿತದ ಸಲುವಾಗಿ ಇದನ್ನು ನಾಲ್ಕು ಕಂದಾಯ ವಿಭಾಗಗಳು, 31 ಜಿಲ್ಲೆಗಳು ಮತ್ತು 239 ತಾಲ್ಲೂಕುಗಳನ್ನಾಗಿ ವಿಭಾಗಿಸಲಾಗಿದೆ. ಇದು ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣದ ಕಾಡುಗಳು, ಶ್ರೀಮಂತ ಸಸ್ಯ ಸಂಕುಲ, ಜೀವಸಂಕುಲ ಮತ್ತು ಖನಿಜ ನಿಕ್ಷೇಪಗಳಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಕೊಡುಗೆಯಾಗಿ ನೀಡಿದೆ. ಈ ರೀತಿ ಸಂಪನ್ಮೂಲಗಳನ್ನು ಹೊಂದಿರುವ ನಾಡಿನಲ್ಲಿ ವಿವಿಧ ಘಟಕಗಳು ಆರ್ಥಿಕಾಭಿವೃದ್ಧಿಯಲ್ಲಿ ತಮ್ಮ ಕೊಡುಗೆಯನ್ನು ನೀಡಿವೆ.

© KTBS NOT TO BE REPUBLISHED

**ಕೃಷಿ :** ಕರ್ನಾಟಕದಲ್ಲಿ ಶೇ.52 ಕ್ಕಿಂತ ಹೆಚ್ಚು ದುಡಿಯುವ ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ರಾಜ್ಯದಲ್ಲಿ ಕೃಷಿಯು ವ್ಯಾಪಕ ಬೆಳೆ ವೈವಿಧ್ಯತೆಯನ್ನು ಹೊಂದಿದೆ. ಕರ್ನಾಟಕವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಆದರೆ ಬೇಳೆಕಾಳುಗಳ ಉತ್ಪಾದನೆಯಲ್ಲಿ ಕೊರತೆ ಮುಂದುವರಿದಿದೆ.

ಸಾಗುವಳಿಗೆ ಒಳಪಟ್ಟ ಪ್ರದೇಶದಲ್ಲಿ ಸುಮಾರು ಶೇ.30 ರಷ್ಟು ಭಾಗ ನೀರಾವರಿಗೆ ಒಳಪಟ್ಟಿದೆ ಮತ್ತು ಶೇ.70 ಭಾಗ ಮಳೆಯ ಮೇಲೆ ಅವಲಂಬಿತವಾಗಿದೆ. ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ನಿರ್ಮಿಸುವ ಮೂಲಕ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ಉದಾ : ಘಟಪ್ರಭಾ, ಮಲಪ್ರಭಾ, ತುಂಗಭದ್ರಾ, ನಾರಾಯಣಪುರ, ಆಲಮಟ್ಟಿ, ಹೇಮಾವತಿ, ಹಾರಂಗಿ, ಕೃಷ್ಣರಾಜ ಸಾಗರ ಮುಂತಾದುವು.

ಕರ್ನಾಟಕದಲ್ಲಿ ಭತ್ತ, ಜೋಳ, ರಾಗಿ, ಗೋಧಿ, ಮೆಕ್ಕೆಜೋಳ, ಬಾಜ್ರ ಮುಂತಾದುವು ಪ್ರಮುಖ ಆಹಾರ ಬೆಳೆಗಳಾಗಿವೆ. ಹತ್ತಿ, ಕಬ್ಬು, ಹೊಗೆಸೊಪ್ಪು, ಆಲೂಗೆಡ್ಡೆ, ಎಣ್ಣೆ ಕಾಳುಗಳು, ಕಾಫಿ, ಚಹಾ ಮುಂತಾದುವು ರಾಜ್ಯದ ಪ್ರಮುಖ ಆಹಾರೇತರ ಬೆಳೆಗಳಾಗಿವೆ. ಏಲಕ್ಕಿ, ಮೆಣಸು, ಮಾವು, ತೆಂಗು, ಅಡಿಕೆ ಮತ್ತು ಬಾಳೆ ಪ್ರಮುಖ ಸಾಂಬಾರ ಮತ್ತು ತೋಟಗಾರಿಕಾ ಬೆಳೆಗಳಾಗಿವೆ. ಇವುಗಳು ಅರ್ಥವ್ಯವಸ್ಥೆಯಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿವೆ.

**ತೋಟಗಾರಿಕೆ :** ಕರ್ನಾಟಕವು ತೋಟಗಾರಿಕೆಯಲ್ಲಿ ಒಂದು ಮುಂಚೂಣಿ ರಾಜ್ಯವಾಗಿದೆ. ತೋಟಗಾರಿಕಾ ಬೆಳೆಗಳ ಬೇಸಾಯವನ್ನು ಸುಧಾರಿಸುವ ಸಲುವಾಗಿ ರಾಜ್ಯ ಸರ್ಕಾರವು ಹಲವಾರು ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ ಪ್ರದೇಶ ವಿಸ್ತರಣೆ, ಕೃಷಿಕರಿಗೆ ಸಹಾಯ, ಬೀಜ ಮತ್ತು ಸಸಿಗಳ ಪೂರೈಕೆ, ಸೂಕ್ಷ್ಮ ನೀರಾವರಿ, ಕೀಟ ಮತ್ತು ರೋಗಗಳ ನಿಯಂತ್ರಣ, ಸುಗ್ಗಿ ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಒದಗಿಸುವುದು ಇತ್ಯಾದಿ. ತೋಟಗಳು ಮತ್ತು ನರ್ಸರಿಗಳನ್ನು ಹೆಚ್ಚು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು 'ಕರ್ನಾಟಕ ರಾಜ್ಯ ತೋಟಗಾರಿಕಾ ಅಭಿವೃದ್ಧಿ ಸಂಸ್ಥೆ'ಯನ್ನು ಸ್ಥಾಪಿಸಲಾಗಿದೆ. ನಬಾರ್ಡ್(NABARD) ತೋಟಗಾರಿಕಾ ಬೆಳೆಗಳ ವಿಸ್ತರಣೆಗಾಗಿ ಸಂಘಸಂಸ್ಥೆಗಳ ಮೂಲಕ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ.



ಮಾವಿನಮರ

**ಕರ್ನಾಟಕದಲ್ಲಿ ಪುಷ್ಪ ಕೃಷಿ :** ಪುಷ್ಪಕೃಷಿಯನ್ನು ಹೂವಿನ ತೋಟಗಾರಿಕೆ ಎಂತಲೂ ಕರೆಯುತ್ತಾರೆ. ಇದು ಹೂಗಳನ್ನು ಬೆಳೆಸುವುದು, ಉದ್ಯಾನಗಳಿಗಾಗಿ ಅಲಂಕಾರಿಕ ಸಸ್ಯಗಳನ್ನು ಬೆಳೆಸುವುದು ಮತ್ತು ಪುಷ್ಪ ಕೈಗಾರಿಕೆಗಳನ್ನು ಒಳಗೊಂಡಿದೆ. ಕರ್ನಾಟಕವು ಪುಷ್ಪಕೃಷಿಯಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ದೇವನಹಳ್ಳಿ, ಚಿಕ್ಕಬಳ್ಳಾಪುರ, ಹೂವಿನ ಹಡಗಲಿ, ಸವಣೂರು ಮುಂತಾದ ತಾಲ್ಲೂಕುಗಳಲ್ಲಿ ಪುಷ್ಪಕೃಷಿ ನಡೆಸಲಾಗುತ್ತಿದೆ. ಭಾರತದಿಂದ ಹೂವುಗಳ ರಫ್ತು ಹೆಚ್ಚಾಗುತ್ತಿದ್ದು ಮತ್ತು ಅದರಲ್ಲಿ ಹೆಚ್ಚಿನ ಭಾಗದ ಹೂವುಗಳು ಕರ್ನಾಟಕದಿಂದ ರಫ್ತಾಗುತ್ತಿವೆ. 'ಕರ್ನಾಟಕ ಕೃಷಿ ಆಧಾರಿತ ಕೈಗಾರಿಕೆಗಳ ಸಂಸ್ಥೆ' (Karnataka Agro Industries Corporation) ಮತ್ತು 'ರಾಷ್ಟ್ರೀಯ ಪುಷ್ಪಕೃಷಿ ಮಂಡಳಿ'ಗಳು ಕರ್ನಾಟಕದಲ್ಲಿ ಪುಷ್ಪೋದ್ಯಮವನ್ನು ಪ್ರತಿಷ್ಠಾಪಿಸಲು ಶೈತ್ಯಾಗಾರ ಸೌಲಭ್ಯ ಮತ್ತು ಉದ್ಯಮಿಗಳಿಗೆ ಸಾರಿಗೆ ವೆಚ್ಚದಲ್ಲಿ ಸಹಾಯಧನವನ್ನು ನೀಡುತ್ತಿವೆ. ಪುಷ್ಪಕೃಷಿಯು ಇತ್ತೀಚೆಗೆ ಒಂದು ಉದ್ಯಮವಾಗಿ ಬೆಳೆಯುತ್ತಿದ್ದು, ರಾಜ್ಯದ ಅರ್ಥವ್ಯವಸ್ಥೆಗೆ ಕೊಡುಗೆ ನೀಡುತ್ತಿದೆ.



ಹೂವಿನ ತೋಟ

**ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ :** ಕರ್ನಾಟಕವು ಹಾಲಿನ ಉತ್ಪಾದನೆಯಲ್ಲಿ ಭಾರತದಲ್ಲಿ ಹತ್ತನೇ ಸ್ಥಾನ ಪಡೆದಿದೆ. ದೇಶದ ಒಟ್ಟು ಜಾನುವಾರು ಮತ್ತು ಕುಕ್ಕುಟಗಳ ಸಂಖ್ಯೆಯಲ್ಲಿ ನಮ್ಮ ರಾಜ್ಯದ ಪಾಲು ಕ್ರಮವಾಗಿ ಶೇ.6.20 ರಷ್ಟು ಮತ್ತು ಶೇ.6.48 ರಷ್ಟು ಆಗಿರುತ್ತದೆ. ರಾಜ್ಯದ ಹಾಲು ಉತ್ಪಾದನೆಯು 2021–22 ರಲ್ಲಿ 11.80 ಮಿಲಿಯನ್ ಟನ್ನುಗಳಿದ್ದು, ಕರ್ನಾಟಕದಾದ್ಯಂತ ಸ್ಥಾಪಿಸಲಾಗಿರುವ ಪಶು ವೈದ್ಯಶಾಲೆಗಳ ಜಾಲದ ಮೂಲಕ ಜಾನುವಾರುಗಳು ಮತ್ತು ಕುಕ್ಕುಟಗಳ ಆರೋಗ್ಯ ರಕ್ಷಣೆ ಮಾಡಲಾಗುತ್ತಿದೆ.



ಪಶುಸಂಗೋಪನೆ

© KTBS NOT TO BE REPUBLISHED

ಕರ್ನಾಟಕ ಹಾಲು ಒಕ್ಕೂಟ(KMF)ವು ರಾಜ್ಯಮಟ್ಟದ ಸಹಕಾರಿ ಸಂಘಟನೆಯಾಗಿದ್ದು, ಅದು 'ಕ್ಷೀರಾಭಿವೃದ್ಧಿ ಕಾರ್ಯಾಚರಣೆ'(Operation Flood) ಅಡಿಯಲ್ಲಿ ರಾಜ್ಯದಲ್ಲಿ ಡೈರಿ ಅಭಿವೃದ್ಧಿಯನ್ನು ಕಾರ್ಯಗತಗೊಳಿಸುತ್ತಿದೆ. ಇದು ಹಾಲು ಮತ್ತು ಡೈರಿ ಉತ್ಪನ್ನಗಳನ್ನು ಬಳಕೆದಾರರಿಗೆ ಮಾರಾಟ ಮಾಡುತ್ತಿದೆ.

**ಮೀನುಗಾರಿಕೆ :** ಕರ್ನಾಟಕ ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಹೊಂದಿದೆ. 27,000 ಚದರ.ಕಿ.ಮೀ.ಗಳಷ್ಟು ವಿಶಾಲವಾದ ಖಂಡಾವರಣ ಪ್ರದೇಶ, 6 ಲಕ್ಷ ಹೆಕ್ಟೇರ್‌ಗಳಷ್ಟು ಒಳನಾಡು ಜಲಸಂಪನ್ಮೂಲವನ್ನು ಹೊಂದಿದ್ದು ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ರಾಜ್ಯದಲ್ಲಿ ಒಟ್ಟು 9.61 ಲಕ್ಷ ಮೀನುಗಾರರಿದ್ದು, ಅವರಲ್ಲಿ 3.28 ಲಕ್ಷ ಮೀನುಗಾರರು ಕರಾವಳಿಯಲ್ಲಿದ್ದರೆ, 6.33 ಲಕ್ಷ ಮೀನುಗಾರರು ಒಳನಾಡಿನಲ್ಲಿದ್ದಾರೆ. 2021–22ರಲ್ಲಿ ಮೀನುಗಳ ಉತ್ಪಾದನೆಯು ಸುಮಾರು 10.74 ಲಕ್ಷ ಮೆಟ್ರಿಕ್ ಟನ್ನುಗಳಷ್ಟಿತ್ತು. ರಾಜ್ಯದಲ್ಲಿ ಏಳು ಮೀನುಗಾರಿಕಾ ಬಂದರುಗಳಿವೆ. ಅವುಗಳೆಂದರೆ ಕಾರವಾರ, ತದಡಿ, ಹೊನ್ನಾವರ, ಭಟ್ಕಳ, ಗಂಗೊಳ್ಳಿ, ಮಲ್ಪೆ ಮತ್ತು ಮಂಗಳೂರು. ಸಮುದ್ರ ಉತ್ಪನ್ನಗಳ ರಫ್ತು ಭಾರತೀಯ ಅರ್ಥವ್ಯವಸ್ಥೆಗೆ ಅಮೂಲ್ಯ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತಿದೆ.

**ಕೈಗಾರಿಕೆ :** ಕರ್ನಾಟಕವು ಭಾರತದ ಕೆಲವು ಬಹುದೊಡ್ಡ ಸಾರ್ವಜನಿಕ ವಲಯದ ಉದ್ಯಮಗಳ ಕೇಂದ್ರವಾಗಿದೆ. ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಕಾರ್ಖಾನೆಯು ಭಾರತೀಯ ವಾಯುದಳಕ್ಕಾಗಿ ಮತ್ತು ದೇಶೀಯ ಯುದ್ಧ ವಿಮಾನಗಳ ತಯಾರಿಕೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ತನ್ನನ್ನು ಸಮರ್ಪಿಸಿಕೊಂಡಿದೆ. ಇದು ಕರ್ನಾಟಕದಲ್ಲಿರುವ ಅತಿ ದೊಡ್ಡ ಸಾರ್ವಜನಿಕ ಉದ್ಯಮವಾಗಿದ್ದು, ಸುಮಾರು 9500 ಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿದೆ. ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿ(NAL), ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್(BHEL), ಭಾರತೀಯ ದೂರವಾಣಿ ಕಾರ್ಖಾನೆ(ITI), ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್(BEML), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್(BEL), ಹಿಂದೂಸ್ಥಾನ್ ಮೆಷಿನ್ ಟೂಲ್ಸ್(HMT) ಮುಂತಾದುವು ಕರ್ನಾಟಕದಲ್ಲಿ ಸ್ಥಾಪನೆಯಾಗಿರುವ ಸಾರ್ವಜನಿಕ ವಲಯದ ಬೃಹತ್ ಕೈಗಾರಿಕೆಗಳಾಗಿವೆ. ಮೈಸೂರಿನ ಟಿ.ವಿ.ಎಸ್.ಮೋಟಾರ್ ಸೈಕಲ್ ತಯಾರಿಕಾ ಘಟಕ, ಧಾರವಾಡದ ಟಾಟಾ ಮೋಟಾರ್ಸ್, ವಿದ್ಯುತ್ ಉಪಕರಣಗಳ ತಯಾರಿಕಾ ಕಂಪನಿಗಳಾದ ಕಿರ್ಲೋಸ್ಕರ್, ಲಾರ್ಸನ್ ಮತ್ತು ಟೂರ್ಬೋ (L&T) ಮುಂತಾದುವು ಕರ್ನಾಟಕದಲ್ಲಿರುವ ಕೆಲವು ಪ್ರಮುಖ ಖಾಸಗಿ ವಲಯದ ಕೈಗಾರಿಕೆಗಳಾಗಿವೆ. ಇನ್ಫೋಸಿಸ್, ವಿಪ್ರೋ ಮತ್ತು ಟಿ.ಸಿ.ಎಸ್. ಮುಂತಾದವು ಕರ್ನಾಟಕದ ಮುಂಚೂಣಿಯಲ್ಲಿರುವ ಮಾಹಿತಿ ತಂತ್ರಜ್ಞಾನ ಕಂಪನಿಗಳಾಗಿವೆ.

ಕರ್ನಾಟಕವು ಜೈವಿಕ ತಂತ್ರಜ್ಞಾನ ಉದ್ಯಮದಲ್ಲೂ ಮುಂದಿದೆ. ಇದು ಗಣನೀಯ ಪ್ರಮಾಣದ ಸಂಪನ್ಮೂಲಗಳು ಮತ್ತು ಪರಿಣತಿಯನ್ನು ನಿರ್ಮಿಸಿದೆ. ಕರ್ನಾಟಕವು ಕೈಗಾರಿಕಾ ಆಧಾರಿತ ಜೈವಿಕ ತಂತ್ರಜ್ಞಾನ ನೀತಿಯನ್ನು ರೂಪಿಸಿದ ಮೊದಲ ರಾಜ್ಯವಾಗಿದೆ. ಕೈಗಾರಿಕಾ ವಲಯವು ರಾಜ್ಯದ ಜನರಿಗೆ ಉದ್ಯೋಗವಕಾಶವನ್ನು ನೀಡುತ್ತದೆ. ಇದರಿಂದ ಅರ್ಥವ್ಯವಸ್ಥೆ ವೃದ್ಧಿಗೊಳ್ಳಲು ಸಹಕಾರಿಯಾಗುತ್ತದೆ.

**ಬ್ಯಾಂಕಿಂಗ್ :** ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು 1913 ರಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಸ್ಥಾಪಿಸಿದರು. ಅಲ್ಲಿಂದೀಚೆಗೆ ಕರ್ನಾಟಕವು ಬ್ಯಾಂಕಿಂಗ್ ವ್ಯವಹಾರದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳು 'ಬ್ಯಾಂಕಿಂಗ್ ಉದ್ಯಮದ ತೊಟ್ಟಿಲುಗಳು' ಎನಿಸಿವೆ. ಕೆನರಾ ಬ್ಯಾಂಕ್ ಇವು ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕುಗಳಾಗಿದ್ದು, ತಮ್ಮ ಮೂಲ ನೆಲೆಯನ್ನು ಈ ಎರಡು ಜಿಲ್ಲೆಗಳಲ್ಲಿ ಹೊಂದಿವೆ. ಕೆನರಾ ಬ್ಯಾಂಕು ರಾಜ್ಯದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕ(RRB)ನ್ನು ಪ್ರಾಯೋಜಿಸಿದ ಮೊಟ್ಟಮೊದಲ ಬ್ಯಾಂಕಾಗಿದೆ. ಪ್ರಸ್ತುತ ರಾಜ್ಯದಲ್ಲಿ 12 ಸಾರ್ವಜನಿಕ ವಲಯದ ವಾಣಿಜ್ಯ ಬ್ಯಾಂಕುಗಳು, 16 ಖಾಸಗಿ ವಾಣಿಜ್ಯ ಬ್ಯಾಂಕುಗಳು, ಎರಡು

NOT TO BE REPUBLISHED © KTBS

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. IDBI, AXIS ಬ್ಯಾಂಕು, ICICI ಬ್ಯಾಂಕು, ಇಂಡಸ್ ಬ್ಯಾಂಕ್ ಮುಂತಾದುವು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಖಾಸಗಿ ಬ್ಯಾಂಕುಗಳಾಗಿವೆ. ಬ್ಯಾಂಕಿಂಗ್ ವ್ಯವಸ್ಥೆಯು ರಾಜ್ಯದ ಅರ್ಥವ್ಯವಸ್ಥೆಗೆ ಸಹಕಾರಿಯಾಗಿದೆ.




**ಪ್ರವಾಸೋದ್ಯಮ :** ಕರ್ನಾಟಕವು ತನ್ನ ಭಿನ್ನವಾದ ಪರಂಪರೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಉತ್ತಮ ರೀತಿಯ ಪ್ರವಾಸೋದ್ಯಮದ ಸುಸ್ಥಿರ ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿದೆ. 1988 ರಿಂದಲೇ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರವಾಸೋದ್ಯಮವು ರಾಜ್ಯದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿದೆ, ಜೊತೆಗೆ ಕೌಶಲ್ಯ ಸಹಿತ ಮತ್ತು ಕೌಶಲ್ಯ ರಹಿತ ಕೆಲಸಗಾರರೆಲ್ಲರಿಗೂ ಅಪಾರ ಪ್ರಮಾಣದ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ಇದು ಸಾರಿಗೆ, ವ್ಯಾಪಾರ, ಆರೋಗ್ಯ, ತೋಟಗಾರಿಕೆ, ಪುಷ್ಪಕೃಷಿ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಬೆಳವಣಿಗೆಗೂ ಸಹ ಸಹಾಯಕವಾಗಿದೆ.

**ವಿದ್ಯುಚ್ಛಕ್ತಿ :** ಕರ್ನಾಟಕದಲ್ಲಿ ಐದು ವಿವಿಧ ರೂಪಗಳಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ. ಅವುಗಳೆಂದರೆ ಜಲ ವಿದ್ಯುಚ್ಛಕ್ತಿ, ಔಷ್ಣೀಯ ವಿದ್ಯುಚ್ಛಕ್ತಿ, ಅಣು ವಿದ್ಯುಚ್ಛಕ್ತಿ, ಗಾಳಿ ವಿದ್ಯುಚ್ಛಕ್ತಿ, ಸೌರ ವಿದ್ಯುಚ್ಛಕ್ತಿ. ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಉತ್ಪಾದನೆಯ ಪ್ರಮುಖ ಮೂಲ ಜಲವಿದ್ಯುಚ್ಛಕ್ತಿಯಾಗಿದೆ. ವಿದ್ಯುಚ್ಛಕ್ತಿ ಉತ್ಪಾದನಾ ಘಟಕಗಳು 'ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತ'(KPCL)ದ ಮಾಲೀಕತ್ವ ಮತ್ತು ನಿಯಂತ್ರಣಕ್ಕೆ ಒಳಪಟ್ಟಿವೆ. ರಾಜ್ಯಾದ್ಯಂತ ವಿದ್ಯುಚ್ಛಕ್ತಿ ವಿತರಣೆಯ ಜವಾಬ್ದಾರಿಯನ್ನು 'ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತ'(KPTCL)ವು ಹೊತ್ತಿದೆ.


ಗಾಳಿ ವಿದ್ಯುಚ್ಛಕ್ತಿ


ಸೌರ ವಿದ್ಯುಚ್ಛಕ್ತಿ


ಜಲ ವಿದ್ಯುಚ್ಛಕ್ತಿ

© KTBS NOT TO BE REPUBLISHED

**ಸಾರಿಗೆ :** ಸಾರಿಗೆಯು ರಾಜ್ಯದ ಅರ್ಥವ್ಯವಸ್ಥೆಯ ಜೀವನಾಡಿಯಾಗಿದೆ. ಕೃಷಿ, ಕೈಗಾರಿಕೆ, ಗಣಿಗಾರಿಕೆ, ವ್ಯಾಪಾರ ಮುಂತಾದ ಆರ್ಥಿಕ ಚಟುವಟಿಕೆಗಳು ಸಾರಿಗೆ ವ್ಯವಸ್ಥೆಯನ್ನೇ ಅವಲಂಬಿಸಿವೆ. ಸುವ್ಯವಸ್ಥಿತ ಸಾರಿಗೆ ಇಲ್ಲದಿದ್ದರೆ ಆರ್ಥಿಕಾಭಿವೃದ್ಧಿ ಸಾಧ್ಯವಿಲ್ಲ. ಆದುದರಿಂದ ಸಾರಿಗೆಯನ್ನು ಆರ್ಥಿಕಾಭಿವೃದ್ಧಿಯ ಕೀಲಿಕೈ ಎನ್ನುತ್ತಾರೆ. ರಸ್ತೆ ಸಾರಿಗೆ, ರೈಲು ಸಾರಿಗೆ, ಜಲಸಾರಿಗೆ ಮತ್ತು ವಾಯುಸಾರಿಗೆಯು ಇದ್ದು, ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದೆ.

**ರಸ್ತೆ ಸಾರಿಗೆ :** ಕರ್ನಾಟಕವು ವ್ಯಾಪಕವಾದ ರಸ್ತೆ ಜಾಲವನ್ನು ಹೊಂದಿದೆ. ರಸ್ತೆಗಳು ರಾಜ್ಯದ ಮೂಲೆಮೂಲೆಗಳನ್ನು ಸಂಪರ್ಕಿಸುತ್ತಿವೆ. ಅವು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡಕ್ಕೂ ಮೂಲ ಸೌಕರ್ಯಗಳಾಗಿ ಕಾರ್ಯ ನಿರ್ವಹಿಸುತ್ತವೆ. ಪ್ರಮುಖ ರಸ್ತೆಗಳು ಮತ್ತು ಸೇತುವೆಗಳನ್ನು ಖಾಸಗಿ ಬಂಡವಾಳಗಾರರ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ. 'ಪ್ರಧಾನ ಮಂತ್ರಿ ಗ್ರಾಮ ಸಡಕ್‌ಯೋಜನೆ'ಯ ಅಡಿಯಲ್ಲಿ ಮುಖ್ಯರಸ್ತೆಗಳಿಂದ ಎಲ್ಲಾ ಗ್ರಾಮಗಳಿಗೂ ರಸ್ತೆ ಸಂಪರ್ಕ ಒದಗಿಸಲಾಗುತ್ತಿದೆ.

'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ'ವು ಸರ್ಕಾರಿ ಸ್ವಾಮ್ಯದ ಉದ್ಯಮವಾಗಿದ್ದು, ಸಮರ್ಥ ಸಾರ್ವಜನಿಕ ಸಾರಿಗೆಗೆ ಹೆಸರುವಾಸಿಯಾಗಿದೆ. ದಕ್ಷ ಹಾಗೂ ಸುಗಮ ಕಾರ್ಯ ನಿರ್ವಹಣೆಗಾಗಿ ಸರ್ಕಾರವು ಈ ನಿಗಮವನ್ನು ನಾಲ್ಕು ನಿಗಮಗಳನ್ನಾಗಿ ವಿಭಜಿಸಿದೆ. ಅವುಗಳೆಂದರೆ : 1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC), 2) ಬೆಂಗಳೂರು ಮಹಾನಗರ ಸಾರಿಗೆ ನಿಗಮ (BMTC), 3) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (NWKRTC) 4) ಕಲ್ಯಾಣ ಕರ್ನಾಟಕ ರಸ್ತೆಸಾರಿಗೆ ನಿಗಮ (KKRTC).

**ರೈಲು ಸಾರಿಗೆ :** ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ರಾಜ್ಯದ ಸಮಗ್ರತೆಗೆ ರೈಲು ಸಾರಿಗೆಯ ಕೊಡುಗೆ ಅಪಾರವಾದುದು. ಬೆಂಗಳೂರಿನಿಂದ ದೇಶದ ಬಹುತೇಕ ರಾಜ್ಯಗಳ ರಾಜಧಾನಿಗಳಿಗೆ ರೈಲು ಸಂಪರ್ಕ ಕಲ್ಪಿಸಲಾಗಿದೆ. ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಎಲೆಕ್ಟ್ರಾನಿಕ್ ಸಿಗ್ನಲಿಂಗ್ ವ್ಯವಸ್ಥೆಯನ್ನು ಅಳವಡಿಸಿ, ರೈಲುಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಲಾಗಿದೆ. ನೈರುತ್ಯ ರೈಲ್ವೆ ವಲಯದ ಕೇಂದ್ರ ಕಛೇರಿಯು ಹುಬ್ಬಳ್ಳಿಯಲ್ಲಿದ್ದು, ರಾಜ್ಯದ ಬಹುತೇಕ ರೈಲು ಮಾರ್ಗಗಳು ಇದರ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ. ಈ ಸಾರಿಗೆಯ ಮೂಲಕ ಕೇವಲ ಪ್ರಯಾಣಿಕರನ್ನು ಸಾಗಿಸದೆ ಸರಕುಗಳನ್ನು ಕೂಡ ಸಾಗಿಸಲಾಗುತ್ತದೆ.

**ಜಲ ಸಾರಿಗೆ :** ಕರ್ನಾಟಕ ರಾಜ್ಯವು 320 ಕಿ.ಮೀ. ಉದ್ದದ ಕರಾವಳಿಯನ್ನು ಹೊಂದಿದ್ದು, ಒಂದು ದೊಡ್ಡ ಬಂದರು ಹಾಗೂ 13 ಸಣ್ಣ ಬಂದರುಗಳನ್ನು ಒಳಗೊಂಡಿದೆ. ದೊಡ್ಡದಾದ ನವಮಂಗಳೂರು ಬಂದರು ಕೇಂದ್ರ ಸರ್ಕಾರದ ಒಡೆತನದಲ್ಲಿದ್ದು, ಉಳಿದ ಬಂದರುಗಳು ರಾಜ್ಯಸರ್ಕಾರದ ಒಡೆತನದಲ್ಲಿವೆ. ಇವುಗಳಲ್ಲಿ ಕಾರವಾರ, ಬೇಲೆಕೇರಿ, ಮಲ್ಪೆ ಹಾಗೂ ಮಂಗಳೂರು ಬಂದರುಗಳು ಗಣನೀಯ ಪ್ರಮಾಣದ ಸರಕು ಸಾಗಣೆಯನ್ನು ನಿರ್ವಹಿಸುತ್ತಿವೆ. ರಾಜ್ಯದ ಜಲ ಸಾರಿಗೆಯು ದೇಶದ ಹಲವು ರಾಜ್ಯಗಳು ಹಾಗೂ ವಿಶ್ವದ ಹಲವು ದೇಶಗಳಿಗೆ ಸಂಪರ್ಕ ಕಲ್ಪಿಸಿದೆ.

**ವಾಯು ಸಾರಿಗೆ :** ವಾಯುಸಾರಿಗೆಯು ವೇಗದ ಸಾರಿಗೆಯಾಗಿದೆ. ಇದು ಸರಕುಗಳನ್ನು ಮತ್ತು ಪ್ರಯಾಣಿಕರನ್ನು ಶೀಘ್ರವಾಗಿ ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗಿಸಬಲ್ಲುದು. ಇದು ರಾಜ್ಯದ

NOT TO BE REPUBLISHED @KTBS

ಆಂತರಿಕ ಹಾಗೂ ವಿದೇಶಿ ವ್ಯಾಪಾರಕ್ಕೆ ಬಹಳ ಉಪಯುಕ್ತವಾಗಿದೆ. ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ಹಸಿರುವಲಯದ (Green Filed) ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ರಾಜ್ಯದ ಕೃಷಿ, ಕೈಗಾರಿಕೆ, ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮುಂತಾದ ಕ್ಷೇತ್ರಗಳ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದ ಇತರೆ ನಗರಗಳಾದ ಮಂಗಳೂರು, ಹುಬ್ಬಳ್ಳಿ, ಮೈಸೂರಿನಲ್ಲಿ ವಿಮಾನ ನಿಲ್ದಾಣಗಳಿವೆ. ಈ ವಿಮಾನನಿಲ್ದಾಣವನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಪ್ರಯತ್ನಿಸುತ್ತಿದೆ.

**ಸಂಪರ್ಕ :** ದೂರಸಂಪರ್ಕ ವ್ಯವಸ್ಥೆಯು ರಾಜ್ಯದಲ್ಲಿ ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯಗಳೆರಡರಿಂದಲೂ ನಿರ್ವಹಿಸಲ್ಪಡುತ್ತಿದೆ. ಭಾರತ್ ಸಂಚಾರ್ ನಿಗಮ ನಿಯಮಿತ(BSNL) ವನ್ನು ಹೊರತಾಗಿ, ರಾಜ್ಯದಲ್ಲಿ ದೂರಸಂಪರ್ಕ ಸೇವೆಯನ್ನು ಒದಗಿಸುತ್ತಿರುವ ಕೆಲವು ಖಾಸಗಿ ವಲಯದ ಕಂಪನಿಗಳೆಂದರೆ ಏರ್‌ಟೆಲ್, ರಿಲೈಯನ್ಸ್ ಜಿಯೋ ಇತ್ಯಾದಿ.

**ಆರೋಗ್ಯ ಮತ್ತು ಶಿಕ್ಷಣ :** ಕರ್ನಾಟಕವು ತನ್ನ ಪ್ರಜೆಗಳ ಆರೋಗ್ಯ ಸ್ಥಿತಿಗತಿಗಳನ್ನು ಉತ್ತಮಪಡಿಸುವಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸುಸ್ಥಿರ ಪ್ರಗತಿಯನ್ನು ಸಾಧಿಸುತ್ತಿದೆ. 'ಕನಿಷ್ಠ ಅಗತ್ಯತಾ ಕಾರ್ಯಕ್ರಮ'ದ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಒದಗಿಸುತ್ತಿರುವ ಪ್ರಾಥಮಿಕ ಆರೋಗ್ಯ ಮೂಲಸೌಲಭ್ಯವು ಜನರ ಅಗತ್ಯಗಳನ್ನು ಈಡೇರಿಸುತ್ತಿದೆ. ಕರ್ನಾಟಕದಲ್ಲಿ ಒಟ್ಟು 2021–22ರಲ್ಲಿ 2396 ಪ್ರಾಥಮಿಕ ಆರೋಗ್ಯ ಕೇಂದ್ರಗಳು 9476 ಉಪಕೇಂದ್ರಗಳು ಹಾಗೂ 202 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಾರ್ವಜನಿಕ ಪ್ರಾಮುಖ್ಯತೆಯ ಹಲವಾರು ರಾಷ್ಟ್ರ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಹಾಗೂ ವಿವಿಧ ರೀತಿಯ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳ ಮೂಲಕ ರಾಜ್ಯದ ಜನತೆಗೆ ವ್ಯವಸ್ಥಿತ ಆರೋಗ್ಯ ಸುರಕ್ಷತೆಯ ಸೇವೆಗಳನ್ನೂ ಒದಗಿಸುತ್ತಿದೆ. ಉದಾ : ಜನನಿ ಸುರಕ್ಷಾ ಯೋಜನೆ, ಯಶಸ್ವಿನಿ, ಮಡಿಲು ಇತ್ಯಾದಿ.

**ಶಿಕ್ಷಣ :** ಕರ್ನಾಟಕದ ಆರ್ಥಿಕ ಅಭಿವೃದ್ಧಿಯು ಬಹುವಾಗಿ ಜ್ಞಾನ ಆಧಾರಿತ ಸಮಾಜದ ಮೇಲೆ ಅವಲಂಬಿತವಾಗಿದೆ. ರಾಜ್ಯವು ಗುಣಮಟ್ಟದ ಶಿಕ್ಷಣದ ಭರವಸೆಯೊಂದಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವುದರ ಜೊತೆಗೆ, ಶೈಕ್ಷಣಿಕ ವಲಯದಲ್ಲಿ ಮಹತ್ವದ ಸುಧಾರಣೆಗಳನ್ನು ಮಾಡುವ ಸಾಹಸಕಾರ್ಯದಲ್ಲಿ ತೊಡಗಿದೆ. ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಅಸ್ತಿತ್ವದಲ್ಲಿದ್ದು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿವೆ.

ಕರ್ನಾಟಕವು ದೇಶದಲ್ಲಿ ಅತಿವೇಗವಾಗಿ ಬೆಳವಣಿಗೆ ಹೊಂದುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ. 2011 ರಲ್ಲಿ ಇದು ಶೇ.75.36% ರಷ್ಟು ಸಾಕ್ಷರತೆಯನ್ನು ಸಾಧಿಸಿದೆ. ಕರ್ನಾಟಕ ಸರ್ಕಾರವು 'ಕರ್ನಾಟಕ ಜ್ಞಾನ ಆಯೋಗ'ವನ್ನು ಸ್ಥಾಪಿಸಿದೆ. ಇದರ ಉದ್ದೇಶ ಉನ್ನತ ಶಿಕ್ಷಣವನ್ನು ವಿಸ್ತರಿಸುವುದಲ್ಲದೆ, ಬೆಳೆಯುತ್ತಿರುವ ಕೈಗಾರಿಕೆ ಮತ್ತು ಸೇವಾವಲಯಗಳ ಅಗತ್ಯಗಳನ್ನು ಪೂರೈಸುವುದು, ಅದರ ಜೊತೆಗೆ ಜಾಗತಿಕ ಸವಾಲುಗಳನ್ನು ಎದುರಿಸುವುದಾಗಿದೆ. ಈ ಮೇಲಿನ ಎಲ್ಲಾ ಕ್ಷೇತ್ರಗಳೂ ಕೂಡಾ ಕರ್ನಾಟಕದ ಆರ್ಥಿಕಾಭಿವೃದ್ಧಿಯಲ್ಲಿ ಪರಸ್ಪರ ಸಹಕಾರದೊಂದಿಗೆ ಮತ್ತು ಅವಲಂಬನೆಯೊಂದಿಗೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ.

NOT TO BE REPUBLISHED © KTBS

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ :**

1) ಭಾರತದ ಪ್ರಮುಖ ಉದ್ಯೋಗ ................
2) ಆರೋಗ್ಯ ಮತ್ತು ಶಿಕ್ಷಣ ................ ವಲಯದಲ್ಲಿ ಬರುತ್ತವೆ.
3) ಕರ್ನಾಟಕದ ಒಟ್ಟು ಭೌಗೋಳಿಕ ವಿಸ್ತೀರ್ಣ ................
4) ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸ್ಥಾಪಿಸಿದವರು ................
5) ತಯಾರಿಕಾ ಚಟುವಟಿಕೆಗಳು ................ ವಲಯಕ್ಕೆ ಸೇರಿವೆ.
6) ಕರ್ನಾಟಕದ ಕರಾವಳಿ ಪ್ರದೇಶದ ಉದ್ದ ................ ಕಿ.ಮೀ.
7) ಉನ್ನತ ಶಿಕ್ಷಣ ವಿಸ್ತರಣೆಗಾಗಿ ಕರ್ನಾಟಕ ಸರ್ಕಾರ ................ ಆಯೋಗವನ್ನು ಸ್ಥಾಪಿಸಿದೆ.
8) ನೂತನ ಆರ್ಥಿಕ ಸುಧಾರಣಾ ನೀತಿ ................ ರಲ್ಲಿ ಜಾರಿಯಾಯಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

9) ಪ್ರಾಥಮಿಕ ವಲಯವನ್ನು ವ್ಯಾಖ್ಯಾನಿಸಿ.
10) ಭಾರತೀಯ ಕೃಷಿ ವಲಯದ ಪ್ರಾಮುಖ್ಯತೆಯನ್ನು ವಿವರಿಸಿ.
11) ಕೈಗಾರಿಕಾ ವಲಯದ ಪ್ರಾಮುಖ್ಯತೆಯನ್ನು ವಿವರಿಸಿ.
12) ಕರ್ನಾಟಕದ ಯಾವ ಜಿಲ್ಲೆಗಳನ್ನು ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎಂದು ಕರೆಯಲಾಗಿದೆ ?
13) ಗಾಂಧೀಜಿಯವರ ಪ್ರಕಾರ ಶಿಕ್ಷಣ ಎಂದರೇನು ?
14) ಕೈಗಾರಿಕೆಗಳ ಗುಂಪುಗಳನ್ನು ತಿಳಿಸಿ.
15) ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳನ್ನು ಪಟ್ಟಿ ಮಾಡಿ.
16) ವಿಶ್ವ ಆರೋಗ್ಯ ಸಂಘಟನೆಯ ಪ್ರಕಾರ ಆರೋಗ್ಯ ಎಂದರೇನು ?

**III. ಚಟುವಟಿಕೆಗಳು :**

1) "ಇಂದು ತೃತೀಯ ವಲಯವು ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ" ಈ ಹೇಳಿಕೆಗೆ ಪೂರಕ ಮಾಹಿತಿ ಸಂಗ್ರಹಿಸಿ, ಒಂದು ನೈಜ ಚಿತ್ರಣವನ್ನು ಕೊಡಿ.
2) ನಿಮ್ಮ ಪರಿಸರದಲ್ಲಿರುವ ಕೈಗಾರಿಕೆಗಳನ್ನು ಪಟ್ಟಿ ಮಾಡಿರಿ ಹಾಗೂ ಅವುಗಳನ್ನು ವರ್ಗೀಕರಿಸಿ.

**IV. ಯೋಜನೆ.**

1) ಕರ್ನಾಟಕದ ಅರ್ಥವ್ಯವಸ್ಥೆಯ ವಿವಿಧ ವಲಯಗಳ ಚಟುವಟಿಕೆ ಕುರಿತು ಒಂದು ವರದಿ ತಯಾರಿಸಿ.

*****

© KTBS NOT TO BE REPUBLISHED

# ವ್ಯವಹಾರ ಅಧ್ಯಯನ

## ಅಧ್ಯಾಯ – 16

# ವ್ಯವಹಾರ ನಿರ್ವಹಣೆ

W6N6U1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವ್ಯವಹಾರ ನಿರ್ವಹಣೆಯ ಅರ್ಥ.
- ವ್ಯವಹಾರ ನಿರ್ವಹಣೆಯ ತತ್ವಗಳು.
- ನಿರ್ಧಾರ ಕೌಶಲ್ಯ ಮತ್ತು ಅದರ ಪ್ರಕ್ರಿಯೆ.
- ನಿರ್ವಹಣೆಯ ಕಾರ್ಯಕ್ಷೇತ್ರಗಳು ಮತ್ತು ವ್ಯಾಪ್ತಿ.

**ನಿರ್ವಹಣೆಯ ಅರ್ಥ ಮತ್ತು ವ್ಯಾಖ್ಯೆಗಳು :** ಸಾಮಾನ್ಯವಾಗಿ ನಿರ್ವಹಣೆಯೆಂಬ ಪದವನ್ನು ಒಂದು ಸಂಸ್ಥೆಯ ಚಟುವಟಿಕೆಗಳನ್ನು ನಿರ್ವಹಿಸುವ ಒಂದು ಪ್ರಕ್ರಿಯೆ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. **ಜೆ. ಎಲ್ ಹೇನ್ಸ್‌ರವರ ಪ್ರಕಾರ** "ನಿರ್ವಹಣೆ ಎಂಬುದು ಬೇರೆಯವರಿಂದ ಕೆಲಸವನ್ನು ಮಾಡಿಸುವ ಒಂದು ಕಲೆಯಾಗಿದೆ".

ನಿರ್ವಹಣೆಯೆಂದರೆ ಸಂಸ್ಥೆಯ ಪೂರ್ವ ನಿರ್ಧಾರಿತ ಗುರಿಗಳ ಈಡೇರಿಕೆಗಾಗಿ ಜನರ ಪ್ರಯತ್ನಗಳನ್ನು ಸಮನ್ವಯಗೊಳಿಸುವ ಮತ್ತು ಸಂಯೋಜಿಸುವ ರೀತಿಯಲ್ಲಿ ನಿರ್ದೇಶಿಸುವುದರ ಮೂಲಕ ಬೇರೆಯವರಿಂದ ಕೆಲಸಮಾಡಿಸುವ ಪ್ರಕ್ರಿಯೆಯಾಗಿರುತ್ತದೆ. ನಿರ್ವಹಣೆಯೆಂದರೆ ಯೋಜನೆ, ಸಂಘಟನೆ, ಸಿಬ್ಬಂದಿಪೂರೈಕೆ, ನಿರ್ದೇಶನ, ಸಂಯೋಜನೆ ಮತ್ತು ನಿಯಂತ್ರಣದಂತಹ ಪ್ರಮುಖ ಕಾರ್ಯಗಳ ಒಟ್ಟು ಮೊತ್ತವಾಗಿರುತ್ತದೆ.

**ನಿರ್ವಹಣೆಯ ತತ್ವಗಳು (Principles of Management) :** ಒಂದು ವ್ಯವಹಾರ ಸಂಸ್ಥೆಯನ್ನು ಸುಗಮವಾಗಿ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿಸಬೇಕಾದರೆ ಕೆಲವು ತತ್ವಗಳನ್ನು ಅಳವಡಿಸಿಕೊಳ್ಳುವುದು ಅತಿಮುಖ್ಯ. ಹೆನ್ರಿ ಫಯೋಲ್‌ರವರು ಈ ಕೆಳಗಿನ 14 ತತ್ವಗಳನ್ನು ಸೂಚಿಸಿದ್ದಾರೆ.

**1) ಕಾರ್ಯವಿಭಜನೆ :** ನೌಕರರ ಅಥವಾ ಕೆಲಸಗಾರರ ನಡುವೆ ಅವರು ಮಾಡಬೇಕಾದ ಕಾರ್ಯಗಳನ್ನು ಕ್ರಮ ಬದ್ಧವಾಗಿ ವಿಭಜಿಸಬೇಕು. ಇದರಿಂದಾಗಿ ಉತ್ಪಾದನೆ ಹೆಚ್ಚಿ, ಹೆಚ್ಚು ಲಾಭ ಗಳಿಸಲು ಸಾಧ್ಯವಾಗುತ್ತದೆ. ಈ ತತ್ವವನ್ನು ಸಂಸ್ಥೆಯ ಎಲ್ಲಾ ವಿಭಾಗಗಳಲ್ಲೂ ಅಳವಡಿಸಿಕೊಳ್ಳಬಹುದು.

**2) ಅಧಿಕಾರ ಮತ್ತು ಜವಾಬ್ದಾರಿ :** ಈ ತತ್ವವು ಅಧಿಕಾರ ಮತ್ತು ಜವಾಬ್ದಾರಿಗೆ ಸಂಬಂಧಪಟ್ಟಿದ್ದಾಗಿದೆ.ಈ ಎರಡೂ ಅಂಶಗಳು ಆಡಳಿತಗಾರನ ಅಧಿಕಾರ ಮತ್ತು ನೌಕರರೊಂದಿಗಿನ ಜವಾಬ್ದಾರಿಯನ್ನು ತೋರಿಸುತ್ತವೆ. ಈ ಅಂಶಗಳು ಆಡಳಿತಗಾರರ ಬುದ್ದಿವಂತಿಕೆ, ಅನುಭವ, ನೈತಿಕ ಗುಣ ಮುಂತಾದುವುಗಳ ಸಮ್ಮಿಲನವಾಗಿರುತ್ತದೆ.

**3) ಶಿಸ್ತು :** ಈ ತತ್ವವು ಅಧಿಕಾರಿಗಳು ಮತ್ತು ನೌಕರರ ಮಧ್ಯೆ ಕಾರ್ಯಪ್ರವರ್ತಕ ಗುಣಗಳು ಎಲ್ಲಾ ಹಂತಗಳಲ್ಲೂ ಇರುವುದನ್ನು ಬಿಂಬಿಸುತ್ತದೆ. ಈ ಗುಣಗಳು ಸಂಘಟನೆಯ ಸಾಧನೆಗಳನ್ನು ಪೂರೈಸುತ್ತದೆ.

©KTBS NOT TO BE REPUBLISHED

ಹಿರಿಯ ಅಧಿಕಾರಿಗಳಲ್ಲಿ ಶಿಸ್ತು, ಸ್ಪಷ್ಟ ಮತ್ತು ನಿಷ್ಪಕ್ಷಪಾತವಾಗಿರಬೇಕು. ಇದು ನ್ಯಾಯಬದ್ಧವಾದ ದಂಡ ವಿಧಿಸುವುದರಲ್ಲೂ ಇರಬೇಕು.

**4) ಏಕರೂಪ ಆದೇಶ :** ಈ ತತ್ವದ ಪ್ರಕಾರ ಉದ್ಯೋಗಿಯು ಆಜ್ಞೆಗಳನ್ನು ಒಬ್ಬ ಮೇಲ್ವಿಚಾರಕನಿಂದ ಮಾತ್ರ ಪಡೆಯಬೇಕು.

**5) ಏಕರೂಪದ ನಿರ್ದೇಶನ :** ಈ ತತ್ವವು ಒಂದೇ ಉದ್ದೇಶದಿಂದ ಕೂಡಿರುವ ಗುಂಪು ಚಟುವಟಿಕೆಗಳಿಗೆ ಒಂದೇ ಆದೇಶ ಕೊಡಲು ತಿಳಿಸುತ್ತದೆ.

**6) ಸಾಮಾನ್ಯ ಹಿತಾಸಕ್ತಿ :** ಈ ತತ್ವದ ಪ್ರಕಾರ ನಿರ್ವಹಣೆಯು ಕೆಲಸಗಾರರು ಸಂಸ್ಥೆಯ ಸಾಮಾನ್ಯ ಗುರಿಗಳನ್ನು ತಲುಪುವತ್ತ ಹೆಜ್ಜೆಯಿಡಬೇಕು.

**7) ಉದ್ಯೋಗಿಗಳ ವೇತನ :** ಉದ್ಯೋಗಿಗಳಿಗೆ ನೀಡುವ ವೇತನವು ಪ್ರಾಮಾಣಿಕತೆಯಿಂದ ಕೂಡಿದ್ದು ಎಲ್ಲಾ ನೌಕರರಿಗೂ ಸಮಾಧಾನ ತರುವಂತಿರಬೇಕೆಂದು ಈ ತತ್ವವು ತಿಳಿಸುತ್ತದೆ.

**8) ಕೇಂದ್ರೀಕೃತ ನಿರ್ವಹಣೆ :** ಈ ತತ್ವದ ಪ್ರಕಾರ ಅಧಿಕಾರವು ಕೇಂದ್ರೀಕೃತವಾಗಿದ್ದು ವ್ಯಾಪಾರ ಸಂಘಟನೆಗೆ ಉತ್ತಮ ಫಲ ದೊರಕುವಂತಿರಬೇಕು.

**9) ಹಂತಸರಪಳಿ :** ಈ ತತ್ವದ ಪ್ರಕಾರ ಅಧಿಕಾರ ವರ್ಗದಲ್ಲಿ ಹಂತಗಳಿರಬೇಕು. ಅಧಿಕಾರದ ಶ್ರೇಣಿ ಸ್ಪಷ್ಟವಾಗಿ ನಿರ್ಧಾರವಾಗಿರಬೇಕು.

**10) ಕ್ರಮ :** ಈ ತತ್ವದ ಪ್ರಕಾರ ಜನರು ಮತ್ತು ವಸ್ತುಗಳು ಸರಿಯಾದ ಸ್ಥಳದಲ್ಲಿ ಸೂಕ್ತ ಸಮಯದಲ್ಲಿ ದೊರೆಯಬೇಕು.

**11) ಸಮತೆ :** ಈ ತತ್ವದ ಪ್ರಕಾರ ಅಧಿಕಾರವರ್ಗದವರ ಮತ್ತು ಸಾಮಾನ್ಯ ಉದ್ಯೋಗಿಗಳ ನಡುವೆ ಸಮಭಾವ ಮತ್ತು ಹೊಂದಾಣಿಕೆ ಗುಣಗಳನ್ನು ಹೊಂದಿರಬೇಕು.

**12) ಉದ್ಯೋಗಿಗಳ ಅಧಿಕಾರಾವಧಿಯ ಸ್ಥಿರತೆ :** ಉದ್ಯೋಗಿಗಳ ಕೆಲಸದಲ್ಲಿ ಸ್ಥಿರತೆ ಇರಬೇಕು. ಕೆಲಸಗಾರರ ಶೀಘ್ರ ಹೊರದೂಡುವಿಕೆಯು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡುತ್ತದೆ.

**13) ನೇತೃತ್ವ :** ಸಂಘಟನೆಯ ನೇತೃತ್ವವು ಸಮಾಧಾನಕರವಾಗಿರಬೇಕು. ನಿರ್ವಹಣೆಯು ಮೂಲ ಏರ್ಪಾಟುಗಳನ್ನು ಪೂರ್ಣಪ್ರಮಾಣದಲ್ಲಿ ಉತ್ತಮ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು.

**14) ಒಗ್ಗಟ್ಟಿನಲ್ಲಿ ಬಲ :** ಈ ತತ್ವದ ಪ್ರಕಾರ ಒಂದು ವ್ಯವಹಾರ ಸಂಘಟನೆಯ ಎಲ್ಲಾ ಉದ್ಯೋಗಿಗಳು ಒಂದಾಗಿ ತಮ್ಮದೇ ಕೆಲಸವೆಂದು ಸಂಘಟನೆಯ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

## ಸಂಘಟನೆಯ ಕಾರ್ಯಕ್ಷೇತ್ರದಲ್ಲಿ ನಿರ್ಧಾರ ತೆಗೆದುಕೊಳ್ಳುವುದು

ಕಾರ್ಯಕೌಶಲ ಮತ್ತು ಪ್ರಕ್ರಿಯೆಯ ನಿರ್ಣಯಗಳನ್ನು ತೆಗೆದುಕೊಳ್ಳುವುದು ವ್ಯವಹಾರ ನಿರ್ವಹಣೆಯ ಒಂದು ಮಾನಸಿಕ ಪ್ರಕ್ರಿಯೆಯಾಗಿದೆ.

**ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ (Need of Dicision making) :** ಪ್ರತಿಯೊಂದು ವ್ಯವಹಾರ ಸಂಘಟನೆಯು ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ಈ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಸಣ್ಣ ವಿಷಯಗಳಲ್ಲೂ ಕೂಡ ಅನೇಕ ರೀತಿಯ ಆಯ್ಕೆಗಳಿರುತ್ತವೆ. ಉದಾಹರಣೆಗೆ ಒಬ್ಬ ವ್ಯಾಪಾ–

NOT TO BE REPUBLISHED ©KTBS

ರಿಯು ವಸ್ತುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಬೇಕಾಗುತ್ತದೆ. ಅವನಿಗೆ ಲಾರಿ, ಟೆಂಪೋ, ರೈಲು, ಅಥವಾ ವಿಮಾನಗಳ ಮೂಲಕ ವಸ್ತುಗಳನ್ನು ಸಾಗಾಟ ಮಾಡಲು ಅವಕಾಶಗಳಿವೆ. ಅವನು ಇವುಗಳಲ್ಲಿ ಯಾವುದು ಅತ್ಯಂತ ಸೂಕ್ತ ಹಾಗೂ ಕಡಿಮೆ ವೆಚ್ಚದಿಂದ ಕೂಡಿ ಸುರಕ್ಷಿತವಾಗಿ ಸಾಗಿಸಲು ಸಾಧ್ಯವೋ ಅದನ್ನು ಆರಿಸಿಕೊಳ್ಳಬೇಕಾಗುತ್ತದೆ. ಈ ಆಯ್ಕೆಯನ್ನು ನಿರ್ಧಾರ ಅಥವಾ ನಿರ್ಣಯ ಎನ್ನುತ್ತೇವೆ. ಈ ನಿರ್ಧಾರಗಳು ವ್ಯವಹಾರದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ, ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವುದು ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಸಮಂಜಸವಾದ ಪ್ರಕ್ರಿಯೆ ಆಗಿದೆ. ನಿರ್ಧಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

1) ವೈಯಕ್ತಿಕ ನಿರ್ಧಾರಗಳು 2) ಗುಂಪು ನಿರ್ಧಾರಗಳು

ಏಕ ಒಡೆತನದ ಸಣ್ಣಪ್ರಮಾಣದ ವ್ಯವಹಾರ ಸಂಘಟನೆಗಳಲ್ಲಿ, ಒಬ್ಬ ವ್ಯಕ್ತಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ಇವುಗಳನ್ನು ವೈಯಕ್ತಿಕ ನಿರ್ಧಾರಗಳೆನ್ನುತ್ತೇವೆ. ಈ ನಿರ್ಧಾರಗಳು ವ್ಯಕ್ತಿಯ ಸಾಮರ್ಥ್ಯಕ್ಕನುಗುಣವಾಗಿರುತ್ತವೆ.

ಒಂದು ತಂಡ ತೆಗೆದುಕೊಳ್ಳುವ ನಿರ್ಧಾರಗಳನ್ನು ಗುಂಪು ನಿರ್ಧಾರಗಳೆನ್ನುತ್ತೇವೆ. ಇವು ಪಾಲುದಾರಿಕೆ ಸಂಸ್ಥೆಗಳು, ಕೂಡು ಬಂಡವಾಳ ಸಂಸ್ಥೆಗಳು, ಸಹಕಾರ ಸಂಘಗಳು ತೆಗೆದುಕೊಳ್ಳುವ ನಿರ್ಧಾರಗಳಾಗಿರುತ್ತವೆ.

**ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಪ್ರಾಮುಖ್ಯತೆ :** ವ್ಯವಹಾರ ಸಂಘಟನೆಗಳಲ್ಲಿ ಉಂಟಾಗುವ ಅನೇಕ ಸಮಸ್ಯೆಗಳಿಗೆ ಒಳ್ಳೆಯ ನಿರ್ಧಾರಗಳು ಪರಿಹಾರ ಕೊಡುತ್ತವೆ. ಉತ್ತಮ ನಿರ್ಧಾರದಿಂದ ಸಂಘಟನೆಯು ಉತ್ತಮ ಲಾಭ ಪಡೆದು ಸುಗಮ ರೀತಿಯಲ್ಲಿ ನಡೆದುಕೊಂಡು ಹೋಗುತ್ತದೆ. ಹಾಗೆಯೇ ತಪ್ಪು ನಿರ್ಧಾರಗಳು ಸಂಘಟನೆಯ ನಷ್ಟಗಳಿಗೆ ಕಾರಣವಾಗುತ್ತವೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅವುಗಳೆಂದರೆ ಸಂದರ್ಭ, ಅನುಭವ, ವಿವೇಚನೆ, ದೃಢತೆ, ಧೈರ್ಯ ಮತ್ತು ಸ್ಪಷ್ಟತೆ.

ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಈ ಕೆಳಗಿನ ಅಂಶಗಳ ಜ್ಞಾನವನ್ನು ಸಂಘಟನಾಕಾರನು ಹೊಂದಿರಬೇಕು.

- ಸಮಸ್ಯೆಯನ್ನು ವಿಶ್ಲೇಷಿಸುವುದು.
- ಕಾರ್ಯಗತ ಮಾಡಲು ಯೋಜನೆ ರೂಪಿಸುವುದು.
- ಧೈರ್ಯ ಮತ್ತು ತಾಳ್ಮೆಗಳನ್ನು ಪಾಲಿಸುವುದು.
- ಮುಂದಾಲೋಚನೆಯನ್ನು ಗಮನದಲ್ಲಿಡುವುದು.
- ವಿವೇಕಯುಕ್ತ ನಿರ್ಧಾರವನ್ನು ಶೀಘ್ರದಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು.

**ನಿರ್ವಹಣೆಯ ಕಾರ್ಯಕ್ಷೇತ್ರದ ವ್ಯಾಪ್ತಿ (Functional areas of Management) :**

ನಿರ್ವಹಣೆಯು ಇತರರ ಶ್ರಮದ ಮೂಲಕ ಕೆಲಸ ಮಾಡಿಸಿಕೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ಬೇರೆಯವರ ಮೂಲಕ ಕೆಲಸ ಮಾಡಿಸಿಕೊಳ್ಳುವುದಕ್ಕಾಗಿ ನಿರ್ವಹಣೆಯ ಚಟುವಟಿಕೆಗಳನ್ನು ಒಂದು



NOT TO BE REPUBLISHED @KTBS

ಕ್ರಮಬದ್ಧ ರೀತಿಯಲ್ಲಿ ಅನುಸರಿಸಬೇಕಾಗುತ್ತದೆ. ಈ ಕ್ರಮಬದ್ಧ ಚಟುವಟಿಕೆಗಳನ್ನು ನಿರ್ವಹಿಸುವುದನ್ನು ಕಾರ್ಯಕ್ಷೇತ್ರದ ವ್ಯಾಪ್ತಿ ಎನ್ನುತ್ತೇವೆ.

ನಿರ್ವಹಣೆಯ ಕೆಲಸ ಕಾರ್ಯಗಳನ್ನು ವಿವಿಧ ಕ್ಷೇತ್ರಗಳ ಮೂಲಕ ನಿರ್ವಹಿಸಬೇಕಾಗುತ್ತದೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ :

1) ಯೋಜನೆ (Planning) 2) ಸಂಘಟನೆ (Organising)

3) ಸಿಬ್ಬಂದಿ ಪೂರೈಕೆ (Staffing) 4) ನಿರ್ದೇಶನ (Directing)

5) ಸಂಯೋಜನೆ (Co- ordinating) 6) ನಿಯಂತ್ರಣ (Controlling)

1) **ಯೋಜನೆ :** ಇದು ನಿರ್ವಹಣೆಯ ಕಾರ್ಯಕ್ಷೇತ್ರದಲ್ಲಿ ಒಂದು ಮುಖ್ಯವಾದ ಕ್ಷೇತ್ರವಾಗಿದೆ. ಯೋಜನೆಯೆಂದರೆ ಒಂದು ನಿರ್ದಿಷ್ಟ ಅವಧಿಗೆ ಭವಿಷ್ಯದ ಕಾರ್ಯಾಚರಣೆಗಳನ್ನು ಮುಂದಾಗಿ ನಿರ್ಧರಿಸುವುದೇ ಆಗಿದೆ ಯೋಜನಾ ಪ್ರಕ್ರಿಯೆಯು ಸಂಸ್ಥೆಯ ಗುರಿಗಳ ಸಾಧನೆಗಾಗಿ ಉದ್ದೇಶಗಳ ನಿರ್ಣಯ, ನೀತಿ, ಕಾರ್ಯತಂತ್ರಗಳು, ಕಾರ್ಯಕ್ರಮಗಳು, ಕಾರ್ಯಾನುಗತಿಗಳ ಮತ್ತು ಪರಿಶಿಷ್ಟಗಳ (Schedules) ನಿರೂಪಣೆಯನ್ನು ಒಳಗೊಂಡಿರುತ್ತದೆ.

2) **ಸಂಘಟನೆ :** ಸಂಘಟನೆಯೆಂದರೆ ಮಾನವ ಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಂದೆಡೆ ಸೇರಿಸುವುದೇ ಆಗಿದೆ. ಕೆಲವು ಯಂತ್ರಗಳು ಮತ್ತು ಯಂತ್ರೋಪಕರಣ ಸಂಪನ್ಮೂಲಗಳನ್ನು ಮಾನವ ಸಂಪನ್ಮೂಲದ ಜೊತೆ ಸೇರಿಸಿ, ಕಾರ್ಯಕ್ಕೆ ತೊಡಗಿಸಿ ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದೇ ಸಂಘಟನೆಯ ಮುಖ್ಯ ಧ್ಯೇಯವಾಗಿರುತ್ತದೆ.

3) **ಸಿಬ್ಬಂದಿ ಪೂರೈಕೆ :** ಈ ಅಂಶವು ಸಂಘಟನೆಯು ಸರಿಯಾದ ರೀತಿಯಲ್ಲಿ ನಡೆದು ಹೋಗಲು ಬೇಕಾದ ನೌಕರ ವರ್ಗದ ನೇಮಕಾತಿ ಆಯ್ಕೆ, ಸ್ಥಾನೀಕರಣ, ತರಬೇತಿ ಮತ್ತು ಅವರ ಪ್ರಗತಿಗಳನ್ನು ಹೊಂದಿರುತ್ತದೆ.

4) **ನಿರ್ದೇಶನ :** ಈ ಅಂಶವು ಸಂಸ್ಥೆಯ ಗುರಿಗಳ ಸಾಧನೆಗಾಗಿ ಸಂಸ್ಥೆಯಲ್ಲಿ ಕೆಲಸಮಾಡುವ ಜನರಿಗೆ ಸೂಚನೆಗಳನ್ನು ಕೊಡುವ, ಮಾರ್ಗದರ್ಶನ ನೀಡುವ, ವಿಚಾರಣೆ ನಡೆಸುವ ಮತ್ತು ಮುಂದಾಳತ್ವವನ್ನು ಒದಗಿಸುವ ಕಾರ್ಯವಾಗಿರುತ್ತದೆ.

5) **ಸಂಯೋಜನೆ :** ಈ ಅಂಶವು ಅಪೇಕ್ಷಿತ ಗುರಿಗಳ ಸಾಧನೆಗಾಗಿ ವಿವಿಧ ಇಲಾಖೆಗಳ ತಜ್ಞರನ್ನು ಒಟ್ಟುಗೂಡಿಸುವಿಕೆಯಾಗಿರುತ್ತದೆ.

6) **ನಿಯಂತ್ರಣ :** ಈ ಅಂಶವು ಸಂಘಟನೆಯ ಮುಖ್ಯವಾದ ಕಾರ್ಯಗಳಿಗೆ ಸಂಬಂದಪಟ್ಟ ಅಂಶವಾಗಿದೆ. ಈ ಅಂಶದ ಮುಖ್ಯ ಉದ್ದೇಶಗಳಾವುವೆಂದರೆ :

ಎ) ಸಂಸ್ಥೆಯಲ್ಲಿ ಶಿಸ್ತು ಹಾಗೂ ದಕ್ಷತೆಯ ವಾತಾವರಣವನ್ನು ಕಲ್ಪಿಸಿ, ಚಟುವಟಿಕೆಗಳು ಸಮರ್ಪಕವಾಗಿ ಹೊಂದಾಣಿಕೆಯಿಂದ ನಡೆಯುವಂತೆ ನೋಡಿಕೊಳ್ಳುವುದು.

ಬಿ) ಪೂರ್ವಭಾವಿ ಯೋಜನೆಗಳಿಗನುಸಾರವಾಗಿ ಮತ್ತು ನಿರಂತರವಾಗಿ ಚಟುವಟಿಕೆಗಳು ಮುಂದುವರೆಯುವಂತೆ ಮಾಡುವುದು.

NOT TO BE REPUBLISHED @KTBS

## ಅಭ್ಯಾಸಗಳು

**I. ಕೆಳಗಿನ ಪ್ರತಿಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1) ನಿರ್ವಹಣೆ ಎಂದರೇನು?
2) ನಿರ್ಧಾರ ಕೈಗೊಳ್ಳುವುದು ಎಂದರೇನು?
3) ಏಕವ್ಯಕ್ತಿ ನಿರ್ಧಾರ ಹಾಗೂ ಗುಂಪು ನಿರ್ಧಾರಗಳೆಂದರೇನು?
4) ನಿರ್ವಹಣೆಯ ತತ್ವಗಳಲ್ಲಿ ಅಧಿಕಾರ ಮತ್ತು ಜವಾಬ್ಧಾರಿಯ ತತ್ವವೇನು?

**II. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

5) ಹೆನ್ರಿ ಫಯೋಲರ ಪ್ರಕಾರ ನಿರ್ವಹಣೆಯ ತತ್ವಗಳಾವುವು ?
6) ನಿರ್ವಹಣೆಯ ಕೆಲಸ ಕಾರ್ಯಗಳನ್ನು ಯಾವ ಯಾವ ಕ್ಷೇತ್ರಗಳ ಮೂಲಕ ನಿರ್ವಹಿಸಬೇಕಾಗುತ್ತದೆ ?
7) ಅಧಿಕಾರ ಮತ್ತು ಜವಾಬ್ಧಾರಿ, ಹಂತ ಸರಪಳಿ ಮತ್ತು ಕೇಂದ್ರೀಕೃತ ತತ್ವಗಳನ್ನು ವ್ಯವಹಾರ ಸಂಸ್ಥೆಯ ನಿರೂಪಣೆಗೆ ಹೊಂದುವಂತೆ ಬರೆಯಿರಿ.
8) ವ್ಯವಹಾರ ನಿರ್ವಹಣೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಪ್ರಾಮುಖ್ಯತೆ ಏನು?
9) ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಮುಖ್ಯ ಮೂಲಭೂತ ತತ್ವಗಳಾವುವು?
10) ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳಾವುವು?
11) ಯೋಜನೆ ಮತ್ತು ಸಂಘಟನೆಗಳು ನಿರ್ವಹಣೆಯ ಮುಖ್ಯ ಕಾರ್ಯಕ್ಷೇತ್ರದಲ್ಲಿ ವಹಿಸುವ ಪಾತ್ರವೇನು?
12) "ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು" ಹೇಗೆ?
13) ನಿಯಂತ್ರಣದ ಪ್ರಮುಖ ಧ್ಯೇಯಗಳೇನು?
14) ನಿರ್ದೇಶನ ಮತ್ತು ಹೊಂದಾಣಿಕೆಗಳು ವ್ಯವಹಾರ ನಿರ್ವಹಣೆಯಲ್ಲಿ ಹೇಗೆ ಪ್ರಮುಖ ಪಾತ್ರಗಳನ್ನು ವಹಿಸುತ್ತವೆ?

**III. ಚಟುವಟಿಕೆಗಳು.**

1) ನಿಮ್ಮ ನೆರೆಹೊರೆಯಲ್ಲಿರುವ ಯಾರಾದರೂ ಏಕ ಒಡೆತನ ವ್ಯಾಪಾರಿಯನ್ನು ಭೇಟಿ ಮಾಡಿ ಅವರು ಹೇಗೆ ದಿನನಿತ್ಯದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆಂದು ಅವರಿಂದ ತಿಳಿದು ಒಂದು ಪ್ರಬಂಧವನ್ನು ಬರೆಯಿರಿ.
2) ನಿಮ್ಮ ಸಮೀಪದ ಸಹಕಾರ ಸಂಘಕ್ಕೆ ಭೇಟಿಕೊಟ್ಟು ಅಲ್ಲಿನ ಅಧಿಕಾರಿಗಳಿಂದ ಈ ಕೆಳಗಿನವುಗಳ ಬಗ್ಗೆ ತಿಳಿದುಕೊಂಡು ವರದಿ ಬರೆಯಿರಿ.

   ಎ) ಕಾರ್ಯಕ್ರಮ ಪಟ್ಟಿ (Agenda)
   ಬಿ) ಅವಶ್ಯಕ ಕನಿಷ್ಠ ಸದಸ್ಯರ ಸಂಖ್ಯೆ
   ಸಿ) ಕೂಲಂಕಷ ಟಿಪ್ಪಣಿ (Minute)

*****

NOT TO BE REPUBLISHED @KTBS